"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತೇಳನೆಯ ಅಧಿವೇಶನ

15ನೇ ಸೆಪ್ಟೆಂಬರ್ 2022
ಗುರುವಾರ

## ವಿಷಯಾನುಕ್ರಮಣಿಕೆ [INDEX]


01. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

471-ಬಿಟ್ ಕಾಯಿನ್ ಹಗರಣಗಳ ಬಗ್ಗೆ
ಶ್ರೀ ಟಿ.ಎ.ಶರವಣ
ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು)

475-ಶಿವಮೊಗ್ಗ ತಾಲ್ಲೂಕು ಹೊಳಲೂರು ಗ್ರಾಮದ ಹತ್ತಿರ ಹರಿಯುವ ತುಂಗಾ ಏತ ನೀರಾವರಿ ಯೋಜನೆ ಬಗ್ಗೆ.
ಶ್ರೀ ಆಯನೂರು ಮಂಜುನಾಥ್
ಶ್ರೀ ಜೆ.ಸಿ.ಮಾಧುಸ್ವಾಮಿ(ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು)

378-ಅಕ್ರಮ ಆಸ್ತಿಗಳ ನೆಲಸಮ ಕುರಿತು
ಶ್ರೀ ಎನ್. ರವಿಕುಮಾರ್
ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು)

346-ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ದಕ್ಷಿಣ ತಾಲ್ಲೂಕು ಪುಟ್ಟೇನಹಳ್ಳಿ ಗ್ರಾಮದ ಸ.ನಂ.39ರಲ್ಲಿ ಭೂ ಪರಿವರ್ತನೆಗೊಂಡ ಏಕ ನಿವೇಶನ ಅಕ್ರಮ ಖಾತೆ ಕುರಿತು.
ಶ್ರೀ ಯು.ಬಿ.ವೆಂಕಟೇಶ್
ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

418-ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರೈತರಿಗೆ ಆಗುತ್ತಿರುವ ಅನ್ಯಾಯ
ಶ್ರೀ ಕೆ.ಎ.ತಿಪ್ಪೇಸ್ವಾಮಿ
ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**476–ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತ್ ಕ್ಷೇತ್ರ ಮರುವಿಂಗಡಣೆ ಹಾಗೂ ಕ್ಷೇತ್ರಾಭಿವೃದ್ಧಿ ಕುರಿತು**

ಶ್ರೀ ಡಿ.ಎಸ್.ಅರುಣ್

ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**479–ಖಾಸಗಿಯವರಿಂದ ರಸ್ತೆ ಒತ್ತುವರಿ ಕುರಿತು**

ಶ್ರೀ ಎಂ.ನಾಗರಾಜು

ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**434–ಬೀದರ್ ಜಿಲ್ಲೆಯ ಕಾರಂಜ ಮುಳುಗಡೆ ಪ್ರದೇಶದ ಸಂತ್ರಸ್ತರ ಕುರಿತು.**

ಶ್ರೀ ಅರವಿಂದ ಕುಮಾರ್ ಅರಳಿ

ಶ್ರೀ ಗೋವಿಂದ ಎಂ.ಕಾರಜೋಳ(ಜಲ ಸಂಪನ್ಮೂಲ ಸಚಿವರು)

**367–ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಸಂಗ್ರಹಿಸುವ ಹಸಿ ಕಸವನ್ನು ಸಂಸ್ಕರಿಸುವ ಘಟಕಗಳ ಕುರಿತು.**

ಶ್ರೀ ಪಿ.ಆರ್.ರಮೇಶ್

ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**347–ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚುವರಿ ಕೆಲಸಗಳ ಕುರಿತು**

ಶ್ರೀ ಮಂಜುನಾಥ್ ಭಂಡಾರಿ

ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)

**412–ಪೊಲೀಸ್ ಇಲಾಖೆಯಲ್ಲಿ "ಸೂಕ್ಷ್ಮಪ್ರದೇಶ" ಪದದ ಬಳಕೆ ಕುರಿತು**

ಶ್ರೀಮತಿ ಭಾರತಿ ಶೆಟ್ಟಿ

ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು)

**371–ಬಳ್ಳಾರಿ ಗ್ರಾಮಾಂತರ ಹರಗಿನದೋಣಿ ಯೋಜನೆಯನ್ನು ಜಾರಿಗೆ ತರಲು ವಿಳಂಬವಾಗಿರುವ ಬಗ್ಗೆ.**

ಶ್ರೀ ವೈ.ಎಂ.ಸತೀಶ್

ಶ್ರೀ ಗೋವಿಂದ ಎಂ.ಕಾರಜೋಳ(ಜಲ ಸಂಪನ್ಮೂಲ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**೦2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು.**

**ಅ) 2019-20ನೇ ಸಾಲಿನಿಂದ ನಿಂತು ಹೋಗಿರುವ "ಗಾಂಧಿ ಪುರಸ್ಕಾರ ಯೋಜನೆ"ಯನ್ನು ಪುನಃ ಪ್ರಾರಂಭಿಸಿ ಅರ್ಹ ಗ್ರಾಮ ಪಂಚಾಯಿತಿಗಳಿಗೆ ಉತ್ತೇಜನ ನೀಡುವ ಕುರಿತು.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)**
**(ಮುಖ್ಯ ಮಂತ್ರಿಗಳ ಪರವಾಗಿ)**

**ಆ) ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹಧನ ಸೇರಿ ಇತರೆ ಸೌಲಭ್ಯಗಳ ಸಮರ್ಪಕ ವಿತರಣೆ ಬಗ್ಗೆ.**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)**
**(ಕಾರ್ಮಿಕ ಸಚಿವರ ಪರವಾಗಿ)**

**ಇ)ಕಳೆದ 15 ವರ್ಷಗಳಿಂದ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳ ನೇಮಕಾತಿ ಬಗ್ಗೆ.**

ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

**೦3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಪಿ.ಎಸ್.ಐ ಪರೀಕ್ಷೆಯಲ್ಲಿ ಓ.ಎಂ.ಆರ್. ಶೀಟ್‌ಗಳನ್ನು ತಿದ್ದಿದ ಪ್ರಕರಣದ ಬೆನ್ನಲ್ಲೇ ವಿವಿಧ ವಿಶ್ವವಿದ್ಯಾನಿಲಯಗಳ ಪಿ.ಹೆಚ್.ಡಿ. ಪ್ರವೇಶ ಪರೀಕ್ಷೆಗೆ ಸಂಬಂಧಿಸಿದಂತೆ ಓ.ಎಂ.ಆರ್. ಉತ್ತರ ಪತ್ರಿಕೆಗಳನ್ನು ಖರೀದಿಸಿ ಅಕ್ರಮ ನಡೆದಿರುವ ಬಗ್ಗೆ.**

ಶ್ರೀ ಮಂಜುನಾಥ್ ಭಂಡಾರಿ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಆ) ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ ಅಡಕೆ ಎಲೆ ಹಳದಿ ರೋಗವು ವ್ಯಾಪಕವಾಗಿ ಹರಡುತ್ತಿದ್ದು, ಸದರಿ ರೋಗದ ಶಾಶ್ವತ ನಿಯಂತ್ರಣಕ್ಕೆ ಪರಿಹಾರ ಕಂಡುಹಿಡಿಯುವ ಕುರಿತು.**

ಶ್ರೀ ಕೆ.ಹರೀಶ್ ಕುಮಾರ್
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಹಲವು ವರ್ಷಗಳಿಂದ ಕೃಷಿ ಮಾಡುತ್ತಿದ್ದ ಅರಣ್ಯ ಜಮೀನುಗಳನ್ನು ಡೀಮ್ಡ್ ಅರಣ್ಯದ ಸುಳಿಗೆ ಸಿಲುಕಿಸಿ ಕಂದಾಯ ದಾಖಲೆ ಲಭ್ಯವಿರದಂತೆ ಮಾಡುತ್ತಿರುವ ಕುರಿತು.**

ಶ್ರೀ ಎಂ.ನಾಗರಾಜು
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ಕಾಡಾನೆ ದಾಳಿಯಿಂದ ಮೃತಪಟ್ಟ ಕುಟುಂಬಗಳಿಗೆ ಹಾಗೂ ಬೆಳೆ ಹಾನಿಗೆ ಸರ್ಕಾರ ನೀಡಿದ ಪರಿಹಾರ ಕುರಿತು.**

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಉ) ನೀಟ್ ಪರೀಕ್ಷೆಯಲ್ಲಿ Rank ಪಡೆದವರು ವಿವಿಧ ಕೋಚಿಂಗ್ ಸೆಂಟರ್‌ಗಳಲ್ಲಿ ತರಬೇತಿ ಪಡೆದಿರುವ ಬಗ್ಗೆ**

ಶ್ರೀ ಚಿದಾನಂದ್ ಎಂ.ಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಊ) ಸ್ಮಾರ್ಟ್ ಸಿಟಿ ಅಭಿವೃದ್ಧಿಯಲ್ಲಿನ ಗುಣಮಟ್ಟ ಹಾಗೂ ಕಾಮಗಾರಿಗಳ ಪ್ರಗತಿ ಬಗ್ಗೆ**

ಶ್ರೀ ಯು.ಬಿ.ವೆಂಕಟೇಶ್
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**೦4. ಚುನಾವಣಾ ಪ್ರಸ್ತಾವ**

ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಅಧಿನಿಯಮ ೨೦೦೯ರ ಪ್ರಕರಣ ೨೦(ಐ) ರೀತ್ಯಾ ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ವಿಧಾನ ಪರಿಷತ್ತಿನ ಒಬ್ಬರು ಸದಸ್ಯರನ್ನು ಚುನಾಯಿಸುವ ಬಗ್ಗೆ.

**೦5. ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ, 2022**

**(2021ರ ವಿಧಾನಸಭೆಯ ವಿಧೇಯಕ ಸಂಖ್ಯೆ-50)**

ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು)
ಶ್ರೀ ಎಸ್.ಎಲ್.ಭೋಜೇಗೌಡ

ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು)
ಶ್ರೀ ಬಸವರಾಜ ಬೊಮ್ಮಾಯಿ(ಮುಖ್ಯಮಂತ್ರಿಗಳು)
ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು)
ಶ್ರೀ ಛಲವಾದಿ ನಾರಾಯಣಸ್ವಾಮಿ
ಡಾ॥ವೈ.ಎ.ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು)
ಶ್ರೀ ಮರಿತಿಬ್ಬೇಗೌಡ
ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
ಶ್ರೀ ಡಿ.ಎಸ್.ಅರುಣ್
ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀಮತಿ ಭಾರತಿ ಶೆಟ್ಟಿ
ಶ್ರೀ ಪಿ.ಆರ್.ರಮೇಶ್
ಶ್ರೀ ಎಸ್.ಎಲ್.ಭೋಜೇಗೌಡ
ಡಾ: ತೇಜಸ್ವಿನಿ ಗೌಡ
ಶ್ರೀ ಎಂ.ನಾಗರಾಜ್
ಶ್ರೀ ಸಲೀಂ ಅಹಮದ್

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

******

(832)15.09.2022 11.20 ಎಸ್‌ವಿ-ಬಿಎನ್‌ಎಸ್

**ಕರ್ನಾಟಕ ವಿಧಾನ ಪರಿಷತ್ತು**

**ಗುರುವಾರ, 15ನೇ ಸೆಪ್ಟೆಂಬರ್ 2022**

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ರಘುನಾಥ್ ರಾವ್ ಮಲ್ಕಾಪೂರೆ ಅವರು ಪೀಠದಲ್ಲಿ ಉಪಸ್ಥಿತರಾದರು.**

**೦1. ಪ್ರಶ್ನೋತ್ತರಗಳು.**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

**ಪ್ರಶ್ನೆ ಸಂಖ್ಯೆ 471**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ನಡೆದಿರುವಂತಹ ಇಂತಹ ದೊಡ್ಡ ಪ್ರಕರಣದ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗಿತ್ತು. ಅಮೆರಿಕಾ ಅಧ್ಯಕ್ಷರು ನಮ್ಮ ದೇಶದ ಪ್ರಧಾನಿಗಳಿಗೆ ಕರೆ ಮಾಡಿ "ನಿಮ್ಮ ದೇಶದಲ್ಲಿ ಇಂತಹ ದೊಡ್ಡ ಮಟ್ಟದ ಕ್ರಿಮಿನಲ್‌ಗಳು ಇದ್ದಾರೆ, ಅದು ನಿಮ್ಮ ಗಮನಕ್ಕೆ ಬಂದಿದೆಯೇ?" ಎಂದು ಕೇಳುತ್ತಾರೆ. ನಮ್ಮ ರಾಜ್ಯದ ಇಂದಿನ ಮುಖ್ಯಮಂತ್ರಿಗಳಾದ ಮಾನ್ಯ ಬಸವರಾಜ ಬೊಮ್ಮಾಯಿಯವರು ಅಂದಿನ ಗೃಹ ಮಂತ್ರಿಗಳಾಗಿದ್ದರು. ಮಾನ್ಯ ಪ್ರಧಾನಿಗಳು ಈ ವಿಷಯವನ್ನು ಮಾನ್ಯ ಬೊಮ್ಮಾಯಿಯವರ ಗಮನಕ್ಕೆ ತರುತ್ತಾರೆ.

ಸರ್ಕಾರ ರೂ.5240 ಕೋಟಿ ಮೊತ್ತದ ಬಿಟ್ ಕಾಯಿನ್ ಅನ್ನು ವರ್ಗಾವಣೆ ಮಾಡುತ್ತಾರೆ. ವರ್ಗಾವಣೆ ಮಾಡಿ ತನಿಖೆಯ ಹಂತದಲ್ಲಿ...

**ಸಭಾಪತಿಯವರು:-** ಮಾನ್ಯ ಶರವಣ ಅವರೇ, ನೇರವಾಗಿ ನಿಮ್ಮ ಪ್ರಶ್ನೆಯನ್ನು ಕೇಳಿ. ಇದು ಪ್ರಶ್ನೋತ್ತರ ಅವಧಿ. ಇದು ಚರ್ಚೆಯಲ್ಲ.

**ಶ್ರೀ ಟಿ.ಎ.ಶರವಣ:-** ಹೌದು ಮಾನ್ಯ ಸಭಾಪತಿಯವರೇ, ಇಷ್ಟು ದೊಡ್ಡ ಹಗರಣ ಬೆಳಕಿಗೆ ಬಂದ ಸಂದರ್ಭದಲ್ಲಿ ತನಿಖೆ ಮಾಡುತ್ತಿದ್ದಂತಹ ಅಧಿಕಾರಿಗಳನ್ನೇ ವರ್ಗಾವಣೆ ಮಾಡುತ್ತಾರೆ. ತಪ್ಪಿಸಿಕೊಂಡು ಹೋದವನನ್ನು ತಡೆ ಹಿಡಿಯುತ್ತಾರೆ. ಒಂದೆಡೆ ಬಿಟ್ ಕಾಯಿನ್‌ಗಳು ಸಿಕ್ಕಿದೆಯೆಂದು ಹೇಳುತ್ತಾರೆ. ಮತ್ತೊಂದೆಡೆ ಅದು ಏನಾಗಿದೆ ಎಂದು ಹೇಳುವುದಿಲ್ಲ. ಅವನು ಅಂತರರಾಷ್ಟ್ರೀಯ

ಕ್ರಿಮಿನಲ್ ಆಗಿದ್ದು, ಅವನು ಎಲ್ಲಿದ್ದಾನೆ, ಕಾಯಿನ್‌ಗಳು ಎಲ್ಲಿವೆ ಎಂಬುದರ ಬಗ್ಗೆ ಮಾನ್ಯ ಗೃಹ ಸಚಿವರು ಬೆಳಕು ಚೆಲ್ಲಬೇಕು. ನಂತರ ಮಾತನಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಶರವಣ ಅವರೇ, ಇದು ಮಾತನಾಡುವ ಸಮಯವಲ್ಲ, ಪ್ರಶ್ನೆ ಕೇಳುವ ಸಮಯ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಅವರು ಬೇರೆ ರೀತಿಯಿಂದ ನೋಟಿಸ್ ಕೊಟ್ಟರೆ ವಿಸ್ತೃತ ಚರ್ಚೆ ಮಾಡಬಹುದು. ಮಾನ್ಯ ಯು.ಬಿ.ವೆಂಕಟೇಶ್ ಅವರು ಕಳೆದ ಅಧಿವೇಶನಗಳಲ್ಲಿ ಎರಡು-ಮೂರು ಬಾರಿ ಈ ವಿಷಯದ ಬಗ್ಗೆ ಕೇಳಿದ್ದಾರೆ. ನಾನು ವಿವರವಾದ ಉತ್ತರವನ್ನು ನೀಡಿದ್ದೇನೆ. ಸರ್ಕಾರ ಯಾವುದೇ ವಿಷಯದಲ್ಲಿಯಾದರೂ ಓಪನ್ ಆಗಿದೆ. ಬಿಟ್ ಕಾಯಿನ್ ವಿಷಯದಲ್ಲಿ ಯಾವುದಾದರೂ ಸಾಕ್ಷ್ಯಾಧಾರಗಳನ್ನು ನೀಡಿದರೂ ಅದರ ಬಗ್ಗೆ ಸರ್ಕಾರ ತನಿಖೆ ಮಾಡಲು ಸಿದ್ಧವಿದೆ. ಇದು ಗಾಳಿಗಂಟು, ಕರೆನ್ಸಿ ಅಲ್ಲ.

ಶ್ರೀಕಿಯನ್ನು ಅರೆಸ್ಟ್ ಮಾಡಿದ ಮೇಲೆ ಆತ ಯಾವ್ಯಾವುದೋ ಹ್ಯಾಕಿಂಗ್ ಮಾಡಿದ್ದೇನೆ, ಬಿಟ್ ಕಾಯಿನ್ ಮಾಡಿದ್ದೇನೆ ಎಂದು ತೋರಿಸುತ್ತಾನೆ. ಅವನು ಹೇಳಿದಾಗಲೆಲ್ಲಾ ನಮ್ಮ ಕಡೆಯಿಂದ ಅಂತರ್ ರಾಷ್ಟ್ರೀಯ ತನಿಖಾ ಸಂಸ್ಥೆಗಳಿಗೆ ದಿನಾಂಕ 28.04.2021, 28.10.2021, 13.04.2022ರಲ್ಲಿ ಪತ್ರವನ್ನು ಬರೆದಿದ್ದೇವೆ. ನಾನು ಇನ್ನೂ ವಿವರವಾಗಿ ಹೇಳುವುದಾದರೆ ಅಮೆರಿಕಾದಲ್ಲಿ ಇದರ ಬಗ್ಗೆ ತನಿಖೆಯಾಗಿ ಅರೆಸ್ಟ್ ಆಗಿದ್ದಾರೆ. ಬಿಟ್ ಕಾಯಿನ್‌ಗಳು ದೊರೆತಿವೆ. ಆದರೆ ಅಮೆರಿಕಾ ಸರ್ಕಾರ ನಮ್ಮ ಲಿಂಕ್ ಇದೆ ಎಂದು ಎಲ್ಲಿಯೂ ಹೇಳಿಲ್ಲ. ನಮ್ಮ ಕರ್ನಾಟಕದ ಜೊತೆ ಲಿಂಕ್ ಇದೆ, ಭಾರತದ ಜೊತೆ ಲಿಂಕ್ ಇದೆ ಎಂದು ಹೇಳಿಲ್ಲ.

ಮಾನ್ಯ ಶರವಣ ಅವರು ಯಾವ ಹಿನ್ನೆಲೆಯಲ್ಲಿ ಕೇಳುತ್ತಿದ್ದಾರೆ ಎಂದು ನನಗೆ ತಿಳಿಯಿತು. ಹೆಚ್ಚು ಕಡಿಮೆ ಎರಡು ವಾರಗಳ ಕಾಲ ಮೀಡಿಯಾದಲ್ಲಿ ಇದರ ಬಗ್ಗೆ ಚರ್ಚೆಯಾಯಿತು. ಹಣವನ್ನು ಕಳೆದುಕೊಂಡವರು ಯಾರು? ಅಷ್ಟು ಸಾವಿರಾರು ಕೋಟಿ ಕಳೆದುಕೊಂಡಿದ್ದೇ ಆಗಿದ್ದರೆ ಇಷ್ಟು ಹೊತ್ತಿಗೆ ದೂರು ದಾಖಲಾಗಬೇಕಿತ್ತು. ಕಳೆದುಕೊಂಡವರು ಸುಮ್ಮನೆ ಇರುತ್ತಾರೆಯೇ? ಇದರಲ್ಲಿ ಏನೂ ಇಲ್ಲ.

ಶ್ರೀಕಿ ವಂಚನೆ ಮಾಡಿದನು. ಇಷ್ಟು ಬಿಟ್ ಕಾಯಿನ್‌ಗಳಿವೆ ಎಂದು ಒಂದು ಬಾರಿ ತೋರಿಸುತ್ತಾನೆ. ನಮ್ಮ ಪೊಲೀಸರಿಗೂ ಆ ತಂತ್ರಜ್ಞಾನ ಹೊಸತು. ಅನೇಕ ತಜ್ಞರನ್ನು ಕರೆದುಕೊಂಡು ಬಂದು ಕೂರಿಸಿಕೊಂಡಿದ್ದರು. ಹೌದು ಎಂದು ಒಪ್ಪಿಕೊಂಡರು. ನಮ್ಮ ಪೊಲೀಸರು ಸ್ಟೇಟ್‌ಮೆಂಟ್ ಅನ್ನು ಕೊಡುತ್ತಾರೆ. ಆಮೇಲೆ ಮೂರು ದಿನಗಳು ನೋಡಿದರೆ ಅದು ಇರುವುದಿಲ್ಲ. ಅಂದರೆ ಅವನು ಯಾವುದೋ ಎಕ್ಸ್‌ಚೇಂಜ್ ಅನ್ನು ತೋರಿಸುತ್ತಾನೆ. ಅದು ವಂಚನೆ.

**(ಮುಂದು)**

**(833) 15-09-2022 (11.30) ಕೆಜಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರಗ ಜ್ಞಾನೇಂದ್ರ (ಮುಂದು)**:-

ಇದು ಬಿಟ್ಟರೆ, ಬಹುಶಃ ಇದರಲ್ಲಿ ಬೇರೆ ಏನು ಇಲ್ಲ. ಈಗಲೂ ಸಹ, ಮಾನ್ಯ ಸದಸ್ಯರು ಯಾವುದಾದರೂ ಮಾಹಿತಿಗಳನ್ನು ಕೊಡಲಿ. ಅವರಿಗೆ ಇದರಲ್ಲಿ ಪ್ರಾಮಾಣಿಕವಾಗಿ ತನಿಖೆ ಮಾಡಬೇಕೆಂದು ಅನಿಸಿದರೆ ಮಾಹಿತಿಗಳನ್ನು ಕೊಡಲಿ. ನಾವು ಈಗಲೂ ಸಹ ತನಿಖೆಯನ್ನು ಮಾಡುವುದಕ್ಕೆ ರೆಡಿ ಇದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಾವುದಾದರು ಮಾಹಿತಿಗಳು ಇದ್ದರೆ ಕೊಡಿ ತನಿಖೆ ಮಾಡಿಸುತ್ತೇವೆಂದು ಹೇಳಿದ್ದಾರೆ. ಹಾಗಾದರೆ, ಸರ್ಕಾರ ಇರುವುದು ಏತಕ್ಕೆ? ಶ್ರೀಕಿ ಸರ್ಕಾರವನ್ನೇ hack ಮಾಡಿ ಅದನ್ನು ವಾಪಸ್ಸು ಕೊಟ್ಟಿರುವಂತಹ ನಿರ್ದೇಶನ ಸರ್ಕಾರದ ಮುಂದೆ ಇದೆ. ಮಾನ್ಯ ಸಚಿವರು ನಮ್ಮನ್ನು ಸಾಕ್ಷ್ಯ ತಂದು ಕೊಡಿ ಎಂದು ಕೇಳಿದರೆ, ನಾವು ಸಾಕ್ಷ್ಯವನ್ನು ತಂದು ಕೊಡುವುದಕ್ಕೆ ಆಗುತ್ತದೆಯೇ? ಹಾಗಾದರೆ, ಸರ್ಕಾರ ಇರುವುದು ಏತಕ್ಕೆ? ಪೊಲೀಸ್ ಇಲಾಖೆ ಇರುವುದು ಏತಕ್ಕೆ? ಅದನ್ನು ಸಾರ್ವಜನಿಕರಿಗೆ ಹೇಳಲಿ. ಮಾನ್ಯ ಸಚಿವರು ಅಮೆರಿಕಾದವರು ಏನು ಹೇಳಲಿಲ್ಲವೆಂದು ಹೇಳಿದರು. ನಮಗೆ ಇನ್ನೊಬ್ಬರು ಹೇಳುವುದು ಬೇಕಾಗಿಲ್ಲ. ನಮ್ಮ ದೇಶದಲ್ಲಿ ಆಗಿರುವಂತಹ ಅನಾಹುತಗಳಿಗೆ ಏನೇನು ಮಾಡಬೇಕು ಎನ್ನುವುದನ್ನು ನಾವು ಮಾಡಬೇಕೇ ವಿನಃ ಅಮೆರಿಕಾ

ದೇಶದವರಲ್ಲ. ಮೇಲ್ನೋಟಕ್ಕೆ ಕೇಸ್ ಇದೆ. ಶ್ರೀಕಿ hack ಮಾಡಿರುವಂಥದ್ದು ಇದೆ, ಪೋಲೀಸರು ಅವನ ವಿರುದ್ಧ action ತೆಗೆದುಕೊಂಡಿರುವಂಥದ್ದು ಇದೆ. ಹಾಗಾಗಿ, ಮಾನ್ಯ ಸಚಿವರು ಮತ್ತೆ ಮಾನ್ಯ ಸದಸ್ಯರನ್ನು ಸಾಕ್ಷ್ಯ ಕೊಡಿ ಎಂದರೆ, ಅವರು ಎಲ್ಲಿಂದ ಹುಡುಕಿಕೊಂಡು ಬರುತ್ತಾರೆ?

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಇಲ್ಲ, ಇದರಲ್ಲಿ ಶ್ರೀಕಿಯನ್ನು ..

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಇಷ್ಟೇ. ಇದರಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳು ಭಾಗಿಯಾಗಿದ್ದಾರೆ. ಇದರಲ್ಲಿ ಎಲ್ಲರನ್ನು ತನಿಖೆ ಮಾಡಿ ಶಿಕ್ಷೆ ವಿಧಿಸಬೇಕು. Doubling ಎಂದು ಹೇಳುತ್ತಾರೆ ನೋಡಿ, ಖೋಟಾನೋಟ್ ಮಾಡುವಾಗ doubling ಎಂದು ಹೇಳಿ cheat ಮಾಡುತ್ತಾರೆ. ಅವರು ದೂರು ಕೊಡುತ್ತಾರಾ? ಹಣದ ದುರಾಸೆಗೆ ಹೋಗಿ ಈ ಕೆಲಸವನ್ನು ಮಾಡುವವರು ದೂರು ಕೊಡುತ್ತಾರೆಯೇ? ಯಾರು ದೂರೂ ಕೊಡುವುದಿಲ್ಲ. ಇದು hack ಆಗುತ್ತಿದೆ. Cyber crime wing ಪೋಲೀಸ್ ಇಲಾಖೆಯಲ್ಲಿದೆ. ಅವರಿಗೆ ಹೇಳಿ ತನಿಖೆ ಮಾಡಿಸಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ..

**ಸಭಾಪತಿಯವರು:-** ಶ್ರೀ ಶರವಣರವರೇ, ಈ ಪ್ರಶ್ನೆ ಪ್ರಾರಂಭವಾಗಿ 12 ನಿಮಿಷಗಳು ಆಗಿದೆ, ಇನ್ನೂ ಮುಗಿದಿಲ್ಲ. ಪ್ರಶ್ನೋತ್ತರ ವೇಳೆಯನ್ನು ಮುಗಿಸಬೇಕಲ್ಲವೇ?

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆಂದು ಕುಳಿತುಕೊಂಡೆ ಅಷ್ಟೇ. ನಾನು ಒಂದೇ ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ನಾನು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ಸರಿಯಾದ ರೀತಿಯಲ್ಲಿ ಉತ್ತರವನ್ನು ಕೊಟ್ಟಿಲ್ಲ. ಹಾಗಾಗಿ, ಈ ವಿಷಯನ್ನು ಅರ್ಧಗಂಟೆಯ ಅವಧಿಗೆ ಚರ್ಚೆಗೆ ಹಾಕಿ. ಈಗ ಇದರ ಬಗ್ಗೆ ಮಾತನಾಡುವುದಕ್ಕೆ ಸಮಯವಿಲ್ಲವೆಂದರೆ, ದಯವಿಟ್ಟು ಅನುಮತಿ ಕೊಡಿ. ಮಾನ್ಯ ಎಲ್ಲಾ

ಸದಸ್ಯರು ಮಾತನಾಡಬೇಕೆಂದು ಹೇಳಿದ್ದಾರೆ. ಇದರಲ್ಲಿ ದೊಡ್ಡ ದೊಡ್ಡ ಪ್ರಭಾವಿ ವ್ಯಕ್ತಿಗಳು, ರಾಜಕಾರಣಿಗಳು, ಅವರು ಇದ್ದಾರೆ, ಇವರು ಇದ್ದಾರೆ ಎಂದು ಹೇಳುವಂತಹ ಊಹಾಪೋಹ ಸುದ್ದಿಗಳಿಗೆ ಅಂತ್ಯ ಹಾಡಬೇಕಾಗಿದೆ. ಇಡೀ ರಾಷ್ಟ್ರ ಮಟ್ಟದಲ್ಲಿ ನಾವು ಕರ್ನಾಟಕದವರಾಗಿ, ನಾವು ಕನ್ನಡಿಗರಾಗಿ ತಲೆತಗ್ಗಿಸುವಂತಹ ಕೆಲಸ ಆಗಿದೆ. ಹಾಗಾಗಿ, ಇದು ಇತ್ಯರ್ಥ ಆಗಬೇಕು. ಇದು ಚರ್ಚೆಯಾಗಬೇಕು. ನಮಗೆ ಇದಕ್ಕೆ ಸರಿಯಾದ ರೀತಿಯಲ್ಲಿ ಉತ್ತರ ಬೇಕಾಗಿದೆ.

**ಸಭಾಪತಿಯವರು:–** ಸರಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ಅವಧಿಯಲ್ಲಿ ಸೀಮಿತ ಪ್ರಶ್ನೆ ಕೇಳಿದರೆ ಎಲ್ಲರಿಗೂ ಅವಕಾಶಗಳು ಸಿಗುತ್ತವೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಆಯನೂರು ಮಂಜುನಾಥ್‌ರವರೇ ತಾವು ತಮ್ಮ ಪ್ರಶ್ನೆಯನ್ನು ಕೇಳಿ.,

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಚರ್ಚೆಗೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಚರ್ಚೆಗೆ ಅನುಮತಿ ಕೊಡಿ ಸ್ವಾಮಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಆಯನೂರು ಮಂಜುನಾಥ್‌ರವರೇ ತಾವು ತಮ್ಮ ಪ್ರಶ್ನೆಯನ್ನು ಕೇಳಿ.,

**ಪ್ರಶ್ನೆ ಸಂಖ್ಯೆ 475**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಸುಧೀರ್ಘವಾದ ಉತ್ತರವನ್ನು ಒದಗಿಸಿದ್ದಾರೆ. ಈ ಪ್ರಶ್ನೆಯ ಹಿಂದೆ ನಮ್ಮ ಕಳಕಳ ಏನೆಂದರೆ, 2007-2008ನೇ ಸಾಲಿನಲ್ಲಿ ಮಂಜೂರಾದಂತಹ ಒಂದು ಸಣ್ಣ ನೀರಾವರಿ ಯೋಜನೆ ಇದುವರೆಗೂ ಪೂರ್ಣಗೊಂಡಿಲ್ಲ. 2007-2008ನೇ ಸಾಲಿನಲ್ಲಿ 625.00 ಲಕ್ಷ ರೂಪಾಯಿಗಳಗೆ ಮಂಜೂರಾದಂತಹ ಈ ಯೋಜನೆ, ಇವತ್ತು ಈ ಯೋಜನೆಗೆ 23 ಕೋಟಿ ರೂಪಾಯಿಗಳು ಖರ್ಚಾದರೂ ಸಹ ಇನ್ನೂ ಮುಕ್ತಾಯವಾಗಿಲ್ಲ. ಈ ಯೋಜನೆ ಪ್ರಾರಂಭವಾಗಿ 15 ವರ್ಷಗಳ ಕಾಲ ಆಗಿದೆ. ಅದೇ ಸಂದರ್ಭದಲ್ಲಿ ನಮ್ಮ ಗ್ರಾಮೀಣ ಭಾಗದ ರೈತರು ಒಂದು ಎಕರೆಗೆ ಸುಮಾರು 2 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈ ಯೋಜನೆ ಎಲ್ಲಿಂದ ಪ್ರಾರಂಭವಾಗಿ ಎಲ್ಲಿಗೆ ಮುಕ್ತಾಯವಾಗುತ್ತದೆಯೋ, ಅಲ್ಲಿಗೆ ನೀರನ್ನು ತೆಗೆದುಕೊಂಡು ಬಂದು ಸುಮಾರು 10 ವರ್ಷಗಳು ಆದವು. ರೈತರು ಖಾಸಗೀ ಪೈಪ್‌ಗಳ ಮುಖಾಂತರ ನೀರನ್ನು ತೆಗೆದುಕೊಂಡು ಬಂದಿದ್ದಾರೆ. ಬಹಳ ದೊಡ್ಡ, ದೊಡ್ಡ ಅಭಿಯಂತರರನ್ನು ಇಟ್ಟುಕೊಂಡಿರುವ ಸರ್ಕಾರ 15 ವರ್ಷಗಳಾದರೂ ಸಹ, 7 ಕೋಟಿ ರೂಪಾಯಿಗಳಂದ 23 ಕೋಟಿ ರೂಪಾಯಿಗಳು ಖರ್ಚಾದರೂ ಸಹ, ಇನ್ನೂ ನೀರನ್ನು ಕೊಡುತ್ತಿಲ್ಲ. ಇಲ್ಲಿ ಭ್ರಷ್ಟಾಚಾರ ಆಗುತ್ತಿದೆ. ಹೊಸ ಹೊಸ ಪ್ರಸ್ತಾವನೆಗಳನ್ನು ಮಂಡನೆ ಮಾಡುತ್ತಿದ್ದಾರೆ. ಅದರ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ಕೇಳದ್ದೇನೆ. ಹಾಗಾಗಿ, ಈ ಯೋಜನೆಗೆ ಎಷ್ಟು ಹಣ ಮಂಜೂರಾಗಿದೆ? ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ ಹಾಗೂ ಈ ಯೋಜನೆ ಏಕೆ 15 ವರ್ಷಗಳಂದ ತಡವಾಗುತ್ತಿದೆ? ಈ ಯೋಜನೆಯನ್ನು ಯಾವಾಗ ಮುಕ್ತಾಯ ಮಾಡಿ ನಮ್ಮ ರೈತರಿಗೆ ನೀರನ್ನು ಒದಗಿಸಲಾಗುವುದು ಎಂಬ ಪ್ರಶ್ನೆಯನ್ನು ಮಾನ್ಯ ಸಚವರಿಗೆ ಕೇಳುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಯಾವಾಗಲೂ ಎರಡು ನಿಮಿಷಗಳ ಮೇಲೆ ಮಾತನಾಡದವನು, ಇವತ್ತು ಇದಕ್ಕೆ ಉದ್ದವಾಗಿ ಮಾತನಾಡಬೇಕಾಗುತ್ತದೆ. ಇದಕ್ಕೆ ಅವಕಾಶ ಕೊಡಬೇಕು. ಮಾನ್ಯ ಸದಸ್ಯರು ಹೇಳದಂತೆ, 2007-2008ನೇ ಸಾಲಿನಲ್ಲಿ ಈ ಯೋಜನೆಯನ್ನು Minor Irrigation ನಿಂದ ಪ್ರಾರಂಭ ಮಾಡಿದ್ದೇವೆ. ನಾವು jack well ಮಾಡಿ PVC pipe ಗಳಲ್ಲಿ 4 ಕಡೆ ನೀರನ್ನು ತೆಗೆದುಕೊಂಡು ಹೋಗಬೇಕೆಂದು ನಮ್ಮ ಯೋಜನೆ

ಇತ್ತು. PVC pipe ಅನ್ನು lay ಮಾಡಿದ ಮೇಲೆ ಅದು ಕ್ರಮಬದ್ಧವಾಗಿ ನಡೆಯಲಿಲ್ಲ. ಅದು leak ಆಗುವುದಕ್ಕೆ ಪ್ರಾರಂಭವಾಯಿತು. ಆಗ PVC pipe ಅಳವಡಿಸಿದ್ದು ತಪ್ಪು ಆಯಿತು ಎಂದು ನಮ್ಮ ಇಲಾಖೆಯ ಗಮನಕ್ಕೆ ನೀರು ಕೊಡುವುದಕ್ಕೆ ಪ್ರಾರಂಭ ಮಾಡುತ್ತೇವೆ ಎನ್ನುವಂತಹ ಹಂತದಲ್ಲಿ ಗೊತ್ತಾಯಿತು. ನಾವು ಅದನ್ನು abandon ಮಾಡಬೇಕಾಗಿತ್ತು. ಆಗ ಗುತ್ತಿಗೆದಾರರು ಮಾಡಿರುವಂತಹ ಕೆಲಸ ಕಳಪೆಯಾಗಿದೆ ಎಂದು ಅವರ ವಿರುದ್ಧ ಕ್ರಮ ತೆಗೆದುಕೊಂಡು penalise ಮಾಡಿ ಅವರಿಂದ ಸುಮಾರು ರೂ.104.21 ಲಕ್ಷ ರೂಪಾಯಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಈಗಾಗಲೇ ಆಗಿರುವಂತಹ ಕಾರ್ಯಕ್ರಮವನ್ನು ನಿಲ್ಲಸಬಾರದು. ಮಾನ್ಯ ಸದಸ್ಯರು ಹೇಳಿದ್ದು ನಿಜ. ಈ ಯೋಜನೆ 6.25 ಕೋಟಿ ರೂಪಾಯಿಗಳಿಗೆ estimate ಆಗಿತ್ತು. ನಂತರ ರೂ.706.27 ಲಕ್ಷ ರೂಪಾಯಿಗಳಿಗೆ ಟೆಂಡರ್ ಆಗಿತ್ತು. 2007-2008ನೇ ಸಾಲಿನಲ್ಲಿ ಇಲಾಖೆಯವರು ಈ ಕೆಲಸವನ್ನು ನಿಲ್ಲಿಸಿದ್ದರು. ನಾನು Minor Irrigation ಸಚಿವನಾದ ಮೇಲೆ, ಈ ಕೆಲಸವನ್ನು review ಮಾಡಿದಾಗ, ಇದಕ್ಕೆ PVC pipe ಅಳವಡಿಸಿರುವುದು ಯೋಜನಾ ಬದ್ಧವಾಗಿಲ್ಲವೆಂದು, PVC pipe ನಲ್ಲಿ ಆ volume water ಅನ್ನು push ಮಾಡುವುದಕ್ಕೆ ಆಗುತ್ತಿರಲಿಲ್ಲ, ಆಗ ಇದನ್ನು ಯಾರು ಮಾಡಿದ್ದಾರೆಂದು ತಕರಾರು ತೆಗೆದುಕೊಂಡೆವು.

ಮಾನ್ಯ ಸಭಾಪತಿಯವರೇ, ಮತ್ತೆ ಎರಡನೇ ಟೆಂಡರ್‌ನ್ನು ಕರೆದರು. ಇದೆಲ್ಲವೂ ಸಹ, ಈ ಸರ್ಕಾರ ಅಧಿಕಾರಕ್ಕೆ ಬರುವ ಮೊದಲೇ ಆಗಿತ್ತು. ಎರಡನೇ ಟೆಂಡರ್‌ನಲ್ಲಿಯೂ ಸಹ ಒಂದು ತಪ್ಪಾಯಿತು. ಎಲ್ಲೆಲ್ಲಿ ಪೈಪ್ ಹಾಕಿದೆ ಆ ಭಾಗವನ್ನು ಬಿಟ್ಟು, ಉಳಿಕೆ ಭಾಗಕ್ಕೆ ಮಾತ್ರ cost ಅನ್ನು ಸೇರಿಸಿಕೊಂಡು DPR ಮಾಡಿ ಎಂದು, pipe ಉಳಿದಿರುವುದನ್ನು ಬಿಟ್ಟು, ಬೇರೆ ಎಲ್ಲೆಲ್ಲಿ ಹಾಕಿಲ್ಲ ಅದನ್ನು ಸೇರಿಸಿಕೊಂಡು ಮಾಡಿ ಎಂದು ಇನ್ನೊಂದು ಟೆಂಡರ್‌ನ್ನು ಕೊಟ್ಟರು. ಆ ಗುತ್ತಿಗೆದಾರ ಕೆಲಸ ಮಾಡಿದ್ದೇನೆಂದು ಹೇಳಿ ಮೂರು ಕೋಟಿ ರೂಪಾಯಿಗಳನ್ನು claim ಮಾಡಿದರು. ನಾವು ಇವರಿಬ್ಬರ ಮೇಲೆ cost and risk ಮೇಲೆ ಕೆಲಸವನ್ನು ನಿಲ್ಲಿಸಿ ಅವರ contract ಅನ್ನು foreclosure ಮಾಡಲಾಯಿತು. 3ನೇ ಟೆಂಡರ್‌ನ್ನು ಕರೆದು MS pipe ಅನ್ನು ಅಳವಡಿಸಬೇಕು, MS pipe ಅನ್ನು ಅಳವಡಿಸದಿದ್ದರೆ ಕೆರೆಗಳಿಗೆ ನೀರನ್ನು ತಲುಪಿಸುವುದಕ್ಕೆ ಆಗುವುದಿಲ್ಲವೆಂದು MS pipe ಅಳವಡಿಸುವುದಕ್ಕೆ ಕೆರೆಗಳನ್ನು ತೆಗೆದುಕೊಂಡು ಆ ಕೆರೆಗಳಿಗೆ ಎರಡು ಕಡೆಗೆ ನೀರು ಹೋಗುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ಈ ಮಧ್ಯೆ ನಮಗೆ estimate ಮತ್ತು DPR ಆಗುವಂತಹ ಸಂದರ್ಭದಲ್ಲಿ ಏನಾಯಿತು ಎಂದರೆ ಪೂರ್ತಿ MS pipe ಬೇಕಾಗಿಲ್ಲ. ಆಗಲೇ ಎಲ್ಲೆಲ್ಲಿ PVC pipe ಅಳವಡಿಸಿ ಬಿಟ್ಟಿದ್ದಾರೆ ಅದಕ್ಕೆ ಕನೆಕ್ಟ್ ಮಾಡಿದರೆ ಸಾಕು ಎಂದು ಹೇಳುವಷ್ಟರಲ್ಲಿ ಒಂದಷ್ಟು distance ಅನ್ನು ನಾವು ಕನೆಕ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಿದೆವು. ಈಗ ಮಾನ್ಯ ಸದಸ್ಯರು ಹೇಳುವಂತೆ ದುರಂತ ಏನಾಗಿದೆ ಎಂದರೆ, ನಮ್ಮ pipeline ಹೋಗಿರುವಂತಹ ಜಾಗದಲ್ಲಿ ಗದ್ದೆ, ತೋಟ ಎಲ್ಲವೂ ಆಗಿವೆ. ಅಲ್ಲಿನ ರೈತರು ನಮಗೆ pipeline ಅನ್ನು draw ಮಾಡುವುದಕ್ಕೆ ಬಿಡುತ್ತಿಲ್ಲ. ಅಲ್ಲಿನ ರೈತರು ಇಲ್ಲಿಗೆ ಬರಬೇಡಿ, ಅಡಿಕೆ ಬೆಳೆಯನ್ನು ಇಟ್ಟಿದ್ದೇವೆ, ಬಾಳೆ ಬೆಳೆಯನ್ನು ಇಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಹಾಗಾಗಿ, ಅಲ್ಲಿಗೆ machine ತೆಗೆದುಕೊಂಡು ಹೋಗುವುದಕ್ಕೆ ಆಗುತ್ತಿಲ್ಲ, excavate ಮಾಡುವುದಕ್ಕೆ ಆಗುತ್ತಿಲ್ಲ, ಪೈಪ್ ಅಳವಡಿಸುವುದಕ್ಕೆ ಆಗುತ್ತಿಲ್ಲ. ಮತ್ತೆ gravity ನಲ್ಲಿ ಏನು ಹೋಗಬೇಕಾಗಿದೆ ಅದಕ್ಕೆ further MS pipe ಅನ್ನು ಅಳವಡಿಸಬೇಕೆಂದು ಯೋಚನೆ ಮಾಡುತ್ತಿರುವುದರಿಂದ ತಪ್ಪಾಗಿದೆ. ಈ ಯೋಜನೆಯಲ್ಲಿ 2007-2008ನೇ ಸಾಲಿನಲ್ಲಿ fraud ಆಗಿರುವುದು ನಿಜ. ನಾವು ಕ್ರಮ ತೆಗೆದುಕೊಂಡಿರುವುದು ನಿಜ. ನಾನು ಅಲ್ಲಿಗೆ ಹೋಗಿ review ಮಾಡಿದ್ದೇನೆ. ಅಂದು ಮಾನ್ಯ ಸದಸ್ಯರಿಗೆ ಶಿವಮೊಗ್ಗದಲ್ಲಿ ಇದರಲ್ಲಿ ಇಷ್ಟೊಂದು ಹಗರಣಗಳು ನಡೆಯುತ್ತವೆ ಎಂದು ಹೇಳಿದೆ. ಆ ಅವಧಿಯಲ್ಲಿದ್ದ ಅಭಿಯಂತರರ ವಿರುದ್ಧ ಕ್ರಮಗಳನ್ನು ಜರುಗಿಸಿದ್ದೇವೆ. ಗುತ್ತಿಗೆದಾರರ ವಿರುದ್ಧ ಕ್ರಮ ಜರುಗಿಸಿ penalise ಮಾಡಿದ್ದೇವೆ. ಎರಡನೇ ಗುತ್ತಿಗೆದಾರರಿಗೆ ವಹಿಸಿದಷ್ಟು ಕೆಲಸವನ್ನು ಮಾಡಿದ್ದಾರೆ. ಆದರೆ, pipe connect ಆಗದೇ ನೀರು ಹೋಗುವುದಕ್ಕೆ ಆಗುತ್ತಿಲ್ಲ. ಈಗ ಈ ಯೋಜನೆ ಮುಕ್ಕಾಲು ಭಾಗ ಆಗಿ ಉಳಿದಿರುವುದನ್ನು ನಿಲ್ಲಿಸುವುದು ಬೇಡವೆಂದು, ಈಗ 3ನೇ ಹಂತದಲ್ಲಿ ಪ್ರಾಜೆಕ್ಟ್‌ನ್ನು ಮಾಡಿ MS pipe ಅನ್ನು ಹಾಕಿ ನೀರು ಕೊಡುತ್ತಿದ್ದೇವೆ. ಸುಮಾರು 1776.69 ಲಕ್ಷ ರೂಪಾಯಿಗಳು 3 ಹಂತಗಳಲ್ಲಿ ಖರ್ಚಾಗಿರುವುದು ನಿಜ. 1 ಮತ್ತು 2 ನೇ ಹಂತದಲ್ಲಿ ಕೆಲಸ ಅಸಂಬದ್ಧವಾಗಿದ್ದರಿಂದ, ಅದರ ತನಿಖೆಗಾಗಿ ಲೋಕಾಯುಕ್ತಕ್ಕೆ ಶಿಫಾರಸ್ಸು ಮಾಡಿದ್ದೇವೆ. ಅದು ಆಗುತ್ತದೆ. ಆ ಗುತ್ತಿಗೆದಾರರನ್ನು foreclosure ಮಾಡಿದ್ದೇವೆ. ಗುತ್ತಿಗೆದಾರರನ್ನು penalise ಮಾಡಿದ್ದೇವೆ. ಅಲ್ಲಿಂದ ಅಧಿಕಾರಿಗಳನ್ನು ಸಹ ಬೇರೆ ಕಡೆಗೆ ಹಾಕಿ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನಾವು ಮುಂದಿನ ಕೆಲಸಗಳನ್ನು ಮಾಡುತ್ತೇವೆ. ಈ ಮಧ್ಯೆ ತೊಂದರೆ ಇರುವಂಥದ್ದನ್ನು ಮಾನ್ಯ ಸದಸ್ಯರು ಬಗೆಹರಿಸಿಕೊಡಬೇಕು. ನಾವು ಈಗ ಇರುವ ಜಾಗದಲ್ಲಿ ಲೈನ್ ತೆಗೆದುಕೊಂಡು ಹೋಗುತ್ತೇವೆ

ಎಂದರೆ, ಅಲ್ಲಿ protest ಗಳು ಆಗುತ್ತಿವೆ. ಬೇರೆ ಕಡೆಯಿಂದ ಲೈನ್‌ನನ್ನು ತೆಗೆದುಕೊಂಡು ಹೋಗುತ್ತೇವೆಂದರೆ, ಇಲ್ಲ, ಈಗ ಎಲ್ಲಿ pipeline ಮಾಡಲಾಗಿದೆಯೋ ಅಲ್ಲಿಯೇ ತೆಗೆದುಕೊಂಡು ಹೋಗಿ ಎಂದು ಹೇಳುತ್ತಾರೆ. ಹಾಗಾಗಿ, ಈ ಗೊಂದಲದಿಂದ ಕೆಲಸ ನಿಂತಿದೆ. ಮಾನ್ಯ ಸದಸ್ಯರು local leadership ತೆಗೆದುಕೊಂಡು solve ಮಾಡಿಕೊಟ್ಟರೆ ನಾವು ಮಾಡಿಕೊಡುತ್ತೇವೆ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಡೆದಿರುವಂತಹ ಘಟನೆಯನ್ನು ಬಹಳ ವಾಸ್ತವವಾಗಿ ಹೇಳಿದ್ದಾರೆ. ಆದರೆ, ಮಾನ್ಯ ಸಚಿವರು ನೀಡಿರುವಂತಹ ಉತ್ತರದಲ್ಲಿ ದಿನಾಂಕ 24.08.2021 ರಂದು ನೀರು ಕೊಡಲಾಗಿದೆ ಎಂದು ಹೇಳಿದ್ದಾರೆ. ಆದರೆ, ಆ ಕಾರ್ಯಕ್ರಮ ಮಾಡಿದಂತಹ ಸಂದರ್ಭದಲ್ಲಿ ಇದರ ಬಗ್ಗೆ ಪ್ರಶ್ನೆ ಮಾಡಿದಂತಹ ನಮ್ಮನ್ನು ಕರೆಯದೇ ಅಧಿಕಾರಿಗಳು ರಾಜಕಾರಣವನ್ನು ಮಾಡಿದರು. ಆವತ್ತು ಪ್ರಾರಂಭ ಮಾಡಿದಾಗ ನೀರು ಬಂತು. ಆ ನಂತರ ನೀರು ಬರುತ್ತಿಲ್ಲ. ದಾಖಲೆಗಳಲ್ಲಿ ನೀರು ಬಂದಿದೆ. ಎರಡನೆಯದಾಗಿ, ಮಾನ್ಯ ಸಚಿವರು ಅಲ್ಲಿನ ರೈತರು ಪ್ರತಿಭಟನೆ ಮಾಡುತ್ತಾರೆಂದು ಹೇಳಿರುವಂತಹ ವಿಷಯ ಸತ್ಯವಾಗಿದೆ. ಆ ರೈತರು ಸ್ವಯಂ ಪ್ರೇರಿತರಾಗಿ ಪ್ರತಿಭಟನೆ ಮಾಡುತ್ತಿಲ್ಲ.,

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಇದೂ ಸಹ ಪ್ರಶ್ನೋತ್ತರ ವೇಳೆ ಅಲ್ಲವೇ; ನನ್ನನ್ನು ಮಾತ್ರ ಕುಳಿತುಕೊಳ್ಳಿ ಎಂದು ಹೇಳಿಬಿಟ್ಟಿರಿ.

**ಸಭಾಪತಿಯವರು:-** ಮಾನ್ಯ ಶರವಣರವರೇ, ಇದು ಅವರ ಪ್ರಶ್ನೆಯಲ್ಲಿ ಮೊದಲನೇ ಉಪ ಪ್ರಶ್ನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ನಾನೂ ಸಹ ಮೊದಲನೇ ಉಪ ಪ್ರಶ್ನೆಯನ್ನು ಕೇಳಿದ್ದೆ.

**ಸಭಾಪತಿಯವರು:-** ಮಾನ್ಯ ಶರವಣರವರೇ, ತಾವು ಮೊದಲೇ ಬಹಳ ಉದ್ದವಾಗಿ ಪ್ರಶ್ನೆಯನ್ನು ಕೇಳಿದ್ದೀರಿ. ಅವರು ಮೊದಲನೆ ಉಪ ಪ್ರಶ್ನೆಯನ್ನು ಕೇಳುತ್ತಿದ್ದಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಇಲ್ಲ, ತಾವು ದಯಮಾಡಿ ಹಾಗೆ ಮಾಡಬೇಡಿ.

**ಸಭಾಪತಿಯವರು:-** ಮಾನ್ಯ ಶರವಣರವರೇ, ತಾವು ಆ ತರಹ ಕಲ್ಪನೆಯನ್ನು ಮಾಡಬೇಡಿ. ಮಾನ್ಯ ಮಂಜುನಾಥ್‌ರವರೇ ತಾವು ಬೇಗ ಮಾತನಾಡಿ ಮುಗಿಸಿ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಬಂದಾಗ, ಸಂಶಯ ಬಂದಿದ್ದನ್ನು ಎರಡನೇ ಪ್ರಶ್ನೆ ಕೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಶರವಣರವರೇ, ಮಾನ್ಯ ಸದಸ್ಯರು ಲೋಕಸಭೆಯಲ್ಲಿ, ರಾಜ್ಯ ಸಭೆಯಲ್ಲಿ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಎಲ್ಲಾ ಹೌಸ್‌ಗಳಲ್ಲಿದ್ದು ಅನುಭವಸ್ಥರಾಗಿದ್ದಾರೆ. ಹಾಗಾಗಿ, ಅವರಿಗೆ ಅವಕಾಶ ಕೊಟ್ಟಿದ್ದೇನೆ. ಇದನ್ನು ಬಿಟ್ಟು ಬೇರೆ ಏನಿಲ್ಲ.

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಸಚಿವಾಲಯದಿಂದ ಅಧಿಕಾರಿಗಳನ್ನು ಅಲ್ಲಿಗೆ ತನಿಖೆಗೆ ಕಳುಹಿಸಿದರೆ ಅಲ್ಲಿ ಹಾಲಿ ಇರುವಂತಹ A.E. and A.E.E. ರವರು ಮೊದಲು ಹೋಗಿ ಜನರನ್ನು ಪ್ರತಿಭಟನೆ ಮಾಡಲು ಎತ್ತಿಕಟ್ಟುತ್ತಾರೆ. ಅಲ್ಲಿರುವಂತ A.E. and A.E.E. ರವರು ರಾಜಕಾರಣವನ್ನು ಮಾಡುತ್ತಿದ್ದಾರೆ. ಎರಡನೆಯದಾಗಿ, ನಾನು ಹೆಚ್ಚು ಒತ್ತಾಯ ಮಾಡಿದರೆ, ಜನರನ್ನು ಸೇರಿಸಿಕೊಂಡು ಅಲ್ಲಿರುವಂತಹ ನಮ್ಮ ಜನಾಂಗದ ಮಠಾಧೀಶರ ಬಳಿ ನನ್ನ ವಿರುದ್ಧ ದೂರನ್ನು ಕೊಡುತ್ತಾರೆ. ಈ ರೀತಿಯ ರಾಜಕಾರಣ ಮಾಡಿಕೊಂಡು ಕೆಲಸ ಮಾಡುತ್ತಿದ್ದಾರೆಯೇ ಹೊರತು, ರೈತರಿಗೆ ನೀರನ್ನು ಕೊಡುವ ಕೆಲಸ ಮಾಡುತ್ತಿಲ್ಲ. ಮಾನ್ಯ ಸಚಿವರ ಬಗ್ಗೆ ನನಗೆ ವಿಶ್ವಾಸ ಇದೆ. ಅವರು ಇದನ್ನು ಕೂಡಲೇ ಬಗೆಹರೆಸುತ್ತಾರೆಂಬ ನಂಬಿಕೆ ಇದೆ. ಮಾನ್ಯ ಲೋಕಾಯುಕ್ತಕ್ಕೆ ದೂರು ಕೊಟ್ಟಿದ್ದೀರಿ.

(ಮುಂದು)

**(834) 15-09-2022 (11.40) ಎಂವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆಯನೂರು ಮಂಜುನಾಥ್ (ಮುಂದು):-**

ಈ ಅಧಿಕಾರಿಗಳ ಮೇಲೆ ಯಾವಾಗ ಕ್ರಮ ಕೈಗೊಳ್ಳುತ್ತಾರೆ? ವಿಶೇಷವಾಗಿ ರಾಜಕಾರಣ ಮಾಡುವಂತಹ A.E. (Assistant Engineer) ಮತ್ತು A.E.E. (Assistant Executive Engineers) ಅವರುಗಳನ್ನು ಕೂಡಲೇ ಅಮಾನತು ಮಾಡಿ, ಇದರ ಬಗ್ಗೆ ತನಿಖೆ ಮಾಡಬೇಕು. ಅದೇ ರೀತಿ ಈ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಒತ್ತಾಯವನ್ನು ಮಾಡುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನನಗೆ ಈ part ಗೊತ್ತಿರಲಿಲ್ಲ. ಜನರು ತಕರಾರು ಮಾಡುತ್ತಿದ್ದಾರೆ, ಅದಕ್ಕೆ ಕೆಲಸ ಮಾಡುವುದಕ್ಕೆ ಆಗುತ್ತಿಲ್ಲವೆಂದು ನನಗೆ ವರದಿ ಮಾಡಿದ್ದರು. ನಮ್ಮ officers ಗಳೇ ಏನಾದರೂ ಅಂತಹ ಕೃತ್ಯಗಳಲ್ಲಿ involve ಆಗಿದ್ದರೆ ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ. ಈಗಾಗಲೇ ಮಾನ್ಯ ಲೋಕಾಯುಕ್ತಕ್ಕೂ ಸಹ ಹಳೇ case ಅನ್ನು refer ಮಾಡಿದ್ದೇವೆ. ಆದರೆ, ಈಗ ಇರುವಂತಹ ಅಧಿಕಾರಿಗಳು, ಅಲ್ಲಿ ಹಾಕಿಕೊಂಡು ಹೋಗುವುದಕ್ಕೆ ರೈತರು ಬಿಡುತ್ತಿಲ್ಲ. ಅಂದರೆ, ರೈತರಿಗೆ ತೊಂದರೆಯಾಗುತ್ತಿದೆ ಎಂದು ಪ್ರತಿಭಟಿಸುತ್ತಿದ್ದಾರೆಂದು ನನಗೆ ಮಾಹಿತಿ ನೀಡಿದ್ದಾರೆ. ಇದರ ಹಿಂದೆ ನಮ್ಮ ಅಧಿಕಾರಿಗಳು ಇದ್ದರೆ ನಾವು ಅವರ ವಿರುದ್ಧ ನಿರ್ದಾಕ್ಷಿಣ್ಯವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 378**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ನಾನು ಈ ರೀತಿಯ ಪ್ರಶ್ನೆಯನ್ನು ಕೇಳಿದ್ದೆ; ಅಂದರೆ, ಅನ್ಯ ರಾಜ್ಯದ ವ್ಯಕ್ತಿಗಳು ನಮ್ಮ ರಾಜ್ಯಕ್ಕೆ ಬಂದು ಇಲ್ಲಿನ ಜನರನ್ನು ಬರ್ಬರವಾಗಿ ಹತ್ಯೆ ಮಾಡುತ್ತಿದ್ದು, ಇದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿರುವುದಲ್ಲದೆ ಕೋಮು ಗಲಭೆಗಳಿಗೆ ಕಾರಣವಾಗುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳು ಏನೆಂದು ಪ್ರಶ್ನೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಏನೇನು ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಉತ್ತರವನ್ನು ನೀಡಿದ್ದಾರೆ. ಅಂದರೆ, CCTV ಗಳನ್ನು ಹಾಕಿದ್ದೇವೆ. Beat rounds ಅನ್ನು ಜಾಸ್ತಿ ಮಾಡಿದ್ದೇವೆ. ಎಲ್ಲೆಲ್ಲಿ ಬಹಳ ಪ್ರಮುಖವಾಗಿರುವಂತಹ ಜಾಗಗಳಿವೆ ಅಲ್ಲಿ check post ಗಳನ್ನು ಅಳವಡಿಸಿದ್ದೇವೆಂದು, ಈ ರೀತಿಯ ಉತ್ತರವನ್ನು ನೀಡಿದ್ದಾರೆ. ನನಗೆ ಒಂದು ಮಾಹಿತಿ ಇದೆ. ಅಂದರೆ ಸಚಿವರ ಉತ್ತರದಲ್ಲಿ ಹೊರ ರಾಜ್ಯದಿಂದ ಯಾರು ಬಂದಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈಗ arrest ಮಾಡಿರುವವರ ಪೈಕಿ, K.G. Halli and D.J. Halli ಗಲಾಟೆ ನಡೆದಂತಹ ಸಂದರ್ಭದಲ್ಲಿ ಹೊರ ರಾಜ್ಯದವರನ್ನು ಬಿಡಿಸಿಕೊಂಡು ಬಂದಿರತಕ್ಕಂಥದ್ದನ್ನು ನಾನೇ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ಓದಿದ್ದೇನೆ. ಅಂದರೆ, ಇಲ್ಲಿಗೆ ಹೊರ ರಾಜ್ಯದವರು ಬಂದಿದ್ದಾರೆಂದು ಅರ್ಥವಾಯಿತು. ಒಬ್ಬ ಶಾಸಕರು ಹೋಗಿ ಅವರನ್ನು ಬಿಡಿಸಿಕೊಂಡು ಬಂದಿದ್ದಾರೆಂದರೆ, ಹೊರ ರಾಜ್ಯದವರು ಇದರಲ್ಲಿ involve ಆಗಿದ್ದಾರೆಂದು ಅರ್ಥವಾಯಿತು. ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂದು ತಮ್ಮ ಮುಖಾಂತರ ಕೇಳುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ನಾವು detail ಆಗಿ ಹೇಳಿದ್ದೇವೆ. ಇತ್ತೀಚಿನ ಒಂದು ವರ್ಷದ ಅವಧಿಯಲ್ಲಿ ಹೊರ ರಾಜ್ಯದವರು ಬಂದು ಕೊಲೆ ಮತ್ತು ಇತರೆ ಚಟುವಟಿಕೆಗಳಲ್ಲಿ ಭಾಗವಹಿಸಿರುವುದಿಲ್ಲ. ಅವರು ಬಾರದ ರೀತಿ ಪೋಲೀಸ್ ಇಲಾಖೆ ಅತ್ಯಂತ ನಿಗಾವಹಿಸಿದ್ದಾರೆ. ಅಂತರರಾಜ್ಯ ಗಡಿಭಾಗಗಳಲ್ಲಿ check post ಗಳನ್ನು ಅಳವಡಿಸಿ ಸಂಶಯಾಸ್ಪದ ವ್ಯಕ್ತಿಗಳ ತಿರುಗಾಟದ ಮೇಲೆ ಕಣ್ಣು ಇಟ್ಟಿದ್ದಾರೆ. ಅದೇ ರೀತಿ ಮಾರಕಾಸ್ತ್ರಗಳನ್ನು ಸಾಗಿಸದಂತೆ ಕ್ರಮಕೈಗೊಳ್ಳಲಾಗಿದೆ. ಸೂಕ್ಷ್ಮ ಪ್ರದೇಶಗಳಲ್ಲಿ CCTV ಗಳನ್ನು ಅಳವಡಿಸಿ ನಿಗಾವಹಿಸಲಾಗಿದೆ. ಹಿಂದೆ ಕೋಮುಸಾಮರಸ್ಯದ ಅಡಿ ಪ್ರಕರಣ ದಾಖಲಾಗಿರುವ ಪ್ರಕರಣಗಳ ಆರೋಪಿಗಳ ಮೇಲೆ ರೌಡಿ ಪಟ್ಟಿಯನ್ನು ತೆರೆಯಲಾಗಿದೆ. ಹೀಗೆ ಎಲ್ಲಾ ರೀತಿಯಿಂದಲೂ ಕೂಡ ಅವರ ಮೇಲೆ ನಿಗಾ ಇಟ್ಟಿದ್ದೇವೆ.

Interstate ಜೊತೆ ಏನಾದರೂ ಸಂಪರ್ಕ ಇದೆಯೇ ಎಂದು ಸಹ ನಿಗಾ ಇಟ್ಟಿದ್ದೇವೆ. ಬೇರೆ ಬೇರೆ ಸಂಘಟನೆಗಳ ಜೊತೆಯಲ್ಲಿ ಯಾವ ರೀತಿಯ ಸಂಪರ್ಕ ಇದೆ ಎಂಬುದನ್ನು ಸಹ ಪತ್ತೆ ಹಚ್ಚಿದ್ದೇವೆ. ಉದಾಹರಣೆಗೆ; ಶಿವಮೊಗ್ಗದ ಪ್ರಕರಣದಲ್ಲಿ ಪತ್ತೆ ಹಚ್ಚಿದ್ದೇವೆ. ಅದೇ ರೀತಿ K.G. Halli and D.J. Halli ಯ ಬಗ್ಗೆ ಕೇಳಿದ್ದಾರೆ. ಅದರಲ್ಲೂ ಕೂಡ ಆಸ್ತಿ-ಪಾಸ್ತಿ ಹಾನಿ ಮಾಡಿದಂತಹವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಶ್ರೀ ಕೆಂಪಣ್ಣನವರ ನೇತೃತ್ವದಲ್ಲಿ ಆಯೋಗವನ್ನು ರಚನೆ ಮಾಡಲಾಗಿದೆ. ಅವರನ್ನು Claims Commissioner ಆಗಿ ನೇಮಕ ಮಾಡಿದ್ದೇವೆ. ನಾವು ಅವರ ವರದಿಯನ್ನು ನಿರೀಕ್ಷೆ ಮಾಡುತ್ತಿದ್ದೇವೆ. ನಮ್ಮ FIR ಪ್ರಕಾರ 5,37,02,362/- ಎಂದು ಅಂದಾಜು ಮಾಡಲಾಗಿದೆ. ಅವರ ವರದಿಯನ್ನು ನಿರೀಕ್ಷೆ ಮಾಡಿ, ಅವರ ಮೇಲೆ ಇನ್ನಷ್ಟು ಕ್ರಮಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೆ ಸಾಕು ಬಿಡಿ. ಏಕೆಂದರೆ, ಸಮಯದ ಅಭಾವವಿದೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ಉಪ ಪ್ರಶ್ನೆಯನ್ನು ಕೇಳುತ್ತೇನೆ ಅಷ್ಟೆ. Just a minute. ಇದಕ್ಕೆ ಸಂಬಂಧಪಟ್ಟಂತೆ Hon'ble High Court ನ Judgement ಇದೆ. ಗಲಭೆಯ ಸಂದರ್ಭದಲ್ಲಿ ಯಾರು ಆಸ್ತಿ-ಪಾಸ್ತಿ ಹಾನಿಗೊಳಗಾಗಿರುತ್ತಾರೆ ಅಂತಹವರಿಗೆ, ಆ ಕೃತ್ಯವನ್ನು ಯಾರು ಮಾಡಿದ್ದಾರೆ, ಅಂತಹವರ ಕಡೆಯಿಂದಲೇ ಇದನ್ನು ವಸೂಲಾತಿ ಮಾಡಬೇಕು ಎನ್ನುವಂಥದ್ದಕ್ಕೆ Hon'ble High Court ನ judgement ಇದೆ. ಇದಕ್ಕೆ ಒಂದು Committee ಯನ್ನು ರಚನೆ ಮಾಡಬೇಕು ಎಂದು clear-cut judgement ಇದೆ. ಇದರ ಬಗ್ಗೆ ಸರ್ಕಾರ ಏನು ಮಾಡಿದೆ?

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಈಗಾಗಲೇ K.G. Halli and D.J. Halli ಗೆ ಸಂಬಂಧಪಟ್ಟ ಹಾಗೆ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಎಷ್ಟು ಎಂದು ಅಂದಾಜು ಮಾಡಿದ್ದೇವೆ. Sri H.S. Kempanna ರವರನ್ನು Claims Commissioner ರನ್ನಾಗಿ ನೇಮಕ ಮಾಡಿದ್ದೇವೆ. ಖಂಡಿತವಾಗಿ ಏನು ಇಷ್ಟು ನಷ್ಟವಾಗಿದೆ ಅದನ್ನು

ಮುಂದಿನ ದಿನಗಳಲ್ಲಿ ಈ ಅಪರಾಧಿಗಳ ಕಡೆಯಿಂದ ಭರ್ತಿ ಮಾಡುವುದಕ್ಕೆ ಅವರ ಆಸ್ತಿ–ಪಾಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಎಲ್ಲಾ ರೀತಿಯ ಕ್ರಮವನ್ನು ಕೈಗೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 346**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ನಾನು ಇದೇ ಪ್ರಶ್ನೆಯನ್ನು ದಿನಾಂಕ 24.03.2022ರಂದು ಕೇಳಿದ್ದೆ. ಆಗ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳ ಮೇಲೆ ಕ್ರಮವನ್ನು ಜರುಗಿಸಲಾಗಿದೆ ಎಂದು ಹೇಳಿದ್ದರು. ಆದರೆ, ಇವತ್ತು ನನಗೆ ಬಂದಿರುವಂತಹ ಉತ್ತರದಲ್ಲಿ ದಿನಾಂಕ 02.09.2022 ಜಾರಿಗೊಳಿಸಿ, ಹದಿನೈದು ದಿನಗಳ ಒಳಗೆ ಸಮಜಾಯಿಸಿ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ, ಈಗಾಗಲೇ ಸಂಬಂಧಪಟ್ಟಂತಹ ಅಧಿಕಾರಿಗಳು ನಿವೃತ್ತಿ ಹೊಂದಿದ್ದಾರೆ. ನಾನು ಯಾವಾಗ ಇದರ ಬಗ್ಗೆ ಆಪಾಧನೆ ಮಾಡಿದ್ದೆ, ಆಗ ಆ ಅಧಿಕಾರಿಗಳು ಕರ್ತವ್ಯದಲ್ಲಿದ್ದರು. ಆಮೇಲೆ ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಲ್ಲಿ ಒಂದು ಆದೇಶವಾಗುತ್ತದೆ. ಅಂದರೆ, ಇವರನ್ನು ಅಮಾನತುಗೊಳಿಸಿ ಎಂದು ಮಾರ್ಚ್ 28ಕ್ಕೆ ಆದೇಶ ಮಾಡಲಾಗಿದೆ. ಅದರ ಕಡತ ಸಂಖ್ಯೆ 723287 ಎಂದು ಇದೆ. ಆದರೂ ಸಹ ಆ ಅಧಿಕಾರಿಗಳು ಅರಾಮವಾಗಿ ನಿವೃತ್ತಿಯಾಗಿದ್ದಾರೆ. ಆದರೆ, ಈಗ ದಿನಾಂಕ 02.09.2022ಕ್ಕೆ ಇವರ ಮೇಲೆ ದೋಷಾರೋಪಣಾ ಪಟ್ಟಿಯನ್ನು ಹಾಕುತ್ತೇವೆಂದು ತಿಳಿಸಿದ್ದಾರೆ. ಈಗ ಯಾರೋ ಹುಲಿ ಹಿಡಿಯಿರಿ ಎಂದರೆ, ನರಿ ಹಿಡಿದ ಹಾಗೆ, ARO (Assistant Revenue Officer) and RO (Revenue Officer) suspend ಮಾಡಿದ್ದೇವೆಂದು ಹೇಳುತ್ತಿದ್ದಾರೆ. ನಾನು ಅವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿದ್ದೆ, ಬೆಂಗಳೂರಿಗೆ ಸಂಬಂಧಪಟ್ಟಂತೆ JC (Joint Commissioner) ಗಳನ್ನು ಕನಿಷ್ಠ ಪಕ್ಷ KAS officers ನವರನ್ನು ಹಾಕಿ ಎಂದು. ಆಗ ಮಾನ್ಯ ಮಾಧುಸ್ವಾಮಿಯವರು ಈ ರೀತಿ ಮಾಡುತ್ತೇವೆಂದು ಹೇಳಿದ್ದರು. ಮಹಾರಾಷ್ಟ್ರದಲ್ಲಿ ಒಂದು cadre ಇದೆ. ಇದಕ್ಕೋಸ್ಕರ specialized people ಇದ್ದಾರೆ. ಈಗ ಬೇರೆ ಇಲಾಖೆಗಳಿಂದ ಎರವಲು ಸೇವೆಯ ಮೇಲೆ ಬರುತ್ತಾರೆ. ಈಗ ಬೊಮ್ಮನಹಳ್ಳಿ ಅಧಿಕವಾಗಿ ಹಣ ಮಾಡುವಂತಹ ಒಂದು ಕ್ಷೇತ್ರ.

**ಸಭಾಪತಿಯವರು:–** ಮಾನ್ಯ ಯು.ಬಿ.ವೆಂಕಟೇಶ್‌ರವರೆ, ತಮ್ಮ ಪ್ರಶ್ನೆ ಏನೆಂದು ಕೇಳಿ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಇಂತಹ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿಲ್ಲ ಎಂಬುದೇ ನನ್ನ ಪ್ರಶ್ನೆಯಾಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಮಾನ್ಯ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್‌ರವರು ಈ ಬೊಮ್ಮನಹಳ್ಳಿ ವಲಯದಲ್ಲಿ ಆಗುತ್ತಿರುವಂತಹ ಒಂದು ಭೂ ಪರಿವರ್ತನೆಗೊಂಡ ಏಕ ನಿವೇಶನಕ್ಕೆ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಖಾತೆ ಬದಲಾವಣೆಯಲ್ಲಿ ಅವ್ಯವಹಾರವಾಗಿದೆ ಎಂದು ತಿಳಿಸಿದ್ದರು. ಅದಕ್ಕೆ ಕೂಡಲೇ ಅದರ ತನಿಖೆಗೂ ಆದೇಶ ಮಾಡಿದ್ದೆವು. ಮತ್ತೆ ಒಂದು internal ತನಿಖೆಯಾಗಬೇಕು ಎಂದಿದ್ದಕ್ಕೆ, internal ತನಿಖೆ ಮಾಡಿ, we have found that, they were guilty. ಅದರಿಂದ Joint Secretary ಮೇಲೆ chargesheet ಕೂಡ ಹಾಕಲಾಗಿದೆ. ಈ ಮಧ್ಯೆ ಅವರು ನಿವೃತ್ತಿ ಹೊಂದಿದ್ದಾರೆ. ಅವರು ನಿವೃತ್ತಿ ಹೊಂದಿದ್ದರೂ ಸಹ ಅವರು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಹಾಕಲಾಗಿದೆ. ಮುಂದಿನ ಕ್ರಮ ಅದರ ಮೇಲೆ criminal case ಹಾಕುವಂಥದ್ದಾಗಲಿ ಮತ್ತೊಂದನ್ನು ಖಂಡಿತವಾಗಿ ಮಾಡುತ್ತೇವೆ. ಅವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಸುಮಾರು ಎರಡು ವರ್ಷದ ಅವಧಿ ಇರುತ್ತದೆ. ಆದುದರಿಂದ ಅದನ್ನು ಕೂಡಲೇ ಮಾಡುವುದಕ್ಕೆ ತಿಳಿಸಿದ್ದೇನೆ. ಅ ರೀತಿ ಮಾಡುವುದಕ್ಕೆ ನೋಟಿಸ್ ಕೊಡಬೇಕೆಂದು ಹೇಳಿದ್ದರು. ನಾವು ಆ ರೀತಿ ನೋಟಿಸ್ ನೀಡಿದ್ದೇವೆ. ಈಗ ಆ ನೋಟಿಸ್‌ಗೆ ಉತ್ತರ ನೀಡುವ ಕಾಲಾವಧಿ ಮುಗಿಯುತ್ತಿದೆ. ಅದು ಬಂದ ತಕ್ಷಣ ಅವರ ವಿರುದ್ಧ criminal case ಗಳನ್ನು ಹಾಕಿ recovery ಮಾಡಬೇಕಾದರೆ, ಅವರಿಂದ ಏನೇನು revenue recovery ಯನ್ನು ಮಾಡಬೇಕು ಅದೆಲ್ಲವನ್ನೂ ಕೂಡ ಖಂಡಿತವಾಗಿ ಮಾಡುತ್ತೇವೆ. ಎರಡನೆಯದಾಗಿ, ಮಾನ್ಯ ಸದಸ್ಯರ ಕಳಕಳಿ ಏನೆಂದರೆ, ಈ Joint Commissioner level ನಲ್ಲಿ KAS ಮತ್ತು IAS officers ಹಾಕಬೇಕು ಅನ್ನುವಂಥದ್ದನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ. ಈಗ ಯಾರ್‍ಯಾರು KAS officers ಇದ್ದಾರೆ, ಅವರುಗಳನ್ನು retain ಮಾಡಿಕೊಂಡು, ಎರವಲು ಸೇವೆಯ ಮೇಲೆ ಬಂದಿರುವಂತಹವರನ್ನು ಖಂಡಿತವಾಗಿ ವಾಪಸ್ಸು ಕಳುಹಿಸುತ್ತೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿವಸ ಒಬ್ಬ Joint Commissioner ನಾಲ್ಕು ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುವಾಗ red hand ಆಗಿ ಸಿಕ್ಕಿ ಹಾಕಿಕೊಂಡಾಗ, ಅವರನ್ನು ಲೋಕಾಯುಕ್ತದವರು ಕರೆದುಕೊಂಡು ಹೋಗಿದ್ದಾರೆ. ನಾವು ಪದೇ ಪದೇ ಹೇಳಿ, ಮಾನ್ಯ ಮುಖ್ಯಮಂತ್ರಿಗಳು ಹೇಳಿ, ಆರು ತಿಂಗಳಾದರೂ ಇನ್ನು action ತೆಗೆದುಕೊಂಡಿಲ್ಲವೆಂದರೆ, ಜನರಿಗೆ ಯಾವ ರೀತಿಯ ಸಂದೇಶ ಹೋಗುತ್ತದೆ ಎಂಬುದು ನನ್ನ ಪ್ರಶ್ನೆ.

**ಪ್ರಶ್ನೆ ಸಂಖ್ಯೆ: 418**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ನಾಡಪ್ರಭು ಕೆಂಪೇಗೌಡ ಬಡಾವಣೆ ಒಂದು ಮಹತ್ವಕಾಂಕ್ಷಿ ಬಡಾವಣೆ. ಅಲ್ಲಿನ ರೈತರು ಸರ್ಕಾರ ಯೋಜನೆ ಮಾಡಿರುವಂತಹ ರೀತಿಯಲ್ಲಿ 60*40ರ ಅನುಪಾತದಲ್ಲಿ, ತಮ್ಮದೇ ಜಮೀನಿನಲ್ಲಿ ಮತ್ತು ತಮ್ಮದೇ title ಇರತಕ್ಕಂಥದ್ದರಲ್ಲಿ ಅಭಿವೃದ್ಧಿ ಹೊಂದಿದ ನಿವೇಶನ ದೊರೆಯುತ್ತದೆ ಎಂಬ ದೃಷ್ಟಿಯಲ್ಲಿ, ಕಳೆದ ಹತ್ತು ವರ್ಷಗಳಿಂದ ತಮ್ಮ ಜಮೀನುಗಳನ್ನು ಕಳೆದುಕೊಂಡಿದ್ದಾರೆ. ಆದರೆ, ಇದುವರೆವಿಗೂ ಕೂಡ ಮೂಲಸೌಕರ್ಯ ಇರತಕ್ಕಂತಹ, ಅಂದರೆ ಒಳಚರಂಡಿ ಮತ್ತು ರಸ್ತೆಗಳಿರತಕ್ಕಂಥ ಯಾವುದೇ ರೀತಿಯ ಅಭಿವೃದ್ಧಿ ಹೊಂದಿರುವಂತಹ ನಿವೇಶನಗಳ ಹಂಚಿಕೆಯಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಲಿ.

**(ಮುಂದು)**

(835) 15.09.2022 11.50 LL-KS

**ಶ್ರೀ ಕೆ.ಎ. ತಿಪ್ಪೇಸ್ವಾಮಿ(ಮುಂದು):-**

ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನಹರಿಸಿ, ಯಾರು ಜಮೀನು ಕಳೆದುಕೊಂಡು ಕನಿಷ್ಠ ಪಕ್ಷ 10 ವರ್ಷ ಆಗಿದೆ, ಅವರಿಗೆ ಅಭಿವೃದ್ಧಿಪಡಿಸಿದಂತಹ ಜಾಗದಲ್ಲಿ ನಿವೇಶನ ಕೊಡುತ್ತಾರೆಯೇ ಎನ್ನುವುದು ನನ್ನ ಉಪ ಪ್ರಶ್ನೆಯಾಗಿದೆ ಮತ್ತು ನಾನು ಕೇಳಿರತಕ್ಕಂತಹ ಸೂಲಿಕೆರೆ ಗ್ರಾಮದ ಸರ್ವೆ ನಂ:4/2ರಲ್ಲಿ ಕಳೆದ 05 ವರ್ಷದಿಂದ ರೈತರು ನಿವೇಶನಕ್ಕಾಗಿ ಬಿ.ಡಿ.ಎ.ಗೆ ಹೋಗಿ ಬೇಡುತ್ತಿದ್ದಾರೆ. ಇದುವರೆವಿಗೂ ಸಹ ಅವರಿಗೆ ನಿವೇಶನ ನೀಡಿರುವುದಿಲ್ಲ.

ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಆದ್ಯ ಗಮನಕ್ಕೆ ತರುವುದೇನೆಂದರೆ, ಶ್ರೀ ಎಸ್.ಕೆ. ಜವರೇಗೌಡ ಎಂಬುವವರು ಮಾಜಿ ರಾಜ್ಯಸಭಾ ಸದಸ್ಯರಾಗಿದ್ದು, ಅವರು ಸಹ ಅನೇಕ ಬಾರಿ ಬಿ.ಡಿ.ಎ. ಆಯುಕ್ತರನ್ನು, ಅಧ್ಯಕ್ಷರನ್ನು ಮತ್ತು ಉಪ ಕಾರ್ಯದರ್ಶಿಗಳನ್ನು ಭೇಟಿ ಮಾಡಿದ್ದಾರೆ. ಆದರೆ, ಇದುವರೆವಿಗೂ ಸಹ ಅವರಿಗೆ ನಿವೇಶನ ಮಂಜೂರಾಗಿರುವುದಿಲ್ಲ. ಅಂತಹವರಿಗೆ ಈ

ರೀತಿಯಾದರೆ, ಇನ್ನು ಸಾಮಾನ್ಯ ರೈತರ ಪರಿಸ್ಥಿತಿ ಏನು? ಸಾಮಾನ್ಯ ರೈತರು ಬಿ.ಡಿ.ಎ.ಗೆ ಹೋದರೆ ಅವರನ್ನು ಗೋಳು ಹೋಯ್ದುಕೊಳ್ಳುತ್ತಾರೆ. ಇದರಿಂದಾಗಿ, ರೈತರು ಬಿ.ಡಿ.ಎ.ಗೆ ಹೋಗಲು ಹೆದರಿಕೊಳ್ಳುತ್ತಾರೆ. ರೈತರು ಮಧ್ಯವರ್ತಿಗಳ ಮುಖಾಂತರ ಹೋದರೆ 3 ರಿಂದ 4 ತಿಂಗಳು ಅಥವಾ 1 ವರ್ಷದಲ್ಲಿ ಕೆಲಸ ಆಗುತ್ತದೆ. ಆದರೆ, ನೇರವಾಗಿ ರೈತರೇ ಬಿ.ಡಿ.ಎ.ಗೆ ಹೋದರೆ 5 ರಿಂದ 10 ವರ್ಷ ಆದರೂ ಸಹ ಕೆಲಸ ಆಗುವುದಿಲ್ಲ. ಇದಕ್ಕೆ ಏನಾದರೂ ಪರಿಹಾರ ಇದೆಯೇ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಇದು 2010ರಿಂದ ನಡೆದಿರುವುದಾಗಿದೆ. ಯಾವ ಯಾವ ಸಮಯದಿಂದ ರೈತರು ಬಿ.ಡಿ.ಎ. ಮುಂದೆ ಹೋಗಿದ್ದರು, ಏತಕ್ಕೆ ಕೆಲಸ ಆಗಿರುವುದಿಲ್ಲ, ಆ ಸಂದರ್ಭದಲ್ಲಿ ಯಾರು ಏಜೆಂಟ್ ಇದ್ದರು ಎನ್ನುವುದು ನನಗಿಂತಲೂ ಚೆನ್ನಾಗಿ ಮಾನ್ಯ ತಿಪ್ಪೇಸ್ವಾಮಿಯವರಿಗೆ ಗೊತ್ತಿರುತ್ತದೆ. ಇದು ಈಗ ನಡೆದಿರುವಂತಹ ವಿಚಾರ ಅಲ್ಲ. ಆದರೂ ಸಹ ಇದರಲ್ಲಿ ಎರಡು component ಇವೆ. ಮೊದಲನೆಯದಾಗಿ, ಕೆಂಪೇಗೌಡ ಬಡಾವಣೆಯ ಸಂಪೂರ್ಣವಾದ ಅಭಿವೃದ್ಧಿಯನ್ನು ಮಾಡಬೇಕು ಎಂದಾಗ, ಅಭಿವೃದ್ಧಿಯಾಗಿರುವಂತಹ ನಿವೇಶನಗಳು ಯಾವ ರೈತರು ಜಮೀನು ಕಳೆದುಕೊಂಡಿದ್ದಾರೆ, ಅವರಿಗೆ ನಿವೇಶನಗಳು ಸಿಗುತ್ತವೆ. ಕೆಂಪೇಗೌಡ ಬಡಾವಣೆಯ ಅಭಿವೃದ್ಧಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಈಗಾಗಲೇ ಬಿ.ಡಿ.ಎ.ಗೆ ಹೇಳಿದ್ದೇನೆ. ಅದರಂತೆ, ಬಿ.ಡಿ.ಎ. ಬೋರ್ಡ್ ಮೀಟಿಂಗ್‌ನಲ್ಲಿ ಅದು ಅನುಮೋದನೆಯಾಗಿ ಇಡೀ ಕೆಂಪೇಗೌಡ ಬಡಾವಣೆಯ ಸಮಗ್ರ ಅಭಿವೃದ್ಧಿ ಮಾಡುತ್ತೇವೆ. ಈ ಬಡಾವಣೆಯಲ್ಲಿ ನಿವೇಶನ ಕಳೆದುಕೊಂಡವರಿಗಷ್ಟೆ ಅಲ್ಲದೇ, ನಿವೇಶನ ಪಡೆದವರಿಗೂ ಸಹ ಸಾಕಷ್ಟು ತೊಂದರೆಯಾಗಿರುವುದು ನನ್ನ ಗಮನಕ್ಕೆ ಬಂದಿದೆ. ಹಾಗಾಗಿ, ಈ ಬಡಾವಣೆಯ ಸಮಗ್ರ ಅಭಿವೃದ್ಧಿಯನ್ನು ನಾವು ಮಾಡುತ್ತೇವೆ.

ಎರಡನೆಯದಾಗಿ, ಈಗಾಗಲೇ ಈ ಬಡಾವಣೆಯಲ್ಲಿ ರೈತರಿಗೆ 6,682 ಮೀಟರ್‌ನಷ್ಟು ನಿವೇಶನವನ್ನು ಕೊಟ್ಟಿರುತ್ತೇವೆ. ಇಲ್ಲಿ ಬಂದಿರುವ ಪ್ರಶ್ನೆ ಏನೆಂದರೆ, ರೈತರು ಸೂಲಿಕೆರೆ ಗ್ರಾಮದ ಸರ್ವೆ ನಂ:8 ರಲ್ಲಿ ನಿವೇಶನ ಕೇಳುತ್ತಿದ್ದಾರೆ. ಅಲ್ಲಿ ಏನಾಗಿದೆಯೆಂದರೆ, ಸದರಿ ಸರ್ವೆ ನಂಬರ್‌ಗೆ

ಸಂಬಂಧಪಟ್ಟಂತೆ ಬಹಳಷ್ಟು ಕೇಸ್‌ಗಳಿದ್ದು, ಕೋರ್ಟ್‌ನಲ್ಲಿ ವ್ಯಾಜ್ಯ ಇರುತ್ತದೆ. ಇದರಿಂದಾಗಿ, ಅಲ್ಲಿ ನಿವೇಶನ ಕೊಡುವುದಕ್ಕೆ ಆಗುತ್ತಿರುವುದಿಲ್ಲ. ಅದೇ ಗ್ರಾಮದ ಸರ್ವೆ ನಂ:63ರಲ್ಲಿ ನಿವೇಶನ ಕೊಡುವುದಕ್ಕೆ ಸಾಧ್ಯವಿದೆ. ಸದರಿ ನಿವೇಶನವನ್ನು ರೈತರು ಒಪ್ಪಿಕೊಂಡರೆ, ಸಂಪೂರ್ಣವಾಗಿ ಅವರಿಗೆ ಎಷ್ಟು ನಿವೇಶನ ಕೊಡುವುದಕ್ಕೆ ಅವಶ್ಯಕತೆ ಇದೆ ಅಷ್ಟು ಅಭಿವೃದ್ಧಿಪಡಿಸಿದ ನಿವೇಶನವನ್ನು ಕೊಡುವುದಕ್ಕೆ ಬಿ.ಡಿ.ಎ. ಸಿದ್ಧವಿದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ಎಲ್ಲಿಯಾದರೂ ಸರಿ, ಅಭಿವೃದ್ಧಿಪಡಿಸಿದ ಏರಿಯಾದಲ್ಲಿ ರೈತರಿಗೆ ನಿವೇಶನ ಕೊಡುವುದಕ್ಕೆ ಪ್ರಯತ್ನ ಮಾಡಿ. ಏಕೆಂದರೆ, ಕೆಲವು ರೈತರು ಆ ನಿವೇಶನಗಳನ್ನು ಮಾರಿಕೊಂಡು, ತಮ್ಮ ಮಕ್ಕಳ ಮದುವೆ ಮಾಡುವುದು ಅಥವಾ ಇನ್ನಿತರ ಕಾರ್ಯಗಳಿಗೆ ಉಪಯೋಗ ಮಾಡಿಕೊಳ್ಳುತ್ತಾರೆ. ಏಕೆಂದರೆ, ಅಲ್ಲಿನ ರೈತರು ಬಹಳ ಕಷ್ಟದಲ್ಲಿರುತ್ತಾರೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪೇಸ್ವಾಮಿಯವರು ಹೇಳುತ್ತಿರುವುದು ಸರಿಯಾಗಿದೆ. ಇಡೀ ಕೆಂಪೇಗೌಡ ಬಡಾವಣೆಯನ್ನು ನಾವು ಅಭಿವೃದ್ಧಿಪಡಿಸಬೇಕಾಗಿದೆ. ಹೀಗಾಗಿ, ಸದರಿ ಬಡಾವಣೆಯನ್ನು ಅಭಿವೃದ್ಧಿಪಡಿಸುವುದಕ್ಕೆ ನಾವು ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಅದಕ್ಕಾಗಿ, ನಾನು ಮೊದಲು ಅದೇ ವಿಷಯವನ್ನು ಹೇಳಿರುತ್ತೇನೆ. ಸದರಿ ಬಡಾವಣೆಯಲ್ಲಿ ರೈತರಿಗೆ ನಾವು ಯಾವುದೇ ನಿವೇಶನವನ್ನು ಕೊಟ್ಟರೂ ಸಹ ಅಭಿವೃದ್ಧಿಪಡಿಸಿದ ನಿವೇಶನವನ್ನೇ ಕೊಡುತ್ತೇವೆ. ಆದರೆ, ಸರ್ವೆ ನಂ:8ರಲ್ಲಿ ನಿವೇಶನ ಕೊಡುವುದಕ್ಕೆ ನಮಗೆ ಯಾವುದೇ ತೊಂದರೆ ಇಲ್ಲ. ಆದರೆ, ಅವೆಲ್ಲವೂ ಸಹ ಕೋರ್ಟ್ ವ್ಯಾಜ್ಯದಲ್ಲಿವೆ. ಹಾಗಾಗಿ, ಅದೇ ಗ್ರಾಮದ ಸರ್ವೆ ನಂ:63ರಲ್ಲಿ ನಿವೇಶನ ಲಭ್ಯವಿದ್ದು, ಎಲ್ಲಾ ರೈತರಿಗೂ ನಿವೇಶನ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ ಮತ್ತು ಸದರಿ ನಿವೇಶನಗಳನ್ನು ಅಭಿವೃದ್ಧಿಪಡಿಸಿಯೇ ಕೊಡುತ್ತೇವೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಕೊಡುವ ರೀತಿಯಲ್ಲಿ ಪ್ರಯತ್ನ ಮಾಡಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಮಾಡುತ್ತೇವೆ.

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್‌ರವರೇ ತಮ್ಮ ಪ್ರಶ್ನೆ ಸಂಖ್ಯೆ:364 ವರ್ಗಾವಣೆಯಾಗಿರುತ್ತದೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಏತಕ್ಕೆ ವರ್ಗಾವಣೆಯಾಗಿರುತ್ತದೆ? ನಾವು ಯಾವುದಾದರೂ ಪ್ರಶ್ನೆ ಕೇಳಿದರೆ, ಸದರಿ ಪ್ರಶ್ನೆ ಯಾವ ಇಲಾಖೆಗೆ ಸಂಬಂಧಪಟ್ಟಿದೆ ಎಂಬುದನ್ನು ಪರಿಶೀಲಿಸಿ, ಅದನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸುವಷ್ಟು ಜ್ಞಾನ ಅಧಿಕಾರಿಗಳಿಗೆ ಇರುವುದಿಲ್ಲವೇ?

**ಸಭಾಪತಿಯವರು:–** ತಮ್ಮ ಪ್ರಶ್ನೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ವರ್ಗಾವಣೆಯಾಗಿರುತ್ತದೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಆಯಿತು. ಇದನ್ನು ಮೊದಲೇ ಮಾಡಬೇಕಲ್ಲವೇ? ಅದನ್ನು ಈಗ ಹೇಳುವುದೇ?

**ಸಭಾಪತಿಯವರು:–** ತಮ್ಮ ಪ್ರಶ್ನೆಗೆ ಉತ್ತರವನ್ನು ಆದಷ್ಟು ಬೇಗ ಕೊಡಿಸುತ್ತೇನೆ. ಅದಕ್ಕೆ ಯಾವುದೇ ತೊಂದರೆ ಇರುವುದಿಲ್ಲ. ತಮ್ಮ ಪ್ರಶ್ನೆಗೆ ಉತ್ತರವನ್ನು ಇದೇ ಅಧಿವೇಶನದಲ್ಲಿಯೇ ಕೊಡಿಸುತ್ತೇನೆ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ನಾನು ಕೇಳುತ್ತಿರುವುದೇನೆಂದರೆ, ಸಂಬಂಧಪಟ್ಟ ಇಲಾಖೆಯವರಿಗೆ ಅಷ್ಟು ಜ್ಞಾನ ಇರುವುದಿಲ್ಲವೇ?

**ಸಭಾಪತಿಯವರು:–** ತಮ್ಮ ಪ್ರಶ್ನೆಗೆ ಇದೇ ಅಧಿವೇಶನದಲ್ಲಿ ಉತ್ತರ ಕೊಡಿಸುತ್ತೇನೆ.

**ಪ್ರಶ್ನೆ ಸಂಖ್ಯೆ:447**

**(ಈ ಹಂತದಲ್ಲಿ ಶ್ರೀ ಕುಶಾಲಪ್ಪ ಎಂ.ಪಿ.(ಸುಜಾ) ರವರು ಸದನದಲ್ಲಿ ಗೈರು ಹಾಜರಾಗಿದ್ದರು)**

**ಪ್ರಶ್ನೆ ಸಂಖ್ಯೆ: 476**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ನಾವೆಲ್ಲರೂ ಆಡಳಿತ, ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಮಾತನಾಡುತ್ತೇವೆ. ಕಳೆದ 20 ತಿಂಗಳುಗಳಿಂದ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆ ಆಗಿರುವುದಿಲ್ಲ. ಅಲ್ಲಿರುವಂತಹ ಸಮಸ್ಯೆಗಳು ಅಂದರೆ, ನೆರೆ ಹಾನಿಯಂತಹ ಸಮಸ್ಯೆಗಳಿಗೆ ಆದಷ್ಟು ಬೇಗ ಕ್ರಮ ವಹಿಸಬೇಕು. ಎರಡನೆಯದಾಗಿ, ಬಹಳ ಪ್ರಮುಖವಾಗಿ ಗ್ರಾಮೀಣ ಕ್ರೀಡೆಗಳಿಗೆ ಒಂದಷ್ಟು ಅನುದಾನವನ್ನು ಕೊಡಬೇಕೆಂದು ಪ್ರಶ್ನೆ ಕೇಳಿದ್ದು, ಅದಕ್ಕೆ ಗ್ರಾಮ ಪಂಚಾಯಿತಿಗಳ ಆದಾಯದಲ್ಲಿ ಶೇಕಡ 2 ರಷ್ಟನ್ನು ಕ್ರೀಡೆಗಳಿಗೆ ಉಪಯೋಗ ಮಾಡಿಕೊಳ್ಳಬಹುದೆಂದು ಉತ್ತರ ನೀಡಿರುತ್ತಾರೆ. ಆದರೆ, ಸುಮಾರು ಗ್ರಾಮ ಪಂಚಾಯಿತಿಗಳಿಗೆ ಆದಾಯವೇ ಇರುವುದಿಲ್ಲ. ಅನೇಕ ಗ್ರಾಮ ಪಂಚಾಯಿತಿಗಳು ಬಹಳ ಕಷ್ಟದಲ್ಲಿರುತ್ತವೆ. ಹಾಗಾಗಿ, ಗ್ರಾಮೀಣ ಕ್ರೀಡೆಗಳಿಗೆ ಹೆಚ್ಚಿನ ಅನುದಾನವನ್ನು ಕೊಟ್ಟರೆ, ಗ್ರಾಮೀಣ ಭಾಗದಲ್ಲಿರುವಂತಹ ಕ್ರೀಡಾಳುಗಳಿಗೆ ಅನುಕೂಲ ಆಗುತ್ತದೆ. ಆದುದರಿಂದ, ಸರ್ಕಾರ ಇದಕ್ಕೆ ಮಾನ್ಯತೆ ನೀಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗ ಏನು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ, Delimitation Commission ಈಗಾಗಲೇ ಕೆಲಸ ಮಾಡುತ್ತಿದೆ, ಅದು ತನ್ನ ವರದಿ ಕೊಟ್ಟ ತಕ್ಷಣವೇ ಮುಂದಿನ ಕ್ರಮಗಳನ್ನು ನಾವು ಖಂಡಿತವಾಗಿ ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ, ಗ್ರಾಮೀಣ ಕ್ರೀಡಾಕೂಟಗಳ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಹೌದು, ಇದಕ್ಕೆ ಮೊದಲು ಯಾವುದೇ ಯೋಜನೆಗಳಿರುವುದಿಲ್ಲ. ಈ ಹಿಂದೆ, ಶೇಕಡ 2 ರಷ್ಟು ಅನುದಾನವನ್ನು ಗ್ರಾಮೀಣ ಕ್ರೀಡೆಗಳಿಗೆ ಉಪಯೋಗಿಸಿಕೊಂಡು ಕ್ರೀಡೆಗಳನ್ನು ನಡೆಸಬೇಕೆಂದು ಇತ್ತು. ಇದು ಬಹಳ ಕಷ್ಟಸಾಧ್ಯವೆನ್ನುವುದು ನನಗೆ ಗೊತ್ತಿದೆ. ಆದುದರಿಂದ, ಈ ವರ್ಷ ನಾವು ವಿಶೇಷವಾಗಿ, ಗ್ರಾಮೀಣ ಕ್ರೀಡೆಯನ್ನು ಸರ್ಕಾರ ಬಹಳಷ್ಟು

ಮುತುವರ್ಜಿ ವಹಿಸಿ ಮಾಡಬೇಕೆನ್ನುವಂತಹ ತೀರ್ಮಾನ ಮಾಡಿ, ಗ್ರಾಮೀಣ ಕ್ರೀಡೆ ಎನ್ನುವಂಥದ್ದನ್ನು ಪ್ರಾರಂಭ ಮಾಡಿದ್ದೇವೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಗ್ರಾಮೀಣ ಕ್ರೀಡೆಗಳು ನಡೆಯುತ್ತವೆ. ಅದರಲ್ಲಿ, ಕಬಡ್ಡಿ, ಖೋ-ಖೋ, ಕುಸ್ತಿ, ಎತ್ತಿನಗಾಡಿ ಓಟ, ಕಂಬಳ, ಮಲ್ಲಕಂಬ ಮತ್ತು ಇನ್ನಿತರ ಆಯಾ ಗ್ರಾಮೀಣ ಪ್ರದೇಶದಲ್ಲಿ ಯಾವುದು ಪ್ರಸಿದ್ಧಿಯಾಗಿರುತ್ತದೆ ಅಂತಹ ಕ್ರೀಡೆಗಳಿಗೆ ನಾವು ಸ್ಪರ್ಧೆಯನ್ನು ಇಡುತ್ತೇವೆ. ಇದನ್ನು ಇದೇ ತಿಂಗಳಿನಿಂದ ಪ್ರಾರಂಭ ಮಾಡಬೇಕೆಂದು ತೀರ್ಮಾನ ಮಾಡಿದ್ದು, ಪ್ರಸ್ತುತ ರಾಜ್ಯದಲ್ಲಿ ಮಳೆ ಹೆಚ್ಚಾಗಿರುವುದರಿಂದ ಅದನ್ನು ಮಳೆಯ ನಂತರ ಪ್ರಾರಂಭ ಮಾಡುತ್ತೇವೆ. ಈ ಕ್ರೀಡೆ ಎಲ್ಲಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸುಮಾರು 02 ತಿಂಗಳು ನಡೆಯುತ್ತಿದೆ. ಇದು ವಿಶೇಷವಾದಂತಹ ಕಾರ್ಯಕ್ರಮವಾಗಿದ್ದು, ಗ್ರಾಮೀಣ ಪ್ರದೇಶದ ಮಕ್ಕಳ ಪ್ರತಿಭೆಗೆ ಅನುಕೂಲವಾಗಲಿ ಎಂದು ಮತ್ತು ಕ್ರೀಡೆಯಲ್ಲಿ ಇನ್ನಷ್ಟು ಆಸಕ್ತಿ ಬರಲಿ ಎಂದು ನಾವು ಈ ಯೋಜನೆಯನ್ನು ಮಾಡಿದ್ದೇವೆ. ಈ ಕ್ರೀಡೆಯನ್ನು ಇದೇ ವರ್ಷ ಪ್ರಾರಂಭ ಮಾಡಿದ್ದೇವೆ. ಹಾಗಾಗಿ, ಇದನ್ನು ಉತ್ತಮ ರೀತಿಯಲ್ಲಿ ನಾವು ನಡೆಸುತ್ತೇವೆ.

**ಪ್ರಶ್ನೆ ಸಂಖ್ಯೆ: 479**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನನ್ನ ಪ್ರಶ್ನೆಗೆ ಸಂಬಂಧಪಟ್ಟಂತೆ, ಬಹಳ ವಿಸ್ತಾರವಾಗಿ ಕೊಟ್ಟಿರುವಂತಹ ಉತ್ತರವನ್ನು ನಾನು ನೋಡಿದ್ದೇನೆ. ಆದರೆ, ನಾನು ಕೇಳುತ್ತಿರುವುದೇನೆಂದರೆ, ಕಳೆದ ವಿಧಾನಸಭೆಯಲ್ಲಿ ಇದೇ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಇದೇ ಉತ್ತರವನ್ನು ಕೊಟ್ಟಿದ್ದರು. ಆದರೆ, ಒಂದು ವರ್ಷದ ತರುವಾಯ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ತದನಂತರ ರಸ್ತೆ ಮಾಡಲಾಗುವುದೆಂಬ ವಿಚಾರವನ್ನು ಹೇಳುತ್ತಿದ್ದಾರೆ. ರಸ್ತೆ ಮಾಡುವುದು ತಡವಾದರೂ ಸಹ, ಅಲ್ಲಿ ಅತಿಕ್ರಮಣವಾಗಿರುವಂತಹ ಜಮೀನನ್ನು ಕೂಡಲೇ ತೆರವು ಮಾಡುವಂತಹ ಕೆಲಸವನ್ನು ಮಾಡುತ್ತಾರೆಯೇ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಕೋಗಿಲು ರಸ್ತೆಯಿಂದ ಪ್ರಕೃತಿ ನಗರ, ಜಯಸೂರ್ಯ ನಗರ, ಹಂತ-1, 2ನೇ ಹಂತ ಹಾಗೂ 3-4 ಹಂತಗಳ ಮಾರ್ಗವಾಗಿ ಸಂಪಿಗೆಹಳ್ಳಿ ಸೇರುವ ರಸ್ತೆಯ ಪ್ರದೇಶದ ಬಗ್ಗೆ ಮಾಹಿತಿಯನ್ನು ನಾನು ಸಹ ಅಧಿಕಾರಿಗಳಿಂದ ಪಡೆದು ಪರಿಶೀಲಿಸಿರುತ್ತೇನೆ. ಈಗಾಗಲೇ ಕೆಲವು ಭಾಗದಲ್ಲಿ ಅಭಿವೃದ್ಧಿ ಮಾಡಲಾಗಿರುತ್ತದೆ. ಪ್ರಮುಖವಾಗಿ ಇನ್ನು 4-5 ಬಡಾವಣೆಗಳಲ್ಲಿ ಅಭಿವೃದ್ಧಿ ಮಾಡಬೇಕಾಗಿರುತ್ತದೆ. ಅದು ಆರ್.ಎಂ.ಪಿ.-2015ರ ಪ್ರಕಾರ ಮಾಡಬೇಕಾಗಿರುತ್ತದೆ. ಅದನ್ನು ಖಂಡಿತವಾಗಿಯು ಸಹ ಕೈಗೆತ್ತಿಕೊಳ್ಳುತ್ತೇವೆ. ಆದರೆ, ಲಿಂಕ್ ಆಗಬೇಕಾಗುತ್ತದೆ. ಆ ಲಿಂಕ್‌ನ್ನು ಖಂಡಿತವಾಗಿಯೂ ಮಾಡಿಕೊಡುತ್ತೇವೆ.

**ಪ್ರಶ್ನೆ ಸಂಖ್ಯೆ: 434**

**(ಉತ್ತರವನ್ನು ಒದಗಿಸಲಾಗಿದೆ)**

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಬೀದರ್ ಜಿಲ್ಲೆಯ ಕಾರಂಜಾ ಮುಳುಗಡೆ ಪ್ರದೇಶದ ರೈತರು ಪರಿಹಾರಕ್ಕಾಗಿ ಒತ್ತಾಯಿಸಿ ಸುಮಾರು ೮೦ ದಿವಸಗಳಿಂದ ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದು, ಅದಕ್ಕೆ "ಬಂದಿದೆ" ಎಂದು ಉತ್ತರ ನೀಡಿರುತ್ತಾರೆ. **(ಗೊಂದಲ)** ಆದರೆ, ಸುಮಾರು ೮೦ ದಿವಸಗಳಿಂದ ರೈತರು ಪರಿಹಾರಕ್ಕಾಗಿ ಒತ್ತಾಯಿಸಿ ಮಳೆ, ಬಿಸಿಲು, ಚಳಿ ಎನ್ನದೇ ಅಹೋರಾತ್ರಿ ಧರಣಿ ಮಾಡುತ್ತಿದ್ದಾರೆ. ಆದರೆ, ಸರ್ಕಾರದ ಯಾವೊಬ್ಬ ಸಚಿವರಾಗಲಿ ಅಲ್ಲಿಗೆ ಭೇಟಿ ನೀಡಿರುವುದಿಲ್ಲ. ಆ ಭಾಗದಲ್ಲಿ ಇಬ್ಬರು ಕೇಂದ್ರ ಸಚಿವರಿದ್ದಾರೆ, ಒಬ್ಬರು ರಾಜ್ಯ ಸಚಿವರು ಇದ್ದಾರೆ, ತಾವು ಕೂಡ ಅದೇ ಭಾಗವನ್ನು ಪ್ರತಿನಿಧಿಸುತ್ತೀರಿ. ಜೊತೆಗೆ, ಆ ಭಾಗದಲ್ಲಿ ಇಬ್ಬರು ಎಂ.ಎಲ್.ಎ. ಕೂಡ ಇದ್ದು, ಒಬ್ಬರೂ ಸಹ ಆ ರೈತರನ್ನು ಏನಾಗಿದೆ ಎಂದು ಕೇಳುವುದಕ್ಕೆ ಹೋಗಿರುವುದಿಲ್ಲ. ಸಚಿವರಿಗೆ ಅಥವಾ ಸರ್ಕಾರಕ್ಕೆ ಬೇರೆ ಬೇರೆ ರೀತಿಯ ಕೆಲಸ ಮಾಡುವುದಕ್ಕೆ ಸಮಯ ಇದೆ. ಆದರೆ, ಸುಮಾರು ೮೦ ದಿವಸಗಳಿಂದ ಮಳೆ, ಬಿಸಿಲು, ಚಳಿ ಎನ್ನದೇ ಧರಣಿ ನಡೆಸುತ್ತಿರುವ ರೈತರನ್ನು ಭೇಟಿಯಾಗಿ ಸಮಸ್ಯೆ ಕೇಳುವುದಕ್ಕೆ ಸಮಯ ಆಗುತ್ತಿಲ್ಲ. ಇದು ಏತಕ್ಕೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಜೊತೆಗೆ, ಈ ರೈತರಿಗೆ ಪರಿಹಾರ ಕೊಡುವುದಕ್ಕೆ ಆಗುತ್ತದೆಯೋ ಅಥವಾ ಇಲ್ಲವೋ ಎಂದು ನಾನು ಪ್ರಶ್ನೆ ಕೇಳಿದ್ದೇನು.

(ಮುಂದು)

(೮೩೬) 15.09.2022 12.00 ವೈಎಲ್-ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಅರವಿಂದ ಕುಮಾರ್ ಅರಳಿ(ಮುಂದು):-**

ಅದಕ್ಕೆ ಮಾನ್ಯ ಸಚಿವರು "...ಭೂಸ್ವಾಧೀನ ಕಾಯ್ದೆ 1864 ರ ಕಲಂ 18(1) ಹಾಗೂ 28 (ಎ) ರಡಿ ಇರುವಾಗ ಪರಿಹಾರ ನೀಡಲು ಸಾಧ್ಯವಿಲ್ಲ" ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಸಭೆ ಕರೆದು, ಆ ಸಭೆಯಲ್ಲಿ ಚರ್ಚೆ ನಡೆಸಿ ಒಂದು ನಿರ್ಣಯಕ್ಕೆ ಬಂದಿದ್ದರು. ಹಿಂದೆ

ಇದ್ದ ಸರ್ಕಾರ ಪರಿಹಾರ ನೀಡುತ್ತೇವೆ ಎಂದು ಹೇಳಿ, ಈಗಿನ ಸರ್ಕಾರ ಏತಕ್ಕೆ ಪರಿಹಾರ ನೀಡಲು ಅವಕಾಶವಿಲ್ಲ ಎಂದು ಹೇಳಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ ಮಾನ್ಯ ಸಚಿವರಿಂದ ಉತ್ತರ ಕೇಳಬಯಸುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಂದು ವಿಚಾರವನ್ನು ತಿಳಿದುಕೊಳ್ಳಬೇಕಾಗಿದೆ. 1864 ರ ಅಡಿಯಲ್ಲಿ ಭೂಸ್ವಾಧೀನ ಕಾಯ್ದೆ ಆದ ಬಳಿಕ ಹೊಸದಾಗಿ 2013ರ ಅಡಿಯಲ್ಲಿ ಭೂಸ್ವಾಧೀನ ಕಾಯ್ದೆ ಮಾಡಲಾಗಿದ್ದು, ಅದನ್ನು ಸ್ವಲ್ಪ ಮಾನ್ಯ ಸದಸ್ಯರು ಗಮನಿಸಬೇಕು. ಮಾನ್ಯ ಸಭಾಪತಿಯವರೇ, ತಾವು ಸಹ ಅದೇ ಜಿಲ್ಲೆಯಿಂದ ಬಂದವರಾಗಿದ್ದು, ಕಾರಂಜ ಯೋಜನೆಯಾಗಿದ್ದು ಯಾವಾಗ? ಯಾವಾಗ ಪರಿಹಾರ ನೀಡಲಾಗಿತ್ತು?

**ಸಭಾಪತಿಯವರು:-** 1978 ರಲ್ಲಿ ಕಾರಂಜ ಯೋಜನೆ ಜಾರಿಗೆ ಬಂತು.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಹೌದು. 1978-1979 ರಿಂದ 1985-1986 ರವರೆಗೂ ರೂ.69.51 ಕೋಟಿ ಪರಿಹಾರ ನೀಡಲಾಗಿದೆ. ರೂ.69.00 ಕೋಟಿಗಳಲ್ಲಿ ರೂ.48.00 ಕೋಟಿಗಳನ್ನು ರೆಗ್ಯೂಲರ್ ಅವಾರ್ಡ್‌ಗೆ ನೀಡಲಾಗಿದೆ. Land Acquisition Officer Award ಏನಿದೆ, ಅದರ ಪ್ರಕಾರ ನೀಡಲಾಗಿದೆ. ಉಳಿದ ರೂ.21.00 ಕೋಟಿಗಳನ್ನು ಕೆಲವು ರೈತರು ನ್ಯಾಯಾಲಯದ ಮೊರೆ ಹೋಗಿ enhanced Award ಪಡೆದುಕೊಂಡಿದ್ದಾರೆ. ಇನ್ನು ಕೆಲವು ರೈತರು ನ್ಯಾಯಾಲಯದ ಮೊರೆ ಹೋಗಲಿಲ್ಲ.

**ಸಭಾಪತಿಯವರು:-** ಆ ಸಮಯದಲ್ಲಿ ನ್ಯಾಯಾಲಯದ ಮೊರೆ ಹೋಗಲಿಲ್ಲ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಹೌದು. 1864 ಭೂಸ್ವಾಧೀನ ಕಾಯ್ದೆ ಏನೆಂದು ಹೇಳುತ್ತದೆ ಎಂದರೆ, ನ್ಯಾಯಾಲಯದ ಮೊರೆ ಹೋಗದ ರೈತರು 3 ತಿಂಗಳೊಳಗೆ ಎಸ್.ಎಲ್.ಎ.ಒ., ಮೂಲಕ ಸರ್ಕಾರಕ್ಕೆ ಅರ್ಜಿ ನೀಡಿದರೆ, ಅವರಿಗೂ ಸಹ enhanced ಪರಿಹಾರ ನೀಡಲು ಅವಕಾಶ ಇತ್ತು. ಆದರೆ, ಅವರು 3 ತಿಂಗಳೊಳಗೆ ಅರ್ಜಿ

ಸಲ್ಲಿಸಲಿಲ್ಲ. ಸುಮಾರು 25, 30 ವರ್ಷಗಳ ನಂತರ ಧರಣಿ ಕುಳಿತರೆ ಪರಿಹಾರ ನೀಡಲು ಸಾಧ್ಯವೇ? ಇನ್ನೊಂದು ವಿಚಾರವನ್ನು ಮಾನ್ಯ ಸದಸ್ಯರಿಗೆ ಹೇಳಬಯಸುವುದೇನೆಂದರೆ, 25 ಜೂನ್ 2014 ರಲ್ಲಿ ಯಾವ ಸರ್ಕಾರ ಅಧಿಕಾರದಲ್ಲಿತ್ತು?

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಮಾನ್ಯ ಸದಸ್ಯರು ಮೊದಲು ಕೇಳಿಸಿಕೊಳ್ಳಲಿ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಹಿಂದಿನ ಸರ್ಕಾರದ ಬಗ್ಗೆ ಪ್ರಸ್ತಾಪ ಮಾಡಿದಕ್ಕಾಗಿ ಹೇಳುತ್ತಿದ್ದೇನೆ. ಇಲ್ಲದಿದ್ದರೆ ರಾಜಕಾರಣ ಮಿಕ್ಸ್ ಮಾಡುವ ಹಾಗಿಲ್ಲ. ಮಾನ್ಯ ಸಿದ್ಧರಾಮಯ್ಯನವರು ಅಂದಿನ ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ಅರವಿಂದ ಕುಮಾರ್ ಅರಳಿಯವರ ಪಕ್ಷದ ಸರ್ಕಾರವೇ ಅಧಿಕಾರದಲ್ಲಿತ್ತು.

**ಸಭಾಪತಿಯವರು:-** ಆಗ ಮಾನ್ಯ ಡಿ.ಕೆ.ಶಿವಕುಮಾರ್‌ರವರು ನೀರಾವರಿ ಸಚಿವರಾಗಿದ್ದರು.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಆಗ ಮಾನ್ಯ ಡಿ.ಕೆ.ಶಿವಕುಮಾರ್‌ರವರು ನೀರಾವರಿ ಸಚಿವರಾಗಿರಲಿಲ್ಲ. ಮಾನ್ಯ ಎಂ.ಬಿ.ಪಾಟೀಲ್‌ರವರು ನೀರಾವರಿ ಸಚಿವರಾಗಿದ್ದರು. ಅವತ್ತಿನ ದಿವಸ ಸಚಿವ ಸಂಪುಟ ಸಭೆಯಲ್ಲಿ "ಪರಿಹಾರ ನೀಡಲು ಅವಕಾಶವಿಲ್ಲ, ಪರಿಹಾರ ನೀಡಬಾರದೆಂದು" ನಿರ್ಣಯವಾಗಿದೆ. ಇನ್ನು ಮುಂದುವರೆದು ಹೆಚ್ಚಿನ ಮಾಹಿತಿ ಹೇಳುವುದಾದರೆ, ಯು.ಕೆ.ಪಿ., ಮಾದರಿಯಲ್ಲಿ ಪರಿಹಾರ ನೀಡಬೇಕೆಂದು ಸಹ ಅವರದು ಹೋರಾಟ ಇದೆ. ಯು.ಕೆ.ಪಿ., ಮಾದರಿಯಲ್ಲಿ ಪರಿಹಾರ ನೀಡಲು ಅವಕಾಶವೇ ಇಲ್ಲ. ಏತಕ್ಕೆ ಅವಕಾಶ ಇಲ್ಲವೆಂದರೆ, ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವ ಬ್ಯಾಂಕ್ ನೆರವು ತೆಗೆದುಕೊಳ್ಳಲಾಗಿದೆ. ಅದರಂತೆ ವಿಶ್ವ ಬ್ಯಾಂಕ್‌ನವರು "ಯಾವ ರೀತಿ rehabilitation ಮಾಡಬೇಕು, ಪರಿಹಾರ ನೀಡಬೇಕು, ಮಕ್ಕಳಿಗೆ ಸರ್ವೀಸ್ ನೀಡಬೇಕು" ಎನ್ನುವುದರ ಬಗ್ಗೆ ಷರತ್ತು ವಿಧಿಸಿದ್ದಾರೆ. ಸಂತ್ರಸ್ತರಿಗೆ ಏನೇನು ಮಾಡಬೇಕೆಂದು ಷರತ್ತು ವಿಧಿಸಿದ್ದು, ಆ ಷರತ್ತನ್ನು ಒಪ್ಪಿಕೊಂಡ ನಂತರ ಸರ್ಕಾರಕ್ಕೆ

ಸಾಲವನ್ನು ನೀಡಿದ್ದಾರೆ. ಹಾಗಾಗಿ ಯು.ಕೆ.ಪಿ. ಮಾದರಿಗೂ ಇದಕ್ಕೂ ಹೊಂದಾಣಿಕೆ ಮಾಡಲು ಬರುವುದಿಲ್ಲ. ಹಾಗೆಯೇ ರೈತರು ಏನು ಧರಣಿ ಮಾಡುತ್ತಿದ್ದಾರೆ, ಅದಕ್ಕೆ ಆ ರೀತಿ ಎಲ್ಲಾ ನಾವು ಪರಿಹಾರ ನೀಡಲು ಸಾಧ್ಯವಿಲ್ಲ. ಈ ಯೋಜನೆ ಪ್ರಾರಂಭವಾಗಿ ಸುಮಾರು 30 ರಿಂದ 40 ವರ್ಷಗಳಾಗಿವೆ. 1978-1979 ರಿಂದ 1985-1986 ರವರೆಗೂ ರೂ.69.51 ಕೋಟಿ ಪರಿಹಾರ ತೆಗೆದುಕೊಂಡಿದ್ದು, ಇನ್ನು ಒಂದು ರೂಪಾಯಿ ಸಹ ಪರಿಹಾರ ನೀಡಲು ಸಾಧ್ಯವಿಲ್ಲ. ಅವರ ಯಾವುದೇ ಬೇಡಿಕೆ ಇದ್ದರೂ ಅದನ್ನು ಪರಿಗಣಿಸಲು ಸಾಧ್ಯವಿಲ್ಲ. ಇದು ದೇಶಕ್ಕೆ ಸಂಬಂಧಪಟ್ಟ ಭೂಸ್ವಾಧೀನ ಕಾಯ್ದೆಯಾಗಿದ್ದು, ಇಡೀ ದೇಶಕ್ಕೆ ಈ ಯೋಜನೆ ಅನ್ವಯಿಸುತ್ತದೆ. ಮಾನ್ಯ ಸದಸ್ಯರು ಹೇಳಿದ ರೀತಿ ಮಾಡಲು ಹೋದರೆ, ಇಡೀ ದೇಶದ ಜನರೆ ಎದ್ದು ನಮಗೂ ಆ ಮಾದರಿಯಲ್ಲಿ ಪರಿಹಾರ ಕೊಡಿ ಎಂದು ಹೇಳಿದರೆ, ಪರಿಹಾರ ಕೊಡಲು ಸಾಧ್ಯವೇ? ಅದಕ್ಕಾಗಿ ಇಂತಹ ಬೇಡಿಕೆಯನ್ನು ಈ ಸದನದಲ್ಲಿ ತೆರವುಗೊಳಿಸಬೇಕು. ಏಕೆಂದರೆ, ಈ ಸದನವು ಬುದ್ಧಿ ಜೀವಿಗಳ ಮನೆ ಎಂದು ಕರೆಯಲ್ಪಡುವುದರಿಂದ ಇಂತಹ ವಿಚಾರದ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ನಡೆಸಿ, ತರಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಇದೊಂದು ಜ್ವಲಂತ ಸಮಸ್ಯೆಯಾಗಿದೆ.

**ಸಭಾಪತಿಯವರು:-** ಆಗಲಿ. ಸಮಸ್ಯೆ ದೊಡ್ಡದಾಗಿರಬಹುದು. ಆದರೆ, ಇದು ಪ್ರಶ್ನೋತ್ತರ ಅವಧಿಯಾಗಿದೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಟಿ.ಎ.ಶರವಣ:-** ಮಾನ್ಯ ಅರವಿಂದ ಕುಮಾರ್ ಅರಳಿಯವರೆ, ತಾವು ನ್ಯಾಯಾಲಯದಲ್ಲಿಯೇ ಇದರ ಬಗ್ಗೆ ಪ್ರಶ್ನೆ ಮಾಡಬೇಕು.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಸದನಕ್ಕೆ ನಾನು ಉತ್ತರ ಹೇಳಬೇಕಾಗಿದ್ದು, ಉಚ್ಛ ನ್ಯಾಯಾಲಯವು ಸಹ ಇದನ್ನು ತಿರಸ್ಕಾರ ಮಾಡಿದೆ ಎಂಬುದನ್ನು ದಯವಿಟ್ಟು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಅದನ್ನು ಹೊರತುಪಡಿಸಿ International Court ಇದ್ದರೆ ಅಲ್ಲಿಗೆ ಹೋಗಬೇಕಾಗುತ್ತದೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಉಚ್ಛ ನ್ಯಾಯಾಲಯವು ಏನು ತೀರ್ಪು ನೀಡಿದೆ ಎನ್ನುವುದು ನನಗೆ ಗೊತ್ತಿದೆ. ಆದರೆ, ಆ ಮುಗ್ಧ ಜನರಿಗೆ ಆದಾಯ ಇಲ್ಲ, ಅವರು ಏನು ಮಾಡಬೇಕು? ಬೇರೆ ಕೆಲಸವಾದರೆ ಮಾನ್ಯ ಸಚಿವರು ಮಾಡುವುದಿಲ್ಲವೇ?

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದಕ್ಕೆ ಪರಿಹಾರ ನೀಡಲು ಅವಕಾಶವೇ ಇಲ್ಲ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಮಾನ್ಯ ಸದಸ್ಯರೆ, ತಾವು ಮತ್ತೇನಾದರೂ ಚರ್ಚೆ ಮಾಡುವುದಾದರೆ, ದಯವಿಟ್ಟು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಹೋಗಿ ಮಾತನಾಡಿ. ನಾನು ಸಹ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ದಯವಿಟ್ಟು ಮಾನ್ಯ ಅರವಿಂದ ಕುಮಾರ್ ಅರಳಿಯವರನ್ನು ಕರೆದು, ಒಂದು ಸಲ ಅವರ ಅಹವಾಲನ್ನು ಆಲಿಸಿ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಸುಮಾರು ೮೫ ಸಾವಿರ ರೈತರು ಧರಣಿಯಲ್ಲಿ ಕುಳಿತ್ತಿದ್ದು, ಅವರ ಸಮಸ್ಯೆಯನ್ನಾದರೂ ಕೇಳುವುದಕ್ಕೆ ಹೋಗಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ಸದಸ್ಯರೆ, ಇದು ಪ್ರಶ್ನೋತ್ತರ ಅವಧಿ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ತಾವು ಇದಕ್ಕೆ ಅವಕಾಶ ಕೊಡಲಿಲ್ಲವೆಂದರೆ ನಾನು ಸದನದ ಬಾವಿಗೆ ಇಳಿದು ಧರಣಿ ನಿರತನಾಗಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ದಯವಿಟ್ಟು ಆ ರೀತಿ ಮಾಡಬೇಡಿ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಬೀದರ್ ಭಾಗದ ರೈತರು ಹಾಗೂ ನಿಮ್ಮ ನಾಯಕರಾದ ಶ್ರೀ ಈಶ್ವರ ಖಂಡ್ರೆಯವರು ಮತ್ತು ಶ್ರೀ ರಾಜಶೇಖರ್ ಪಾಟೀಲ್‌ರವರು ನನ್ನ ಹತ್ತಿರ ಬಂದಿದ್ದು, ಈಗಾಗಲೇ ಮಾನ್ಯ ಸಚಿವರು ತಮಗೆ ಏನು ಹೇಳಿದ್ದಾರೆ, ಅದೇ ವಿಚಾರವನ್ನು ಅವರಿಗೆ ಹೇಳಿದ್ದೇನೆ. ಕಾನೂನಾತ್ಮಕವಾಗಿ ಏನು ಮಾಡಲು ಸಾಧ್ಯವಿಲ್ಲ. 1962 ರಲ್ಲಿ ಆಗಿರುವಂಥ ಯೋಜನೆಯೂ ನಂತರ ಬದಲಾವಣೆಯಾಗಿ 1972ರಲ್ಲಿ ಆಗಿರುವಂಥ ಯೋಜನೆಯಾಗಿದ್ದು, ಇವತ್ತಿಗೆ ಪರಿಹಾರ ನೀಡುವುದೆಂದರೆ ಬಹಳ ಕಷ್ಟವಾಗುತ್ತದೆ. ಜೊತೆಗೆ ನ್ಯಾಯಾಲಯದಲ್ಲಿ ಏನು ಆದೇಶವಾಗಿದೆ, ಅದೆಲ್ಲವೂ ಪರಿಪಾಲನೆಯಾಗಿದೆ. ಆದರೆ, ಈ ರೈತರು ನ್ಯಾಯಾಲಯದ ಮೊರೆ ಹೋಗಿಲ್ಲ. ಆದಾಗ್ಯೂ ಸಹ ಏನೇನು ದಾಖಲೆಗಳಿವೆ, ಅದನ್ನು ಒದಗಿಸುವಂತೆ ತಿಳಿಸಿದ್ದೇನೆ. ಕಾನೂನಾತ್ಮಕವಾಗಿ ಬೇರೆ ರೀತಿಯಲ್ಲಿ ಏನಾದರೂ ಮಾಡಲು ಸಾಧ್ಯವೇ ಎನ್ನುವುದನ್ನು ಪರಿಶೀಲನೆ ಮಾಡುವಂಥ ಪ್ರಯತ್ನ ಮಾಡುತ್ತೇವೆ. ದಯವಿಟ್ಟು ಮಾನ್ಯ ಸದಸ್ಯರು ಆ ರೈತರಿಗೆ ಹೇಳಬೇಕು. ಕಾನೂನಾತ್ಮಕವಾಗಿ ಏನಾದರೂ ಮಾಡಲು ಸಾಧ್ಯವಿದ್ದರೆ, ಖಂಡಿತವಾಗಿ ಸರ್ಕಾರ ಸಹಾನುಭೂತಿಯಿಂದ ಇದ್ದು, ಮಾಡುವಂಥ ಕೆಲಸ ಮಾಡುತ್ತದೆ. ಆದರೆ, ಮಾನ್ಯ ಸದಸ್ಯರು ಕಾನೂನನ್ನು ಹಿಡಿದುಕೊಂಡು ಕುಳಿತರೆ ಸಾಧ್ಯವಿಲ್ಲ. ಅದನ್ನು ಮೀರಿ ಏನಾದರೂ ಮಾಡಲು ಸಾಧ್ಯವಿದ್ದರೆ, ಸರ್ಕಾರವು ಮಾನವೀಯತೆಯಿಂದ ಪರಿಗಣಿಸುತ್ತದೆ.

**ಶ್ರೀ ಅರವಿಂದ ಕುಮಾರ್ ಅರಳಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಕೊನೆಪಕ್ಷ ಅವರ ಸಚಿವರು ಯಾರಾದರೂ ಅಲ್ಲಿನ ರೈತರನ್ನು ಭೇಟಿ ಮಾಡಿ ಬರಬೇಕೆಂದು ಹೇಳಬಯಸುತ್ತೇನೆ.

**ಪ್ರಶ್ನೆ ಸಂಖ್ಯೆ: 367**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಉತ್ತರ ಏನಿದೆ, ಅದರಲ್ಲಿ ಅನುಬಂಧ -3 ಅನ್ನು ದಯವಿಟ್ಟು ಒಂದು ಸಲ ಅವರೆ ಓದಬೇಕು. ಏಕೆಂದರೆ, ನಿರ್ವಹಣೆಯನ್ನು ನಿರ್ವಹಿಸುವ ಹಾಲಿ ಗುತ್ತಿಗೆದಾರರಿಗೆ ನೀಡಿರುವ ಗುತ್ತಿಗೆ ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದ್ದು, ಆ ಅನುಬಂಧ-3 ರಲ್ಲಿ "ಆದೇಶ ದಿನಾಂಕ ಲಗತ್ತಿಸಲಾಗಿದೆ" ಎಂದು ಇದ್ದು, ಲಗತ್ತಿಸಿರುವಂಥ ಪ್ರತಿ ಅವರು ಕೊಟ್ಟಿರುವ ಉತ್ತರದಲ್ಲಿ ಎಲ್ಲಿ ಇದೆ? ಈ ಸದನದಲ್ಲಿ ಪ್ರಶ್ನೆ ಕೇಳಲು ಎಲ್ಲಿಯೋ ಒಂದು ಸಲ ಅಪರೂಪಕ್ಕೆ ಅವಕಾಶ ಸಿಗುತ್ತದೆ. ಇದು ಬಹಳ ಗಂಭೀರವಾದ ವಿಚಾರವಾಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಆದೇಶದ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಅವರು ಆದೇಶದ ಪ್ರತಿಯನ್ನು ಒದಗಿಸಿದರೆ ಅಲ್ಲವೇ ನಾನು ಪ್ರಶ್ನೆ ಕೇಳಲು ಸಾಧ್ಯ? ಅವರ ಉತ್ತರದಲ್ಲಿ ಆದೇಶದ ಪ್ರತಿಯನ್ನು ಲಗತ್ತಿಸದೇ ಇರುವಾಗ ನಾನು ಪ್ರಶ್ನೆ ಕೇಳಲು ಹೇಗೆ ಆಗುತ್ತದೆ?

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಆಯಿತು. ಮಾನ್ಯ ಸದಸ್ಯರಿಗೆ ಆದೇಶದ ಪ್ರತಿಯನ್ನು ಕಳುಹಿಸಿಕೊಡುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಆದೇಶದ ಪ್ರತಿಯನ್ನು ಕಳುಹಿಸಿ ಕೊಡುತ್ತಾರೆ. ಆದರೆ, ನಾನು ಕೇಳಬೇಕಾಗಿರುವಂಥ ಪ್ರಶ್ನೆ....

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಎಲ್ಲಾ ವಿಷಯವನ್ನು ತಿಳಿದಿದ್ದಾರೆ. ಆ ಸುತ್ತೋಲೆಯನ್ನಿಟ್ಟುಕೊಂಡು ಪ್ರಶ್ನೆ ಕೇಳುವಂಥ ಸ್ಥಿತಿಯಲ್ಲಿ ಅವರು

ಇಲ್ಲ. ಬಹಳ ಬುದ್ಧಿವಂಥರಾಗಿದ್ದಾರೆ ಮತ್ತು ಬೆಂಗಳೂರು ನಗರವನ್ನು ಹರಿದು ಕುಡಿದವರಾಗಿದ್ದಾರೆ. ಹಾಗಾಗಿ ಆ ಸುತ್ತೋಲೆ ಇಲ್ಲದೇ ಸಾಕಷ್ಟು ಪ್ರಶ್ನೆಗಳನ್ನು ಕೇಳಬಹುದು.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಕಾಲಕಾಲಕ್ಕೆ ಬದಲಾವಣೆ ಆಗುತ್ತಿರುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಪ್ರಶ್ನೆಯನ್ನು ನಾನು ನೋಡಿದಾಗ ಅದರಲ್ಲಿ ಸದುದ್ದೇಶ ಇದೆ ಎನ್ನುವುದು ನನಗೂ ಸಹ ಅರ್ಥವಾಗಿದೆ. ಹಾಗಾಗಿ, ಒಳ್ಳೆಯ ಕೆಲಸ ಮಾಡಲು ಏನು ಸಾಧ್ಯ ಇದೆ, ಅದಕ್ಕೆ ಪ್ರಶ್ನೆಯನ್ನು ಕೇಳಿದರೆ ನಾನು ಸಹ ಸ್ಪಂದಿಸುತ್ತೇನೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಮಾತಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಬೆಂಗಳೂರು ನಗರದಲ್ಲಿ ಸುಮಾರು 5 ಸಾವಿರ ಮೆಟ್ರಿಕ್ ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತದೆ. ಹಸಿ ತ್ಯಾಜ್ಯವು ನಮ್ಮಲ್ಲಿ ಸುಮಾರು ಎರಡು ಸಾವಿರ ಟನ್ ಉತ್ಪತ್ತಿಯಾಗುತ್ತಿದ್ದು, ಅದನ್ನು ಸಂರಕ್ಷಣೆ ಮಾಡುವುದಕ್ಕಾಗಲಿ ಅಥವಾ processing ಮಾಡುವುದಾಗಲಿ ಬಹಳ ದೊಡ್ಡ ಸಮಸ್ಯೆಯಾಗಿದೆ. Processing Unit ನಲ್ಲಿ ಪ್ರತಿ ವಾರ್ಷಿಕ ವೆಚ್ಚ ಸುಮಾರು ಹದಿನಾಲ್ಕುವರೆ ಕೋಟಿ ರೂಪಾಯಿ ಮಾಡಲಾಗುತ್ತಿದೆ. ಆದರೆ, ಅದರ outcome ಏನಾಗಿದೆ ಎಂದರೆ, Zero ಆಗಿದೆ. ಈ ಒಂದು ಯೂನಿಟ್‌ಗೆ ಯಾರಿಗೋ ಗುತ್ತಿಗೆ ನೀಡಲಾಗಿದೆ ಎಂದು ಹೇಳುತ್ತಾರೆ. ಆ ಗುತ್ತಿಗೆದಾರರ ಮಾಹಿತಿ ಒದಗಿಸಿಲ್ಲ. ಇಲ್ಲದೇ, ಸಂಪೂರ್ಣವಾಗಿ ಅದೆಲ್ಲವನ್ನೂ unauthorized ಆಗಿ ನೀಡಲಾಗಿದೆ.

(837) 15.09.2022/12.10/ಎಸ್‌ಕೆ-ಜಿಆರ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಆರ್. ರಮೇಶ್ (ಮುಂದು):-**

Unauthorised ಕೊಡುವುದಕ್ಕೆ how it is allowed under the Karnataka Transparency in Public Procurement Act ಎನ್ನುವಂತಹದ್ದು ಮೊದಲನೇ ಪ್ರಶ್ನೆ. ಎರಡನೇ ಪ್ರಶ್ನೆ ಏನೆಂದರೆ, ಸಂಸ್ಥೆಗಳಿಗೂ ಕೊಟ್ಟಿದ್ದೀರಿ. ಕೆಲವೊಂದು ಸರ್ಕಾರದಿಂದಲೂ

ಮಾಡುತ್ತಿದ್ದೇವೆ ಎಂದು ತಾವು ಹೇಳುತ್ತೀರಿ. ಅದನ್ನು ಮಾಡುವ ಸಮಯದಲ್ಲಿ ಇಲ್ಲಿ ಮೂರು ತರಹದ್ದು ಬರುತ್ತದೆ. ಅದು ಯಾವುವು ಎಂದರೆ commercial food waste ಬರುತ್ತದೆ. Market yard waste ಎನ್ನುವುದು ಬರುತ್ತದೆ. ಇನ್ನೊಂದು household waste ಎಂದು ಬರುತ್ತದೆ. ಈ ಮೂರು ಕೂಡ wet waste. ಅಲ್ಲಿ processing ಮಾಡುವಾಗ, there is a different kind of processing. ಇದನ್ನು ಮಾಡಲು technology ಬೇಕು. ಈ technology ಅನ್ನು ಇದುವರೆಗೂ adopt ಮಾಡಿಲ್ಲ. ಇದನ್ನು ಮಾಡಲು ನಮಗೆ ಕಾರ್ಪೋರೇಷನ್‌ನವರು just for two months ಗೆ ಅವಕಾಶ ಮಾಡಿಕೊಟ್ಟರು. We have proved it. They are also satisfied. ಇದನ್ನು adopt ಮಾಡಿಕೊಳ್ಳುವುದಕ್ಕೆ, ನಾವು ತಮ್ಮ ಮುಖಾಂತರ ಬರುತ್ತಿರುವುದು ಇದು ಮೊದಲನೆಯದು. ಎರಡನೇಯದಾಗಿ ಸುಮಾರು 600 ಕೋಟಿ ರೂಪಾಯಿಗಳಷ್ಟು ಹಣವನ್ನು ಈ Solid Waste Management ಗೆ ವೆಚ್ಚವನ್ನು ಮಾಡುತ್ತಿದ್ದೀರಿ. ಈಗಾಗಲೇ ರೂ.200 ಕೋಟಿಗಳಷ್ಟು ಹಣವನ್ನು ನಾಲ್ಕು ತಿಂಗಳಿಗೆ ಖರ್ಚು ಮಾಡಿರುವುದಾಗಿ ಉತ್ತರದಲ್ಲಿ ತಿಳಿಸಿದ್ದೀರಿ. ಅಂದರೆ ರೂ.600 ಕೋಟಿ ರೂಪಾಯಿ ವೆಚ್ಚ ಮಾಡುತ್ತೇವೆ. ಆದರೆ ಯಾವುದೂ ಕೂಡ ಸದುಪಯೋಗವಾಗುತ್ತಿಲ್ಲ. ಜನರಿಗೆ ಏನೊಂದು ಉಪಯೋಗವಾಗಬೇಕಾಗಿತ್ತೋ, ಅದು ಕೂಡ ಆಗುತ್ತಿಲ್ಲ. ಬರೀ ಖರ್ಚು ಮಾತ್ರ ಆಗುತ್ತಿದೆ. ಇದಕ್ಕೆ ಖರ್ಚು ಮಾಡಿರುವಂತಹದ್ದು it is a public money. ಈ public ಹಣವನ್ನು utilise ಮಾಡುವುದಕ್ಕೆ ಬಹಳ judicially ಮಾಡಬೇಕಾಗಿದೆ. ಇದನ್ನು ನಾವು ಮಾಡುವುದಕ್ಕೆ ಬಹಳ ಗಂಭೀರವಾದಂತಹ ವಿಷಯ. Hotels Association ಅವರಿಗೆ ಈ ಒಂದು methane gas ಮಾಡುವುದಕ್ಕೆ ಐದು ಎಕರೆ ಜಾಗವನ್ನು ಕೊಟ್ಟಿರಿ. ಆ ಐದು ಎಕರೆ ಇವತ್ತಿನವರೆಗೂ ವಾಪಸ್ಸು ತೆಗೆದುಕೊಳ್ಳಿ ಎಂದು ಅವರು ಕಾರ್ಪೋರೇಷನ್‌ರವರ ಹಿಂದೆ ಬಿದ್ದಿದ್ದಾರೆ. ಅದನ್ನು ವಾಪಸ್ಸು ತೆಗೆದುಕೊಳ್ಳುತ್ತಿಲ್ಲ ಮತ್ತು ಅದನ್ನು ಬಿಡುತ್ತಾನೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಈ ಒಂದು waste ಅನ್ನು raw material ಆಗಿ ನೋಡಬೇಕೋ, ಆ ರೀತಿ raw material ಆಗಿ ನೋಡುವಂತಹದ್ದರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳು ಮತ್ತು ಸರ್ಕಾರವಾಗಲೀ

ಯಾವುದೇ ಒಂದು vision document create ಮಾಡಿಲ್ಲ. ಇದಕ್ಕೆ ಒಂದು pre-planned action plan ಮಾಡಿಲ್ಲ. ಇದೊಂದು ಪ್ರಮುಖವಾದದ್ದು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ಕಸ ಎಂದರೆ ಪ್ರಮುಖವಾಗಿ ಒಂದು ರೀತಿಯಲ್ಲಿ ತಾತ್ಸಾರ ಭಾವನೆಯಿಂದ ನೋಡುವಂತಹ ಸಹಜವಾದ ರೂಢಿ. ಇದು waste is a waste ಎನ್ನುವ ರೀತಿಯಲ್ಲಿ ನೋಡುವಂತಹದ್ದು ರೂಢಿ. But, Metropolitan City ಯಲ್ಲಿ ಅದರಲ್ಲಿ ಬಳಕೆ ಮಾಡುವಂತಹ ಪದಾರ್ಥಗಳಲ್ಲಿ consumption ಆಗುವಂತಹ ಪ್ರಮಾಣ. ಅದರಿಂದ ಹೊರ ಬರುವಂತಹ waste ಇವೆಲ್ಲವನ್ನೂ ಕೂಡ ನೋಡಿದಾಗ, waste is not a waste ಎಂಬುದು ಬಹಳ ಸ್ಪಷ್ಟವಾಗುತ್ತದೆ. Wet waste ಮತ್ತು dry waste ಎನ್ನುವುದನ್ನು ಮಾಡಿದ್ದೇವೋ, ಅದರ ನಿರ್ವಹಣೆ ಬಹಳ complex ಆಗಿ ಆಗಿದೆ ಮತ್ತು ಬಿ.ಬಿ.ಎಂ.ಪಿ. ನಲ್ಲಿ consistent ಆಗಿ, ಅದರ ಬಗ್ಗೆ ಒಂದು ರೀತಿಯ ಯೋಜನೆಗಳಿಲ್ಲ. ಒಂದೊಂದು ಸಾರಿ ಟ್ರಕ್‌ನಲ್ಲಿ ಕಸವನ್ನು ತೆಗೆದುಕೊಂಡು ಹೋಗಿ, ಎಲ್ಲೋ ಒಂದು ಕಡೆ ದೂರ ಹಾಕುವಂತಹದ್ದು. ಇನ್ನೊಂದು ಸಾರಿ dumping yard ಮಾಡುವಂತಹದ್ದು. ಇನ್ನೊಂದು ಸಾರಿ process ಮಾಡುತ್ತೇವೆ ಎನ್ನುವುದು. ಇನ್ನೊಂದು ಸಾರಿ ವಿದ್ಯುಚ್ಛಕ್ತಿ ತಯಾರು ಮಾಡುತ್ತೇವೆ ಎನ್ನುವಂತಹದ್ದು. ಇಪ್ಪತ್ತು ವರ್ಷಗಳಿಂದ ನಾನು ನೋಡುತ್ತಲೆ ಬಂದಿದ್ದೇನೆ. ವಿದ್ಯುಚ್ಛಕ್ತಿ ತಯಾರು ಮಾಡಲು ಮಲೇಶಿಯನ್ ಕಂಪನಿ ಬಂದಿದೆ. ಅದನ್ನು ಮೂರು ಕಡೆ ಕೊಟ್ಟಿದ್ದೇವೆ. ಅದು ಕೊಟ್ಟಿದ್ದೇವೆ, ಇದು ಕೊಟ್ಟಿದ್ದೇವೆ. ಆದರೆ ಒಂದು ಯೂನಿಟ್ ವಿದ್ಯುತ್ ಕೂಡ ಇವತ್ತಿನವರೆಗೂ ಉತ್ಪಾದನೆಯಾಗಿಲ್ಲ. ಇದರ ಬಗ್ಗೆ ಕೇಳಿದರೆ, ಇದು ಕೊನೆಯ ಹಂತದಲ್ಲಿದೆ ಎಂಬ ಬಗ್ಗೆ ಈಗಲೂ ಅದೇ ರೀತಿ ಉತ್ತರ ಕೊಡುತ್ತಾರೆ. Waste management is the biggest challenge for the high growth rate Metropolitan Cities in the entire world. ವಿಶೇಷವಾಗಿ ಭಾರತ ದೇಶದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವಂತಹ ನಗರವೆಂದರೆ ಬೆಂಗಳೂರು ನಗರ. Highest floating population ಹೊಂದಿರುವ ನಗರವೆಂದರೆ ಬೆಂಗಳೂರು ನಗರ. ಹೀಗಾಗಿ waste production ಜಾಸ್ತಿಯಾಗುತ್ತಿದೆ. Per Population waste ratio ಅನ್ನು

ನಾವು compare ಮಾಡಿದಾಗ Bengaluru is the highest producing city. ಹೀಗಿರುವಾಗ, ಇದಕ್ಕೆ ಬೇರೆ ಬೇರೆ waste ಕಡಿಮೆಯಾಗುವ ರೀತಿಯಲ್ಲಿ, ಅದನ್ನು consumption ಮಾಡುವುದರಿಂದ ಹಿಡಿದು, last treatment ವರೆಗೂ ಕೂಡ ಬೇರೆ ಬೇರೆ ಹಂತದಲ್ಲಿ ಸಮಗ್ರವಾಗಿ ಯೋಜನೆಗಳನ್ನು ಮಾಡಬೇಕಾಗಿದೆ. ಅದಕ್ಕಾಗಿ ಒಂದು ಕಂಪನಿಯನ್ನು ಕೂಡ ಮಾಡಿದ್ದೇವೆ. ಈ ಕಾರ್ಪೋರೇಷನ್ ಹೊರತಾಗಿ, ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಸ್ವತಂತ್ರವಾಗಿ ಇರಬೇಕೆಂದು ಹೇಳಿ, ಒಂದು ಕಂಪನಿ ಕೂಡ ಮಾಡಿದ್ದೇವೆ. ಆ ಕಂಪನಿಯ ಮುಖಾಂತರ ನಿರ್ಧಾರಗಳು ಇವತ್ತು ಆಗಬೇಕಾಗಿದೆ. ಹೊಸ ತಂತ್ರಜ್ಞಾನ ಬಂದಿದೆ ಎಂದು ಹಲವಾರು ಜನರು ನನ್ನ ಬಳಿ ಬರುತ್ತಾರೆ. ಇವತ್ತು tender system ನಲ್ಲಿ ನೋಡಿದಾಗ, ಅದನ್ನು ಎಲ್ಲೆಲ್ಲಿ apply ಮಾಡುವುದಕ್ಕೆ ಸಾಧ್ಯ ಎನ್ನುವ ಒಂದು ದೊಡ್ಡ ಯಕ್ಷ ಪ್ರಶ್ನೆಯಾಗಿದೆ. ನಾನು ಕೂಡ ನೂರು ಕೆ.ಜಿ., ಯಿಂದ ಹಿಡಿದು 2-3 ಟನ್‌ವರೆಗೂ ಸ್ಥಳಕವಾಗಿ waste ಅನ್ನು treat ಮಾಡುವಂತಹದ್ದಕ್ಕೆ generator type machines ಗಳು ಇದ್ದವು. ಅದನ್ನು trial ಮಾಡಲು ನಮ್ಮ ಮನೆಯಲ್ಲಿ ಹಾಕಿಸಿದ್ದೇವೆ. ಅದನ್ನು ನೋಡಿದಾಗ, ಬಹಳ ಸುಲಭವಾಗಿ treatment ಮಾಡಬಹುದು ಎಂದು ನನಗನಿಸಿತು. ವಿಶೇಷವಾಗಿ commercial establishments ಇದೆ. ಮಾಲ್ಸ್, ಹೋಟೆಲ್‌ಗಳು, ದೊಡ್ಡ ವ್ಯಾಪಾರ ಸ್ಥಳಗಳದ್ದಾವೆ. ಅಲ್ಲಿ ಈ generator type machines ಹಾಕಿದರೆ, ಜನರೇಟ್ ಆಗುವ ಪ್ರೋಸೆಸ್ ಅಲ್ಲಿಯೇ ಆಗಿ manure ಬರುತ್ತದೆ. ಆ manure ಬಗ್ಗೆ ಒಂದು Bengaluru brant name ಮಾಡಿ ಎಂದು ಬಿ.ಬಿ.ಎಂ.ಪಿ., ಕಮಿಷನರ್‌ಗೆ ಹೇಳಿದ್ದೇನೆ. ಮೊದಲು ಕೃಷಿ ಮತ್ತು ತೋಟಗಾರಿಕೆ ಇಲಾಖೆಯನ್ನು ತೆಗೆದುಕೊಳ್ಳುತ್ತೇವೆ. ಆಮೇಲೆ commercial exploitation ಮಾಡಿ, ಇದರಿಂದ ಖರ್ಚು ಮಾಡಿದಂತಹ earning ಕೂಡ ಬರುತ್ತದೆ ಎಂಬ ಬಗ್ಗೆ ಸೂಚನೆಯನ್ನು ಕೊಟ್ಟಿದ್ದೇವೆ. ಅದೇ ರೀತಿ ನಾಲ್ಕೈದು ಜನ ವಿಜ್ಞಾನಿಗಳು ಸೇರಿ ತಮ್ಮ unit ಮಾಡಿರುವಂತಹದ್ದು ಇದೆ.

ಮಾನ್ಯ ಸಭಾಪತಿಯವರೇ, ಐದು ಸಾವಿರ ಮೆಟ್ರಿಕ್ ಟನ್‌ನ್ನು ಪ್ರೋಸೆಸ್ ಮಾಡಿದಾಗ, ಪೂರ್ತಿ ಪ್ರಮಾಣದಲ್ಲಿ ಪ್ರೋಸೆಸ್ ಮಾಡುವುದಕ್ಕಾಗುತ್ತಿಲ್ಲ. ಯಾವ ಸ್ಥಳದಲ್ಲಿ ಪ್ರೋಸೆಸ್

ಮಾಡುತ್ತಿದ್ದೇವೋ, ಅದೇ ಸ್ಥಳದಲ್ಲಿ ಪ್ರೋಸೆಸ್ ಮಾಡಿದಾಗ, ವಾಸನೆ ಬರುತ್ತದೆ. ಅಲ್ಲಿನ ಸ್ಥಳೀಯರು opposition ಮಾಡುತ್ತಾರೆ. ಹೀಗಾಗಿ ಹೊಸ ತಂತ್ರಜ್ಞಾನ ಮುಖಾಂತರ ಪ್ರೋಸೆಸ್ ಮಾಡಿದಾಗಲೂ ಕೂಡ, ಆ ತರಹ odour ಬರದಂತೆ ನೋಡಿಕೊಳ್ಳುವುದಕ್ಕೆ ಇವತ್ತು ಸಾಧ್ಯವಾಗಿದೆ. ಅವರು trials ಗಳನ್ನು ಮಾಡಿ ತೋರಿಸಿದ್ದಾರೆ. ಬಹಳ ಉತ್ತಮವಾದಂತಹ ತಂತ್ರಜ್ಞಾನ ಬಂದಿದೆ ಮತ್ತು ಬೇರೆ ಬೇರೆ ದೇಶಗಳಲ್ಲಿಯೂ ಕೂಡ ಬಂದಿದೆ. ಹೀಗಾಗಿ, ಎರಡು ದೃಷ್ಟಿಯಲ್ಲಿ process ಮಾಡುವುದು ಬಹಳ ಮುಖ್ಯ. ಒಂದು waste process ಮಾಡಿದರೆ, ಅದನ್ನು store ಮಾಡುವಂತಹ ಸ್ಥಳ ಕಡಿಮೆಯಾಗುತ್ತದೆ. ಇವತ್ತು ನಮಗೆ ಸ್ಥಳ ಇಲ್ಲದಂತಾಗಿದೆ. ಸುಮಾರು 30-50 ಕಿಲೋ ಮೀಟರ್ ದೂರ ಕಲ್ಲಿನ quarry ಹುಡುಕಿಕೊಂಡು ಹೋಗುವಂತಹ ಪರಿಸ್ಥಿತಿ ಬಂದಿದೆ. ಅದನ್ನು process ಮಾಡುವುದಕ್ಕೆ ಹೊಸ ತಂತ್ರಜ್ಞಾನವನ್ನು ಯಾವ ರೀತಿ ದೊಡ್ಡ ಪ್ರಮಾಣದಲ್ಲಿ ಬಳಕೆ ಮಾಡಬೇಕು. ನಾವು ಅದನ್ನು ಖಂಡಿತವಾಗಿಯೂ positive ಆಗಿ consider ಮಾಡುತ್ತೇವೆ. ಹೊಸ ತಂತ್ರಜ್ಞಾನದ ಬಗ್ಗೆ ವರದಿ ಕೊಟ್ಟ ತಕ್ಷಣವೇ ಅದನ್ನು ಅಳವಡಿಸುತ್ತೇವೆ. ಅದರ ಜೊತೆಗೆ ಈ commercial establishment ಅಲ್ಲಿಯೇ ನಾವು ಸ್ಥಳೀಕವಾಗಿ process ಮಾಡಬಹುದು ಎಂದು ಹೇಳಿ, ಏನೊಂದು ಮಾಡಬೇಕೆಂದಿದ್ದೇವೋ, ಅದನ್ನು ಕೂಡ ಮಾಡುತ್ತೇವೆ. ಬಿ.ಟಿ.ಎಂ. ಲೇಔಟ್‌ನಲ್ಲಿ trial ಕೂಡ ಮಾಡಿದ್ದೇವೆ. ಸದನದಲ್ಲಿ ಬಿ.ಬಿ.ಎಂ.ಪಿ., ಕಮೀಷನರ್ ಇಲ್ಲ. ಅಲ್ಲಿ ಬಹಳಷ್ಟು ಯಶಸ್ವಿಯಾಗಿದೆ. ಅಲ್ಲಿಗೆ ಹೋಗಿ ನಾನು ನೋಡಿಲ್ಲ. ಅಲ್ಲಿ ಬಹಳಷ್ಟು ಯಶಸ್ವಿಯಾಗಿದೆ ಎಂದು ಹೇಳುತ್ತಾರೆ. ಅದು ಆದರೆ, ward wise process ಮಾಡಬಹುದು ಮತ್ತು transportation ಅನ್ನು ಉಳಿಸಬಹುದು. Wet waste ಅಲ್ಲಲ್ಲಿ ಬಿದ್ದು, environmental hazard ಆಗುತ್ತಿದೆ ಮತ್ತು blackspots ಏನೂ create ಆಗಿದೆ. ಅದನ್ನು ಕೂಡ ಮಾಡಬಹುದು. ಈ ಕಂಪನಿಗೆ ನಾನು ಪೂರ್ತಿ authority ಅನ್ನು ಕೊಟ್ಟಿದ್ದೇನೆ. ಇದಕ್ಕೆ Experts ಅನ್ನು ಹಾಕಿ, ಹೊಸ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಕೆ ಮಾಡುವಂತಹದ್ದು. ಅದನ್ನು ಬೇರೆ ಬೇರೆ ಹಂತದಲ್ಲಿ ಬಳಕೆ ಮಾಡುವುದಕ್ಕೆ ಮುಂದಿನ ದಿನಗಳಲ್ಲಿ ಸಮಗ್ರವಾದಂತಹ ಯೋಜನೆಯನ್ನು ರೂಪಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಮಂಜುನಾಥ್ ಭಂಡಾರಿಯವರೇ ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಮಾನ್ಯ ಮುಖ್ಯಮಂತ್ರಿಗಳು ಇಷ್ಟೊಂದು ವಿವರವಾಗಿ ಹೇಳಿದ್ದಾರೆ. ಮಾನ್ಯ ಮಂಜುನಾಥ್ ಭಂಡಾರಿಯವರೇ ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೇ, ಸರ್ಕಾರದವರು ನಾಲ್ಕು ನೂರು ಕೋಟಿ ರೂಪಾಯಿಗಳು ಖರ್ಚು ಮಾಡಿದ್ದಾರೆ.

**ಸಭಾಪತಿಯವರು:–** ಮಾನ್ಯ ಪಿ.ಆರ್. ರಮೇಶ್‌ರವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪಿ.ಆರ್. ರಮೇಶ್:–**ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಒಂದು proper utilisation ಹಾಕುವುದಕ್ಕೆ ಮಾಡಿ. ಇದರ ಬಗ್ಗೆ ಪೂರ್ತಿ ವರದಿ ಕೂಡ ಇದೆ. ಈ ವರದಿ ಪ್ರಕಾರ hundred per cent utilisation ಮಾಡುವುದಕ್ಕೆ ಮಾಡಿ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, my Government is open for all kind of improvements in the present system. ಮಾನ್ಯ ಸಭಾಪತಿಯವರೇ, ಈಗಿರುವಂತಹ ವ್ಯವಸ್ಥೆಯಲ್ಲಿ ನಮ್ಮ ಸರ್ಕಾರ ಏನಾದರೂ improvement ಮಾಡುವುದಕ್ಕೆ ಸಾಧ್ಯವಿದೆಯೋ, ಹಣವನ್ನು ಸದುಪಯೋಗ ಮಾಡಿಕೊಳ್ಳುವುದಕ್ಕೆ ಏನೇನೂ ಸಾಧ್ಯವಿದೆಯೋ, ಅದಕ್ಕೂ ಕೂಡ ನಮ್ಮದು open mind ಇದೆ. ಹೊಸ technology ಕೂಡ adopt ಮಾಡಿಕೊಳ್ಳಬೇಕೆಂಬುದು ಇದೆ. ಒಟ್ಟಾರೆಯಾಗಿ ಈ waste management ಗೆ ಹೊಸದಾದ ದೊಡ್ಡ ಆಯಾಮವನ್ನು ಕೊಟ್ಟು, ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುವಾಗ, wet waste ಮತ್ತು dry waste ಬಗ್ಗೆ ಬಹಳ ವಿಸ್ತಾರವಾಗಿ ಹೇಳಿದ್ದಾರೆ. ಬೆಂಗಳೂರು ನಗರ ತಮಗೆ ಗೊತ್ತಿರುವಂತೆ, it's a second capital of Silicon valley. 'E-waste' is the most hazardous waste. 'E-waste' ಬಗ್ಗೆ ಏನಾದರೂ ಚಿಂತನೆ ಮಾಡಿದ್ದೀರಾ. ಈಗಾಗಲೇ ಬಹಳಷ್ಟು ವೈಜ್ಞಾನಿಕವಾಗಿ ಮಾಡಿದ್ದಾರೆಂಬ ಬಗ್ಗೆ ಹೇಳಿದರು. Methane ಗ್ಯಾಸ್‌ನಲ್ಲಿ ಟೀ ಮಾಡುವಂತಹ ವಿಚಾರಗಳೇನಾದರೂ ಇದೆಯಾ.

**ಶ್ರೀ ಬಸವರಾಜ ಬೊಮ್ಮಾಯಿ:-** ಈಗ most of the consumption ಏನು ಮಾಡುತ್ತೇವೆ, including paper ಇರಬಹುದು, ಮತ್ತೊಂದು ಇರಬಹುದು. It contains Methane. It will be in a very very nascent form. Methane is ultimately the gas, which can be fired. ಅದು Highest calorific value ಇರುವಂತಹ ಒಂದು ಗ್ಯಾಸ್. That's why, ಎಲ್.ಪಿ.ಜಿ.. ಯಲ್ಲಿ ಬಳಕೆ ಮಾಡುವಂತಹದ್ದು methane. ನಮ್ಮ consumption ನಲ್ಲಿ ಅದನ್ನು ತೆಗೆದುಕೊಂಡು ಹೊರಗಡೆ ಹಾಕುವಾಗಲೂ ಕೂಡ methane ಗ್ಯಾಸ್ ಇರುತ್ತದೆ. ಸಗಣಿಯಲ್ಲಿಯೂ ಕೂಡ methane ಗ್ಯಾಸ್ ಇರುತ್ತದೆ. ಹೀಗಾಗಿ, ಯಾವ್ಯಾವ waste ನಲ್ಲಿ ಅದಕ್ಕಾಗಿ power generation ಮಾಡಬೇಕು ಎನ್ನುವಂತಹವರು ಮಾಡಿದ್ದು. Here the problem is segregation of waste. Proper segregation ಆದರೆ highest level of methane ಗ್ಯಾಸ್ ಬರುತ್ತದೆ. ನಾವು segregation ಮಾಡದಲೇ ಎಲ್ಲದರಲ್ಲೂ ಮಿಕ್ಸ್ ಮಾಡಿದರೆ, ಅದು ಬರುವುದಿಲ್ಲ. ಹೀಗಾಗಿ ನಾವು ಇಪ್ಪತ್ತು ವರ್ಷಗಳಿಂದ try ಮಾಡಿದ್ದೇವೆ. ಒಂದೆರಡು ಕಂಪನಿಗಳು ಮಾಡುತ್ತಿವೆ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆಯೂ ಕೂಡ ಗಮನಿಸುತ್ತೇನೆ.

(ಮುಂದು)

**(838) 15-09-2022, 12.20, ಟಿಸಿಹೆಚ್-ಎಂಡಿ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಬೊಮ್ಮಾಯಿ (ಮುಂದು)**

ಈಗ ಇರುವ ವ್ಯವಸ್ಥೆಯನ್ನು ಇಂಪ್ಲೀಮೆಂಟ್ ಮಾಡುವುದಕ್ಕೆ ಅವರೇನು ಸಲಹೆ ಕೊಟ್ಟಿದ್ದಾರೆ ಅದನ್ನೂ ಕೂಡ ನಾವು ಮಾಡುತ್ತೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ತಾವು e-waste ಬಗ್ಗೆ ಹೇಳಿ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಆಮೇಲೆ e-waste, it is also very important. Because e-papers consumption ನಾವೇ ಜಾಸ್ತಿ ಮಾಡುವುದು. e-waste ಒಂದೇ ಅಲ್ಲ, ಈಗ hospital waste ಬೇರೆ ಇದೆ. Hospital waste is also hazardous. E-waste, hospital waste, commercial waste and ಮಾನ್ಯ ಸದಸ್ಯರು ಕೂಡ market waste ಹೇಳಿದರು. ಇವುಗಳನ್ನು separate ಆಗಿ treatment ಮಾಡಬೇಕಾಗುತ್ತದೆ. ಆಗ ಮಾತ್ರ ನಾವು ಅದಕ್ಕೆ ಪರಿಹಾರ ಕೊಟ್ಟಂತಾಗುತ್ತದೆ. ಈಗ ಇವೆಲ್ಲಾ ಮಿಕ್ಸ್ ಆಗಿರುವುದಕ್ಕೆ problem ಆಗಿರುವುದು. Segregation level ನಿಂದಲೇ ಇದನ್ನು improvement ಮಾಡುತ್ತೇವೆ.

**ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನ್ನದೊಂದು ಸಲಹೆ ಇದೆ. ಒಬ್ಬರು ಸಚಿವರನ್ನು separate ಆಗಿ ಮಾಡಿದರೆ..

**ಸಭಾಪತಿಯವರು:-** ಮಾನ್ಯ ಮೋಹನ್ ಕುಮಾರ್ ಕೊಂಡಜ್ಜಿಯವರೇ, ತಾವು ವೈಯಕ್ತಿಕವಾಗಿ ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಹೇಳಿ.

**ಪ್ರಶ್ನೆ ಸಂಖ್ಯೆ.347**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಮಂಜುನಾಥ್ ಭಂಡಾರಿ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆ ನಮ್ಮೆಲ್ಲಾ 25 ಜನ ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾದ ಶಾಸಕರಿಗೆ ಸಂಬಂಧಪಟ್ಟಿದೆ. ನಾನು ಕೇಳಿರತಕ್ಕಂಥ ಪ್ರಶ್ನೆಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಮೊದಲನೆಯ ಪ್ರಶ್ನೆಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ, 1993ರ ಪ್ರಕರಣ 58 ರಲ್ಲಿ ಗ್ರಾಮ ಪಂಚಾಯಿತಿ ಕಡ್ಡಾಯ ಪ್ರಕಾರ್ಯಗಳ/ಜವಾಬ್ದಾರಿಗಳಲ್ಲಿ ಸುಮಾರು 20 ಸರ್ವೀಸ್‌ಗಳನ್ನು ಕೊಡಲಾಗುತ್ತಿದೆ. ಆದರೆ 2016ರಲ್ಲಿ 43 ಸೇವೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ, 39 ಸೇವೆಗಳನ್ನು ಕಂದಾಯ ಇಲಾಖೆಯಿಂದ ಮತ್ತು 14 ಸೇವೆಗಳನ್ನು ಅಸಂಘಟಿತ ಕಾರ್ಮಿಕರಿಂದ ಒಟ್ಟು 91 ಸೇವೆಗಳನ್ನು ಕೊಟ್ಟಿದ್ದಾರೆ. ಅತಿ ಮುಖ್ಯವಾಗಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಅದಲ್ಲದೇ ಗ್ರಂಥಾಲಯ, ಅಂಗನವಾಡಿ, health. ಇದೆಲ್ಲವೂ ಕೂಡ ಅವರಿಗೆ ಬರುತ್ತಿದೆ. ಎರಡನೆಯ ಪ್ರಶ್ನೆಗೆ, ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ಸರಾಸರಿ ತಲಾ ರೂ.20.00 ಲಕ್ಷಗಳ ಶಾಸನಬದ್ಧ ಅನುದಾನ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ. ಅದರಲ್ಲಿ ಶೇ.30 ರಷ್ಟು ಕುಡಿಯುವ ನೀರು ಮತ್ತು electricity bill ಗೆ ಹೋಗುತ್ತದೆ, ಶೇ.30 ನೈರ್ಮಲ್ಯ ಮತ್ತು ಮ್ಯಾನೇಜ್‌ಮೆಂಟ್‌ಗೆ ಹೋಗುತ್ತದೆ; ಇನ್ನು ಶೇ.40 ರಷ್ಟು ಮಾತ್ರ ಹಣ ಉಳಿಯುತ್ತದೆ. ಇವತ್ತಿನ ದಿವಸ ಶೇ.40ರಲ್ಲಿ ಶಾಲಾ ಕಟ್ಟಗಳನ್ನೂ ಕೂಡ ಗ್ರಾಮ ಪಂಚಾಯಿತಿಯವರು maintain ಮಾಡಬೇಕಾಗಿದೆ. ಆಮೇಲೆ ಮೊಟ್ಟೆ ಖರೀದಿ ಮಾಡುವಾಗ ಏನಾದರು ಹಣ ಹೆಚ್ಚು-ಕಡಿಮೆಯಾದಲ್ಲಿ ಅದರಿಂದಲೇ ಅವರಿಗೆ ಕೊಡಬೇಕಾಗಿದೆ. ಹಾಗಾಗಿ, ಚುನಾಯಿತ ಪ್ರತಿನಿಧಿಗಳಿಗೆ ಅವರಿಗೆ ಬೇಕಾದ್ದು ಮಾಡುವಷ್ಟು ಹಣ ಅಲ್ಲಿ ಸಿಗುವುದಿಲ್ಲ. ಅವರು ನಮ್ಮ ಹಿಂದೆ ಬೀಳುತ್ತಿದ್ದಾರೆ. ಇನ್ನು ಮೂರನೆಯ ಪ್ರಶ್ನೆಗೆ ಪಂಚಾಯತ್ ರಾಜ್ ಇಲಾಖೆಯಲ್ಲಿ ಪ್ರತಿಯೊಂದು ಗ್ರಾಮ ಪಂಚಾಯತಿಗೆ ನೀವು 2010ರಲ್ಲಿ 5 ಜನರಿಗೆ ಉದ್ಯೋಗ ಕೊಟ್ಟಿದ್ದೀರಿ. ಇವತ್ತಿನ ದಿವಸ ಅಲ್ಲಿ ಸುಮಾರು 100-120 ಸೇವೆಗಳು ಇದೆ. ಆದರೆ ಅಲ್ಲಿಗೆ ಬೇಕಾದಷ್ಟು ಸಿಬ್ಬಂದಿ

ವರ್ಗ ಇರುವುದಿಲ್ಲ. ಕಳೆದ ಎರಡು ವರ್ಷಗಳಿಂದ ಖಾಲಿಯಾದಂತಹ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ನೀವು permission ಕೊಟ್ಟಿಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:–** ಮಾನ್ಯ ಸಭಾಪತಿಯವರೇ, ಅಧಿಕಾರ ವಿಕೇಂದ್ರೀಕರಣ 73 ತಿದ್ದುಪಡಿಯಾದ ನಂತರ, ಬಹಳಷ್ಟು ಬದಲಾವಣೆ ಆಡಳಿತ ವ್ಯವಸ್ಥೆಯಲ್ಲಿ ಆಗಿದೆ. ಆಡಳಿತ ವ್ಯವಸ್ಥೆಯ structure and content ನಲ್ಲೂ ಕೂಡ ಆಗಿದೆ. ಅಧಿಕಾರ ವಿಕೇಂದ್ರೀಕರಣದ ಜೊತೆಗೆ ಹಲವಾರು ಜವಾಬ್ದಾರಿಗಳನ್ನು ನಾವು ಕೊಟ್ಟಿದ್ದೇವೆ. ಪಂಚಾಯಿತಿ ವಲಯಗಳಿಗೆ 30 ಕ್ಕಿಂತ ಹೆಚ್ಚು ಇಲಾಖೆಗಳ ಜವಾಬ್ದಾರಿಯನ್ನು ಕೂಡ ಕೊಟ್ಟಿದ್ದೇವೆ ಮತ್ತು ಗ್ರಾಮ ಪಂಚಾಯಿತಿ ಜನರಿಗೆ ಹತ್ತಿರ ಇರುವಂತಹ ಸರ್ಕಾರ. ಕೆಲವು ಕರ್ತವ್ಯಗಳನ್ನು ನಿರ್ದಿಷ್ಟವಾಗಿ ಗ್ರಾಮ ಪಂಚಾಯಿತಿ ಮಾಡಬೇಕಾಗುತ್ತದೆ. ಹಾಗಾಗಿ, ನಾವು ಆ ಎಲ್ಲಾ ಜವಾಬ್ದಾರಿಗಳನ್ನು ಕೊಟ್ಟಿದ್ದೇವೆ. ಇತ್ತೀಚಿನ ದಿನಗಳಲ್ಲಿ ಜನ ಕಂದಾಯ ಆಫೀಸ್‌ಗಳಿಗೆ ಹೋಗಿ certificate ಹಾಗೂ ಇತರೆ ಸೌಲತ್ತುಗಳು ಹಾಗೂ ಪೆನ್ಷನ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಕಷ್ಟು ತೊಂದರೆಯಾಗುತ್ತಿದೆ ಎನ್ನುವ ಕಾರಣದಿಂದ; ಕೆಲವುಗಳನ್ನು ನಾವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮುಖಾಂತರ ಮಾಡುವ ವ್ಯವಸ್ಥೆಗಳನ್ನು ಕೂಡ ಮಾಡಿದ್ದೇವೆ. ಈಗ ಬಂದಿರುವಂಥದ್ದು ಏನೆಂದರೆ, ಒಟ್ಟು strengthening of Panchayat Raj department staff ಆಗುವಂಥದ್ದು. ನಾವು ಇಷ್ಟು ಕೆಲಸ ಕೊಟ್ಟನಂತರ strengthening ಮಾಡಬೇಕು ಎನ್ನುವಂಥದ್ದು ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತಿನ ದಿವಸ PDO (Panchayat Development Officer) ಒಟ್ಟು 6021 ಹುದ್ದೆಗಳಿವೆ. ಅದರಲ್ಲಿ 5029 ಹುದ್ದೆಗಳು ಈಗಾಗಲೇ fill-up ಆಗಿದೆ. 726 ಹುದ್ದೆಗಳು ಬಹುತೇಕವಾಗಿ promotion ಮತ್ತು ಅದರಿಂದ vacancy create ಆಗಿರುವಂಥದ್ದು 326 ಹುದ್ದೆಗಳು. ಉಳಿದಿರತಕ್ಕಂಥ ಹುದ್ದೆಗಳು ಏನಿವೆ, ಅದನ್ನು ತುಂಬಿಕೊಳ್ಳುವುದಕ್ಕೆ ಈಗಾಗಲೇ ನಮ್ಮ ಇಲಾಖೆಯಿಂದ ಅಂದರೆ ಈಗ ನಾನು RDPR (Rural Development and Panchayat Raj) ಇಲಾಖೆಯ ಸಚಿವನಾಗಿರುವುದರಿಂದ ಹೇಳುತ್ತಿದ್ದೇನೆ. ಗ್ರಾಮೀಣಾಭಿವೃದ್ಧಿ

ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಆರ್ಥಿಕ ಇಲಾಖೆಗೆ ಪ್ರಸ್ತಾವನೆಗೆ ಹೋಗಿದೆ. ಆದಷ್ಟು ಬೇಗನೆ 326 PDO ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಆಮೇಲೆ Secretary Grade-1 635 vacancy ಗಳಲ್ಲಿ, ಈಗಾಗಲೇ 487 vacancy ಗಳಿಗೆ ನೇರ ನೇಮಕಾತಿ ಮಾಡಿಕೊಳ್ಳುವುದಕ್ಕೆ ತೀರ್ಮಾನ ಮಾಡಿದ್ದೇವೆ. ಮತ್ತೆ Secretary Grade-2 ರಲ್ಲಿ 3827ಹುದ್ದೆಗಳಲ್ಲಿ, 2871 ಹುದ್ದೆಗಳು ಈಗಾಗಲೇ ಇದ್ದು, Secretary Grade-2 556 ಹುದ್ದೆಗಳ vacancy ಇದೆ. ಈಗ 343 ಹುದ್ದೆಗಳನ್ನು ಫಿಲ್‌ಅಪ್ ಮಾಡುವುದಕ್ಕೆ direct recruitment ಗೆ ಆದೇಶ ಕೊಟ್ಟಿದ್ದೇವೆ. ಇನ್ನುಳಿದ ಹುದ್ದೆಗಳನ್ನು Data Entry Operator ಗಳ promotion ಮುಖಾಂತರ Bill Collectors post ನ್ನು fill-up ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅಂತಿಮವಾಗಿ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ 625 ಹುದ್ದೆಗಳು ವೆಕೆನ್ಸಿ ಇದೆ. ಒಟ್ಟು 2579 ಗಳಲ್ಲಿ ಈಗ 1554 ಹುದ್ದೆಗಳಿವೆ. 625 ವೆಕೆನ್ಸಿಯಲ್ಲಿ 124 ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಉಳಿದ ಹುದ್ದೆಗಳನ್ನು promotion vacancy ಮೇಲೆ ತುಂಬುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತೇವೆ. ಮುಂದಿನ ಮೂರ್ನಾಲ್ಕು ತಿಂಗಳೊಳಗೆ ಗ್ರಾಮ ಪಂಚಾಯಿತಿಗೆ ಬೇಕಾಗಿರುವಂತಹ ಸರ್ವೀಸ್‌ಗಳಿಗೆ 90 percent of the vacancy ಯನ್ನು ನಾವು fill-up ಮಾಡುವುದಕ್ಕೆ ಈಗಾಗಲೇ ಬೇರೆ ಬೇರೆ ಹಂತದಲ್ಲಿದೆ. ಆ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ, ಈ ಸರ್ವೀಸ್‌ಗಳು ಹೆಚ್ಚಾದ ಮೇಲೆ ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡುವುದಕ್ಕೆ ಒಂದು ಸ್ವಲ್ಪ incentive ಬೇಕು ಎನ್ನುವಂಥದ್ದು overall ಗ್ರಾಮ ಪಂಚಾಯಿತಿಗೂ ಕೂಡ ಬೇಕು ಎನ್ನುವಂಥದ್ದು ನನಗೆ ಗೊತ್ತಿದೆ. ಅದಕ್ಕಾಗಿ ಅಮೃತ್ ಯೋಜನೆಯನ್ನು ಗ್ರಾಮ ಪಂಚಾಯಿತಿಯಲ್ಲಿ ಜಾರಿಗೆ ತಂದಿದ್ದೇವೆ. ಕಳೆದ ವರ್ಷ ಸುಮಾರು 750 ಗ್ರಾಮ ಪಂಚಾಯಿತಿಗಳಿಗೆ ಯಾರ್ಯಾರು ಲೈಬ್ರರಿ, renewable energy, ಸ್ವಚ್ಛತೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇದರಲ್ಲಿ ಯಾರು ಹೆಚ್ಚಿನ ಸಾಧನೆಯನ್ನು ಮಾಡುತ್ತಾರೋ ಅವರಿಗೆ ನಾವು ರೂ.25.00 ಲಕ್ಷಗಳು additional ಆಗಿ ಕೊಡುತ್ತೇವೆಂದು ಹೇಳಿ, ಈಗಾಗಲೇ ರೂ.25.00 ಲಕ್ಷಗಳನ್ನು ಸಂಪೂಣವಾಗಿ ಕೊಟ್ಟಿದ್ದೇವೆ. ಈಗಾಗಲೇ ಅವರಿಗೆಲ್ಲಾ

ತಲುಪಿದೆ. ಈ ವರ್ಷವೂ ಕೂಡ ಸುಮಾರು 750 ಗ್ರಾಮ ಪಂಚಾಯಿತಿಗಳಿಗೆ ಅದೇ ರೀತಿ select ಮಾಡಿ ಕೊಡುತ್ತಿದ್ದೇವೆ. ಯಾರು ಈ ನಾಲ್ಕೈದು ವ್ಯಾಪ್ತಿಯಲ್ಲಿ ಒಳ್ಳೆಯ ಕೆಲಸ ಮಾಡುತ್ತಾರೆ. ಅಂದರೆ ಒಳ್ಳೆಯ ಕೆಲಸ ಮಾಡಿದ್ದಕ್ಕೆ incentive ಕೊಡಬೇಕು ಎನ್ನುವ ದೃಷ್ಟಿಯಿಂದ ರೂ.25 ಲಕ್ಷಗಳನ್ನು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದೇವೆ. ಅದನ್ನೂ ಕೂಡ ಕೊಡುತ್ತೇವೆ. ಈ ರೀತಿ ನಾವು regular ಆಗಿ 15th Finance Commission, devolution of funds ಕೊಡುವುದರ ಜೊತೆಗೆ NREGA (Mahatma Gandhi *National Rural Employment Guarantee Scheme)* ಯಲ್ಲೂ ಕೂಡ ಅವರಿಗೆ ಸಾಕಷ್ಟು ಅನುದಾನ ಬರುತ್ತದೆ ಮತ್ತು ಅವರ ಕಾಮಗಾರಿ ಕೂಡ ಆಗುತ್ತಿದೆ. Post ಗಳನ್ನು fill-up ಮಾಡುತ್ತೇವೆ. ಮತ್ತೆ ಯಾರು ಒಳ್ಳೆಯ ಕೆಲಸ ಮಾಡುತ್ತಾರೋ ಅವರಿಗೆ incentive ಕೊಡುವಂಥದ್ದನ್ನೂ ಕೂಡ ನಮ್ಮ ಸರ್ಕಾರ ಈಗಾಗಲೇ ಘೋಷಣೆ ಮಾಡಿದೆ. ಈಗಾಗಲೇ 750 ಗ್ರಾಮ ಪಂಚಾಯಿತಿಗಳಿಗೆ ಕೊಡಲಾಗಿದೆ. ಇನ್ನೂ 750 ಗ್ರಾಮ ಪಂಚಾಯಿತಿಗಳಿಗೂ ಕೂಡ ನಾವು ಕೊಡುತ್ತೇವೆ.

**ಪ್ರಶ್ನೆ ಸಂಖ್ಯೆ.412**

**(ಉತ್ತರ ಲಗತ್ತಿಸಿದೆ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಸೂಕ್ಷ್ಮ ಪ್ರದೇಶದ ಬಗ್ಗೆ ಮಾನ್ಯ ಸಚಿವರು ವಿವರಣೆಯನ್ನು ಕೊಟ್ಟಿದ್ದಾರೆ. ಮತ್ತೆ ಪೋಲೀಸ್ ಇಲಾಖೆಯಲ್ಲಿ ಸೂಕ್ಷ್ಮ ಪ್ರದೇಶ ಎಂಬ ಪದಗಳ ಬಳಕೆ ಎಷ್ಟು ವರ್ಷಗಳಿಂದ ಬಳಕೆಯಲ್ಲಿದೆ ಎಂದು ಪ್ರಶ್ನೆ ಕೇಳಿರುವುದಕ್ಕೆ, ಅಗತ್ಯಕ್ಕೆ ತಕ್ಕಂತೆ ಪೋಲೀಸ್ ಇಲಾಖೆಯಲ್ಲಿ ಸೂಕ್ಷ್ಮ ಪ್ರದೇಶ ಎಂಬ ಪದ ಬಳಕೆಯಲ್ಲಿದೆ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಶಿವಾಜಿ ಮಹಾರಾಜರ ಮೆರವಣಿಗೆ ಹೋಗುವಾಗ, ಗಣೇಶನ ಮೆರವಣಿಗೆ ಹೋಗುವಾಗ, ಆರ್.ಎಸ್.ಎಸ್., ಪಥ ಸಂಚಲನ ಹೋಗುವಾಗ, ಬಹುಶಃ ಈ ಪ್ರಶ್ನೆಗಳು ಸ್ವತಂತ್ರ್ಯ ಬಂದ ನಂತರವೂ ಉದ್ಭವವಾಗುವುದನ್ನು ನಾವು ನೋಡಿದ್ದೇವೆ. ಪಕ್ಕದ ರಾಜ್ಯ ಕೇರಳ, ಪಶ್ಚಿಮ ಬಂಗಾಳದಲ್ಲಿ ಯಾವ ಸ್ಥಿತಿ ಇದೆಯೆಂದು ನನಗೆ ಗೊತ್ತಿದೆ. ಇದು ಎಲ್ಲರಿಗೂ ಗೊತ್ತಿರುವಂಥದ್ದು. ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರಲ್ಲಿ ಉಪ ಪ್ರಶ್ನೆಯನ್ನು ಕೇಳುವುದೇನೆಂದರೆ, ISD (International Security Division) ಯಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿದೆ. ಆಮೇಲೆ ಇದರೊಂದಿಗೆ ಸೂಕ್ಷ್ಮ ಪ್ರದೇಶಗಳಲ್ಲಿ ಗುರುತಿಸಿದ ಸ್ಥಳಗಳಲ್ಲಿ ನೀವು ಎಷ್ಟು unit ಗಳನ್ನು ಸ್ಥಾಪಿಸಿದ್ದೀರಿ. ಒಂದುವೇಳೆ ನೀವು ಆ ಘಟಕಗಳನ್ನು ಸ್ಥಾಪಿಸದಿದ್ದರೆ ಕಾರಣಗಳೇನು? UAPA (Unlawful Activities (Prevention) Act) ಕಾಯ್ದೆಯಡಿಯಲ್ಲಿ ಎಷ್ಟು ಅಪಘಾತಗಳಿಗೆ ಶಿಕ್ಷೆ ಆಗಿದೆ? ತಾವು ತಮ್ಮ ಉತ್ತರದಲ್ಲಿ ಜಾತಿ ಗಲಭೆಗಳು ಕೂಡ ಒಂದು ಸೂಕ್ಷ್ಮ ಪ್ರದೇಶವೆಂದು ಉಲ್ಲೇಖ ಮಾಡಿದ್ದೀರಿ. ಕೋಮು ಗಲಭೆಗಳನ್ನು ಕೆರಳಿಸುವಂತಹ You-tube channel ಗಳು ಕೆಲಸ ಮಾಡುವುದನ್ನು ನೀವು cyber ಅಂದರೆ online ಮುಖಾಂತರ ಹಣವನ್ನು ಕೊಟ್ಟು ಕಲ್ಲು ಎಸೆಯುವಂತಹ ಒಂದು ಗುಂಪುಗಳನ್ನು, ಸಂಘಟಿತರನ್ನು, ಅಮಾಯಕರನ್ನು use ಮಾಡಿಕೊಳ್ಳುತ್ತಿದ್ದಾರೆ.

**(ಮುಂದು)**

(839)15.9.2022/12.30/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ (ಮುಂದು)**

ಈಗ ಕೆ.ಜಿ. ಹಳ್ಳಿ, ಡಿ.ಜಿ. ಹಳ್ಳಿಯಲ್ಲಿ ಒಂದೇ ಘಳಿಗೆಯಲ್ಲಿ 200-300 ಜನರು ಸೇರುವಂತಹ ವ್ಯವಸ್ಥೆ ಸೈಬರ್‌ನಲ್ಲಿ ಆಗುತ್ತದಲ್ಲಾ, You-tube channel ಇಂತಹ ಸಂದರ್ಭದಲ್ಲಿ ಬಹಳ ಜೋರಾಗಿ active ಆಗುತ್ತದೆ. ಪುನಃ ಆ You-tube channel ನಲ್ಲಿ ಏನೂ activities ಇರುವುದಿಲ್ಲ. ಇದರ ಬಗ್ಗೆ ಕಾನೂನಿನಲ್ಲಿ ಮಾಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಇವತ್ತಿನವರೆಗೆ ಯಾವ ಕಾನೂನನ್ನು ಮಾಡಿದ್ದೀರಿ? Charge sheet ಕೊಟ್ಟರೂ ಕೂಡ ನೀವು ವಿಳಂಬ ಮಾಡುವುದಕ್ಕೆ ಕಾರಣವೇನು? ಈಗ ಕೆ.ಜಿ. ಹಳ್ಳಿ ಮತ್ತು ಡಿ.ಜಿ. ಹಳ್ಳಿ ಗಲಭೆ ಸಂಬಂಧ ಮೊಹಮ್ಮದ್ ಜುಬೇನ್ ಮೇಲೆ charge sheet ಕೊಟ್ಟಿದ್ದೀರಿ. ನೀವು ಅದನ್ನು ಏತಕ್ಕೆ ವಿಳಂಬ ಮಾಡಿದ್ದೀರಿ? ಈ ಪ್ರಶ್ನೆಗಳನ್ನು ತಮ್ಮ ಮೂಲಕ ಕೇಳಬಯಸುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಹಳ ವಿವರವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ವಿಶೇಷವಾಗಿ ಸೂಕ್ಷ್ಮ ಪ್ರದೇಶವೆಂದರೆ ಪೊಲೀಸ್ ಇಲಾಖೆಯಲ್ಲಿ ಏನು ಎಂಬುದನ್ನು ಅವರು ಚರ್ಚೆ ಮಾಡಿದ್ದಾರೆ, ಅದಕ್ಕೆ ಉತ್ತರ ಕೊಟ್ಟಿದ್ದೇವೆ. ಪೊಲೀಸ್ ಇಲಾಖೆಯಲ್ಲಿ ಸೂಕ್ಷ್ಮ ಪ್ರದೇಶವೆಂದರೆ, ಆಯಾ ಅಗತ್ಯಕ್ಕೆ ತಕ್ಕಂತೆ ಕೆಲವು ಸ್ಥಳಗಳನ್ನು ನಿರ್ದಿಷ್ಟಪಡಿಸಲಾಗುತ್ತದೆ. ಕೋಮು ಗಲಭೆಗಳಾಗುವುದು, ಒಂದು ನಿರ್ದಿಷ್ಟ ಅವಧಿಯಲ್ಲಿ ಅತೀ ಹೆಚ್ಚು ಪ್ರಕರಣಗಳು ಒಂದೇ ಅಪರಾಧಗಳ ಅಡಿಯಲ್ಲಿ ಆಗುವುದು, ಮತಾಂತರ, ಜಾತಿ ಗಲಭೆಗಳು, ಎಸ್‌ಸಿ/ಎಸ್‌ಟಿ ವಿರುದ್ಧ ಅಪರಾಧಗಳು, ಮಹಿಳೆಯರ ವಿರುದ್ಧ ಅಪರಾಧಗಳು, ಆಸ್ತಿ ಅಪರಾಧಗಳು, ರೌಡಿಸಂ, ಅಂತರ್ರಾಜ್ಯ ಗಡಿ ವಿವಾದ ಇಂತಹ ಸಂದರ್ಭದಲ್ಲಿ, ಇಂತಹ ಕಡೆ ಸೂಕ್ಷ್ಮ ಪ್ರದೇಶವೆಂದು ಹೇಳಿ ಗುರುತಿಸಿ ಅಲ್ಲಿ ವಿಶೇಷವಾದ ನಿಗಾ ಇಡುವಂತಹ ಪ್ರಯತ್ನಗಳು ಆಗುತ್ತದೆ. ISD (International Security Division)ಯಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ ಎನ್ನುವ ಮಾಹಿತಿಯನ್ನು ಆಮೇಲೆ ಕೊಡುತ್ತೇನೆ. ಸಂಬಂಧಪಟ್ಟ ಪ್ರಕರಣಗಳಲ್ಲಿ ವಿಚಾರಣೆ ಮೂಲಕ ಅಗತ್ಯ ಕಂಡುಬಂದರೆ UAPA (Unlawful Activities (Prevention) Act) ನ section ಅನ್ನು

ದಾಖಲು ಮಾಡಲಾಗುವುದು. ಅದು ಆಯಾ ಪೊಲೀಸ್ ಅಧಿಕಾರಿಗಳಿಗೆ ಬಿಟ್ಟಂತಹ ವಿಚಾರವಾಗಿದೆ. ವಿಶೇಷವಾಗಿ ಇವರ ಮೇಲೆ ರೌಡಿ ಶೀಟ್ ಅನ್ನು ಪ್ರಾರಂಭ ಮಾಡಿದ್ದೇವೆ, ಗೂಂಡಾ ಕಾಯಿದೆಯನ್ನು ಬಳಕೆ ಮಾಡುತ್ತಿದ್ದೇವೆ, ಗಡೀಪಾರು ಮಾಡಿದ್ದೇವೆ, section ೮೨ of the CrPC (Criminal Procedure Code) ಪ್ರಕಾರ ಅಂತಹವರ ಆಸ್ತಿಯನ್ನು ಮುಟ್ಟುಗೋಲು ಹಾಕಲಾಗುತ್ತದೆ. ಹೀಗೆ ಎಲ್ಲಾ ರೀತಿಯಿಂದಲೂ ನಿರ್ಬಂಧ ವಿಧಿಸುವಂತಹ, ತಡೆಗಟ್ಟುವಂತಹ ಕೆಲಸ ಪೊಲೀಸ್ ಇಲಾಖೆಯಿಂದ ಆಗುತ್ತದೆ. ಸಮಾಜದಲ್ಲಿ ಅಶಾಂತಿ ನಿರ್ಮಾಣವಾಗದಂತಹ ರೀತಿಯಲ್ಲಿ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇನ್ನೊಂದು ಪ್ರಶ್ನೆಯೇನೆಂದರೆ, ಮಾನ್ಯ ಸಚಿವರು UAPA act ಬಗ್ಗೆ ಹೇಳಿದರು. ಹಾಗಾದರೆ ಇಲ್ಲಿಯವರೆಗೆ ಆ ಕಾನೂನನ್ನು ಸಮರ್ಥವಾಗಿ ಬಳಸಿಕೊಂಡಿಲ್ಲ ಎಂದಾಯಿತು ಎಲ್ಲವೇ? ಇದರ ಬಗ್ಗೆ ನಾನು ಬಹಳಷ್ಟು ಪ್ರಶ್ನೆ ಕೇಳುವುದಿಲ್ಲ. Mostly ನಾನು ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತರಬೇಕಾಗಿತ್ತು. ನಾನು ತಪ್ಪು ಮಾಡಿದೆ.

**ಸಭಾಪತಿಯವರು:–** ಒಂದು ನೋಟಿಸ್ ಕೊಡಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ಸಮಯದ ಅಭಾವ ಇದೆ, ಪ್ರಶ್ನೆಗಳಿದ್ದರೂ ಜಾಸ್ತಿ ಕೇಳುವುದಕ್ಕೆ ಆಗುವುದಿಲ್ಲ ಎಂದು ನನಗೆ ಗೊತ್ತು. ಕೊನೆಯ ಪ್ರಶ್ನೆಯನ್ನು ಕೇಳುತ್ತೇನೆ. ಕೇಂದ್ರ ಸರ್ಕಾರದ ನೂರಾರು ತನಿಖಾ ಸಂಸ್ಥೆಗಳಿವೆ. *NATGRID* (National Intelligence Grid) ಮೂಲಕ ಅದನ್ನು ಸಂಯೋಜಿಸಿದ್ದಾರೆ. ಇದನ್ನು ರಾಜ್ಯ ಸರ್ಕಾರ ಹೇಗೆ ಬಳಸಿಕೊಂಡಿದೆ? ಏಕೆಂದರೆ, ಇವರು ಮುಟ್ಟುಗೋಲು ಮಾಡಬಹುದು, ಮುಟ್ಟುಗೋಲು ಆಗಿಲ್ಲ ಎಂದು ಹೇಳಿದ್ದಾರೆ. ಕಠಿಣಾನುಕಠಿಣ ಕ್ರಮವನ್ನು ಕೈಗೊಳ್ಳುವಾಗ ಇದನ್ನು ಹೇಗೆ ಪ್ರಯೋಗಿಸಬೇಕೆಂಬುದೇ ಗೊತ್ತಿಲ್ಲ. ಆದ್ದರಿಂದ ಸರ್ಕಾರಕ್ಕೆ ನನ್ನ ವಿನಂತಿಯೇನೆಂದರೆ, ನೀವು ಅಸ್ಸಾಂ ಮತ್ತು ಉತ್ತರ ಪ್ರದೇಶಕ್ಕೆ ನಮ್ಮ ಅಧಿಕಾರಿಗಳ ತಂಡವೊಂದನ್ನು ಕಳುಹಿಸಿ ಅವರಿಗೆ ತರಬೇತಿ

ಕೊಡುವ ಕೆಲಸವನ್ನು ಸರ್ಕಾರ ಏತಕ್ಕೆ ಮಾಡಬಾರದು? ಏಕೆಂದರೆ ಎಲ್ಲಾ ಕಾನೂನು ಇದೆ. ಆದರೆ ಅದು ಅನುಷ್ಠಾನವಾಗುವುದಿಲ್ಲ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಇದರ ಬಗ್ಗೆ ದಯವಿಟ್ಟು ಅನುಮಾನ ಬೇಡ. ಕರ್ನಾಟಕ ಪೋಲೀಸ್ ಅತ್ಯಂತ ಸಮರ್ಥವಾಗಿ ಕೆಲಸ ಮಾಡುತ್ತಿದೆ. ಯಾವುದೇ ಸಂದರ್ಭದಲ್ಲಿಯೂ ಕೂಡ ಅದು ಜಾಸ್ತಿ ವಿಸ್ತಾರವಾಗದ ಹಾಗೆ ವಿಶೇಷವಾಗಿ ನೊಂಡಿಕೊಂಡಿದ್ದೇವೆ. UAPA ಸಂದರ್ಭದಲ್ಲಿ Central Agency ಗೂ ಕೂಡ ಅನೇಕ ಸಂದರ್ಭಗಳಲ್ಲಿ ಕೊಡಲಾಗುತ್ತದೆ. ಆದ್ದರಿಂದ ಬೇರೆ ರಾಜ್ಯಕ್ಕೆ ಹೋಗಿ ಅಧ್ಯಯನ ಮಾಡಿಸಬೇಕೆಂದರೆ, ಅದನ್ನು ಕೂಡ ಮಾಡಿಸುತ್ತೇವೆ. ಉದಾಹರಣೆಗೆ ವಿಶೇಷವಾಗಿ ಸೈಬರ್ ಅಪರಾಧಗಳ ಅಧ್ಯಯನಕ್ಕೆ ಗುಜರಾತ್‌ಗೆ ಕಳುಹಿಸುತ್ತೇವೆ ಅಲ್ಲಿನ ವಿಶ್ವವಿದ್ಯಾನಿಲಯದಲ್ಲಿ ತರಬೇತಿ ಕೊಡಿಸುತ್ತೇವೆ. ಎಲ್ಲಾ ರೀತಿಯಿಂದಲೂ ನಮ್ಮ ಪೋಲೀಸ್ ಇಲಾಖೆಯನ್ನು ಸಶಕ್ತಗೊಳಿಸುವ ಕೆಲಸ ಆಗುತ್ತಿದೆ. ಶಾಂತಿ, ನೆಮ್ಮದಿಯಿಂದ ಈ ರಾಜ್ಯದ ಜನ ಬದುಕಬೇಕು. ಆ ರೀತಿಯಲ್ಲಿ ಏನೆಲ್ಲಾ ಮಾಡಬೇಕು ಅದನ್ನೆಲ್ಲಾ ಮಾಡುತ್ತಿದ್ದೇವೆ. ಉದಾಹರಣೆಗೆ ತಾವು ಕೇಳಿದಿರಿ ಡಿ.ಜಿ. ಹಳ್ಳಿ ಮತ್ತು ಕೆ.ಜಿ. ಹಳ್ಳಿ ಗಲಭೆ, ಮೊನ್ನೆ ದಿವಸದ ಹುಬ್ಬಳ್ಳಿ ಗಲಭೆ, ಆಳಂದ ಗಲಭೆ, ಶಿವಮೊಗ್ಗ ಗಲಭೆ ಇರಬಹುದು ಕೇವಲ ಒಂದೆರಡು ಗಂಟೆಯಲ್ಲಿ ಅದನ್ನು ಮಟ್ಟ ಹಾಕಲಾಯಿತು. ಅಪರಾಧಿಗಳನ್ನು ತಕ್ಷಣವೇ ಅರೆಸ್ಟ್ ಮಾಡಲಾಯಿತು. ಶಿವಮೊಗ್ಗ ಗಲಭೆಯಲ್ಲಿ ಕೂಡ ಅಷ್ಟೇ. ಇತ್ತೀಚೆಗೆ ಚೂರಿ ಇರಿತವಾಯಿತು. ನೋಡಿದರೆ ಅವನು ಟೆಲಿಫೋನ್‌ನಲ್ಲಿ ಜೈಷ್-ಎ-ಮೊಹಮ್ಮದ್ ಸಂಘಟನೆಯ ಜೊತೆಗೆ ಆತನ ಸಂಪರ್ಕ ಇರುವುದು ತಿಳಿದು ಬರುತ್ತದೆ. ಅವೆಲ್ಲವನ್ನೂ ಕೂಡ ಕಂಡುಹಿಡಿಯುತ್ತಿದ್ದೇವೆ. ಅಂತಹ ದುಷ್ಟರಿಗೆ ಒಂದು ಸಂದೇಶ ಕೊಡುವಂತಹ ಎಲ್ಲಾ ಕೆಲಸಗಳೂ ನಮ್ಮ ಪೋಲೀಸರ ಕಡೆಯಿಂದ ಆಗುತ್ತಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಮಾಡಿಕೊಡಿ. ಏಕೆಂದರೆ ಇದು ಬಹಳ ಗಂಭೀರವಾದ ವಿಚಾರವಾಗಿದೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಇದಕ್ಕೆ ನೋಟಿಸ್ ಕೊಟ್ಟರೆ ವಿಚಾರ ಮಾಡುತ್ತೇನೆ.

**ಸಭಾಪತಿಯವರು:-** ಆಯಿತು. ಮಾನ್ಯ ಸದಸ್ಯರಾದ ಗೋಪಿನಾಥ್‌ರವರ ಪ್ರಶ್ನೆ ಸಂಖ್ಯೆ: 459 ಕಂದಾಯ ಇಲಾಖೆಗೆ ವರ್ಗಾವಣೆಯಾಗಿದೆ. ಈಗ ಮಾನ್ಯ ಸದಸ್ಯರಾದ ವೈ.ಎಂ. ಸತೀಶ್‌ರವರ ಪ್ರಶ್ನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 371**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ವೈ.ಎಂ. ಸತೀಶ್:-** ಮಾನ್ಯ ಸಭಾಪತಿಯವರೇ, ನಾನು ಬಳ್ಳಾರಿ ಗ್ರಾಮಾಂತರ ಕ್ಷೇತ್ರದಲ್ಲಿ ಹರಗಿನದೋಣಿ ಮತ್ತು ಇತರೆ ಗ್ರಾಮಗಳಿಗೆ ಕುಡಿಯುವ ನೀರಿನ ಬಗ್ಗೆ ಪ್ರಶ್ನೆ ಕೇಳಿದ್ದೆ. ಮಾನ್ಯ ಸಚಿವರು reply ಕೊಟ್ಟಿದ್ದಾರೆ. 2019-20ನೇ ಸಾಲಿನ ಆಯವ್ಯಯದಲ್ಲಿ ಇದು ಘೋಷಣೆಯಾಗಿತ್ತು. ಈಗ ಅವರು ಹೇಳುವುದೇನೆಂದರೆ, ಇದೇ same proposal ಅನ್ನು ರೂ. 41.79 ಕೋಟಿ ಮೊತ್ತಕ್ಕೆ ಇದನ್ನು modify ಮಾಡಿದ್ದಾರೆ. ನನ್ನ ಪ್ರಶ್ನೆಯೇನೆಂದರೆ, 60 ಕೋಟಿ ರೂಪಾಯಿಗಳ proposal ಅನ್ನು 41.79 ಕೋಟಿ ರೂಪಾಯಿಗಳಿಗೆ reduce ಮಾಡುತ್ತಿದ್ದೀರಿ. ಏನೆಲ್ಲಾ scope of works ಅನ್ನು ಮಾಡುತ್ತಿದ್ದೀರಿ ಎಂಬುದು ನನ್ನ ಉಪಪ್ರಶ್ನೆಯಾಗಿದೆ. ಇನ್ನೊಂದು ಅಸಮಧಾನವೇನೆಂದರೆ, ಮಂತ್ರಿಯವರು ಉತ್ತರ ಕೊಟ್ಟಿರುವ ಕೊನೆಯ ಪ್ಯಾರಾದಲ್ಲಿ '*ಸದರಿ ಪ್ರಸ್ತಾವನೆಯು ಕರ್ನಾಟಕ ನೀರಾವರಿ ನಿಗಮದ ಪರಿಶೀಲನೆಯಲ್ಲಿದ್ದು, ಅನುದಾನ ಲಭ್ಯತೆಗನುಸಾರ ಯೋಜನೆಯ ಕುರಿತು ನಿಯಮಾನುಸಾರ ಕ್ರಮ ವಹಿಸಲಾಗುವುದು*' ಎಂದು ಹೇಳಿದ್ದಾರೆ. ಮಾನ್ಯ ಸಚಿವರಲ್ಲಿ ನನ್ನ ಮನವಿಯೇನೆಂದರೆ, ಇದು ಕುಡಿಯುವ ನೀರಿನ ಯೋಜನೆಯಾಗಿದೆಯೇ ಹೊರತು ನೀರಾವರಿ ಯೋಜನೆಯಲ್ಲ. ಇದಕ್ಕೆ ಆದ್ಯತೆ ಕೊಡಬೇಕು. ಆಮೇಲೆ ಇದಕ್ಕೊಂದು time bound ನಿಗದಿಪಡಿಸಿ ಆರು ತಿಂಗಳಿನಿಂದ ಒಂದು ವರ್ಷದಲ್ಲಿ ಇದನ್ನು ಅನುಷ್ಠಾನ ಮಾಡಬೇಕೆಂದು ಕಳೆದ ಆರು ವರ್ಷಗಳಿಂದ ಇದರ ಸಂಬಂಧ ಹೋರಾಟವಾಗುತ್ತಿದೆ. ನಾನು ಕಳೆದ ಸಲ ವಿಧಾನಸಭೆಯಲ್ಲಿ ಕೂಡ ಈ ಅಂಶವನ್ನು raise ಮಾಡಿದ್ದೆ. ಆದ್ದರಿಂದ ಇದನ್ನು ಆದಷ್ಟು ಬೇಗ ಒಂದು time bound project ಆಗಿ ಅನುಷ್ಠಾನ ಮಾಡಬೇಕು. ಏಕೆಂದರೆ ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸತೀಶ್‌ರವರು ಕೇಳಿರುವುದು ಕುಡಿಯುವ ನೀರಿನ ಯೋಜನೆಯಾಗಿದೆ. ಜಲಸಂಪನ್ಮೂಲ ಇಲಾಖೆ ಇರುವುದು ನೀರಾವರಿ ಸೌಲಭ್ಯ ಒದಗಿಸುವುದಕ್ಕೆ. ಇದು ಮೊದಲನೆಯದು. ಎರಡನೆಯದಾಗಿ

project cost 60 ಕೋಟಿ ರೂಪಾಯಿಗಳಾಗಿತ್ತು, ಅದು ಅನುಮೋದನೆಯಾಗಿತ್ತು ಎಂದು ಹೇಳುತ್ತಾರೆ. Project ಅನುಮೋದನೆಯಾಗಿಲ್ಲ ಎನ್ನುವುದು ನಿಮಗೆ ಗೊತ್ತಿರಲಿ. ಈ project 2019-20ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆಯಾಯಿತು. ಈ ರೀತಿ 2013 ರಿಂದ ಇವತ್ತಿನವರೆಗೂ ಘೋಷಣೆಗಳಾಗುತ್ತಿವೆ. ನಮ್ಮ ಬಜೆಟ್‌ಗೂ ಮತ್ತು ನಾವು ಮಂಜೂರು ಮಾಡುವ ಕಾಮಗಾರಿಗಳಿಗೆ ಎಲ್ಲಿಯೂ ಸಂಬಂಧವಿಲ್ಲ. ಇದನ್ನು ಈ ಮನೆಯ ಎಲ್ಲಾ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಇವತ್ತಿನ ನಮ್ಮ ಕಾರ್ಯಭಾರ ಅಂದರೆ workload ಏನಿದೆಯೆಂದರೆ, 01 ಲಕ್ಷದ 02 ಸಾವಿರ ಕೋಟಿಗಿಂತಲೂ ಹೆಚ್ಚಿದೆ. ಪ್ರತಿ ವರ್ಷ ನಮಗೆ ಬಜೆಟ್ ಸಿಗುತ್ತಿರುವುದು 18 ರಿಂದ 19,000 ಕೋಟಿ ಮಾತ್ರ. ಮಾನ್ಯ ಸದಸ್ಯರು ಕೊನೆಯ ಪ್ಯಾರಾವನ್ನು ಓದಿ ಹೇಳಿದರು. ಅದರ ಸಲುವಾಗಿಯೇ ಅನುದಾನ ಲಭ್ಯತೆಯ ಆಧಾರದ ಮೇಲೆ ಎಂದು ಹೇಳಿದೆ. ಬೇರೆ ಯಾವ ಕಾರಣಕ್ಕೂ ಅಲ್ಲ. ಹಣವಿದ್ದರೆ ನಾಳೆಯೇ ಮಾಡಿಸುತ್ತೇನೆ. ಮಾನ್ಯ ಸದಸ್ಯರು ಇನ್ನೊಂದು ವಿಚಾರವನ್ನು ತಿಳಿದುಕೊಳ್ಳಬೇಕು. ಈ ಪ್ರಾಜೆಕ್ಟ್ ಬರೀ ಬಜೆಟ್ ಭಾಷಣಕ್ಕೆ ಸೀಮಿತವಾಗಿದೆ. ಇದು ಕ್ರಿಯಾ ಯೋಜನೆಯೊಳಗೆ ಸೇರಿ, ಅನುದಾನ ಹಂಚಿಕೆಯಾಗಿ, ಇವತ್ತಿನವರೆಗೂ ಅನುಮೋದನೆಯಾಗಲೇ ಇಲ್ಲ. ನಾನು ಆಗಸ್ಟ್ ತಿಂಗಳ 04ನೇ ತಾರೀಖಿಗೆ ನಮ್ಮ ನಿಗಮದ 94ನೇ ಸಭೆಯಲ್ಲಿ ಇದನ್ನು clearance ಸಲುವಾಗಿ ತೆಗೆದುಕೊಂಡು ಬಂದಿದ್ದೆ. ಈಗ board clearance ಕೊಟ್ಟಿದ್ದೇವೆ. ಇನ್ನು ಮೇಲೆ ಫೈನಾನ್ಸ್ ಇಲಾಖೆಯಿಂದ ಅನುದಾನ ಹಂಚಿಕೆಯಾಗಿ ಬಂದು ಮುಂದಿನ ಪ್ರಕ್ರಿಯೆ technical sanction ಆಗಬೇಕು, ಆಮೇಲೆ ಟೆಂಡರ್ ಕರೆದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು. ಆದ್ದರಿಂದ ಇಷ್ಟನ್ನೇ ಹೇಳಬಯಸುತ್ತೇನೆ, ಅನುದಾನ ಹಂಚಿಕೆಯ ಆಧಾರದ ಮೇಲೆ ಎಂದು ನಾನು ಬಹಳ ಸೂಕ್ಷ್ಮವಾಗಿ ಉತ್ತರ ಕೊಟ್ಟಿದ್ದೆ. ಇದು ಅನುದಾನ ಸಿಕ್ಕಮೇಲೆ ಆಗುತ್ತದೆ. ಬೇರೆ ಏನನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ.

**ಶ್ರೀ ವೈ.ಎಂ. ಸತೀಶ್:-** ಮಾನ್ಯ ಸಚಿವರಿಗೆ ಧನ್ಯವಾದಗಳು. ನನ್ನ ಮನವಿಯೇನೆಂದರೆ, ಆದಷ್ಟು ಬೇಗ ಇದನ್ನು ಅನುಷ್ಠಾನ ಮಾಡುವುದಕ್ಕೆ ಪ್ರಯತ್ನ ಮಾಡಿ ಎಂದು ಕೋರುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಇದನ್ನು ಪರಿಶೀಲನೆ ಮಾಡುತ್ತೇನೆ.

**ಶ್ರೀ ವೈ.ಎಂ. ಸತೀಶ್:-** ಮಾನ್ಯ ಸಚಿವರೇ, ನನಗೆ ಅನುಮೋದನೆ ಮತ್ತು ಘೋಷಣೆ ಇವುಗಳ ನಡುವಿನ ಅರ್ಥ ವ್ಯತ್ಯಾಸ ಗೊತ್ತಾಗಲಿಲ್ಲ. ಅದರಲ್ಲಿ ಏನಾದರೂ ತಪ್ಪುಗಳಾಗಿದ್ದರೆ ಸರಿಪಡಿಸಿ.

(ಮುಂದು)

(840) 15-09-2022 KH-AK 12-40 (ಸಭಾಪತಿಯವರ ಉಪಸ್ಥಿತಿ)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 15ನೇ ಸೆಪ್ಟೆಂಬರ್ 2022 ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 117 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:- ಮಂಡಿಸಲಾಯಿತು.**

**೦2. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟಿದ್ದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು**

**ಅ) ವಿಷಯ:-2019-20ನೇ ಸಾಲಿನಿಂದ ನಿಂತು ಹೋಗಿರುವ "ಗಾಂಧಿ ಪುರಸ್ಕಾರ ಯೋಜನೆ"ಯನ್ನು ಪುನಃ ಪ್ರಾರಂಭಿಸಿ ಅರ್ಹ ಗ್ರಾಮ ಪಂಚಾಯಿತಿಗಳಿಗೆ ಉತ್ತೇಜನ ನೀಡುವ ಕುರಿತು.**

***

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿಯವರು ದಿನಾಂಕ:13-09-2022ರಂದು ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

**ಆ) ವಿಷಯ:-ಕಟ್ಟಡ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸೇರಿ ಇತರೆ ಸೌಲಭ್ಯಗಳ ಸಮರ್ಪಕ ವಿತರಣೆ ಬಗ್ಗೆ.**

***

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು ದಿನಾಂಕ:14-09-2022 ರಂದು ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ಕಾರ್ಮಿಕ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

**ಇ) ವಿಷಯ:-ಕಳೆದ 15 ವರ್ಷಗಳಿಂದ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳ ನೇಮಕಾತಿ ಬಗ್ಗೆ.**

***

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ದಿನಾಂಕ:14-09-2022 ರಂದು ಪ್ರಸ್ತಾಪಿಸಿದ ಸೂಚನೆಗೆ ಸಂಬಂಧಿಸಿದಂತೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

## ૩. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:- ಪಿ.ಎಸ್.ಐ. ಪರೀಕ್ಷೆಯಲ್ಲಿ ಓ.ಎಂ.ಆರ್. ಶೀಟ್‌ಗಳನ್ನು ತಿದ್ದಿದ ಪ್ರಕರಣದ ಬೆನ್ನಲ್ಲೇ ವಿವಿಧ ವಿಶ್ವವಿದ್ಯಾನಿಲಯಗಳ ಪಿ.ಹೆಚ್.ಡಿ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದಂತೆ ಓ.ಎಂ.ಆರ್. ಉತ್ತರ ಪತ್ರಿಕೆಗಳನ್ನು ಖರೀದಿಸಿ ಅಕ್ರಮ ನಡೆದಿರುವ ಬಗ್ಗೆ.**

***

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪಿ.ಎಸ್.ಐ. ಪರೀಕ್ಷೆಯಲ್ಲಿ ಓ.ಎಂ.ಆರ್. ಶೀಟ್‌ಗಳನ್ನು ತಿದ್ದಿದ ಪ್ರಕರಣದ ಕುರಿತು ತನಿಖೆ ನಡೆಯುತ್ತಿರುವ ಬೆನ್ನಲ್ಲೇ ವಿವಿಧ ವಿಶ್ವವಿದ್ಯಾನಿಲಯಗಳ ಪಿ.ಹೆಚ್.ಡಿ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದ ಓ.ಎಂ.ಆರ್. ಉತ್ತರ ಪತ್ರಿಕೆಗಳನ್ನು ಖರೀದಿಸಿ ಅಕ್ರಮ ನಡೆದಿರುವ ಬಲವಾದ ಆರೋಪ ಕೇಳಬಂದಿರುವುದು ದಿನಾಂಕ:14-09-2022 ರ ವಾರ್ತಾಭಾರತಿ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ದೂರು, ಗುಪ್ತವಾಗಿ ಕಾರ್ಯಾಚರಿಸುತ್ತಿರುವ ಪರೀಕ್ಷಾ ವ್ಯವಹಾರಗಳ ಜಾಲವನ್ನು ಬಹಿರಂಗಗೊಳಿಸಿದಂತಾಗಿದ್ದು ಇದೇ ಜಾಲ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಪರೀಕ್ಷಾ ಅಕ್ರಮದಲ್ಲಿಯೂ ಭಾಗಿಯಾಗಿದೆ ಎಂಬ ಅನುಮಾನಗಳು ವ್ಯಕ್ತವಾಗಿರುವುದು ತಿಳಿದುಬಂದಿರುತ್ತದೆ.

ಈ ಸಂಬಂಧ ಉನ್ನತ ಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ದೂರು ಸಲ್ಲಿಕೆಯಾಗಿದ್ದು ಪಿ.ಹೆಚ್.ಡಿ. ಪ್ರವೇಶ ಪತ್ರಿಕೆಯ ಪ್ರಶ್ನೆಪತ್ರಿಕೆ ಹಾಗೂ ಉತ್ತರ ಪತ್ರಿಕೆಯನ್ನು ಖರೀದಿಸಿರುವ ಕುರಿತು ತನಿಖೆ ನಡೆಸುವಂತೆ ದೂರುದಾರರು ಕೋರಿರುತ್ತಾರೆ.

ಈ ಅವ್ಯವಹಾರದಲ್ಲಿ ತೊಡಗಿರುವವರು ವಿದ್ಯಾರ್ಥಿಗಳಿಂದ ಹಣ ಪಡೆದುಕೊಂಡಿರುವ ವಿಚಾರಗಳು ಡೈರಿಯಲ್ಲಿ ನಮೂದಾಗಿರುವುದು ಸಹ ಬೆಳಕಿಗೆ ಬಂದಿದೆ. ಆದಕಾರಣ, ಕರ್ನಾಟಕ ಎಜುಕೇಷನ್ ಕಾಯ್ದೆ ಮತ್ತು ಕರ್ನಾಟಕ ಸಂಘಟಿತ ಅಪರಾಧ ಕಾಯ್ದೆಗಳ ಅಡಿಯಲ್ಲಿ ತಪ್ಪಿತಸ್ಥರ

ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಶೂನ್ಯವೇಳೆಯಲ್ಲಿ ತಮ್ಮ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮಂಜುನಾಥ ಭಂಡಾರಿಯವರು ಕೇಳಿರುವಂತಹ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಆ) ವಿಷಯ:- ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ ಅಡಿಕೆ ಎಲೆ ಹಳದಿ ರೋಗವು ವ್ಯಾಪಕವಾಗಿ ಹರಡುತ್ತಿದ್ದು, ಸದರಿ ರೋಗದ ಶಾಶ್ವತ ನಿಯಂತ್ರಣಕ್ಕೆ ಪರಿಹಾರ ಕಂಡುಹಿಡಿಯುವ ಕುರಿತು.**

***

**ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಕರಾವಳಿ ಜಿಲ್ಲೆಗಳಲ್ಲಿ ಅಡಿಕೆ ಎಲೆ ಹಳದಿ ರೋಗವು ವ್ಯಾಪಕವಾಗಿ ಹರಡುತ್ತಿರುವ ಬಗ್ಗೆ ಉದಯವಾಣಿ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಎರಡು ವರ್ಷಗಳ ಹಿಂದೆ ಸುಳ್ಯ ತಾಲ್ಲೂಕಿನಲ್ಲಿ ಹಳದಿ ರೋಗ ಕಾಣಿಸಿಕೊಂಡ ಸಂದರ್ಭದಲ್ಲಿ ತೋಟಗಾರಿಕೆ, ಕೃಷಿ ಕಂದಾಯ ಅಧಿಕಾರಿಗಳು ಹಾಗೂ ಅಡಿಕೆ ಸಂಶೋಧನಾ ಮತ್ತು ಅಭಿವೃದ್ಧಿ ಪ್ರತಿಷ್ಠಾನ (ಎಆರ್‌ಡಿಎಫ್)ಗಳು ಸಂಯುಕ್ತವಾಗಿ ಸುಳ್ಯದ ಗ್ರಾಮಗಳಲ್ಲಿ ಅಧ್ಯಯನ ನಡೆಸಿ, 1,217 ಹೆಕ್ಟೇರ್ ಪ್ರದೇಶದಲ್ಲಿ ರೋಗ ಬಂದಿರುವುದನ್ನು ಪತ್ತೆ ಹಚ್ಚಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದೆವು. ಇದರನ್ವಯ 2020-21ರ ಆಯವ್ಯಯದಲ್ಲಿ ರೋಗದ ಬಗ್ಗೆ ಸಂಶೋಧನೆ ಮತ್ತು ಪರ್ಯಾಯ ಬೆಳೆಗಾಗಿ ಕಾದಿರಿಸಿದ್ದರು. ಸಮಿತಿಯನ್ನು ಸಹ ರಚಿಸಲಾಗಿತ್ತು. ಆದರೆ ತದನಂತರದಲ್ಲಿ ಯಾವುದೇ ಪ್ರಗತಿ ಕಾಣದಿರುವುದು ಕಂಡುಬಂದಿರುತ್ತದೆ.

ಆದರೆ ಒದಗಿಸಲಾದ 25 ಕೋಟಿ ರೂಪಾಯಿಗಳಲ್ಲಿ 8 ಕೋಟಿ ರೂಪಾಯಿಗಳನ್ನು ಸಂಶೋಧನೆಗೆ ಹಾಗೂ ಉಳಿದ ಮೊತ್ತವನ್ನು ಪರ್ಯಾಯ ಬೆಳೆಗೆ ಮೀಸಲಿಡಲಾಗಿದೆ. ಈ 8 ಕೋಟಿ ರೂಪಾಯಿಗಳಲ್ಲಿ 3 ಕೋಟಿ ರೂಪಾಯಿಗಳನ್ನು ಸಿಪಿಸಿಆರ್‌ಐ.,ಗೆ ಹಾಗೂ 5 ಕೋಟಿ ರೂಪಾಯಿಗಳನ್ನು ಶಿವಮೊಗ್ಗದ ಕೃಷಿ ವಿವಿಗೆ ಅಡಿಕೆ ಸಂಶೋಧನಾ ಮತ್ತು ಅಭಿವೃದ್ಧಿ ಪ್ರತಿಷ್ಠಾನಕ್ಕೆ ವಿಂಗಡಿಸಲಾಗಿದೆ. ಆದರೆ ಅನುದಾನ ಸದ್ಬಳಕೆ ಬಗ್ಗೆ ಯಾವುದೇ ನಿರ್ಧಾರ ಆಗದ ಕಾರಣ, ಸಿಪಿಸಿಆರ್‌ಐ ವತಿಯಿಂದ ಪ್ರತ್ಯೇಕ ಅಧ್ಯಯನ ಅವರದೇ ಖರ್ಚಿನಲ್ಲಿ ಕಾಸರಗೋಡಿನಲ್ಲಿ ನಡೆಯುತ್ತಿರುವುದು ತಿಳಿದುಬಂದಿರುತ್ತದೆ.

ದಯಮಾಡಿ, ಸರ್ಕಾರ 2020-21ರ ಆಯವ್ಯಯದಲ್ಲಿ ಮೀಸಲಿಟ್ಟಿರುವ 25 ಕೋಟಿ ರೂಪಾಯಿಗಳ ಅನುದಾನದ ಬಳಕೆ ಬಗ್ಗೆ ಆದೇಶ ಹೊರಡಿಸಿ ಹಲವಾರು ವರ್ಷಗಳಿಂದ ಕಾಡುತ್ತಿರುವ ಎಲೆ ಹಳದಿ ರೋಗದ ಶಾಶ್ವತ ನಿಯಂತ್ರಣಕ್ಕೆ ಪರಿಹಾರವನ್ನು ಕಂಡುಹಿಡಿದು ರೈತರಿಗೆ ಅನುಕೂಲ ಮಾಡಿಕೊಡಬೇಕಾಗಿ ಮಾನ್ಯ ಕೃಷಿ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೆ.ಹರೀಶ್ ಕುಮಾರ್‌ರವರು ಕೇಳಿರುವಂತಹ ಶೂನ್ಯವೇಳೆಯ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಇ) ವಿಷಯ:- ಹಲವು ವರ್ಷಗಳಿಂದ ಕೃಷಿ ಮಾಡುತ್ತಿದ್ದ ಅರಣ್ಯ ಜಮೀನುಗಳನ್ನು ಡೀಮ್ಡ್ ಅರಣ್ಯದ ಸುಳಿಗೆ ಸಿಲುಕಿಸಿ ಕಂದಾಯ ದಾಖಲೆ ಲಭ್ಯವಿರದಂತೆ ಮಾಡುತ್ತಿರುವ ಕುರಿತು.**

***

**ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ರಾಜ್ಯಾದ್ಯಂತ ಅರಣ್ಯ ಮತ್ತು ಕಂದಾಯ ಇಲಾಖೆಗಳ ನಡುವಿನ ಸಮೀಕ್ಷಾ ತಿಕ್ಕಾಟದಿಂದಾಗಿ ಸಾವಿರಾರು ರೈತರು ಆತಂಕಕ್ಕೆ ಸಿಲುಕಿದ್ದು, ನೂರಾರು ವರ್ಷಗಳಿಂದ ಕೃಷಿ

ಮಾಡುತ್ತಿದ್ದ ಅರಣ್ಯ ಜಮೀನುಗಳನ್ನು ಡೀಮ್ಡ್ ಅರಣ್ಯದ ಸುಳಿಗೆ ಸಿಲುಕಿಸಿ ಕಂದಾಯ ದಾಖಲೆ ಲಭ್ಯವಿರದಂತೆ ಮಾಡಿದ ಪ್ರಕ್ರಿಯೆಗಳಿಂದಾಗಿ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿರುವುದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ರಾಜ್ಯದಲ್ಲಿ ಹೆಚ್ಚಿನ ಡೀಮ್ಡ್ ಸುಳಿಗೆ ಸಿಲುಕಿರುವ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳ ರೈತರನ್ನೊಳಗೊಂಡಂತೆ ಸ್ಥಳೀಯ ಶಾಸಕರು ಸರ್ಕಾರಕ್ಕೆ ಪಾರದರ್ಶಕ ಮರುಸಮೀಕ್ಷೆಗೆ ಒತ್ತಾಯಿಸಿದ್ದು, ಕೊಡಗು, ಚಿಕ್ಕಮಗಳೂರು ಮಾತ್ರವಲ್ಲದೆ ಬೆಂಗಳೂರು ಗ್ರಾಮಾಂತರ, ರಾಮನಗರ ಸೇರಿದಂತೆ ರಾಜ್ಯದಲ್ಲಿ ಕೃಷಿ ಯೋಗ್ಯವಲ್ಲದ ಜಮೀನುಗಳನ್ನು ಡೀಮ್ಡ್ ಅರಣ್ಯವೆಂದು ಈ ಹಿಂದಿನ ಸಮೀಕ್ಷೆಯಲ್ಲಿ ತಿಳಿಸಲಾಗಿದೆ. ರಾಜ್ಯಾದ್ಯಂತ 9.94 ಲಕ್ಷ ಹೆಕ್ಟೇರ್ ಭೂ ಪ್ರದೇಶ ಡೀಮ್ಡ್ ವ್ಯಾಪ್ತಿಯಲ್ಲಿದ್ದು ಸಮೀಕ್ಷೆಗಳ ಆಧಾರದಲ್ಲಿ ಒಟ್ಟು 6 ಲಕ್ಷ ಹೆಕ್ಟೇರ್ ಕಂದಾಯ ಇಲಾಖೆಗೆ ವರ್ಗವಾಗಲಿದೆ. ಸ್ಯಾಟಲೈಟ್ ಆಧಾರಿತವಾಗಿ ಮಾಡಿರುವ ಸಮೀಕ್ಷೆ ರೈತರಿಗೆ ಅನ್ಯಾಯವಾಗಲಿರುವ ಮಾತುಗಳು ಕೇಳಿ ಬಂದಿದ್ದು, ಡೀಮ್ಡ್ ಭೂಮಿಯಲ್ಲಿ ಸಾಕಷ್ಟು ರೈತರ ಕೃಷಿ ಬದುಕು ಅಡಗಿರುವುದರಿಂದ ವಾಸ್ತವಿಕವಾಗಿ ಅರಣ್ಯ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಪಾರದರ್ಶಕ ಸಮೀಕ್ಷೆ ನಡೆಸಬೇಕಿದೆ ಎನ್ನುವ ಒತ್ತಾಯ ಕೇಳಿ ಬಂದಿದೆ.

ಕೃಷಿ ಭೂಮಿಯನ್ನು ಉಳಿಸುವಂತೆ ಹಲವು ಸಂಘಟನೆಗಳು, ಹಲವು ಶಾಸಕರು ಸಹ ಸರ್ಕಾರವನ್ನು ಒತ್ತಾಯಿಸಿದ್ದು ರೈತರು ಭೂರಹಿತರಾಗದಂತೆ ಎಚ್ಚರಿಕೆ ವಹಿಸ ಬೇಕೆಂದು ಕೋರಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಹ ಮರು ಸಮೀಕ್ಷೆ ನಡೆಸಲಾಗುವುದೆನ್ನುವ ಭರವಸೆಯನ್ನು ನೀಡಿದ್ದರೂ ಈವರೆಗೂ ಮರುಸಮೀಕ್ಷೆ ನಡೆದಿದೆಯೇ ಎನ್ನುವುದು ತಿಳಿದುಬಂದಿರುವುದಿಲ್ಲ.

ಆ ಕಾರಣ, ಈ ವಿಚಾರದಲ್ಲಿ ಸರ್ಕಾರವು ಕೂಡಲೇ ಕ್ರಮ ಕೈಗೊಂಡು ರೈತರ ಕೃಷಿ ಭೂಮಿಯನ್ನು ಡೀಮ್ಡ್ ಅರಣ್ಯದಿಂದ ಹೊರಗಿಟ್ಟು ರೈತರು ಭೂರಹಿತರಾಗದಂತೆ ಮುನ್ನೆಚ್ಚರಿಕೆ ವಹಿಸಬೇಕೆಂದು ಮಾನ್ಯ ಕಂದಾಯ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ನಾಗರಾಜುರವರು ಕೇಳಿರುವಂತಹ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಈ) ವಿಷಯ:- ಕಾಡಾನೆ ದಾಳಿಯಿಂದ ಮೃತಪಟ್ಟ ಕುಟುಂಬಗಳಿಗೆ ಹಾಗೂ ಬೆಳೆ ಹಾನಿಗೆ ಸರ್ಕಾರ ನೀಡಿದ ಪರಿಹಾರ ಕುರಿತು.**

***

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಾಡಾನೆ ದಾಳಿಯಿಂದ ಮೃತಪಟ್ಟ ಕುಟುಂಬಕ್ಕೆ ಹಾಗೂ ರೈತ ಕುಟುಂಬ ವರ್ಗಕ್ಕೆ ನಿಗದಿತ ಅವಧಿಯಲ್ಲಿ ಪರಿಹಾರ ನೀಡದಿರುವ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ವೃದ್ಧರೊಬ್ಬರು ತಮ್ಮ ಕಾಫಿ ತೋಟದಲ್ಲಿ ನಡೆದುಕೊಂಡು ಹೋಗುವಾಗ ಕಾಡಾನೆಯೊಂದು ದಾಳಿ ನಡೆಸಿದ ಪರಿಣಾಮ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ, ಸದರಿ ಮೃತಪಟ್ಟ ಕುಟುಂಬಕ್ಕೆ ಸರ್ಕಾರದಿಂದ ಯಾವ ರೀತಿ ಧನ ಸಹಾಯ ಅಥವಾ ಇತರೆ ಸವಲತ್ತು ನೀಡಲಾಗಿದೆ? ಕಾಡಾನೆ ದಾಳಿಯಿಂದ ನೂರಾರು ಎಕರೆ ಬೆಳೆ ನಾಶವಾಗಿದ್ದು ಆ ರೈತರಿಗೆ ಪರಿಹಾರ ನೀಡಲಾಗಿದೆಯೇ ಹಾಗೂ ಈ ಹಿಂದೆ ಪದೇ-ಪದೇ ಕಾಡಾನೆ ದಾಳಿಯಿಂದ ಮೃತಪಟ್ಟ ಕುಟುಂಬಗಳಿಗೆ ನಿಗದಿತ ಸಮಯದಲ್ಲಿ ಪರಿಹಾರ ನೀಡಲಾಗಿದೆಯೇ ಹಾಗೂ ಬಡ ರೈತ ಜಮೀನುಗಳಿಗೆ ಮತ್ತು ಕಾಫಿ ತೋಟದಲ್ಲಿ ಕಾಡಾನೆ ದಾಳಿ ಮಾಡಿದ ಸಂದರ್ಭದಲ್ಲಿ ರೈತರ ಬೆಳೆಗಳು ಹಾನಿ ಆಗಿರುವುದಕ್ಕೆ ಸರ್ಕಾರ ಯಾವ ರೀತಿ ಪರಿಹಾರ ನೀಡಿದೆ? ಎಂಬ ಮಾಹಿತಿಯನ್ನು ನೀಡಿ, ಸೂಕ್ತ ಪರಿಹಾರ ಒದಗಿಸುವಂತೆ ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಸರ್ಕಾರದಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕೇಳಿರುವಂತಹ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸಲಾಗುವುದು.

**ಉ) ವಿಷಯ:- ನೀಟ್ ಪರೀಕ್ಷೆಯಲ್ಲಿ Rank ಪಡೆದವರು ವಿವಿಧ ಕೋಚಿಂಗ್ ಸೆಂಟರ್‌ಗಳಲ್ಲಿ ತರಬೇತಿ ಪಡೆದಿರುವ ಬಗ್ಗೆ.**

***

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನೀಟ್ ಟಾಪರ್ ಮೂರು ಕೋಚಿಂಗ್ ಸೆಂಟರ್‌ಗಳಲ್ಲಿ ತರಬೇತಿ ಪಡೆದಿದ್ದು ನಿಜವೇ? ಜಾಹಿರಾತುಗಳ ಹಿಂದಿನ ಮರ್ಮವೇನು? ಈ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

2022ನೇ ಸಾಲಿನ ನೀಟ್ ಮತ್ತು ಜೆಇಇ ಪರೀಕ್ಷೆಗಳ ಫಲಿತಾಂಶ ಹೊರಬಿದ್ದಿದೆ. ರಾಜಾಸ್ಥಾನದ ತನಿಷ್ಕ ಎಂಬ ವಿದ್ಯಾರ್ಥಿನಿ ನೀಟ್ ಪರೀಕ್ಷೆಯಲ್ಲಿ ಆಲ್ ಇಂಡಿಯ ಲೆವೆಲ್‌ನಲ್ಲಿ ಮೊದಲನೆ Rank ಪಡೆದು ಟಾಪರ್ ಎನಿಸಿದ್ದಾರೆ, ಆಶ್ಚರ್ಯವೆಂದರೆ ಆ ವಿದ್ಯಾರ್ಥಿನಿಗೆ ಕೋಚಿಂಗ್ ನೀಡಿದ್ದು ನಾವೇ ಎಂದು ಮೂರು ಕೋಚಿಂಗ್ ಸೆಂಟರ್‌ಗಳು ಬಹುಮುಖ್ಯ ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಿಸಿದ್ದಾರೆ. ಅದೇ ರೀತಿ ಜೆಇಇ ಪರೀಕ್ಷೆಯಲ್ಲಿ 11 ನೇ Rank ಪಡೆದ ದೀವ್ಯಾಂಶು ಮಾಲು ಎಂಬ ವಿದ್ಯಾರ್ಥಿನಿಯ ಭಾವಚಿತ್ರವನ್ನು 5 ಕೋಚಿಂಗ್ ಸೆಂಟರ್‌ಗಳು ತಮ್ಮ ಜಾಹಿರಾತಿನಲ್ಲಿ ಪ್ರಕಟಿಸುವ ಮೂಲಕ ನಾವೇ ಕೋಚಿಂಗ್ ನೀಡಿದ್ದು ಎಂದು ಹೇಳಿಕೊಂಡಿದ್ದಾರೆ. ಇದು ನಿಜವೇ? ಒಬ್ಬ ವಿದ್ಯಾರ್ಥಿ 5 ಕೋಚಿಂಗ್ ಸೆಂಟರ್‌ಗಳಲ್ಲಿ ತರಬೇತಿ ಪಡೆಯಲು ಸಾಧ್ಯವೇ? ಈ ಮೊದಲು ವೈದ್ಯಕೀಯ ಪ್ರವೇಶಾತಿಗೆ ಸಿಇಟಿ ಪರೀಕ್ಷೆ ಇದ್ದಾಗ ಹೆಚ್ಚಿನ ತೊಂದರೆಯಿರುತ್ತಿರಲಿಲ್ಲ. ಆದರೆ ನೀಟ್ ಪರೀಕ್ಷೆ ಶುರುವಾದ ನಂತರ ಆಕಾಂಕ್ಷಿಗಳ ನಡುವೆ ತೀವ್ರ ಪೈಪೋಟಿ ಆರಂಭವಾಗಿದೆ. ಇಲ್ಲಿ ತಪ್ಪು ಉತ್ತರಕ್ಕೆ ಒಂದು ಅಂಕ ಕಳೆಯುವ ಮಾದರಿಯಿಂದಾಗಿ ಬಹಳಷ್ಟು ವಿದ್ಯಾರ್ಥಿಗಳು ಕಷ್ಟಪಡುತ್ತಿದ್ದಾರೆ.

ಕೋಚಿಂಗ್ ಇಲ್ಲದೆ ಯಾವ ವಿದ್ಯಾರ್ಥಿಗಳು ನೀಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಹಾಗಾಗಿ ಕೋಚಿಂಗ್ ಹೆಸರಿನಲ್ಲಿ ಹತ್ತಾರು ಸಂಸ್ಥೆಗಳು ಪ್ರತಿ ವಿದ್ಯಾರ್ಥಿಯಿಂದ ಲಕ್ಷಾಂತರ ಶುಲ್ಕ ವಸೂಲಿ ಮಾಡುತ್ತಿವೆ. ಪರೀಕ್ಷೆಗೆ 2 ತಿಂಗಳು ಇರುವಾಗ ಕ್ರಾಷ್ ಕೋರ್ಸ್ ಹೆಸರಿನಲ್ಲಿ ಮತ್ತೆ ವಿದ್ಯಾರ್ಥಿಗಳಿಂದ ಹಣ ಕಟ್ಟಿಸಿಕೊಳ್ಳಲಾಗುತ್ತಿದೆ. ಈ ರೀತಿಯಲ್ಲಿ ದೊಡ್ಡ ದಂಧೆಯಲ್ಲಿ ಹಲವು ಸಂಸ್ಥೆಗಳು ನಡೆಯುತ್ತಿವೆ. ಪಿ.ಯು.ಕಾಲೇಜು ನಡೆಸುತ್ತೇವೆ ಎಂದು ಅನುಮತಿ ಪಡೆದು ಕೇವಲ ಕೋಚಿಂಗ್ ನಡೆಸುವ ನೂರಾರು ಸಂಸ್ಥೆಗಳಿವೆ. ಜೊತೆಗೆ ಬೈಜೂಸ್ ನಂತರ ಆನ್‌ಲೈನ್ ಕೋಚಿಂಗ್ ನೀಡುವ ಸಂಸ್ಥೆಗಳು ನೂರಾರು ಕೋಟಿ ರೂಪಾಯಿಗಳನ್ನು ಕೊಟ್ಟು ಕ್ರಿಕೆಟ್ ಟೂರ್ನಮೆಂಟ್‌ಗಳಿಗೆ ಪ್ರಾಯೋಜಕತ್ವ ವಹಿಸುವ ಮಟ್ಟಿಗೆ ಬೆಳೆದು ನಿಂತಿವೆ ಎಂದರೆ ಅವು ವಿದ್ಯಾರ್ಥಿಗಳಿಂದ ಯಾವ ಮಟ್ಟಿಗೆ ಲೂಟಿ ಮಾಡುತ್ತಿವೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ವೀರಪ್ಪ ಮೊಯ್ಲಿಯವರು ಸಿಎಂ ಆಗಿದ್ದಾಗ ಸಿಇಟಿ ಪ್ರವೇಶ ಪರೀಕ್ಷೆ ಆರಂಭವಾಯಿತು. ಆಗ ಪ್ರತಿ ಖಾಸಗಿ ವೈದ್ಯಕೀಯ ಕಾಲೇಜುಗಳು ಸಹ ಶೇಕಡಾ 85 ರಷ್ಟು ಸರ್ಕಾರಿ ಕೋಟಾವನ್ನು ನೀಡಬೇಕಾಗಿತ್ತು. ಅದು ನಿಧಾನವಾಗಿ 70%, 50% ಗೆ ಇಳಿದು ಈಗ ಕೇವಲ 40% ಸರ್ಕಾರಿ ಕೋಟಾವನ್ನಷ್ಟೆ ನೀಡಲಾಗುತ್ತಿದೆ. ಉಳಿದ 60% ಮ್ಯಾನೇಜ್‌ಮೆಂಟ್ ಕೋಟಾವಾಗಿವೆ. ಧಾರ್ಮಿಕ ಅಲ್ಪಸಂಖ್ಯಾತ ಸಂಸ್ಥೆಗಳು ಕೇವಲ 25% ಸರ್ಕಾರಿ ಕೋಟಾ ನಿಗದಿಪಡಿಸುತ್ತಿವೆ. ಡೀಮ್ಡ್ ವಿವಿಗಳು ಕೇವಲ 08% ಸರ್ಕಾರಿ ಕೋಟಾ ನೀಡುತ್ತಿವೆ. ಈ ಮೂಲಕ ಮ್ಯಾನೇಜ್‌ಮೆಂಟ್ ಕೋಟಾವನ್ನು ಸತತವಾಗಿ ಹೆಚ್ಚಿಸಿಕೊಂಡು ಅವುಗಳನ್ನು ಕೋಟಿ ಕೋಟಿ ರೂಪಾಯಿಗಳಿಗೆ ಮಾರಿಕೊಳ್ಳಲಾಗುತ್ತಿದೆ.

ಇದರಿಂದಾಗಿ ಸರ್ಕಾರಿ ವೈದ್ಯಕೀಯ ಸೀಟುಗಳು ತೀರಾ ಕಡಿಮೆಯಾಗಿರುವುದರಿಂದ ಅವುಗಳ ಪೈಪೋಟಿ ತೀವ್ರವಾಗುತ್ತಿದೆ. ಕೆಲವೇ ಕೆಲವು ಸೀಟುಗಳಿಗಾಗಿ ಲಕ್ಷಾಂತರ ಮಕ್ಕಳು ಪೈಪೋಟಿ ನಡೆಸುತ್ತಿದ್ದು ನೀಟ್ ಪರೀಕ್ಷೆ ಮತ್ತಷ್ಟು ಮಗದಷ್ಟು ಕಠಿಣವಾಗುತ್ತಿದೆ. ದಕ್ಷಿಣ ಭಾರತದ ಮಕ್ಕಳಿಗೆ ನೀಟ್ ಪರೀಕ್ಷೆ ಕಬ್ಬಿಣದ ಕಡಲೆಯಾಗಿ ಪರಿಣಮಿಸಿದೆ. ನೀಟ್ ಪರೀಕ್ಷೆಯಲ್ಲಿ ಸರ್ಕಾರಿ ಸೀಟು ಸಿಗದೆ, ಕೋಟ್ಯಾಂತರ ಹಣ ನೀಡಿ ಖಾಸಗಿ ಸೀಟು ಪಡೆಯಲಾಗದೆ ಅದೆಷ್ಟೋ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳಿವೆ. ಆದರೂ ಸರ್ಕಾರ ಕೋಚಿಂಗ್

ಸೆಂಟರ್‌ಗಳಿಗೆ ಕಡಿವಾಣ ಹಾಕುತ್ತಿಲ್ಲ. ಸರ್ಕಾರ ತಮ್ಮ ಸರ್ಕಾರಿ ಕಾಲೇಜುಗಳಲ್ಲಿ ಸರಿಯಾದ ಶಿಕ್ಷಣ ಅಗತ್ಯ ಬಿದ್ದರೆ ಅತ್ಯುತ್ತಮ ಕೋಚಿಂಗ್ ನೀಡಿದರೆ ಈ ಹೊರಗಿನ ಕೋಚಿಂಗ್ ಅಗತ್ಯವಿಲ್ಲ. ಆದರೆ ಸರ್ಕಾರ ದಿನೇ ದಿನೇ ಶಿಕ್ಷಣ ನೀಡುವ ಜವಾಬ್ದಾರಿಯಿಂದ ಹಿಂದೆ ಸರಿದು ಖಾಸಗಿಯವರಿಗೆ ವಹಿಸುತ್ತಿದೆ. ದುಡ್ಡಿದ್ದವರಿಗೆ ಶಿಕ್ಷಣ ಎಂಬಂತಾಗಿದೆ. ಈ ಪರಿಸ್ಥಿತಿಯನ್ನು ತಡೆಗಟ್ಟಬೇಕಾದ ಸರ್ಕಾರವೇ ಈ ಪರಿಸ್ಥಿತಿಗೆ ಕಾರಣವಾಗಿದೆ. ಏಕೆಂದರೆ ಎಲ್ಲಾ ರಾಜಕೀಯ ಪಕ್ಷಗಳ ಮತ್ತು ಎಲ್ಲಾ ಸರ್ಕಾರಗಳ ಪ್ರಭಾವಿ ವ್ಯಕ್ತಿಗಳು ಖಾಸಗಿ ಮೆಡಿಕಲ್ ಕಾಲೇಜುಗಳನ್ನು, ಡೀಮ್ಡ್ ವಿವಿಗಳನ್ನು ಹೊಂದಿದ್ದಾರೆ. ಇಂತಹ ಸಂದರ್ಭದಲ್ಲಿ ನಿಯಂತ್ರಣದ ಮಾತೆಲ್ಲಿ? ಒಟ್ಟಿನಲ್ಲಿ ಇಂದು ಶಿಕ್ಷಣ ಮತ್ತು ಆರೋಗ್ಯ ಎರಡು ವ್ಯಾಪಾರೀಕರಣಗೊಂಡಿರುವ ಪರಿಸ್ಥಿತಿಯಲ್ಲಿ ಕೋಚಿಂಗ್ ಸೆಂಟರ್‌ಗಳ ಅಬ್ಬರದಲ್ಲಿ ಬಡ-ಮಧ್ಯಮ ವರ್ಗದ ತಳ ಸಮುದಾಯಗಳ ಮಕ್ಕಳು ವೈದ್ಯಕೀಯ ಶಿಕ್ಷಣದ ಕನಸು ಕಾಣುವುದು ಈ ದಿಕ್ಕಿನಲ್ಲಿ ದೂರದ ಮಾತಾಗಿದೆ. ರೈತರ, ನೇಕಾರರ, ಆಟೋ ಚಾಲಕರ, ಮೀನುಗಾರರ ಮಕ್ಕಳಿಗೆ "ವಿದ್ಯಾನಿಧಿ" ಕಾರ್ಯಕ್ರಮದ ಮೂಲಕ ಮನೆ ಮಾತಾಗಿರುವ ಮಾನ್ಯ ಮುಖ್ಯಮಂತ್ರಿಗಳು ಶಿಕ್ಷಣ ಪ್ರೇಮಿಗಳು ಹಾಗೂ ಬಡ ವಿದ್ಯಾರ್ಥಿಗಳ ಬಗ್ಗೆ ಅಪಾರ ಕಾಳಜಿ ಉಳ್ಳವರಾಗಿರುವುದರಿಂದ ಮೇಲಿನ ವಿಷಯದ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಶೂನ್ಯ ವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಚಿದಾನಂದ್ ಎಂ.ಗೌಡ ರವರು ಕೇಳಿರುವಂತಹ ಶೂನ್ಯವೇಳೆಯ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(841)15-09-2022(12-50)bsd-ak

**ಊ) ವಿಷಯ: ಸ್ಮಾರ್ಟ್ ಸಿಟಿ ಅಭಿವೃದ್ಧಿಯಲ್ಲಿನ ಗುಣಮಟ್ಟ ಹಾಗೂ ಕಾಮಗಾರಿಗಳ ಪ್ರಗತಿ ಬಗ್ಗೆ.**

* * *

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಪ್ರಗತಿ ಬದಲಿಸದ ಸ್ಮಾರ್ಟ್ ಸಿಟಿ – ಮಳೆಯಿಂದ ಸ್ಮಾರ್ಟ್ ಸಿಟಿಗಳ ಬಣ್ಣ ಬಯಲು – ಕಾಮಗಾರಿಗಳನ್ನೂ ಟೇಕಾಫ್ ಆಗಿಲ್ಲ, ಈ ಪತ್ರಿಕಾ ಹೇಳಿಕೆಗಳು ದಿನಾಂಕ 14-09-2022ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ದೇಶದ 100 ನಗರಗಳ ಪೈಕಿ ರಾಜ್ಯದ 7 ಜಿಲ್ಲಾ ಕೇಂದ್ರಗಳಲ್ಲಿ ಕೈಗೊಂಡಿರುವ ಸ್ಮಾರ್ಟ್ ಸಿಟಿ ಕಾಮಗಾರಿ ಇನ್ನೂ ಕುಂಟುತ್ತಲೇ ಇದ್ದು, ಈ ಯೋಜನೆ ಪ್ರಾರಂಭವಾಗಿ 7 ವರ್ಷ ಕಳೆದರೂ ನಿರೀಕ್ಷಿತ ರೀತಿಯಲ್ಲಿ ಗುರಿ ಸಾಧಿಸದಿರುವುದು ಸರ್ಕಾರದ ವೈಫಲ್ಯವನ್ನು ಜಗಜ್ಜಾಹೀರುಗೊಳಿಸಿದೆ. ರಾಜ್ಯ ಸರ್ಕಾರದ ಪ್ರಕಾರ ಶೇಕಡಾ 80 ರಷ್ಟು ಕಾಮಗಾರಿಗಳು ಮುಕ್ತಾಯಗೊಂಡಿವೆ. ಆದರೆ ಗ್ರೌಂಡ್ ರಿಯಾಲಿಟಿಯಲ್ಲಿ 7 ನಗರಗಳ ಸ್ಮಾರ್ಟ್ ಸಿಟಿ ಯೋಜನೆಯಡಿ ರೂ.13,688 ಕೋಟಿಗಳ 889 ಕಾಮಗಾರಿಗಳ ಪೈಕಿ ರೂ.5,068 ಕೋಟಿಗಳನ್ನಷ್ಟೇ ಖರ್ಚು ಮಾಡಿ 590 ಕಾಮಗಾರಿಗಳನ್ನು ಮುಕ್ತಾಯಗೊಳಿಸಲಾಗಿದೆ. ಉಳಿಕೆ 209 ಕಾಮಗಾರಿಗಳು ಇದುವರೆಗೂ ಟೇಕಾಫ್ ಆಗಿಯೇ ಇಲ್ಲ.

ಇದರ ಜೊತೆಗೆ ಕಾಮಗಾರಿಗಳು ಕಳಪೆ ಗುಣಮಟ್ಟದಲ್ಲಿರುವ ಬಗ್ಗೆ ತೀವ್ರ ಆಕ್ಷೇಪ ಕೇಳಿಬಂದಿದ್ದು, ಅವೈಜ್ಞಾನಿಕತೆಯಿಂದ ಕೂಡಿರುವುದನ್ನು ಉಲ್ಲೇಖಿಸಲಾಗಿದೆ. ದಾಖಲೆಗಾಗಿ ಬಣ್ಣ ಬಳಿದು ಕೋಟ್ಯಾಂತರ ರೂಪಾಯಿ ಕಳಪೆ ಕಾಮಗಾರಿ ನಡೆಸಲಾಗಿದೆ ಎನ್ನುವುದು ಸಾರ್ವಜನಿಕರ ಅಭಿಪ್ರಾಯವೂ ಆಗಿದೆ. ಕೈಗೊಂಡಿರುವ ಕಾಮಗಾರಿಗಳ ಬಣ್ಣ ಸುರಿದ ಮಳೆಗೆ ಕೊಚ್ಚಿಹೋಗಿದ್ದು, ಅನೇಕ ಕಡೆ ಪ್ರತಿಭಟನೆ ಮತ್ತು ದೂರುಗಳು ದಾಖಲಾಗಿರುವುದು ತಿಳಿದು ಬಂದಿರುತ್ತದೆ.

ಬೆಂಗಳೂರು ಸೇರಿದಂತೆ ತುಮಕೂರು, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ದಾವಣಗೆರೆ, ಶಿವಮೊಗ್ಗ, ಮಂಗಳೂರುಗಳಲ್ಲಿ ಕಳಪೆ ಕಾಮಗಾರಿಗಳು, ಯೋಜನೆಗಳ ಸ್ಪಷ್ಟತೆ ಇಲ್ಲದಿರುವುದು, ಗುಣಮಟ್ಟದಲ್ಲಿನ ಲೋಪ, ಕಾಮಗಾರಿ ಪೂರ್ಣಗೊಳ್ಳದಿರುವ ಬಗ್ಗೆ ಸರ್ಕಾರದ ವಿರುದ್ಧ ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಬಹಳಷ್ಟು ಕಡೆಗಳಲ್ಲಿ ಸ್ಮಾರ್ಟ್ ಸಿಟಿ ಯೋಜನೆಗಳಲ್ಲಿ ನಡೆಯುತ್ತಿರಬಹುದಾದ ಕಾಮಗಾರಿಗಳಾವುವು ಎನ್ನುವ ಮಾಹಿತಿಯೇ ಇಲ್ಲವಾಗಿದೆ. ಸ್ಮಾರ್ಟ್ ಸಿಟಿ ಅನುಷ್ಠಾನದಲ್ಲಿ ದೇಶದಲ್ಲೇ 3ನೇ ಸ್ಥಾನದಲ್ಲಿರುವುದಾಗಿ ಘೋಷಿಸಿಕೊಳ್ಳುವ ಸರ್ಕಾರ ಅಪೂರ್ಣ ಕಾಮಗಾರಿ, ಕಳಪೆ ಕಾಮಗಾರಿಗಳನ್ನು ಮರೆಮಾಚಿ ಸಹಜವಾಗಿ ನಡೆಯುತ್ತಿದ್ದ ಕಾಮಗಾರಿಗಳಿಗೆ ಹೊಸದೊಂದು ಹೆಸರಿಡುವ ಮೂಲಕ ಜಾಣತನ ಪ್ರದರ್ಶಿಸುವ ಬದಲು ತ್ವರಿತ ಗತಿಯಲ್ಲಿ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಗುಣಮಟ್ಟದೊಂದಿಗೆ ಮುಕ್ತಾಯಗೊಳಿಸಲು ಕ್ರಮ ವಹಿಸಬೇಕು. ಕಳಪೆ ಕಾಮಗಾರಿಗಳ ಬಗ್ಗೆ ಕೇಳಿಬಂದಿರುವ ದೂರುಗಳ ಬಗ್ಗೆ ತನಿಖೆ ನಡೆಸಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಉತ್ತರವನ್ನು ಒದಗಿಸಿಕೊಡುತ್ತೇನೆ.

## 4. ಚುನಾವಣಾ ಪ್ರಸ್ತಾವ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ ೨೦೦೯ರ ಪ್ರಕರಣ ೨೦(ಐ)ರ ರೀತ್ಯಾ **ಡಾ: ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ**

**ಕಲೆಗಳ ವಿಶ್ವವಿದ್ಯಾಲಯ ಪ್ರಶಾಸನ ಸಭೆಗೆ** ವಿಧಾನ ಪರಿಷತ್ತಿನ ಒಬ್ಬರು ಶಾಸಕರನ್ನು ಹಾಗೂ ಅಂಗವಿಕಲರ ವ್ಯಕ್ತಿಗಳ ಅಧಿನಿಯಮ 1995ರ ಪ್ರಕರಣ 13(2)(ಜಿ)ರ ರೀತ್ಯಾ ಕರ್ನಾಟಕ ರಾಜ್ಯ ಅಂಗವಿಕಲರ ಸಮನ್ವಯ ಸಮಿತಿಗೆ ವಿಧಾನ ಪರಿಷತ್ತಿನ ಒಬ್ಬರು ಶಾಸಕರನ್ನು ಚುನಾಯಿಸಬೇಕೆಂಬ ಪ್ರಸ್ತಾವವನ್ನು ಮಂಡಿಸುತ್ತೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**5. ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ ಹಾಗೂ ಅಂಗೀಕಾರ**

## ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ, 2022

**(2021ರ ವಿಧಾನಸಭೆಯ ವಿಧೇಯಕ ಸಂಖ್ಯೆ-50)**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ನೇ ಸಾಲಿನ "ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ" (2021ರ ವಿಧಾನಸಭೆಯ ವಿಧೇಯಕ ಸಂಖ್ಯೆ-50) ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಇದೊಂದು ಬಹಳ ಮಹತ್ವದ ಕಾಯಿದೆಯನ್ನು ಸರ್ಕಾರ ತಂದಿದ್ದು, ಇದರ ಪರಿಸ್ಥಿತಿಯ ಅರಿವು ನಮಗೆಲ್ಲರಿಗೂ ಇದೆ. ಆಗಾಗ ಬಂದ ಎಲ್ಲಾ ಸರ್ಕಾರಗಳು ಇದರ ಬಗ್ಗೆ ಚಿಂತನೆ ಮಾಡಿದ್ದು, 2013ರಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಇದರ ಬಗ್ಗೆ ಚಿಂತನೆ ನಡೆದಿದೆ. ಕಾರಣವೆಂದರೆ ಸಂವಿಧಾನದ 25ನೇ ವಿಧಿ ಪ್ರಕಾರ ಅವರವರ ಧರ್ಮದಲ್ಲಿ ಬದುಕುವ ಎಲ್ಲಾ ಸ್ವಾತಂತ್ರ್ಯ ಇದ್ದು, ಅದೇರೀತಿ ಅವರವರ ಧರ್ಮ ಪ್ರಚಾರದ

ಹಕ್ಕನ್ನು ಕೊಟ್ಟಿದೆ. ಎಲ್ಲರೂ ಶಾಂತಿ-ಸುವ್ಯವಸ್ಥೆಯಿಂದ ಬದುಕುವ ಪರಿಸ್ಥಿತಿಯಲ್ಲಿದ್ದೇವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರ ಮಾಡುವ ಪ್ರಕ್ರಿಯೆ ವ್ಯಾಪಕವಾಗಿ ನಡೆಯುತ್ತಿದೆ. ಸಾಮೂಹಿಕ ಮತಾಂತರ, ಆಮಿಷದ ಮತಾಂತರ, ಬಲವಂತದ ಮತಾಂತರಗೆಳೆಲ್ಲವೂ ರಾಜ್ಯ ಮತ್ತು ದೇಶದಲ್ಲಿ ಆಗುತ್ತಿದೆ. ಇದರಿಂದ ಶಾಂತಿ, ನೆಮ್ಮದಿಗಳು ಹಾಳಾಗುತ್ತಿದ್ದು, ಒಂದು ಧರ್ಮದವರು ಇನ್ನೊಂದು ಧರ್ಮದವರ ಬಗ್ಗೆ ಅಪಾರ್ಥಗಳನ್ನು ಕಲ್ಪಿಸುವುದು, ಅನುಮಾನದಿಂದ ನೋಡುವ ವ್ಯವಸ್ಥೆ ಆಗಿದೆ. ಈ ಹಿನ್ನೆಲೆಯಲ್ಲಿ ಕಳೆದ ವಿಧಾನಸಭಾ ಅಧಿವೇಶನದಲ್ಲಿ ನಡೆದ ಘಟನೆಗಳನ್ನು ತಾವೆಲ್ಲರೂ ಗಮನಿಸಿದ್ದೀರಿ ಮತ್ತು media ಗಳಲ್ಲಿಯೂ ಬಂದಿದೆ. ವಿಧಾನಸಭೆಯ ಒಬ್ಬರು ಶಾಸಕರು " ನಮ್ಮ ತಾಯಿ ಮತಾಂತರ ಆಗಿದ್ದಾರೆ, ಮನೆಯಲ್ಲಿ ಕ್ಷೋಭೆ ನಿರ್ಮಾಣವಾಗಿದೆ" ಎಂದು ಹೇಳಿದರು. ಅನೇಕ ಊರು-ಊರುಗಳು ಒಡೆದುಹೋಗಿವೆ. ಇಂತಹ ಪರಿಸ್ಥಿತಿಯಲ್ಲಿ ಇಂತಹ ಈ ವಿಧೇಯಕವನ್ನು ತರುವ ಅವಶ್ಯಕತೆ ಇದೆ. ಈ ವಿಧೇಯಕ ಬಹಳ ಸರಳವಾಗಿದ್ದು, ಯಾರ ಧಾರ್ಮಿಕ ಸ್ವಾತಂತ್ರ್ಯವನ್ನು ಇದರಲ್ಲಿ ಕಸಿಯುವುದಿಲ್ಲ. ಈಗಾಗಲೇ ಮಾನ್ಯ ಸರ್ವೋಚ್ಛ ನ್ಯಾಯಾಲಯದ 'Rev. Stanislaus v/s State of Madhya Pradesh and Orissa' ಪ್ರಕರಣದಲ್ಲಿ 1977ರ ತೀರ್ಪಿನಲ್ಲಿ " ಅನುಚ್ಛೇದ 25 ರಡಿಯಲ್ಲಿ ಧರ್ಮ ಪ್ರಚಾರದ ಹಕ್ಕು ಆಮಿಷಗಳು, ಬಲಪ್ರಯೋಗ, ದುರ್ಮಾರ್ಗಗಳ ಮುಖೇನ ಒಬ್ಬ ವ್ಯಕ್ತಿಯನ್ನು ಮತ್ತೊಂದು ಧರ್ಮಕ್ಕೆ ಮತಾಂತರಗೊಳಿಸುವ ಹಕ್ಕನ್ನು ಹೊಂದಿಲ್ಲ" ಎಂಬುದಾಗಿ ಸಾರಿದೆ. ಅಂತೆಯೇ ಕರ್ನಾಟಕ ರಾಜ್ಯದ ಕಾನೂನು ಆಯೋಗವು 13ನೇ ವರದಿಯಲ್ಲಿ ಈ ಬಗ್ಗೆ ವಿಶೇಷವಾದ ಅಭಿಪ್ರಾಯವನ್ನು ಕೊಟ್ಟಿದೆ. ಮುಂದುವರೆದು ಕರ್ನಾಟಕ ಕಾನೂನು ಆಯೋಗ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕವನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗೆ ಮಂಡಿಸಿದೆ. ಹಾಗಾಗಿ ಈ ಮತಾಂತರ ಆಗುವುದಕ್ಕೆ ತೊಂದರೆಯಿಲ್ಲದೇ ಸ್ವಾತಂತ್ರ್ಯ ಇದೆ, ಒಬ್ಬ ವ್ಯಕ್ತಿ ತನ್ನಿಚ್ಛೆಯಂತೆ ಯಾವುದೇ ಧರ್ಮವನ್ನು ಸ್ವೀಕಾರ ಮಾಡಲು ಅವಕಾಶ ಇದೆ. ಆದರೆ ಆಮಿಷದಿಂದ, ಒತ್ತಡದಿಂದ ಅಥವಾ ಬಲವಂತದಿಂದ ಆಗಬಾರದು ಎನ್ನುವ ಕಾರಣಕ್ಕಾಗಿ ಈ ವಿಧೇಯಕವನ್ನು ಸದನದಲ್ಲಿ ಮಂಡಿಸಿದ್ದೇವೆ. ಮತಾಂತರವಾಗುವ ಮುಂಚೆ ಸ್ವಯಿಚ್ಛೆಯಿಂದ ಇಂತಹ ಧರ್ಮಕ್ಕೆ

ಮತಾಂತರವಾಗುತ್ತಿದ್ದೇನೆ ಎಂದು ಪ್ರಕಟ ಮಾಡಬೇಕು. ಮತಾಂತರ ಮಾಡುವವರು ಸಹ ಪ್ರಕಟ ಮಾಡಬೇಕು ಮತ್ತು ಇಂತಹ ವ್ಯಕ್ತಿಯನ್ನು ಇಂತಹ ಧರ್ಮಕ್ಕೆ ಮತಾಂತರ ಮಾಡುತ್ತಿದ್ದೇನೆ ಎಂದು ಸೂಚನೆ ಕೊಡಬೇಕು. ಹಾಗಾಗಿ ಜಿಲ್ಲಾಧಿಕಾರಿಗಳು ಇದನ್ನು ಪರಿಗಣಿಸಿ ಆಯಾ ಇಲಾಖೆಗೆ ಕಳುಹಿಸುತ್ತಾರೆ. ಮತಾಂತರ ಆದ ವ್ಯಕ್ತಿಯು ಆತನ ಮೂಲ ಜಾತಿಯಿಂದ ಬರುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಳೆದುಕೊಳ್ಳುತ್ತಾನೆ. ಮತಾಂತರ ಆದ ಧರ್ಮದ ಪ್ರಕಾರ ಸೌಲಭ್ಯಗಳನ್ನು ಪಡೆಯಬಹುದು.

(ಮುಂದು)

(842) 15.09.2022 1.00 ಹೆಚ್‌ವಿ:ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರಗ ಜ್ಞಾನೇಂದ್ರ(ಮುಂದು)**

ಸನ್ಮಾನ್ಯ ಸಭಾಪತಿಯವರೇ, ಅನೇಕ ಬಾರಿ ನಮ್ಮ ದಲಿತ ಬಂಧುಗಳನ್ನು ಮತಾಂತರಗೊಳಿಸಲಾಗುತ್ತಿದೆ. ಮತಾಂತರಗೊಂಡ ಅವರು ದಲಿತರಿಗೆ ದೊರೆಯುವಂತಹ ಸೌಲಭ್ಯಗಳನ್ನು ಪಡೆದುಕೊಂಡು, ಮತಾಂತರವಾಗಿದ್ದೇವೆಂದು ಹೇಳಿ ಬೇರೆ ಧರ್ಮದ ಹೆಸರಿನಲ್ಲಿ ಬದುಕುತ್ತಿದ್ದಾರೆ. ನಮ್ಮ ದಲಿತ ಬಂಧುಗಳ ಸೌಲಭ್ಯಗಳನ್ನು ಇಂತಹವರು ಕಸಿದುಕೊಳ್ಳಬಾರದೆನ್ನುವುದು ನಮ್ಮ ಸರ್ಕಾರದ ಇಚ್ಛೆಯಾಗಿದೆ. ಅವರಿಗೆ ದೊರೆಯಬೇಕಾಗಿರುವ ನ್ಯಾಯವಾದ ಸೌಲಭ್ಯಗಳು ಅವರಿಗೇ ದೊರೆಯಬೇಕಾಗಿದೆ. ಇಂತಹ ವ್ಯವಸ್ಥೆಯಿಂದ ಧಾರ್ಮಿಕ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿ ಈ ವಿಧೇಯಕವನ್ನು ತರುತ್ತಿದ್ದೇವೆ. ಒಬ್ಬ ವ್ಯಕ್ತಿ ತನ್ನ ಇಚ್ಛೆಯ ಪ್ರಕಾರ ಮತಾಂತರಗೊಳ್ಳುವುದಕ್ಕೆ ಯಾವುದೇ ಅಡ್ಡಿ ಆತಂಕಗಳು ಈ ವಿಧೇಯಕದಲ್ಲಿ ಇಲ್ಲ. ಸಾಮಾಜಿಕ ಆರೋಗ್ಯದ ದೃಷ್ಟಿಯಿಂದ ಈ ವಿಧೇಯಕ ಅತ್ಯಂತ ಅಗತ್ಯವಾಗಿದೆ. ಈಗಾಗಲೇ ಕೆಳಮನೆಯಲ್ಲಿ ಈ ವಿಧೇಯಕಕ್ಕೆ ಅನುಮೋದನೆ ದೊರೆತಿದೆ. ಈ ಮನೆಯಲ್ಲಿಯೂ ಸಹ ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಎಲ್ಲ ಮಾನ್ಯ ಸದಸ್ಯರುಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ನಮ್ಮ ಸಂವಿಧಾನದಲ್ಲಿಯೇ ..........

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ನಾನು ಇನ್ನೂ ತಮಗೆ ಮಾತನಾಡುವುದಕ್ಕೆ ಅನುಮತಿಯನ್ನೇ ಕೊಟ್ಟಿಲ್ಲ. ತಾವು ಆಗಲೇ ಮಾತನಾಡಲು ಚಾಲನೆ ಮಾಡಿದ್ದೀರಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತಿಲ್ಲ...

**ಸಭಾಪತಿಯವರು:-** ಪೀಠಿಕೆ ಹಾಕುತ್ತಿರುವಿರಾ?

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಚರ್ಚೆಯಾಗಬೇಕೆಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಸರಿ ಹಾಗಾದರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಈಗ ನಾನು ತಮ್ಮ ಅನುಮತಿಯನ್ನು ಪಡೆದುಕೊಂಡಿದ್ದೇನೆಯೇ?

**ಸಭಾಪತಿಯವರು:-** ಪೀಠಿಕೆಗೆ ಅನುಮತಿ ಇದೆ. ಚರ್ಚೆಗೆ ಅಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಧಾರ್ಮಿಕ ಹಕ್ಕಿನ ಸ್ವಾತಂತ್ರ್ಯ ಎನ್ನುವುದು it is already inbuilt in our constitution. Inbuilt ಇರುವುದರಿಂದ ಮಾನ್ಯ ಗೃಹ ಸಚಿವರು ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಅವುಗಳಿಗೆ ಕಾನೂನಿನ ಅಡಿಯಲ್ಲಿ ಈಗಾಗಲೇ ಶಿಕ್ಷೆ ಇದೆ. ಈಗ ಮತ್ತೊಂದು rigorous ಮಾಡಬೇಕು ಎನ್ನುವುದು ಸ್ವಾಗತಾರ್ಹವಾಗಿದೆ. ಅದು ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಆಗಬೇಕಾಗಿದೆ. ನಮ್ಮ ಸಂವಿಧಾನ ನೂರಾರು ಬಾರಿ ತಿದ್ದುಪಡಿಗಳಿಗೆ ಒಳಪಟ್ಟಿದೆ. ಸಂವಿಧಾನದ ಬಗ್ಗೆ ಇಡೀ ದೇಶದಲ್ಲಿಯೇ ಮೊಟ್ಟಮೊದಲನೆಯ ಬಾರಿಗೆ ನಮ್ಮ ವಿಧಾನ ಪರಿಷತ್ತಿನಲ್ಲಿ ಚರ್ಚೆ ನಡೆದಿತ್ತು. ಸಂವಿಧಾನದಲ್ಲಿ inbuilt ಇರುವಂತಹ ಅಂಶಗಳಿಗೆ ಸಮಾಜದ ಒಳಿತಿಗೋಸ್ಕರ, ಸರ್ವ ಜನಾಂಗದ ಅಭಿವೃದ್ಧಿಗೋಸ್ಕರ ಮತ್ತು ಸಾಮಾಜಿಕ ಕಳಕಳಿಯ ಹಿನ್ನೆಲೆಯಲ್ಲಿ ನೂರಾರು ಬಾರಿ ತಿದ್ದುಪಡಿ ಮಾಡಿದ್ದೇವೆ. ಈ ಹಿನ್ನೆಲೆಯಲ್ಲಿ ಇದರ ಬಗ್ಗೆ ಚರ್ಚೆಯಾಗಬೇಕೆನ್ನುವುದು ನನ್ನ ಮನವಿಯಾಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಕರ್ನಾಟಕ ಧಾರ್ಮಿಕ ಸಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ, 2022ನ್ನು ಮಂಡಿಸುತ್ತಾ, ಸಂವಿಧಾನದ ಅನುಚ್ಛೇದ 25ರ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಸಂವಿಧಾನದ ಅನುಚ್ಛೇದ 25ರಲ್ಲಿ "***Freedom of conscience and free profession, practice and propagation of religion.*** *(1) Subject to public order, morality, and health and to the other provisions of this Part, all persons are equally entitled to freedom of conscience and the right freely to profess, practise and propagate religion."* ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇದು ಸಂವಿಧಾನದಲ್ಲಿ ಇರುವಂತಹ basic structure ಯಾವುದೇ ಸಂದರ್ಭದಲ್ಲಿ ಸಂವಿಧಾನದ ಮೂಲಭೂತ ಆಶಯಗಳಿಗೆ ಯಾವುದೇ ರೀತಿಯ ತಿದ್ದುಪಡಿಗಳನ್ನು ತರುವುದಕ್ಕೆ ಆಗುವುದಿಲ್ಲ ಮತ್ತು ಅದನ್ನು ಮುಟ್ಟುವಂತೆಯೇ ಇಲ್ಲವೆಂದು 1973ನೇ ಇಸವಿಯಲ್ಲಿ ಕೇಶವಾನಂದ ಭಾರತಿ Vs ಕೇರಳ

ಸರ್ಕಾರದ ಪ್ರಕರಣದಲ್ಲಿ 9 ಜನ ನ್ಯಾಯಾಧೀಶರನ್ನೊಳಗೊಂಡ ಪೀಠವು ಸ್ಪಷ್ಟಪಡಿಸಿದೆ. ಈ ಸದನಕ್ಕೆ ಸಂವಿಧಾನದ ಅನುಚ್ಛೇದಗಳಿಗೆ ತಿದ್ದುಪಡಿಯನ್ನು ತರುವುದಕ್ಕೆ ಹಕ್ಕಿಲ್ಲ. ಆ ಕಾರ್ಯ ಪಾರ್ಲಿಮೆಂಟ್‌ನಲ್ಲಿ two-thirds majority ಯಿಂದ ಆಗಬೇಕಾಗಿದೆ. ಆದ್ದರಿಂದ ಸರ್ಕಾರ ಈ ವಿಧೇಯಕವನ್ನು ತಂದಿರುವುದೇ ಕಾನೂನು ಬಾಹಿರವಾಗಿದೆ ಮತ್ತು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ನಮ್ಮ ಸದನದಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವಂತಹ ವಿಚಾರದ ಮೇಲೆ ಚರ್ಚೆ ಆಗಬಾರದಾಗಿತ್ತು. ಆದರೂ ಸಹ ನಮ್ಮ ಸದನದಲ್ಲಿ ಈ ವಿಧೇಯಕವನ್ನು ಮಂಡನೆ ಮಾಡಲಾಗಿದೆ ಮತ್ತು ಕೆಳಮನೆಯಲ್ಲಿ ಆ ವಿಧೇಯಕಕ್ಕೆ ಅನುಮೋದನೆಯೂ ದೊರಕಿದೆ. ಆದ್ದರಿಂದ ಇಲ್ಲಿಯೂ ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. ಅವರಿಗೆ ಸಂಖ್ಯಾಬಲ ಇರುವುದರಿಂದ ಈ ವಿಧೇಯಕವನ್ನು ಪಾಸ್ ಮಾಡಿಕೊಳ್ಳುತ್ತಾರೆ. ಸುಪ್ರೀಂ ಕೋರ್ಟ್ ಇದನ್ನು ಒಪ್ಪಿಕೊಳ್ಳುತ್ತದೆಯೋ ಇಲ್ಲವೋ ಎನ್ನುವುದನ್ನು ನೋಡಬೇಕಾಗಿದೆ. ಕೆಲವೇ ವರ್ಷಗಳ ಹಿಂದೆ P. Muneeswari vs The Secretary to Tamil Nadu Government and Others. ಈ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್ ಮಧುರೆ ವಿಭಾಗೀಯ ಪೀಠವು, "ಕೇವಲ ಚರ್ಚ್‌ಗಳಿಗೆ ಹೋಗುವುದರಿಂದ ಶಿಲುಬೆಯನ್ನು ಕೊರಳಲ್ಲಿ ಧರಿಸುವುದರಿಂದ ಮತ್ತು ಫೋಟೋಗಳನ್ನು ಮನೆಗಳಲ್ಲಿ ತೂಗು ಹಾಕುವುದರಿಂದ ಒಬ್ಬ ವ್ಯಕ್ತಿ ಆ ಧರ್ಮಕ್ಕೆ ಮತಾಂತರಗೊಂಡಿದ್ದಾನೆಂದು ಭಾವಿಸಲಾಗದು" ಎನ್ನುವ ವಿಶೇಷ ತೀರ್ಪನ್ನು ನೀಡಿದೆ. ಇದರ ಜೊತೆಗೆ ಹಿರಿಯ ನ್ಯಾಯವಾದಿ ಹಾಗೂ ಪ್ರಖ್ಯಾತ ಸಂವಿಧಾನ ತಜ್ಞರೂ ಆಗಿರುವಂತಹ ಆರ್.ಸಿ.ಚೀಮಾ ಅವರು ಮತಾಂತರ ನಿಷೇಧ ಕಾಯಿದೆ ಬಗ್ಗೆ ಮಾತನಾಡುತ್ತಾ, "ಸಂಪೂರ್ಣ ಮತಾಂತರ ನಿಷೇಧ ಮಾಡುವುದಕ್ಕೆ ಸಾಧ್ಯವಿಲ್ಲ" ಎನ್ನುವ ಮಾತನ್ನು ಹೇಳಿದ್ದಾರೆ. ಇದು ಸಂವಿಧಾನದಲ್ಲಿಯೂ ಉಲ್ಲೇಖವಾಗಿದೆ. ಅದನ್ನು ಅವರು ಸಹ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಮುಂದುವರೆದು "..........ಒಂದು ವೇಳೆ ಮತಾಂತರವನ್ನು ನಿಷೇಧಿಸಬೇಕೆಂದು ಕಾನೂನು ತಂದರೆ, ಅದು ಕಾನೂನು ಉಲ್ಲಂಘನೆಯಾಗುತ್ತದೆ. ಸಂವಿಧಾನ ರಚನೆ ವೇಳೆ ಮತಾಂತರ ವಿಚಾರವನ್ನು ಕುರಿತು ಸಾಕಷ್ಟು ಅವಲೋಕಿಸಿ ಧಾರ್ಮಿಕ ಸ್ವಾತಂತ್ರ್ಯವನ್ನು ಮತ್ತು ಧರ್ಮವನ್ನು ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ನಮ್ಮ ಪೂರ್ವಜರು

ನೀಡಿದ್ದಾರೆ" ಎಂದು ಹೇಳಿದ್ದಾರೆ. ಇದರ ಜೊತೆಗೆ ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರು ಮತ್ತು ರಾಷ್ಟ್ರೀಯ ಕಾನೂನು ಆಯೋಗದ ಮಾಜಿ ಅಧ್ಯಕ್ಷರೂ ಆಗಿರುವಂತಹ ಜಸ್ಟೀಸ್ ಎ.ಪಿ.ಷಾ ಅವರು "ಮತಾಂತರ ನಿಷೇಧ ಕಾಯಿದೆ ಸಂವಿಧಾನದಲ್ಲಿ ನೀಡಿರುವ ಮೂಲಭೂತ ಹಕ್ಕುಗಳಾದ ಜೀವಿಸುವ ಹಕ್ಕು ಮತ್ತು ಧಾರ್ಮಿಕ ಸ್ವಾತಂತ್ರ್ಯ ಹಕ್ಕನ್ನೇ ಕಸಿದುಕೊಳ್ಳುವಂತಿದೆ. ಕೂಡಲೇ ಈ ಕಾಯಿದೆಯನ್ನು ರದ್ದುಗೊಳಿಸಬೇಕು" ಎಂದು ಒತ್ತಾಯಿಸಿದ್ದಾರೆ. ಸುಪ್ರೀಂ ಕೋರ್ಟಿನ ಮಾಜಿ ನ್ಯಾಯಾಧೀಶರಾದ Justice Madan Lokur ರವರು "ಈ ಕಾಯಿದೆಯು ಸಂವಿಧಾನವಾಗಿ ಕಾನೂನು ಆಗಬೇಕಾದರೆ ಒಂದು ದೊಡ್ಡ ಪವಾಡವೇ ನಡೆಯಬೇಕು. ಮೂಲತಃ ಇದು ಸಂವಿಧಾನದ ಹಕ್ಕನ್ನೇ ಪ್ರಶ್ನಿಸುವುದರಿಂದ ಇದರ ಸಾಂವಿಧಾನಿಕ ಸಿಂಧುತ್ವಕ್ಕೆ ಅವಕಾಶವೇ ಇಲ್ಲ" ಎನ್ನುವ ಮಾತನ್ನು ಹೇಳಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಗೂಳಿಹಟ್ಟಿ ಶೇಖರ್ ಅವರ ಉದಾಹರಣೆಯನ್ನು ಉಲ್ಲೇಖ ಮಾಡಿದ್ದಾರೆ. ಅದೇ ರೀತಿಯಲ್ಲಿ ಅವರ ತಾಯಿಯವರು ಏನು ಹೇಳಿದ್ದಾರೆ ಎನ್ನುವುದರ ಬಗ್ಗೆಯೂ ಅವರು ಉತ್ತರ ಹೇಳುವಂತಹ ಸಂದರ್ಭದಲ್ಲಿ ಹೇಳಿದರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಭಾವನೆಯಾಗಿದೆ. ಮಾನ್ಯ ಗೋವರ್ಕರ್‌ರವರು, ಮತಾಂತರದ ಮೂಲಕ ಅಲ್ಪ ಸಂಖ್ಯಾತರು ಬಹು ಸಂಖ್ಯಾತರಾಗುವ ಭಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ, ಡಾ॥ ಬಿ.ಆರ್.ಅಂಬೇಡ್ಕರ್‌ರವರು "ಮತಾಂತರದಿಂದ ದುರ್ಬಲ ವರ್ಗದವರು ಗೌರವದಿಂದ ಬದುಕಬಹುದು" ಎಂದು ಹೇಳಿದ್ದಾರೆ. ಈ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಮತಾಂತರ ಪ್ರಕ್ರಿಯೆ ನಡೆಯುತ್ತಿದೆ ಎನ್ನುವ ಆರೋಪಕ್ಕೆ ಸರ್ಕಾರದ ಜನಗಣತಿ ಉತ್ತರವನ್ನು ನೀಡುತ್ತದೆ. ಈ ದೇಶದ 2001ರ ಜನ ಗಣತಿಯ ಪ್ರಕಾರ ಕ್ರೈಸ್ತರ ಸಂಖ್ಯೆ ಶೇಕಡಾ 2.34 ಆಗಿತ್ತು ನಂತರ ಹತ್ತು ವರ್ಷಗಳ ನಂತರ ಅಂದರೆ, 2011ರಲ್ಲಿ ನಡೆದಂತಹ ಜನಗಣತಿಯಲ್ಲಿ ಕ್ರೈಸ್ತರ ಸಂಖ್ಯೆ ಶೇಕಡಾ 2.34ರಿಂದ ಶೇಕಡಾ 2.30ಕ್ಕೆ ಇಳಿದಿದೆ. ಇದು ನಾನು ನೀಡುತ್ತಿರುವ ಮಾಹಿತಿಯಲ್ಲ. ಕೇಂದ್ರ ಸರ್ಕಾರದ ಜನ ಗಣತಿಯಲ್ಲಿನ ಮಾಹಿತಿಯಾಗಿದೆ. ಇದು ದೇಶದಲ್ಲಿರುವ ಕ್ರೈಸ್ತರ ಸಂಖ್ಯೆ ಗಣನೀಯವಾಗಿ

ಇಳಿಕೆಯಾಗಿದೆ ಎನ್ನುವುದನ್ನು ಸೂಚಿಸುತ್ತದೆ. 2001ರ ರಾಜ್ಯದ ಜನ ಗಣತಿಯ ಪ್ರಕಾರ ರಾಜ್ಯದಲ್ಲಿರುವ ಕ್ರೈಸ್ತರ ಸಂಖ್ಯೆ ಶೇಕಡಾ 1.91 ಆಗಿತ್ತು. ಹತ್ತು ವರ್ಷಗಳ ನಂತರ ಅದರೆ, 2011ರಲ್ಲಿ ನಡೆದಂತಹ ಜನ ಗಣತಿಯ ಪ್ರಕಾರ ಅದು ಶೇಕಡಾ 1.87ಕ್ಕೆ ಇಳಿಕೆಯಾಗಿದೆ. ಅವರ ಆರೋಪದ ಪ್ರಕಾರ ಮತಾಂತರ ನಡೆಯುತ್ತಿದ್ದರೆ, ಕ್ರೈಸ್ತರ ಸಂಖ್ಯೆ ಹೆಚ್ಚಾಗಬೇಕಾಗಿತ್ತು ಅಥವಾ ಅಲ್ಪ ಸಂಖ್ಯಾತರಾಗಿರುವ ಮುಸ್ಲಿಂರ ಸಂಖ್ಯೆಯೂ ಹೆಚ್ಚಾಗಬೇಕಾಗಿತ್ತು. ಸಂವಿಧಾನಿಕವಾಗಿ ತಿದ್ದುಪಡಿಯನ್ನು ತರುವಂತಹ ಕೆಲಸ ಪಾರ್ಲಿಮೆಂಟಿನಲ್ಲಿ two-thirds majority ಯಲ್ಲಿ ಆಗಬೇಕಾಗಿರುತ್ತದೆ. ರಾಜ್ಯ ಸರ್ಕಾರದ ವಿಧಾನಸಭೆ ಮತ್ತು ವಿಧಾನ ಪರಿಷತ್ತಿಗೆ ಆ ಅಧಿಕಾರವಿಲ್ಲ. ಆದರೆ, ಈಗಾಗಲೇ 1967ನೇ ಇಸವಿಯಲ್ಲಿ ಒಡಿಸ್ಸಾದಲ್ಲಿಯೂ ಈ ಕಾನೂನನ್ನು ತಂದಿದ್ದರು. ಅದರ ನಂತರ ಹಲವಾರು ರಾಜ್ಯಗಳಲ್ಲಿ ಎಲ್ಲೆಲ್ಲಿ ಆದಿವಾಸಿಗಳಿದ್ದಾರೆ ಅಲ್ಲಿ 1967 ಮತ್ತು 1973ನೇ ಇಸವಿಯಲ್ಲಿ ಸುಮಾರು 9 ರಾಜ್ಯಗಳಲ್ಲಿ ಮತಾಂತರ ನಿಷೇಧ ಕಾಯಿದೆಯನ್ನು ಜಾರಿಗೆ ತಂದಿದ್ದಾರೆ. ಈ ಕಾಯಿದೆ ಜಾರಿಗೊಳಿಸಿದ ನಂತರ ಆ ರಾಜ್ಯಗಳಲ್ಲಿ ಏನಾಗಿದೆ ಎನ್ನುವುದನ್ನು ನೋಡಿದರೆ, ಜನಸಂಖ್ಯೆ ಹೆಚ್ಚಾಗುವುದು ಇರಲಿ, ಅವರ ಮೇಲೆ ಮಾರಣಾಂತಿಕ ಹಲ್ಲೆಗಳು ಹೆಚ್ಚಾಗುತ್ತಿವೆ. ಮತಾಂತರದ ಹೆಸರಿನಲ್ಲಿ ನರ್ಸ್ ಮತ್ತು ಫಾದರಿಗಳ ಮೇಲೆ ಹಲ್ಲೆ ನಡೆಸಲಾಗುತ್ತಿದೆ. ಚರ್ಚ್‌ಗಳನ್ನು ಒಡೆಯುತ್ತಿದ್ದಾರೆ. ಮಾನ್ಯ ಗೃಹ ಸಚಿವರು ಮಾತನಾಡುತ್ತಾ, "ದೇಶದಲ್ಲಿ ಹಣದ ಆಮಿಷ ಮತ್ತು ಇನ್ನಿತರೆ ಆಮಿಷಗಳನ್ನು ಕೊಟ್ಟು ಮತಾಂತರಗೊಳಿಸಲಾಗುತ್ತಿದೆ" ಎಂದು ಹೇಳುತ್ತಿದ್ದಾರೆ. ನಮ್ಮ ರಾಜ್ಯದ ಗೃಹ ಸಚಿವರು ಬಲವಂತದ ಮತಾಂತರದ ಬಗ್ಗೆ ಎಷ್ಟು ಪ್ರಕರಣಗಳನ್ನು ದಾಖಲು ಮಾಡಲಾಗಿದೆ ಎನ್ನುವುದರ ಬಗ್ಗೆ ಮಾಹಿತಿಯನ್ನು ನೀಡಬೇಕಾಗಿದೆ. ಮತಾಂತರ ಎನ್ನುವುದು ವ್ಯಕ್ತಿ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ತನ್ನ ಇಚ್ಛೆಯಿಂದ ಮತಾಂತರಗೊಳ್ಳುತ್ತಾನೆಯೇ ಹೊರತು, ಯಾರೂ ಸಹ by forcefully ಆಗುವುದಿಲ್ಲ.

(ಮುಂದು)

(843) 15.9.2022 1.10 ಪಿಕೆ:ವಿಕೆ

**ಶ್ರೀ ಬಿ.ಕೆ. ಹರಿಪ್ರಸಾದ್(ಮುಂದು):**

ಆದ್ದರಿಂದ ತಾವು ಸ್ಪಷ್ಟವಾಗಿ ಇದರ ಬಗ್ಗೆ ಹೇಳಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಬಲವಂತವಾಗಿ ಮತಾಂತರ ಮಾಡಿರುವ ಎಷ್ಟು ಕೇಸುಗಳನ್ನು ದಾಖಲೆ ಮಾಡಿದ್ದೀರಿ ಎಂಬುದನ್ನು ತಾವು ಹೇಳಬೇಕಾಗುತ್ತದೆ.

**ಶ್ರೀ ಆರಗ ಜ್ಞಾನೇಂದ್ರ:-** ಈಗ ಆ ರೀತಿಯ ಮತಾಂತರಗಳು ಆಗುತ್ತಿರುವುದರಿಂದ ಈ ವಿಧೇಯಕವನ್ನು ಮಂಡನೆ ಮಾಡಿದ್ದೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅಂತಹ ಸಂದರ್ಭ ಬಂದಾಗ ಆರ್ಟಿಕಲ್ 25 ರೆಫರ್ ಆಗುತ್ತದೆ. ಸಂವಿಧಾನದಲ್ಲಿ ಆರ್ಟಿಕಲ್ 25ರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. "…To profess, practise and propagate religion." ಅದನ್ನು ಯಾರೂ ತಡೆಯುವುದಕ್ಕೆ ಆಗುವುದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಆರ್ಟಿಕಲ್ 25ಕ್ಕೆ ಸಂಬಂಧಪಟ್ಟಂತೆ profess, practise and propagate religion ಎಂದೇನಿದೆ, ಅದಕ್ಕೆ ಈ ಕಾನೂನು ಅಡ್ಡಿ ಆಗುವುದಿಲ್ಲ. We are in tune with Article 25. ನಿಮ್ಮ ವಾದ ಅಲ್ಲೇ ಫೇಲ್ ಆಗುತ್ತದೆ. ನಾವು ಆರ್ಟಿಕಲ್ 25 ಉಲ್ಲಂಘನೆ ಮಾಡುವಂತಹ ಅಂಶಗಳು ಈ ಕಾನೂನಿನಲ್ಲಿ ಇಲ್ಲ. 1977ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪಿನಲ್ಲಿ ಏನು ಹೇಳುತ್ತದೆ ಎಂದರೆ, "*…. What is freedom for one, is freedom for the other, in equal measure, and there can therefore be no such thing as a fundamental right to convert any person to one's own religion."* ಹಾಗಾಗಿ, ನಿಮ್ಮ fundamental practice ಮಾಡುವುದಕ್ಕೆ ತಕರಾರು ಇಲ್ಲ. ಮತಾಂತರಕ್ಕೂ ಕೂಡ without any allurement, without any force ಕೂಡ ತಕರಾರು ಇಲ್ಲ. ಈ ಕಾನೂನಿನಲ್ಲಿ ಮತಾಂತರ ಮಾಡಲೇ ಬಾರದು ಎಂದು ಎಲ್ಲೂ ಹೇಳಿಲ್ಲ. ಅವರವರ ಧರ್ಮಗಳ ಹಕ್ಕುಗಳನ್ನು, ವಿಧಿ-ವಿಧಾನಗಳನ್ನು ರಕ್ಷಣೆ

ಮಾಡುವುದಷ್ಟೇ ನಮ್ಮ ಉದ್ದೇಶವಾಗಿದೆ. ಬಲವಂತವಾಗಿ allurement ಮಾಡಿ ಮತಾಂತರ ಮಾಡುವಂಥದ್ದೂ ಕೂಡ ಆರ್ಟಿಕಲ್ 25ರ ಉಲ್ಲಂಘನೆ ಆಗುತ್ತದೆ. That is how we are protecting the Article 25. But the people are going beyond that Article 25 and converting. ಅದನ್ನು ತಡೆಗಟ್ಟುವುದಕ್ಕೆ ಈ ವಿಧೇಯಕವನ್ನು ತಂದಿದ್ದೇವೆ. ಅಲ್ಲದೇ ಇಂಥದ್ದು ತಂದಿರುವುದು ಇದೇ ಮೊದಲನೇ ಸಲ ಅಲ್ಲ. ಹಿಂದೆ ಕೇಂದ್ರದಲ್ಲೂ ಪ್ರಯತ್ನವಾಗಿದೆ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಈಗಾಗಲೇ ಇದೆ. ಆ ರಾಜ್ಯಗಳಲ್ಲಿ ಇದ್ದಂಥ ಕಾನೂನು ಬೇಕಾದಷ್ಟು ಸಲ ಚಾಲೆಂಜ್ ಆಗಿದೆ. ಚಾಲೆಂಜ್ ಆದಮೇಲೂ ಆ ಕಾನೂನು ನಿಂತಿದೆ. So, the scrutiny of constitutional proprietary to this law has been done by the Hon'ble Courts itself.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಮುಖ್ಯಮಂತ್ರಿಗಳು ತಿದ್ದುಪಡಿ ಮಾಡುವುದಕ್ಕೆ ತಂದಿರುವ ಈ ವಿಧೇಯಕಕ್ಕೆ ನಮ್ಮ ವಿರೋಧ ಇದೆ. ನೀವು ತಕರಾರು ಮಾಡಿದರೆ ನಾವು ವಿರೋಧ ಮಾಡುತ್ತೇವೆ. ಅದರ ಬಗ್ಗೆ ಯೋಚನೆಯನ್ನೇ ಮಾಡಬೇಡಿ. ಆದರೆ ನಮಗೆ ಸ್ಪಷ್ಟವಾದ ಉತ್ತರ ಬೇಕು. ಬೇರೆ ಬೇರೆ ರಾಜ್ಯಗಳಲ್ಲಿ ಈ ಕಾನೂನು ಬಂದು, ಯಾವುದಕ್ಕೆ ಹೆಚ್ಚು ಶಕ್ತಿ ನೀಡಲಾಗಿದೆ ಎನ್ನುವುದನ್ನು ನೋಡಬೇಕಾಗುತ್ತದೆ. 2007ರಲ್ಲಿ ಒಡಿಸ್ಸಾದ ಕಂದಮಾಲ್‌ನಲ್ಲಿ ಏನಾಯಿತು? ವಿಹೆಚ್‌ಪಿ ಲೀಡರ್ ಆಗಿದ್ದ 85 ವರ್ಷದ ಸೀಮಾನಂದ ಎನ್ನುವವರು ಸತ್ತಾಗ, ಅದು ಕೊಲೆ ಎಂದು ಹೇಳಿ ಆಗ ಆದ ಗಲಾಟೆಯಲ್ಲಿ ಒಂದು ಲಕ್ಷ ಜನ ಕ್ರಿಶ್ಚಿಯನ್ಸ್ ಎಲ್ಲಿ ಹೋದರೆಂದು ಗೊತ್ತೇ ಆಗಿಲ್ಲ. 2008ರಲ್ಲಿ ನಾನು ಆ ಸ್ಥಳಕ್ಕೆ ಹೋಗಿದ್ದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಆ ರೀತಿ ಆಗಿರುವ ಧಾರ್ಮಿಕ ಯುದ್ಧಗಳನ್ನು ಗಮನಿಸಬೇಕಾದರೆ ತುಂಬಾ ಹಿಂದಕ್ಕೆ ಹೋಗಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ, ಕ್ರಿಸ್ತ ಶಕದ ಪೂರ್ವದಲ್ಲಿ ಮತ್ತು ನಂತರದಲ್ಲಿ ಧಾರ್ಮಿಕ ಯುದ್ಧಗಳು ನಮ್ಮ ದೇಶವೂ ಸೇರಿದಂತೆ ಬೇರೆ ಬೇರೆ ದೇಶಗಳಲ್ಲಿ ಯಾವರೀತಿ ಆಯಿತು; Cedar war 1, 2, 3. ಪ್ಯಾಲೆಸ್ತೀನ್, ಜೆರೂಸಲಂ

ಪ್ರದೇಶಗಳಲ್ಲಿ ಏನಾಯಿತು ಎನ್ನುವ ಇತಿಹಾಸಕ್ಕೆ ಹೋಗಬೇಕಾಗುತ್ತದೆ. Religion is a structure where people will leave in harmony and practices common practices ಎನ್ನುವುದು ಒಂದು ವಿಚಾರ. Man is not only a social animal, but he is also a political animal. Even though the intent of the religion is to practice that sometimes the people who practice try to become something else. Church was ruling at one time. Church was ruling in Rome and Greek and they were the rulers. Not the kings and others. ನಂತರ ಆ ವ್ಯವಸ್ಥೆ ಬದಲಾವಣೆಯಾಗಿ ಪ್ರಜಾಪ್ರಭುತ್ವ ಬಂತು. ಆ ಸಂದರ್ಭಗಳಲ್ಲಿ ಧಾರ್ಮಿಕ ಯುದ್ಧಗಳು ಬಹಳ ದೊಡ್ಡ ಪ್ರಮಾಣದಲ್ಲಿ ಆಗಿವೆ. ಹಿಂದೆ ಯಾವರೀತಿ ನರಮೇಧ ಆಯಿತು ಎನ್ನುವುದು ಇತಿಹಾಸದಲ್ಲಿ ದಾಖಲಾಗಿದೆ. ಇವತ್ತು ಹಾಗೆ ಆಗಬಾರದು; ಶಾಂತಿ ಸುವ್ಯವಸ್ಥೆ ಕಾಪಾಡಬೇಕು ಎನ್ನುವ ಕಾರಣಕ್ಕಾಗಿ ಈ ವಿಧೇಯಕವನ್ನು ತಂದಿದ್ದೇವೆ. ಮಾನ್ಯ ಸಭಾಪತಿಯವರೇ, ಮಾನ್ಯ ಲೋಹಿಯಾ ಅವರು ಒಂದು ಮಾತನ್ನು ಹೇಳಿದ್ದರು . . .

**ಶ್ರೀ ಬಿ.ಕೆ. ಹರಿಪ್ರಸಾದ್:-** ನೀವು ಅವರ ಮಾತುಗಳನ್ನು ಹೇಳಬೇಕಾದರೆ ಈಕಡೆ ಬಂದು ಮಾತನಾಡಬೇಕಾಗುತ್ತದೆ. ತಾವು ಆಕಡೆಯಿಂದ ಗೋಡ್ಸೆ ಮತ್ತು ಗೋಳ್ವಲ್ಕರ್ ಬಗ್ಗೆ ಮಾತನಾಡಿ ಕೇಳುತ್ತೇವೆ.

**ಶ್ರೀ ಬಸವರಾಜ ಬೊಮ್ಮಾಯಿ:-** ನೀವು ಲೋಹಿಯಾ ಅವರನ್ನು ಖರೀದಿ ಮಾಡಿದ್ದೀರಾ? ಮಾನ್ಯ ಲೋಹಿಯಾ ಅವರು ಹೇಳಿದ ಮಾತುಗಳನ್ನು ಹೇಳಿದರೆ ಈಕಡೆ ಇರುವವರು ಒಪ್ಪಿಕೊಳ್ಳುತ್ತಾರೆ; ಆಕಡೆ ಇರುವವರೂ ಒಪ್ಪಿಕೊಳ್ಳುತ್ತಾರೆ. Lohiya was such a person and was a great thinker. ಅವರು ಪಕ್ಷ ಆಧಾರಿತವಾಗಿ ಎಂದೂ ಮಾತನಾಡಲಿಲ್ಲ. ಸಮಾಜದಲ್ಲಿರುವಂತಹ ಅಂಕು-ಡೊಂಕುಗಳನ್ನು ನೇರವಾಗಿ ಹೇಳುತ್ತಿದ್ದರು. ಅದು ಯಾರ ಮೇಲೆ ಪರಿಣಾಮ ಬೀರುತ್ತದೆ ಅಥವಾ ಬೀರುವುದಿಲ್ಲ ಎನ್ನುವುದು ಮುಖ್ಯವಲ್ಲ. ನಾನು ಅವರ

ಮಾತುಗಳನ್ನು ಹೇಳಿದ ಮೇಲೆ, ಏಕೆ ಅದನ್ನು ಉಲ್ಲೇಖ ಮಾಡಿದೆ ಎನ್ನುವುದು ನಿಮಗೆ ಗೊತ್ತಾಗುತ್ತದೆ. ಮಾನ್ಯ ಲೋಹಿಯಾ ಅವರು ಸಂಸತ್ತಿನಲ್ಲಿ "Religion is a long-term politics; politics is a short-term religion." ಎಂದು ಹೇಳಿದ್ದರು. ಧರ್ಮಗಳನ್ನು ಅದರ ಪಾಡಿಗೆ ಬಿಟ್ಟುಬಿಡಬೇಕು. ಎಲ್ಲಾ ಧರ್ಮಗಳು ಶಾಂತಿ, ಸೌಹರ್ದತೆ, ಪ್ರೀತಿ, ವಿಶ್ವಾಸ, ಮಾನವೀಯತೆ, ದಯೆ ಇಂತಹ ಅಂಶಗಳನ್ನೇ ಬೋಧಿಸುತ್ತವೆ. ಆದರೆ ಇವತ್ತೇನಾಗುತ್ತಿದೆ? ಧರ್ಮದ ಹೆಸರಿನಲ್ಲಿ ಭಯೋತ್ಪಾದನೆ ಶುರು ಆಗಿದೆ. ಧರ್ಮದ ಹೆಸರಿನಲ್ಲಿ ಅಧರ್ಮ ನಡೆಯುತ್ತಿದೆ. ಧರ್ಮದ ಹೆಸರಿನಲ್ಲಿ ಇಡೀ ವಿಶ್ವದಲ್ಲಿ ಟೆರರಿಸಂ ನಡೆಯುತ್ತಿದೆ. ಟೆರರಿಸಂನಲ್ಲಿ ತೊಡಗಿಸಿಕೊಂಡರೆ ಸ್ವರ್ಗ ಸುಖ ಸಿಗುತ್ತದೆ ಎಂದು ನಮ್ಮ ಪ್ರವಾದಿಗಳು ಹೇಳಿದ್ದಾರೆ; ನಮ್ಮ ದೇವರು ಹೇಳಿದೆ ಎಂದು ಹೇಳುವುದನ್ನು ನಾವು ಕೇಳಿದ್ದೇವೆ. ಈ ಮಟ್ಟಕ್ಕೆ ವಿಷಯ ತಲುಪಿದಾಗ; ಬಲವಂತವಾಗಿ ಒಂದು ಧರ್ಮವನ್ನು ಸಮಾಜದ ಜನರಲ್ಲಿ inculcate ಮಾಡುವಂತಹ ಮತ್ತು ಅವರದೇ ಧರ್ಮದ ಜನರನ್ನು ತೀವ್ರತರವಾಗಿ ಬದಲಾವಣೆ ಮಾಡುತ್ತಿದ್ದಾರೆ; ಬ್ರೈನ್ ವಾಶ್ ಮಾಡುತ್ತಿದ್ದಾರೆ. ಇಷ್ಟೊಂದು ತೀವ್ರತೆಯಿಂದ ಮಾಡುತ್ತಿರುವುದರಿಂದ ಅವರು ಧರ್ಮದ ಹೆಸರಿನಲ್ಲಿ ಇವತ್ತು ಉಗ್ರವಾದಿಗಳಾಗುತ್ತಿದ್ದಾರೆ. ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರವಾಗುವುದು ಬೇರೆ. ಆದರೆ ಅದೇ ಧರ್ಮದಲ್ಲಿ ತೀವ್ರತರ ಬದಲಾವಣೆ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಸಮಾಜದಲ್ಲಿ ಇದರ ಒಟ್ಟು ಪರಿಣಾಮ ಏನಾಗುತ್ತದೆ? ಸಮಾಜದಲ್ಲಿ ಕ್ಷೋಭೆ ಉಂಟಾಗುತ್ತದೆ, ಅಪನಂಬಿಕೆ ಬರುತ್ತದೆ, ಸೌಹಾರ್ದಯುತ ವಾತಾವರಣ ಹೋಗಿಬಿಡುತ್ತದೆ. ಇಂಥದ್ದನ್ನು ತಡೆಗಟ್ಟಬೇಕಿದೆ; ನಿರ್ಬಂಧಿಸಬೇಕಿದೆ. ಕಾನೂನು ಪ್ರಕಾರ ಮತಾಂತರ ಮಾಡಲಿ ಎನ್ನುವ ಉದ್ದೇಶಕ್ಕೆ ಈ ವಿಧೇಯಕವನ್ನು ತಂದಿದ್ದೇವೆಯೇ ಹೊರತು, ಇನ್ನೊಬ್ಬರ ಹಕ್ಕನ್ನು ಕಸಿದುಕೊಳ್ಳುವಂಥದ್ದು ಅಥವಾ ಸಂವಿಧಾನದ ಆರ್ಟಿಕಲ್ 25 ಅನ್ನು ಉಲ್ಲಂಘನೆ ಮಾಡುವಂತಹ ಉದ್ದೇಶ ನಮಗಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಧರ್ಮದ ಬಗ್ಗೆ ಅಂದರೆ, religion ಬಗ್ಗೆ ಸಾಂದರ್ಭಿಕವಾಗಿ ಕೆಲವು ವಿಚಾರಗಳನ್ನು ಹೇಳಿದರು. There is vast difference between religion and spirituality. Bernard Shaw said

that "religion is nothing but to control power and wealth." Throughout the world it is happening. So, religion is got nothing to do with politics, but it has got mixed with that. When it has got mixed with that…. ಕೆಲವರು politicalise some religion, militarize some religion ಎಂದು ಹೇಳುತ್ತಾರೆ. ಆಗ ತಾಪತ್ರಯ ಆಗುತ್ತದೆ. When the hate comes out of this religion, things go out of control.

**Sri BASAVARAJ BOMMAI:-** Hate is within the man. Hate is not in the religion and hate is in the people who are helm of affairs of the religion. Hate is within us.

**Sri B.K. HARIPRASAD:-** So, you agree it and accept that.

**ಶ್ರೀ ಬಸವರಾಜ ಬೊಮ್ಮಾಯಿ:-** ಪ್ರೀತಿ ಹೇಗೋ ಅದೇರೀತಿ ದ್ವೇಷ ಎನ್ನುವುದೂ ಕೂಡ ಒಂದು ಗುಣವಾಗಿದೆ. ದ್ವೇಷವನ್ನು ಅವರವರ ನೇರಕ್ಕೆ ತಕ್ಕಂತೆ ಮಾಡುವುದಕ್ಕಾಗುತ್ತದೆಯೇ? ಮನುಷ್ಯರಲ್ಲಿ ದ್ವೇಷವೆಂಬುದು ಇಲ್ಲ ಎಂದು ಹೇಳುತ್ತೀರಾ? ಇಡೀ ಜಗತ್ತಿನಲ್ಲಿ; ನಮ್ಮ ಸುತ್ತಲೂ ಇಷ್ಟೊಂದು ನಡೆಯುತ್ತಿರುವಾಗ ದ್ವೇಷವೇ ಇಲ್ಲ ಎನ್ನುವುದಾದರೆ ನಿಮ್ಮಷ್ಟಕ್ಕೆ ನೀವು ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದೀರಿ ಎಂದು ಹೇಳಬೇಕಾಗುತ್ತದೆ.

ಮಾನ್ಯ ವಿರೋಧ ಪಕ್ಷದ ನಾಯಕರು ಆಧ್ಯಾತ್ಮಿಕದ ಬಗ್ಗೆ ಹೇಳಿದರು. Spirituality ಎನ್ನುವುದು religion ಬಿಟ್ಟು different dimension ತೆಗೆದುಕೊಳ್ಳುತ್ತದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. Spirituality goes with the philosophy. What philosophy you believe and how good it is, the goodness of that philosophy is

spirituality. So, it depends on the individual. There are three types of people.

(ಮುಂದು)

(844) 15-09-2022 1.20 ಡಿಎಸ್-ಬಿಎನ್ಎಸ್

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು):-**

One is reactionaries who live in the past, who react. Second type is revolutionaries who only respond, but they are group of people. ಇವತ್ತು revolutionaries, kingship ತೆಗೆದು democracy ತರುತ್ತಾರೆ. ಎಲ್ಲರೂ group of people ಒಂದೇ ಕಡೆ ಸೇರುತ್ತಾರೆ. But, the problem is, all the revolutions have failed because ಒಂದು ಸಲ ಆ ತರಹದ ವ್ಯವಸ್ಥೆ ಬದಲಾವಣೆಯಾದ ಮೇಲೆ ಅವರ thinking diverge ಆಗುತ್ತದೆ. How to handle the change? ಇವತ್ತು Russian, Chinese, French revolutions fail ಆಗಿದೆ. Because, group of people who have converged their energy for some act, that energy diversifies ಅವರ energy ಬೇರೆ ಬೇರೆ thinking ಆಗುತ್ತದೆ. ಆಗ revolution ನ ಉದ್ದೇಶ ಏನಿತ್ತು ಅದು ಪರಿಪೂರ್ಣವಾಗುವುದಿಲ್ಲ. The third one is the rebels. Reactionaries, revolutionaries and rebels are the three types of people. Rebels are all individuals. They are not group of people. Single minded pursuitness ಇರುತ್ತದೆ. ಏಕಾಗ್ರತೆಯಾಗಿ ಅವರು ತಮ್ಮ ವಿಚಾರಧಾರೆಗಳನ್ನು ಹೇಳುತ್ತಾರೆ. ಯಾವಾಗಲೂ ಕೂಡ ಅವರು ರಾಜಿ ಆಗುವುದಿಲ್ಲ. ಅವರು ತಮ್ಮ ಜೀವವನ್ನೇ ತ್ಯಾಗ ಮಾಡುತ್ತಾರೆ ಹೊರತಾಗಿ ರಾಜಿ ಆಗುವುದಿಲ್ಲ. ಹೀಗಾಗಿ ಇವತ್ತು ಜಗತ್ತಿನಲ್ಲಿ ಯಾರಾದರೂ ಕೂಡ ಸಾಧಕರು ತಮ್ಮ ಸಾವಿನ ನಂತರ ಬದುಕುತ್ತಿದ್ದರೆ ಅದು only rebels, ಬೇರೆ ಯಾರು ಇಲ್ಲ. ಇದನ್ನು ಅರ್ಥ ಮಾಡಿಕೊಳ್ಳಬೇಕು. ಇಷ್ಟು purity of thinking ಮನುಷ್ಯನಲ್ಲಿ ಇದೆ. ಆದರೆ ಆ purity ಗೆ

ಬೇರೆ ಬೇರೆ ಗುಣಗಳನ್ನು ನಾವು ಸೇರಿಸಿದಾಗ religion, politics ಕೂಡ mishandle ಆಗುತ್ತದೆ. So, it all depends on who is at the helm of affairs.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು hate and love ಬಗ್ಗೆ ಮಾತನಾಡಿದರು. Nobody can force somebody to love somebody. It is an inborn quality.

**Sri BASAVARAJ BOMMAI:-** Hon'ble Chairman, I never said that.

**Sri B.K. HARIPRASAD:-** Hon'ble Chairman, I am just coming to his point. I never interrupted him. Hate is motivated. It is not an inborn quality.

**ಶ್ರೀ ಬಸವರಾಜ ಬೊಮ್ಮಾಯಿ:-** I just don't agree it, ಕ್ಷಮಿಸಿ, ಇದನ್ನು ಹೇಳುತ್ತಿದ್ದೇನೆ, hate ಆಗಲಿ love ಆಗಲಿ ನಮ್ಮ ಮನದಾಳದಿಂದ ಬರುತ್ತದೆ. ಯಾರೋ ಏನೋ ಹೇಳುತ್ತಾರೆಂದು ನಾನು ಯಾರನ್ನೋ ದ್ವೇಷ ಮಾಡುವುದಕ್ಕಾಗುವುದಿಲ್ಲ. ಈ ಎರಡು ವಿಷಯಗಳ ಬಗ್ಗೆ ದೇವರು ಬ್ರೈನ್ ಕೊಟ್ಟಿದ್ದಾನೆ. ಅಕಸ್ಮಾತ್ hate is motivated ಎಂದು ಅವರಿಗೆ ಅನಿಸಿದರೆ that is his weakness.

**Sri B.K. HARIPRASAD:-** No, it is not a weakness. That is happening throughout the world not in this Country alone. Let me tell you that love is not motivated. It is an inborn quality. Hate is motivated one. It is manmade.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಮ್ಮ ನಮ್ಮ ಮನಸ್ಸಿನ ಭಾವನೆಗಳಿಗೆ ತಕ್ಕ ಹಾಗೆ ನಾವು ವಾದವನ್ನು ಮಾಡುತ್ತೇವೆ. I feel that love is also deep from the heart.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಯಾವಾಗಲೂ ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರು ಹೇಳುತ್ತಿರುತ್ತಾರೆ, “ಎಲ್ಲಿದೆ ನಂದನ, ಎಲ್ಲಿದೆ ಬಂಧನ, ಎಲ್ಲಾ ಇದೆ

ನಮ್ಮೊಳಗೆ, ಒಳಗಿನ ತಿಳಿಯನ್ನು ಕಲಕದಿದ್ದರೆ, ಅಮೃತ ಸವಿಯಿದೆ ನಾಲಿಗೆಗೆ. ಎಷ್ಟು ಕಷ್ಟವೋ ಹೊಂದಿಕೆ ಎಂಬುದು ನಾಲ್ಕು ದಿನದ ಈ ಬದುಕಿನಲ್ಲಿ" ಎನ್ನುವ ವಿಚಾರ ಇದೆಯಲ್ಲಾ, ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಹಾಗಾಗಿ ನಾನು ಹೇಳುವುದೇನೆಂದರೆ, love comes in all colors

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, from a colorful personality….. ಭಾರತದ ಸಂವಿಧಾನ ಯಾವುದೇ ಧರ್ಮದ ವಿರೋಧ ಅಲ್ಲ ಅಥವಾ ವೇದ, ಉಪನಿಷತ್ತು, ಮನುಸ್ಮೃತಿ, ಭಗವದ್ಗೀತೆ, ಬೈಬಲ್, ಕುರಾನ್, ಬುದ್ಧ, ಮಹಾವೀರ, ಬಸವ, ಗಾಂಧಿ, ಮುಂತಾದ ಯಾವುದೇ ವ್ಯಕ್ತಿ ಅಥವಾ ಗ್ರಂಥಗಳ ವಿರೋಧಿ ಅಲ್ಲ. ಭಾರತದ ಸಂವಿಧಾನ ಎಲ್ಲದ್ದರ ಮುಂದುವರೆದು ಬದಲಾವಣೆಯಾದ, ಸುಧಾರಣೆಯಾದ ನಾಗರಿಕ ಲಕ್ಷಣಗಳನ್ನು ಹೊಂದಿದ ಈ ನೆಲದ ಸಂಸ್ಕೃತಿ ಮತ್ತು ಮಾನವೀಯ ಮೌಲ್ಯಗಳನ್ನು ಹೊಂದಿದ ಒಂದು ನೀತಿಯ ನಿಯಮದ ಪುಸ್ತಕ. ಇದನ್ನು ನಾವು ಸರಿಪಡಿಸಿಕೊಂಡು ಹೋಗಬೇಕೇ ಹೊರತು, ಅವರು ಹೇಳಿದರು ಆ ತರಹ ಏನಾದರೂ ಮತಾಂತರ ಆಗಬೇಕಾಗಿದ್ದರೆ ಅವರು ಸ್ವಲ್ಪ international affairs ಕೂಡ ಹೇಳಿದ್ದಾರೆ. ಈ ರಾಷ್ಟ್ರದಲ್ಲಿ ಸುಮಾರು 700 ವರ್ಷ ಮೊಗಲರು ಆಳಿದರು. ಅವರ ದೃಷ್ಟಿಯಲ್ಲಿ ಒಬ್ಬ ಮೊಗಲ ರಾಜ ಕ್ರೂರಿಯಾದವನು, ನಮ್ಮ ದೃಷ್ಟಿಯಲ್ಲಿ ಅಲ್ಲ. ಅವರು 37 ವರ್ಷ ಈ ರಾಜ್ಯದಲ್ಲಿ ರಾಜ್ಯಭಾರ ಮಾಡಿದರು. ಔರಂಗಜೇಬ್ ಆತ ಅಷ್ಟು ಕ್ರೂರಿಯಾಗಿದ್ದರೆ ಎಲ್ಲರನ್ನು ಮತಾಂತರ ಮಾಡಬಹುದಿತ್ತು. 200 ವರ್ಷ ಬ್ರಿಟಿಷರು ಇದ್ದರು. ಅವರು ಸಹ ಎಲ್ಲರನ್ನು ಕ್ರಿಶ್ಚಿಯನ್ಸ್ ಮಾಡಬಹುದಾಗಿತ್ತು. ಆದರೆ, ಈ ನೆಲದ ಗುಣ ಇದೆಯಲ್ಲಾ, ಎಲ್ಲರೂ ಸೇರಿ ಬದುಕುವಂತಹ ಗುಣ. ಮಾನ್ಯ ಮುಖ್ಯಮಂತ್ರಿಗಳು ಚಿಕಾಗೋನಲ್ಲಿ ವಿವೇಕನಂದಾರವರ ಭಾಷಣ ಕೇಳಿರಬಹುದು, ಅವರು ಏನು ಭಾಷಣ ಮಾಡಿದ್ದಾರೆಂದರೆ, "I am proud of this Country because my Country gives protection to all the persecuted minorities. ಸ್ವಾಮಿ ವಿವೇಕನಂದಾರವರು ಇಡೀ ಪ್ರಪಂಚದಲ್ಲೇ ಬಹಳ ಜಗತ್ಪ್ರಸಿದ್ಧರಾದರು. ಅಂದರೆ, ಸ್ವಾಮಿ

ವಿವೇಕನಂದಾರವರಿಗೆ ಬುದ್ಧಿಯಿಲ್ಲ ಅಂದುಕೊಂಡಿದ್ದೀರಾ, ಈ ಪ್ರಪಂಚದವರೇ ಅವರನ್ನು ಒಪ್ಪಿಕೊಂಡಿದ್ದಾರೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ,......

**ಶ್ರೀ ಬಿ.ಕೆ.ಹರಿಪ್ರಸಾದ್:-** ದಯವಿಟ್ಟು ನೀವು ಕುಳಿತುಕೊಳ್ಳಿ. ನಾನು ಯೀಲ್ಡ್ ಆಗುವುದಿಲ್ಲ. ನಿಮಗೆ ಅವಕಾಶ ಸಿಕ್ಕಿದಾಗ ಮಾತನಾಡಿ.

ಮಾನ್ಯ ಸಭಾಪತಿಯವರೇ, ನಾನು ವಿಧೇಯಕದ ಬಗ್ಗೆ ಮಾತನಾಡುವಾಗ ಯೀಲ್ಡ್ ಆಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಧ್ಯ ಮಾತನಾಡುವುದು ಸರಿಯಲ್ಲ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರು he is capable to handle. ನೀವು ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದರಲ್ಲೂ ಸಹ ದಲಿತರು, ಆದಿವಾಸಿಗಳ ಹೆಸರನ್ನು ಏಕೋ ಅವರು ಹೇಳಲಿಲ್ಲ. ಮತಾಂತರ ಆಗಿ ಆ ಧರ್ಮದಲ್ಲೂ ಸಹ ಅನುಕೂಲಗಳನ್ನು ಪಡೆದುಕೊಳ್ಳುತ್ತಾರೆ. ಇಲ್ಲೂ ಸಹ ಸವಲತ್ತುಗಳನ್ನು ಪಡೆದುಕೊಳ್ಳುತ್ತಾರೆ ಎಂದು ಮಾನ್ಯ ಗೃಹ ಮಂತ್ರಿಗಳು ಹೇಳಿದರು. ಆದರೆ, ಅವರ ಮೇಲೆ ಮತಾಂತರ ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಸಾಧಿಸುವ ಸಾಧನವಾಗಿ ಮಾಡುತ್ತದೆ. ಏಕೆಂದರೆ, ಜಾತಿ ವ್ಯವಸ್ಥೆ ಬಿಗಿತ ಎಷ್ಟಿದೆ ಎಂದರೆ ಈ ಧರ್ಮದಲ್ಲಿ ಎಸ್‌ಸಿ/ಎಸ್‌ಟಿ ಜನಾಂಗದವರ ಮೇಲೆ ನಿರಂತರವಾಗಿ ದಬ್ಬಾಳಿಕೆಯನ್ನು ಮಾಡುತ್ತಿದ್ದಾರೆ. ಆಗ ಅವರು ಆ ಧರ್ಮವನ್ನು ಬಿಟ್ಟು ಹೋಗಲೇಬೇಕಾಗುತ್ತದೆ. ಅದಕ್ಕೆ ಉದಾಹರಣೆಗಳನ್ನು ನಾನು ಸಾಕಷ್ಟು ಕೊಡುತ್ತೇನೆ. ಅದರಲ್ಲೇನು ತಪ್ಪಿಲ್ಲ. ಈ ದ್ವೇಷ, ಅಪರಾಧಗಳು ಆರು ರೀತಿಯಲ್ಲಿವೆ. ಮುಕ್ತವಾಗಿ ಧರ್ಮವನ್ನು ಆಚರಿಸುವ ಇಂದು ಕರ್ನಾಟಕದಲ್ಲಿ

ಹಕ್ಕಿನ ಮೇಲೆ ಆಕ್ರಮಣ. ಸಾಂಕ್ರಾಮಿಕ ರೋಗದ ನಂತರ ಕರ್ನಾಟಕದಲ್ಲಿ ಬೆಲೆ ಏರಿಕೆಯ ಬದುಕಿನಲ್ಲಿ ನಾವೆಲ್ಲರೂ ಬದುಕುತ್ತಿದ್ದೇವೆ. ದ್ವೇಷ, ಅಪರಾಧಗಳು, ಘನತೆಯ ಮೇಲಿನ ದಾಳಿಗಾಗಿ ಜಾತಿವಾದಿಗಳ ನಿಂದನೆಗಳು, ಅಂದರೆ honour killings, ಅಂಚಿನಲ್ಲಿರುವ ಸಮುದಾಯಗಳ ದುರ್ಬಲರ ಮೇಲಿನ ದಾಳಿ. ದ್ವೇಷ, ಅಪರಾಧಗಳಲ್ಲಿ ಪೊಲೀಸ್ ಕೂಡ ಭಾಗಿಯಾಗಿ, ನಂತರ ಸಮುದಾಯಗಳನ್ನು ಮತ್ತಷ್ಟು ಅಂಚಿಗೆ ತಳ್ಳುವಂತಹ ಕೆಲಸಗಳಾಗುತ್ತಿವೆ. ಏಕೆಂದರೆ, ಕಾನೂನು ಉಳ್ಳವರದ್ದು. ಈ ದೇಶದಲ್ಲಿ ಸಂವಿಧಾನ, ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಕೂಡ ಸಂಪೂರ್ಣವಾಗಿ ಯಾರಿಗೂ ಕೂಡ ಸ್ವಾತಂತ್ರ್ಯ ಸಿಕ್ಕಿಲ್ಲ. ಮತಾಂತರ ಇದೇನೂ ಹೊಸದಲ್ಲ. 12ನೇ ಶತಮಾನದ ಬಸವಣ್ಣನವರು ಮತಾಂತರ ಇಲ್ಲದೆ ಲಿಂಗಾಯತ ಸಮುದಾಯ ಅಥವಾ ವೀರಶೈವ ಸಮುದಾಯ ಆಗಿದೆಯೇ? 12ನೇ ಶತಮಾನದಲ್ಲಿ ಬಹುತೇಕ ದುರ್ಬಲ ವರ್ಗದವರನ್ನು ಲಿಂಗಧಾರಣೆ ಮಾಡಿ ಎಲ್ಲಾ ಮನುಷ್ಯರನ್ನು ಸಮಾನವಾಗಿ ಕಾಣಬೇಕೆಂದು ಹೊಸ ಸಮಾಜವನ್ನು ಸೃಷ್ಟಿ ಮಾಡಿದ ಮಹಾನ್ ಬಸವಣ್ಣನವರು ಮಾಡಿರುವುದು ತಪ್ಪು ಎಂದು ಹೇಳುತ್ತಾರೆಯೇ? 12ನೇ ಶತಮಾನದಲ್ಲಿ ಅವರು ಆಸೆ, ಆಮಿಷಕ್ಕೆ ಒಳಗಾಗಿದ್ದಾರೆಯೇ? ಅವರು ಸಹ ಆ ಒಂದು ಸಮುದಾಯದ ಬಹಳ ಮುಂಚೂಣಿ ನಾಯಕರು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದನ್ನು ಅವರು ಹೇಳುತ್ತಿದ್ದಾರೆ. ನನಗೆ ಬಹಳ ಸಂತೋಷವಾಗಿದೆ. ನಾವು ಮತಾಂತರ ನಿಷೇಧವನ್ನು ಇಲ್ಲಿ ಮಾಡಿಲ್ಲ. ಇದನ್ನು ಅವರು ಮೊದಲು ತಿಳಿದುಕೊಳ್ಳಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾಡುವುದಕ್ಕಾಗುವುದಿಲ್ಲವೆಂದು ಸ್ಪಷ್ಟವಾಗಿ ಗೊತ್ತಿದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಮತಾಂತರ ನಿಷೇಧ ಇದರಲ್ಲಿ ಇಲ್ಲ. ಅವತ್ತು 12ನೇ ಶತಮಾನದಲ್ಲಿ ಯಾವುದೇ ಆಮಿಷ, ಒತ್ತಾಯ ಇರಲಿಲ್ಲ. ಮತಾಂತರವಾಗಿದೆ. ಅದು ನಮ್ಮ ಬಯಕೆ, ಅದು ನಮ್ಮ ಆಸೆ. ಇಲ್ಲಿ ಏನಾಗುತ್ತಿದೆ ಎಂದರೆ, ಆಸೆ, ಆಮಿಷ, ಇವತ್ತು ಬೇರೆ

ಬೇರೆ ಕಟ್ಟುಪಾಡುಗಳ ಬಗ್ಗೆ ಹೇಳಿದ್ದಾರೆ. ಯಾವ ಧರ್ಮದಲ್ಲಿ ಇಲ್ಲ? ಯಾವ ಧರ್ಮದಲ್ಲಿ ಯಾರು ಧರ್ಮವನ್ನು ನಡೆಸುತ್ತಾರೆ, ಯಾರಿಗೆ ಹಣವಿದೆ ಅವರು ಅಲ್ಲಿ ನಿಯಂತ್ರಣ ಮಾಡುವುದಕ್ಕೆ ಸದಾಕಾಲ ಮಾಡುತ್ತಾರೆ. ಕೇವಲ ಕಟ್ಟುಪಾಡು ಅಲ್ಲ, ಕಟ್ಟುಪಾಡು ಮೀರಿ day to day ಎಷ್ಟು ಹಿಂಸೆ ನಡೆಯುತ್ತಿದೆ. ಯಾವ ಧರ್ಮದಲ್ಲಿ ಇವತ್ತು ಹೆಣ್ಣುಮಕ್ಕಳಿಗೆ ಸಂಪೂರ್ಣವಾದ ಸ್ವಾತಂತ್ರ್ಯವಿದೆಯೇ? ಒಂದೊಂದು ಧರ್ಮದಲ್ಲಿ ಒಂದೊಂದು ರೀತಿಯಲ್ಲಿ ಒಂದೊಂದು ಕಾಲದಲ್ಲಿ ಕಟ್ಟುಪಾಡುಗಳಿತ್ತು. ಈಗ 21ನೇ ಶತಮಾನ ಬಂದ ಮೇಲೆ ಬಹಳಷ್ಟು ಸುಧಾರಣೆಯಾಗುತ್ತಿದೆ, ಉದಾರೀಕರಣವಾಗುತ್ತಿದೆ. ಬಸವಣ್ಣನವರು 12ನೇ ಶತಮಾನದಲ್ಲಿ ಏನು ಮಾಡಿದ್ದರೂ ಮುಂದೆ ಮತ್ತೆ ಕಟ್ಟುಪಾಡುಗಳಿಗೆ ಒಳಗಾಯಿತು. ಬಸವಣ್ಣನವರು ಬಹಳ ಪ್ರಸ್ತುತ ಎಂದು ನಾವೆಲ್ಲಾ ಮಾತನಾಡುತ್ತೇವೆ. ಬಸವಣ್ಣ ಪ್ರಸ್ತುತ ಎಂದರೆ ನಾವು ಯೋಚನೆ ಮಾಡಬೇಕು. ಅಸಮಾನತೆ, ಅನಿಷ್ಠ ಮತ್ತು ಮೂಢನಂಬಿಕೆ, ಇವುಗಳ ವಿರುದ್ಧ ಬಸವಣ್ಣನವರು ಹೋರಾಟ ಮಾಡಿದ್ದರೋ ಈಗ ಮತ್ತೆ ಬಂದಿದೆ. ಅದನ್ನು ಸುಧಾರಣೆ ಮಾಡಬೇಕು. ಇದು ನಿರಂತರವಾಗಿ ಸ್ವಚ್ಛ ಮಾಡುವಂತಹ ಕೆಲಸ.

(ಮುಂದು)

**(845) 1:30 15/09/2022 ಎಸ್‌ಪಿಆರ್/ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು)**

ಅವತ್ತಿನ ದಿನಗಳಲ್ಲಿ ಯಾವ ರೀತಿಯಾದ ಸ್ಥಿತಿ ಇತ್ತು, ಅಂತಹ ಸ್ಥಿತಿಗಳಲ್ಲಿ ಯಾವುದೇ ಬದಲಾವಣೆಗಳಾಗಿದ್ದರೆ ಅದರ ಬಗ್ಗೆ ನಾವು ಇವತ್ತಿನ ದಿನವೂ ಸಹ ತಡೆಹಿಡಿಯುತ್ತಿಲ್ಲ. ಇದಾಗಬೇಕು ಎನ್ನುವುದೇ ನಮ್ಮ ಆಸೆಯಾಗಿದೆ. ಹೀಗಾಗಿ ಬಸವಣ್ಣನವರ ವಿಚಾರ, ತತ್ವಗಳಿಗೆ ನಾವು ಎಂದೂ ಸಹ ವಿರೋಧಿಗಳಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಬಸವಣ್ಣನವರ ವಿಚಾರ, ಸಿದ್ಧಾಂತಕ್ಕೆ ವಿರೋಧ ಎಂದು ನಾನು ಯಾವತ್ತಿಗೂ ಸಹ ಹೇಳಿಲ್ಲ. ಅದನ್ನು ಅವರು ಯಾವ ಕಾರಣಕ್ಕಾಗಿ ಆ ರೀತಿಯಾಗಿ ತಿಳಿದುಕೊಂಡರೋ ಎಂದು ನನಗೆ ಗೊತ್ತಾಗಲಿಲ್ಲ. ಮತಾಂತರ ಎನ್ನುವುದು ಈ ದೇಶದಲ್ಲಿ ಹೊಸದೇನೂ ಅಲ್ಲ; ಮೊದಲಿನಿಂದಲೂ ಸಹ ಇದೆ. ಇದು ಮುಂದೆಯೂ ಸಹ ನಡೆಯುತ್ತದೆ. ಮುಖ್ಯಮಂತ್ರಿಗಳು ಹೇಳಿದಂತೆ, ಸಮಾಜದಲ್ಲಿ ಇವುಗಳೆಲ್ಲವೂ ಇವೆ. ಎಲ್ಲಾ ಧರ್ಮದಲ್ಲಿ ದಬ್ಬಾಳಿಕೆ, ದೌರ್ಜನ್ಯಗಳು ನಡೆಯುತ್ತಿವೆ. So, he is endorsing atrocities on people belonging to scheduled caste and scheduled tribe.

**Sri BASAVARAJ BOMMAI:-** Hon'ble Chairman, I am not endorsing it. Whether he believes or denies, there are restrictions on poorer class of all sections. Then, that comes under that. ಯಾವಾಗಲೂ ಸಹ ಉಳ್ಳವರು ಇಲ್ಲದವರ ಮೇಲೆ ನಿಯಂತ್ರಣ ಮಾಡಲು ಸಾಧ್ಯವಿಲ್ಲದೇ ಇರುವಾಗ ಬೇರೆ ಬೇರೆ ರೀತಿಯ ಒತ್ತಡಗಳನ್ನು ಹಾಕುತ್ತಾರೆ. ಆಗ ಅನ್ಯಾಯ, ದೌರ್ಜನ್ಯಗಳಾಗಬಹುದು. Ultimately, end result of it ….. I am not denying it. ಈ ಕಾರಣಕ್ಕಾಗಿ ಕಾನೂನು ಮಾಡಿದ್ದೇವೆ. ಹೀಗಾಗಿ ನಾನು ಹೇಳುವುದನ್ನು ಬೇರೆ ರೀತಿಯಲ್ಲಿ ವಿಸ್ತರಣೆ ಮಾಡುವುದಕ್ಕೆ ವಿರೋಧ ಪಕ್ಷದ ನಾಯಕರು ಹೋಗಬಾರದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಆದ್ದರಿಂದ ಪೂರ್ತಿಯಾಗಿ ನನಗೆ ಮಾತನಾಡಲು ಬಿಟ್ಟು, ನಂತರದಲ್ಲಿ ಅವರು ಹೇಳಿದರೆ ಚೆನ್ನಾಗಿರುತ್ತದೆ. ಏಕೆಂದರೆ ಮಧ್ಯದಲ್ಲಿ ನಾನು ಅಡ್ಡಿಪಡಿಸುವುದು, ನೀವು ಅಡ್ಡಿಪಡಿಸುವುದು ಸರಿ ಇರುವುದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಕೇವಲ ವಿಷಯದ ಬಗ್ಗೆ ಮಾತನಾಡಿದರೆ, ನಾನು ಅವರನ್ನು ಅಡ್ಡಿಪಡಿಸುವುದಿಲ್ಲ. ವಿಷಯವನ್ನು ಹೊರತುಪಡಿಸಿ ಮಾತನಾಡಿದರೆ ಮಾತ್ರವೇ ನಾನು ಅವರಿಗೆ ಹೇಳಬೇಕಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ವಿಷಯಕ್ಕೆ ಬರುತ್ತಿದ್ದೇನೆ.

**ಸಭಾಪತಿಯವರು:-** ವಿರೋಧ ಪಕ್ಷದ ನಾಯಕರೇ ನೀವು ಈಗ್ಗೆ ಅರ್ಧ ಗಂಟೆಯಿಂದ ಮಾತನಾಡುತ್ತಿದ್ದೀರಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರವಾಗಿದೆ. ತಾವು ಮಾತನಾಡಬೇಡಿ ಎಂದು ಹೇಳಿದರೆ, ನಾನು ಹೀಗೆಯೇ ಹೊರಟುಬಿಡುತ್ತೇನೆ.

**ಸಭಾಪತಿಯವರು:-** ನಾನು ಆ ರೀತಿಯಾಗಿ ಏನನ್ನೂ ಹೇಳಿಲ್ಲ. ನಾನು ಕೇವಲ ನಿಮಗೆ ನೆನಪನ್ನು ಮಾಡುತ್ತಿದ್ದೇನೆ ಅಷ್ಟೇ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಸೂದೆಯೊಂದನ್ನು ತಿದ್ದುಪಡಿ ಮಾಡಿ...

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಚರ್ಚೆಯ ಅವಶ್ಯಕತೆ ಇದೆ. ಹೀಗಾಗಿ ಅವರು ಚರ್ಚಿಸಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ದಯಮಾಡಿ ನಮಗೆ ಪೂರ್ಣ ಪ್ರಮಾಣದ ಅವಕಾಶಗಳನ್ನು ನೀಡಿ. ಈ ವಿಷಯದ ಬಗ್ಗೆ ಎಲ್ಲಾ ಸದಸ್ಯರುಗಳು ಮಾತನಾಡುತ್ತಾರೆ ಅಂತೆಯೇ ನಾನೂ ಸಹ ಮಾತನಾಡುತ್ತೇನೆ. ನಾನು ಮಾತನಾಡಿದ್ದರಲ್ಲಿ ಎಲ್ಲಿಯಾದರೂ ಅಸಂಸದೀಯ ಪದಗಳಿದ್ದರೆ, ಅವುಗಳನ್ನು ಕಡತದಿಂದ ತೆಗೆಯಿರಿ.

**ಸಭಾಪತಿಯವರು:-** ಎಲ್ಲರಿಗೂ ಅವಕಾಶ ಸಿಗಬೇಕು ಎನ್ನುವ ದೃಷ್ಟಿಯಿಂದ ಮಾತ್ರವೇ ನಾನು ಹೇಳುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಬೇರೆ ಇನ್ಯಾವುದೇ ವಿಚಾರಗಳನ್ನು ತಾವು ತರುವುದು ಬೇಡ. ನಿನ್ನೆಯ ದಿನ ಯಾವುದೋ ಒಂದು ಸಂದರ್ಭದಲ್ಲಿ ತಾವು ನಾನು ಮಾತನಾಡುವುದು ಪ್ರಚಾರಕ್ಕಾಗಿ ಎಂಬುದಾಗಿ ಹೇಳಿದಿರಿ. ನನಗೆ ಅದರ ಅವಶ್ಯಕತೆ ಇಲ್ಲ. ನಾನು ಎಲ್ಲಾ ರಾಜ್ಯಗಳ ಪತ್ರಿಕೆಗಳ ಮೊದಲ ಪುಟದಲ್ಲಿ ಬಂದಿರುವುದನ್ನು ಕಳೆದ 25 ವರ್ಷಗಳಿಂದ ನೋಡಿದ್ದೇನೆ. ನಾನು ಸಂಸತ್ತಿನಲ್ಲಿ ಮಾಡಿರುವ ಭಾಷಣದ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ಮಹಾರಾಷ್ಟ್ರ ಮೀಸಲಾತಿಯ ವಿಚಾರದಲ್ಲಿ ಉಲ್ಲೇಖಿಸಿದ್ದಾರೆ. ಆದ್ದರಿಂದ ನನಗೆ ಆ ರೀತಿಯ ಚಟವಿಲ್ಲ. Constitutional validity ವಿಚಾರ ಬಂದಾಗ ನಾನು ಮಾತನಾಡಬೇಕಾಗುತ್ತದೆ. ಇವತ್ತಿನ ದಿವಸ ನನಗೆ ಏನಾದರೂ ಮಾತನಾಡಲು ಅವಕಾಶ ದೊರೆತಿದೆ ಎಂದರೆ, ಸಂವಿಧಾನದಿಂದಲೇ ನನಗೆ ಅವಕಾಶ ದೊರೆತಿದೆ ವಿನಃ ಯಾವುದೇ ಧರ್ಮ, ಜಾತಿಗಳಿಂದಲ್ಲ. ಸಂವಿಧಾನದ ಬಗ್ಗೆ ಏನಾದರೂ ವಿಚಾರಗಳು ಪ್ರಸ್ತಾಪವಾದಾಗ, ನಾನು ಮಾತನಾಡಬೇಕಾಗುತ್ತದೆ. ಹೀಗಾಗಿ ತಾವು ದಯಮಾಡಿ ನನಗೆ ಅವಕಾಶವನ್ನು ನೀಡಬೇಕು. ಮಧ್ಯದಲ್ಲಿ ಸಮಯದ ಬಗ್ಗೆ ತಾವು ದಯಮಾಡಿ ಹೇಳಬೇಡಿ. ಇದು ಸಮಯದ ವಿಚಾರವಲ್ಲ.

**ಸಭಾಪತಿಯವರು:-** ನಾನು ನಿಮಗೆ ಕೇವಲ ನೆನಪನ್ನು ಮಾತ್ರವೇ ಮಾಡುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇನ್ನು ದಲಿತರ ವಿಚಾರದ ಬಗ್ಗೆ ಹೇಳುವುದಾದರೆ, ಉಳ್ಳವರು ದಬ್ಬಾಳಿಕೆ, ದೌರ್ಜನ್ಯಗಳನ್ನು ಮಾಡುತ್ತಾರೆ ; ನಿಜ. ಎಲ್ಲಾ ವರ್ಗದವರು ಬಡವರ ಮೇಲೆ ದಬ್ಬಾಳಿಕೆಯನ್ನು ಮಾಡುತ್ತಾರೆ. ಇದು ನಡೆಯುತ್ತಲೇ ಇರುತ್ತದೆ. ಆದರೆ, ದಲಿತರ ಮೇಲೆ ನಡೆಯುವ ದಬ್ಬಾಳಿಕೆಯೇ ಬೇರೆ. ದಲಿತ ಮೀಸೆಯನ್ನು ಬಿಡುವಂತಿಲ್ಲ ; ಆತನು ವಾಚ್‌ನ್ನು ಧರಿಸಿದರೆ, ಅವನ ಕೈಯನ್ನು ಕಡಿಯುತ್ತಾರೆ. ಆತನು ಕುದುರೆಯ ಮೇಲೆ ಕುಳಿತುಕೊಂಡರೆ, ಆತನು ಸತ್ತು ಹೋಗುತ್ತಾನೆ; ಆತನ ಕೊಲೆ ಮಾಡುತ್ತಾರೆ. ಈತನಿಗೆ ದೇವಸ್ಥಾನದೊಳಗೆ ಪ್ರವೇಶವಿರುವುದಿಲ್ಲ; ಪಂಕ್ತಿ ಭೋಜನದಲ್ಲಿ ಕೂಡಿಸಿಕೊಳ್ಳುವುದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಇದರ ವಿರುದ್ಧವೇ ನಮ್ಮ ಹೋರಾಟವಿರುವುದು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಬಸವಣ್ಣನವರ ಹೋರಾಟ; ಬಸವರಾಜ ಬೊಮ್ಮಾಯಿರವರ ಹೋರಾಟವಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಇದು ಹರಿಪ್ರಸಾದ್‌ರವರ ಹೋರಾಟವಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, definitely. ನಾನೊಬ್ಬ ಇದರಲ್ಲಿ ಪಾಲುದಾರನಷ್ಟೇ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಇದು ಹರಿಪ್ರಸಾದ್‌ರವರ ಹೋರಾಟವಲ್ಲ ; ಅಂಬೇಡ್ಕರ್‌ರವರ ಹೋರಾಟ. ಯಾವ ಅಂಬೇಡ್ಕರ್‌ರವರನ್ನು ಅವರು ಸಂಸತ್ತಿನೊಳಗೆ ಬರಲು ಬಿಡಲಿಲ್ಲವೋ ಇದು ಅವರ ಹೋರಾಟ ; ಹರಿಪ್ರಸಾದ್‌ರವರ ಹೋರಾಟವಲ್ಲ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜನ್ನು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ...

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಯಾವ ಅಂಬೇಡ್ಕರ್‌ನನ್ನು ಸಂಸತ್ತಿಗೆ ಬರಲಿಲ್ಲ ಎಂದು ಅವರು ಹೇಳುತ್ತಿದ್ದಾರೋ, ರಾಜ್ಯದ ಮುಖ್ಯಮಂತ್ರಿಗಳು ಈ ಮಾತನ್ನು ಹೇಳುತ್ತಾರೆಂದು ನಾನು ಎಣಿಸಿರಲಿಲ್ಲ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಸಭಾಪತಿಯವರೇ,...

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಮುಖ್ಯಮಂತ್ರಿಗಳಿಗೆ ಈ ಮಾತನ್ನು ಹೇಳುತ್ತಿದ್ದೇನೆ ; ಅವರು ಸಮರ್ಥರಿದ್ದಾರೆ. ನಾನು ಸದಸ್ಯರಿಗೆ ಉತ್ತರಿಸುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ, ಅಂಬೇಡ್ಕರ್‌ರವರು ಪಂಡಿತ್ ಜವಾಹರ್ ಲಾಲ್ ನೆಹರೂ ರವರ ನೇತೃತ್ವದ ಮಂತ್ರಿ ಮಂಡಲದಲ್ಲಿದ್ದವರು. ಅವರೊಂದಿಗೆ ಶ್ಯಾಮ್ ಪ್ರಸಾದ್ ಮುಖರ್ಜಿರವರೂ ಸಹ ಇದ್ದರು.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, yes, correct. ಒಂದು ನಿಮಿಷ. ಅಂಬೇಡ್ಕರ್‌ರವರು ಅನಿವಾರ್ಯವಾಗಿ ಅಂದಿನ ಮಂತ್ರಿಮಂಡಲದಲ್ಲಿದ್ದರು. ಪ್ರಾಯಶಃ

ಇವತ್ತಿನ ದಿವಸ ಅಂಬೇಡ್ಕರ್‌ರವರು ಪುನರಾಯ್ಕೆಯಾಗಿ ಬಂದರೆ..., ಅಂಬೇಡ್ಕರ್ ರವರು ಸಂವಿಧಾನ ರಚನೆ ಮಾಡುವ ಸಂದರ್ಭದಲ್ಲಿಯೇ, ಅವರ ವಿಚಾರಧಾರೆಗಳು ಎಲ್ಲರಿಗೂ ಸಹ ತಿಳಿದಿದ್ದವು. ಸಂವಿಧಾನದ ಕೆಲವು ಅಂಶಗಳು ನಮ್ಮ ಆಡಳಿತಕ್ಕೆ ತೊಂದರೆಯಾಗುತ್ತವೆ ಎಂದು ಹೇಳಿ, ಅಂಬೇಡ್ಕರ್‌ರವರು ಸಂಸತ್ತಿಗೆ ಬರಬಾರದು ಎಂದು ಪ್ರಯತ್ನ ಮಾಡಿದರು. ಆದರೂ ಸಹ ಅವರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಬೆಂಬಲವಿತ್ತು ಎಂದು ಹೇಳಿದರೆ, ಅವರು ಸಂಸತ್ತಿಗೆ ಬರುವುದು ಅನಿವಾರ್ಯವಾಗಿತ್ತು. ಏಕೆಂದರೆ, ಅವರು ಸಂವಿಧಾನ ರಚನೆ ಮಾಡಿದ್ದರು; ಹೀಗಾಗಿ ಅನಿವಾರ್ಯವಿತ್ತು. ಅವರು ಸಂಸತ್ತಿಗೆ ಬಂದದ್ದು ಪ್ರೀತಿ-ವಿಶ್ವಾಸಗಳಿಂದಲ್ಲ. ಆದರೆ, ವಿರೋಧ ಪಕ್ಷದವರು ಆ ರೀತಿಯಾಗಿ ಹೇಳಿಲ್ಲ. This is how it is.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, the idea of ...

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ...

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಗೃಹ ಸಚಿವರು ದಯಮಾಡಿ ಕುಳಿತುಕೊಳ್ಳಬೇಕು ಹಾಗೂ ಕಡೆಯಲ್ಲಿ ಭಾಷಣವನ್ನು ಮಾಡಲಿ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಅಂದಿನ ದಿನ ದೆಹಲಿಯಲ್ಲಿ ಅಂಬೇಡ್ಕರ್‌ರವರ ಹೆಣವನ್ನು ಹೂಳಲು ಹಾಗೂ ಒಂದು ಸ್ಮಾರಕವನ್ನು ನಿರ್ಮಿಸಲು ಜಾಗ ನೀಡಲಿಲ್ಲ. ಇಂತಹ ಪರಿಸ್ಥಿತಿ ಅಂಬೇಡ್ಕರ್‌ರವರದ್ದಾಗಿತ್ತು.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು "ಶೇಮ್, ಶೇಮ್"**
**ಎಂಬ ಘೋಷಣೆಗಳನ್ನು ಕೂಗಿದರು)**

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಅಂಬೇಡ್ಕರ್‌ರವರ ಹೆಣವನ್ನು ಬಾಂಬೆಗೆ ತೆಗೆದುಕೊಂಡು ಹೋದರು. ಇದು ಅಂದಿನ ಸ್ಥಿತಿಯಾಗಿತ್ತು. ವಿರೋಧ ಪಕ್ಷದ ನಾಯಕರು ಯಾವ ಅಂಬೇಡ್ಕರ್‌ರವರ ಬಗ್ಗೆ ಹೇಳುತ್ತಿದ್ದಾರೋ, ಗೊತ್ತಿಲ್ಲ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಅಂಬೇಡ್ಕರ್‌ರವರು ಮತಾಂತರ ಆಗಿದ್ದು ಯಾಕೆ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಶ್ರೀ ನಸೀರ್‌ರವರೇ ಒಂದು ನಿಮಿಷ ಇರಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರುಗಳು ಹೇಳುವುದು ನಿಜ. ಅವುಗಳನ್ನು ಒಪ್ಪಿಕೊಳ್ಳುತ್ತೇನೆ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಅಂಬೇಡ್ಕರ್‌ರವರಿಗೆ ಭಾರತ ರತ್ನ ಪ್ರಶಸ್ತಿಯನ್ನು ಯಾವ ಕಾರಣಕ್ಕಾಗಿ ವಿಳಂಬವಾಗಿ ನೀಡಿದರು?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಎಲ್ಲದಕ್ಕೂ ಉತ್ತರಿಸುತ್ತೇನೆ. ಆಡಳಿತ ಪಕ್ಷದವರಿಗೆ ಅಂಬೇಡ್ಕರ್‌ರವರ ಬಗ್ಗೆ ಮೊಸಳೆ ಕಣ್ಣೀರು ಬೇಡ. ಇವತ್ತಿಗೂ ಸಹ ಅಂಬೇಡ್ಕರ್ ರವರ ಮೊಮ್ಮಗನಾದ ಶ್ರೀ ಅರವಿಂದ ತೇಲ್ ತುಂಬ್ಡೆರವರನ್ನು ಕಳೆದ ಮೂರು ವರ್ಷಗಳಿಂದ ವಿನಾಕಾರಣ ಜೈಲಿನೊಳಗೆ ಇಟ್ಟಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಅವರನ್ನು ನಾವು ಏಕೆ ಜೈಲಿನಲ್ಲಿ ಇಡೋಣ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದವರು, ಶ್ರೀ ನರೇಂದ್ರ ಮೋದಿ ಮತ್ತು ಶ್ರೀ ಅಮಿತ್ ಷಾ ರವರುಗಳು ಇವರನ್ನು ಜೈಲಿನಲ್ಲಿ ಇಟ್ಟಿದ್ದಾರೆ. ಆದರೆ ಇವರು ಅಂಬೇಡ್ಕರ್ ರವರ ಬಗ್ಗೆ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಅಂಬೇಡ್ಕರ್ ರವರ ಬಗ್ಗೆ ವಿರೋಧ ಪಕ್ಷದ ನಾಯಕರು ಏನು ಮಾತನಾಡುತ್ತಾರೆ? ಅಂಬೇಡ್ಕರ್‌ರವರನ್ನು ಏಕೆ ಅವರ ಮೊಮ್ಮಗನಿಗೆ ಹೋಲಿಸುತ್ತಾರೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷ ... ಅಂಬೇಡ್ಕರ್‌ರವರ ಬಗ್ಗೆ ಉಲ್ಲೇಖ ...

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಅಂಬೇಡ್ಕರ್ ರವರಿಗೆ ಅನ್ಯಾಯ ಮಾಡಿ, ಅತ್ಯಂತ ಕಠಿಣವಾಗಿ ಅವರ ಕುಟುಂಬವನ್ನು ನಡೆಸಿಕೊಂಡು ಪುನಃ ಆ ಕುಟುಂಬದ ಸದಸ್ಯರನ್ನೇ ದಾರಿ ತಪ್ಪಿಸುತ್ತಿರುವವರು ಕಾಂಗ್ರೆಸ್ ಪಕ್ಷದವರು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾವು ಇದನ್ನೆಲ್ಲಾ ನಂಬುವುದಿಲ್ಲ. ಇದೆಲ್ಲಾ ನಾಗಪುರ ಯೂನಿವರ್ಸಿಟಿ .....

**(ಗೊಂದಲ)**

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಇಟಲಿ ಯೂನಿವರ್ಸಿಟಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇಂತಹ ಮಾತುಗಳು ರಾಜ್ಯದ ಮುಖ್ಯಮಂತ್ರಿಗಳ ಬಾಯಿಯಲ್ಲಿ ಬರಬಾರದು.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, it is the truth.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅಂಬೇಡ್ಕರ್‌ರವರಿಗೆ ಅವಮಾನ ಮಾಡಿದ ಪಾರ್ಟಿ ಕಾಂಗ್ರೆಸ್ ಪಾರ್ಟಿ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾಗಪುರ ಯೂನಿವರ್ಸಿಟಿಯನ್ನು ನಂಬಬಹುದು, ಆದರೆ, ಇಟಲಿ ಯೂನಿವರ್ಸಿಟಿಯನ್ನು ನಂಬುವುದಕ್ಕಾಗುವುದಿಲ್ಲ.

**(ಗೊಂದಲ)**

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವರು ಅಂಬೇಡ್ಕರ್ ರವರ ಬಗ್ಗೆ ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ....

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಶ್ರೀ ಯು.ಬಿ.ವೆಂಕಟೇಶ್ ರವರೇ ಒಂದು ನಿಮಿಷ.

**(ಗೊಂದಲ)**

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಎಲ್ಲರೂ ಮಾತನಾಡುತ್ತಿದ್ದಾರೆ. **(ಗೊಂದಲ)** ವಿರೋಧ ಪಕ್ಷದ ನಾಯಕರು ಮತ್ತು ಮುಖ್ಯಮಂತ್ರಿಗಳು ಮಾತನಾಡುತ್ತಿರುವಾಗ .... ಒಂದು ಸ್ತಬ್ಧ ಚಿತ್ರವನ್ನು ಅವರಿಗೆ ಹಾಕಲಿಕ್ಕೆ ಆಗಲಿಲ್ಲ. ... **(ಗೊಂದಲ)**

**(ಗೊಂದಲ)**

**ಸಭಾಪತಿಯವರು:-** ಶ್ರೀ ವೆಂಕಟೇಶ್‌ರವರೇ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತೇನೆ. ವಿರೋಧ ಪಕ್ಷದ ನಾಯಕರಿಗೆ ಬಹಳ ಅಗಾಧವಾದ ಅನುಭವವಿದೆ; ಸಂವಿಧಾನದ ಬಗ್ಗೆ ಬಹಳಷ್ಟನ್ನು ತಿಳಿದುಕೊಂಡಿದ್ದಾರೆ. ಅವರು ಮಾಡುವ ಭಾಷಣವನ್ನು ನಾವು ಪೂರ್ತಿಯಾಗಿ ಕೇಳುತ್ತೇವೆ ; ಇದರಲ್ಲಿ ಯಾವುದೇ ಪ್ರಶ್ನೆಯಿಲ್ಲ. ಅವರ ಹಾಗೂ ಅವರ ಅನುಭವದ ಬಗ್ಗೆ ಗೌರವವಿದೆ. ಅವರು ಆಡಳಿತ ಪಕ್ಷದ ಕಡೆಯಿಂದ ವಿಚಾರ ಧಾರೆ ಬಂದಾಗ "ನಾಗಪುರ ಯೂನಿವರ್ಸಿಟಿ" ಎಂಬುದಾಗಿ ಹೇಳುತ್ತಾರೆ. ನಿಜ ನಾಗಪುರ ಯೂನಿವರ್ಸಿಟಿಯು ಇದೆ. ಅದೇ ರೀತಿಯಾಗಿ ಬೇರೆ ಎಲ್ಲಾ ಯೂನಿವರ್ಸಿಟಿಗಳಿವೆ. ಆಡಳಿತ ಪಕ್ಷದ ಸದಸ್ಯರು ತಮ್ಮ ವಿಚಾರಧಾರೆಯನ್ನು ಯೂನಿವರ್ಸಿಟಿಯಿಂದ ಪಡೆದುಕೊಂಡವರಾಗಿದ್ದು, ಯೂನಿವರ್ಸಿಟಿ ಎಂದರೆ ಅಲ್ಲಿ ಹತ್ತಾರು ಫ್ಯಾಕಲ್ಟಿ ಮತ್ತು ಪ್ರೊಫೆಸರ್‌ರವರುಗಳಿರುತ್ತಾರೆ. ಇವರುಗಳೆಲ್ಲರೂ ವಿಚಾರ ಮಾಡಿ, ಥೀಸೀಸ್ ಬರೆದು ಎಲ್ಲವನ್ನೂ ತಿಳಿದುಕೊಂಡವರಾಗಿರುತ್ತಾರೆ. ಆದರೆ ವಿರೋಧ ಪಕ್ಷದ ಸದಸ್ಯರ ವಿಚಾರಧಾರೆ ಏನು? ನಮ್ಮ ಭಾಗದಲ್ಲಿ ಶಾಲೆಗಳಿಗೆ ಹೋಗುವ ಮುಂಚೆ "ಗುಡಿ ಶಾಲೆ" ಎಂಬುದಾಗಿ ಇರುತ್ತವೆ. ಆದರೆ, ಇವರುಗಳು ಯಾವುದೇ ಯೂನಿವರ್ಸಿಟಿ, ಶಾಲೆ, ಪ್ರಾಥಮಿಕ ಶಾಲೆ, ಪ್ರಾಥಮಿಕ ಪೂರ್ವ ಶಾಲೆ ಇಂತಹವುದು ಯಾವುದೂ ಸಹ ಇಲ್ಲ; ಇದು ಇವರ "ಅಧ್ಯಕ್ಷರ ಪಡಸಾಲೆಯಿಂದ" ಬಂದಿರುವ ವಿಚಾರಧಾರೆಯಾಗಿದೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜನ್ನು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಇದು ಮಹಾತ್ಮಾ ಗಾಂಧಿಯವರ ವಿಚಾರ ಧಾರೆಯಿಂದ ಬಂದಿರುವುದಾಗಿದೆ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ರಾಜ್ಯದ ಮುಖ್ಯಮಂತ್ರಿಗಳು ನಾಗಪುರ ಯೂನಿವರ್ಸಿಟಿಯಲ್ಲಿ ಅಡ್ಮಿಷನ್ ಆದ ಮೇಲೆ ....

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಸಂವಿಧಾನದ ವಿಚಾರಧಾರೆಯಡಿ ಇದು ತಯಾರಾಗಿ ಬಂದಿರುವುದು ... **(ಗೊಂದಲ)** ಇವುಗಳು ಅವರ ವಿಚಾರಧಾರೆಗಳಲ್ಲ.

**(ಗೊಂದಲ)**

**ಶ್ರೀ ಕೆ.ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ರಾಜ್ಯದ ಮುಖ್ಯಮಂತ್ರಿಗಳು ನಾಗಪುರ ಯೂನಿವರ್ಸಿಟಿಯಲ್ಲಿ ಅಡ್ಮಿಷನ್ ತೆಗೆದುಕೊಂಡ ಮೇಲೆ ಸ್ವಲ್ಪ ಡೈಲಾಗ್‌ಗಳು ಬದಲಾಗಿದೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಇಷ್ಟು ಮಾತನಾಡಿದ ಮೇಲೆ, ....

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ನನ್ನ ಮೂಲ ವಿಚಾರಗಳು ಹಾಗೂ ಯೋಚನೆಗಳು ಯಾವುದೂ ಸಹ ಬದಲಾಗುವುದಿಲ್ಲ ಹಾಗೂ ಆಗುವುದಕ್ಕೂ ಸಹ ಬಿಡುವುದಿಲ್ಲ. ಇದು ಏಕೆ ಎಂದು ನಾನು ಹೇಳುತ್ತೇನೆ, ಅವರುಗಳು ಕೇಳಲಿ. ನನಗೆ ಸ್ವಾತಂತ್ರ್ಯ ಹೋರಾಟ ಹಾಗೂ ಅದರ ಪೂರ್ವದಲ್ಲಿನ ವಿಚಾರಗಳು ಹಾಗೂ ಸ್ವಾತಂತ್ರ್ಯ ಬಂದ ನಂತರ ಮಹಾತ್ಮಾ ಗಾಂಧೀಯವರಿಂದ ಮುಂದೆ ಹೇಗೆ ಬದಲಾವಣೆಯಾಯಿತು?

846/15-09-2022/1-40/ಬಿಕೆಪಿ-ಕೆಎಸ್

**Sri BASAVARAJ BOMMAI (Contd.):-**

Congress has played an important role. ಆದರೆ, ಕಾಂಗ್ರೆಸ್…..

**(ಗೊಂದಲ)**

ನಾನು fact ನ್ನು ಹೇಳಲೇಬೇಕು. ನೀವುಗಳು ಅದನ್ನು ಸಹಿಸುವುದಿಲ್ಲವೆಂದರೆ ಹೇಗೆ? ಆದರೆ, ಅಂದಿನ ಕಾಂಗ್ರೆಸ್ ಹೇಗೆ ಬದಲಾವಣೆಯಾಯಿತು, ಅದರ ಪರಿಣಾಮ ನಮ್ಮ ದೇಶದ ಮೇಲೆ ಏನಾಯಿತು?

(ಈ ಹಂತದಲ್ಲಿ ಕರೆಂಟ್ ಹೋಗಿ ಬಂತು)

ಆ ಬದಲಾವಣೆ ಎಂದ ತಕ್ಷಣ ಕತ್ತಲೆ ಬಂತು ನೋಡಿ.

**ಶ್ರೀ ಯು.ಬಿ. ವೆಂಕಟೇಶ್:-** ಅದು ಆಗಿದ್ದು ತಪ್ಪು ಎಂದೇ ಇದು ಬಂದಿರುವುದಾಗಿದೆ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಈಗ ಮಹಾತ್ಮ ಗಾಂಧೀಜಿಯವರ ಹೆಸರನ್ನು ತೆಗೆದರು. ಮಹಾತ್ಮಾಗಾಂಧೀಜಿಯವರು ಇಡೀ ದೇಶಕ್ಕೆ ಮಹಾತ್ಮರು. ಮಹಾತ್ಮ ಗಾಂಧೀಜಿಯವರ ಸಂಬಂಧ ಯಾವತ್ತು ಕೂಡ ಕಾಂಗ್ರೆಸ್ ಅನ್ನು ವಿಸರ್ಜನೆ ಮಾಡಿ ಎಂದರೂ ನೀವು ಮಾಡಲಿಲ್ಲವೋ ಅಲ್ಲಿಯೇ ಮಹಾತ್ಮ ಗಾಂಧೀಜಿಯವರನ್ನು ಕೈಬಿಟ್ಟು ಮುಂದೆ ಬಂದಿದ್ದೀರಿ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸರ್ಕಾರದವರು ಈ ರೀತಿಯ ಡಾ॥ ಬಿ.ಆರ್. ಅಂಬೇಡ್ಕರ್ ರವರ ಬಗ್ಗೆ ಇಷ್ಟು ಚರ್ಚೆ

ಮಾಡಲಿಕ್ಕೆ ಹೊರಟಿದ್ದಾರಲ್ಲಾ ಈಗ ಸಂವಿಧಾನ ಬದಲಾವಣೆ ಮಾಡಲಿಕ್ಕೆ ಹೊರಟಿದ್ದಾರೆ. ಇವರಿಗೆ ನಾಚಿಕೆ ಆಗಬೇಕು.

**(ಗೊಂದಲ)**

**ಡಾ॥ ವೈ.ಎ. ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):-** ನೀವು ಮಾಡಿದ್ದು, ನಾವು ಮಾಡಲಿಲ್ಲ. ದೀನ ದಲಿತರು ಈ conversion ನಲ್ಲಿ ಹಾಳಾಗಿ ಹೋಗುತ್ತಿದ್ದಾರೆ. ಇವರಿಗೆ ನಾಚಿಕೆಯಾಗಬೇಕು.

**(ಗೊಂದಲ)**

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಇದು ಯುನಿವರ್ಸಿಟಿಯಲ್ಲಿ ಹೊಸ admission ಇದು. ಇವರಿಗೆ ನಾಚಿಕೆ ಆಗಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಯಾವುದೂ ಸಹ ಕಡತಕ್ಕೆ ಹೋಗಬಾರದು.

**ಸಭಾಪತಿಯವರು:-** ಶ್ರೀಯುತ ನಸೀರ್ ಅಹ್ಮದ್ ರವರೆ, ನಾನು ಅವರಿಗೆ ಹೇಳುತ್ತೇನೆ. ನೀವು ಮಧ್ಯೆ ಏತಕ್ಕೆ ಬಂದ್ದೀರಿ. ಅವರು ಮಾತನಾಡುತ್ತಾರೆ, ಕುಳಿತುಕೊಳ್ಳಿ, ವಿರೋಧ ಪಕ್ಷದ ನಾಯಕರು ಮಾತನಾಡಬೇಕು.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಡಾ॥ ಬಿ.ಆರ್. ಅಂಬೇಡ್ಕರ್‌ರವರ ಬಗ್ಗೆ ಏನು ಗೌರವ ಇದೆ ಎನ್ನುವುದನ್ನು ನಾಗ್‌ಪುರ್‌ನಲ್ಲಿಯೇ ಡಾ॥ ಬಿ.ಆರ್. ಅಂಬೇಡ್ಕರ್‌ರವರು ತೋರಿಸಿದ್ದಾರೆ. 5 ಲಕ್ಷ ಜನರು ಸೇರಿಕೊಂಡು ನಾಗ್‌ಪುರ್‌ನಲ್ಲಿ ಬೌದ್ಧ ಧರ್ಮಕ್ಕೆ

ಮತಾಂತರ ಆಗಿರುವುದನ್ನು ನಾವೆಲ್ಲರೂ ನೋಡಿದ್ದೇವೆ. ಅವರ ಬಗ್ಗೆ ಅಷ್ಟೆಲ್ಲಾ ಗೌರವ ಇದ್ದಿದ್ದರೆ ಅವರು ಮತಾಂತರ ಆಗುತ್ತಿರಲಿಲ್ಲ.

**ಶ್ರೀ ಎನ್.ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು):-** ಕಾಂಗ್ರೆಸ್‌ನವರು ಜೀವನ ಪೂರ್ತಿ ಹೇಳಿದರು. ಕಾಂಗ್ರಸ್ ಏನು ಎನ್ನುವುದನ್ನು ಸಹ ಅವರು ಹೇಳಿದರು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ಪ್ರತಿ ಬಾರಿಯು ನಾವು ಮಾತನಾಡುವಾಗ...... ಇದಕ್ಕೆ ಏನಾದರೂ ಕಡಿವಾಣ ಹಾಕಬೇಕು ....

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೆ, ತಾವು ನಮ್ಮನ್ನು ಕುಳಿತುಕೊಳ್ಳಿ ಎಂದು ನಮಗೆ ಮಾತ್ರ ಹೇಳುತ್ತೀರಿ. ಅವರಿಗೆ (ಮಾನ್ಯ ಎನ್. ರವಿಕುಮಾರ್ ರವರನ್ನು ಉದ್ದೇಶಿಸಿ) ನೀವು ಹೇಳುವುದಿಲ್ಲ. ಅವರಿಗೆ ಮಾತ್ರ chance ಕೊಡುತ್ತೀರಾ. ನಮಗೆ ಇಲ್ಲವೇ?

**ಸಭಾಪತಿಯವರು:-** ನಾನು ಹೇಳುವಷ್ಟರಲ್ಲಿಯೇ ಹೇಳಿ ಕುಳಿತುಬಿಟ್ಟಿದ್ದಾರೆ. ಆದರೆ ನೀವು ಹಾಗೆಯೇ ನಿಂತುಕೊಂಡಿದ್ದೀರಿ. ಸತ್ಯಾಸತ್ಯತೆ , ನಿಮ್ಮ ಕಣ್ಣು ಮುಂದೆ ಇದೆ. ನಾನು ಏತಕ್ಕೆ ಸುಳ್ಳು ಹೇಳಲಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಏನಾಗಿದೆ ಎಂದು ನಾನು ಹೇಳುತ್ತೇನೆ, ಕೇಳಿ. ಮಾನ್ಯ ಮುಖ್ಯಮಂತ್ರಿಗಳು ನಾನು ವಿಷಯಕ್ಕೆ ಬರುತ್ತೇನೆ. ನಾನು ಹೇಳುವುದನ್ನು ಕೇಳಬೇಕು. ನಿಮ್ಮ ಕಡೆಯವರು ಏತಕ್ಕೆ ಆಗಾಗ ಎದ್ದು ಮಾತನಾಡುತ್ತಾರೆಂದರೆ ಆ ಕಡೆಯೇ ಟಿ.ವಿ.ಯವರು focus ಮಾಡಿ ತೋರಿಸುತ್ತಾರೆ. ಹಾಗಾಗಿ, ಆಡಳಿತ ಪಕ್ಷದ ಸದಸ್ಯರು ಆಗಾಗ ಎದ್ದು ನಿಂತು ಮಾತನಾಡುತ್ತಾರೆ. ಈ

ಕಡೆ ಯಾರು ಸಹ focus ಮಾಡುವುದಿಲ್ಲ. ಅಲ್ಲಿ IBN ಯವರದ್ದು ಕ್ಯಾಮರಾ ಇದೆ, ಅದು ಅಲ್ಲಿಯೇ focus ಆಗುತ್ತದೆ. ಅದರ ಲಿಂಕ್ ಕೂಡ ದೂರದರ್ಶನಕ್ಕೆ ಕೊಡುವುದಿಲ್ಲ. ದಯಾಮಾಡಿ ನೀವು ಅದನ್ನು ಸರಿಪಡಿಸಬೇಕು. ಇದನ್ನು ಸರಿಪಡಿಸಿದರೆ, ಎಲ್ಲವೂ ಸರಿ ಹೋಗುತ್ತದೆ. ಅದರಲ್ಲಿ ಮರ್ಮ ಏನೂ ಇಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ(ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):-** ಯಾರದ್ದು ಲಿಂಕ್ ಬರಲಿಲ್ಲವೆಂದರೂ ಸಹ ಅವರೊಬ್ಬರದ್ದು ಬರುವ ಹಾಗೆ ಮಾಡಿ.

**ಸಭಾಪತಿಯವರು:-** ಅವರ ಉದ್ದೇಶ ಏನೆಂದರೆ, ಟಿ.ವಿ.ಯಲ್ಲಿ ನೇರಪ್ರಸಾರ. ಟಿ.ವಿಯವರು ಇದನ್ನು ಅರ್ಥಮಾಡಿಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಬರುವುದಕ್ಕೆ ಮುಂಚೆ ಹೇಳಿದೆ. ನಿನ್ನೆಯ ದಿವಸ ಒಂದು ಟಿಪ್ಪಣಿಯನ್ನು ಕೊಟ್ಟಿದ್ದೆ.front page ನಲ್ಲಿ ಬರುವ ಅಗತ್ಯತೆ ನನಗಿಲ್ಲ, 25 ವರ್ಷಗಳಲ್ಲಿ ಇದ್ದಾಗಲೇ, ಪ್ರಜಾವಾಣಿ ಹಾಗೂ ಎಲ್ಲಾ ಪೇಪರ್‌ಗಳಲ್ಲಿಯೂ ನಾನು front page ನಲ್ಲಿ ಇದ್ದೆ. ಈಗ ಏನೂ ಬೇಕಾಗಿಲ್ಲ. ಇಡೀ ರಾಷ್ಟ್ರದಲ್ಲಿ 19 ರಾಜ್ಯಗಳಲ್ಲಿಯೂ ಎಲ್ಲಿ ಹೋದರು front page ನಲ್ಲಿಯೇ. ಇವತ್ತು ಇದ್ದೇನೆ. ಇಲ್ಲಿ ನನಗೇನೂ ಬೇಕಾಗಿಲ್ಲ.

**ಸಭಾಪತಿಯವರು:-** ಕಾನೂನು ಸಚಿವರು ನಿಮ್ಮ ಮಾತನ್ನು ಕೇಳುವುದಕ್ಕೆ ಬಂದಿದ್ದಾರೆ. ನೀವು ಮಾತನಾಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-**ಮಾನ್ಯ ಸಭಾಪತಿಯವರೆ, ತಾವು ನಮಗೆ ರಕ್ಷಣೆ ಕೊಡಬೇಕು.

**Mr. CHAIRMAN:-** Hon'ble opposition leader, I am with you. ತಾವು ಮಾತನಾಡಿ ನಾನು ನಿಮ್ಮ ಜೊತೆಯಲ್ಲಿ ಇದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಬೇರೆ ಸದಸ್ಯರು ಮಾತನಾಡುವಾಗ ನಾನು ಮಧ್ಯ interfere ಆಗುವುದಿಲ್ಲ. ನಾನು ಹೇಳುವಂತಹದ್ದನ್ನು ಕೇಳುವಂತಹ ಧೈರ್ಯ ಸ್ಥೈರ್ಯ ಬೇಕು. ಮುಖ್ಯಮಂತ್ರಿಗಳು ಏನಾದರೂ ಹೇಳುತ್ತಾರೆಂದರೆ ಅದನ್ನು ಎಲ್ಲರೂ ಕೇಳಬೇಕು. ಅವರು intellectual debate ಮಾಡುತ್ತಾರೆ, ಅದನ್ನು ನಾವು ಕೇಳುತ್ತೇವೆ. ಬಾಕಿಯವರದ್ದು, ನಾಗ್‌ಪುರ್ ಯುನಿರ್ವಸಿಟಿಯದ್ದನ್ನು ಕೇಳಲಿಕ್ಕೆ ನಾನು ತಯಾರಿಲ್ಲ.

**(ಗೊಂದಲ)**

**ಸಭಾಪತಿಯವರು:-**ಇವರು ಮೈಕ್‌ನದ್ದು ಸೌಂಡ್ ಮಾಡುತ್ತಾರೆ, ಅವರು ಮಾತನಾಡುತ್ತಾರೆ,

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಅದು ನಿಜ.ಮುಸೋಲಿನಿ ಯುನಿರ್ವಸಿಟಿಯಿಂದ ಬಂದಿರತಕ್ಕದ್ದನ್ನು ಸಹ ನಾನು ಕೇಳಲಿಕ್ಕೆ ತಯಾರಿಲ್ಲ. **(ಗೊಂದಲ)** ಮಾನ್ಯ ಸಭಾಪತಿಯವರೆ, ತಾವು ಸಹ ದುರ್ಬಲ ವರ್ಗಕ್ಕೆ ಸೇರಿದವರು. ತಾವು ಅಲ್ಲಿ ಕುಳಿತಿದ್ದರೆ, ಅದು ಈ ಸಂವಿಧಾನದಿಂದ ಕುಳಿತಿದ್ದೀರಿ. ಸಂವಿಧಾನವನ್ನು ರಕ್ಷಣೆ ಮಾಡಬೇಕಾದ ಕೆಲಸವನ್ನು ನಾವು ಮಾಡಬೇಕಾಗಿದೆ. ಸಂವಿಧಾನವನ್ನು ರಕ್ಷಣೆ ಮಾಡುವಾಗ ನಿಮ್ಮ Quran, Bible, Bhagavad Gita, Manu-smriti, Veda, Upanishads ಇದೆಲ್ಲವನ್ನು ತಿಳಿದುಕೊಂಡೆ ಮಾಡಿರುತ್ತಾರೆ. ಡಾ॥ ಬಿ.ಆರ್. ಅಂಬೇಡ್ಕರ್‌ರವರು Quran ಓದಿದ್ದಾರೆ, Bhagavad Gita ಓದಿದ್ದಾರೆ. Bible ಓದಿದ್ದಾರೆ, Upanishads ಓದಿದ್ದಾರೆ, Manu-smriti ಯನ್ನು ಆಳವಾಗಿ ಓದಿದ್ದಾರೆ, ಅದೆಲ್ಲವನ್ನು ಮೀರಿ ಈ ಸಂವಿಧಾನವನ್ನು ಬರೆಯಲಾಗಿದೆ. ಮೂಲ ಆಶಯ. ಅದನ್ನು ತಾವು ದಯವಿಟ್ಟು ನೋಡಬೇಕಾಗುತ್ತದೆ. ಅನ್ಯಾಯ ಮಾಡಿರುವವರು ಬೇರೆ ಪಕ್ಷದವರು. ಅವರು ಕಾಂಗ್ರೆಸ್ ಪಕ್ಷದವರಲ್ಲ. ಅವರು Republican Party of India ದ ಪಕ್ಷದವರು.

ಇದಕ್ಕೆ ಕಾಂಗ್ರೆಸ್ ಪಕ್ಷದವರು ಅವಕಾಶ ಕೊಡಲಿಲ್ಲವೆಂದು ಹೇಳಿದ್ದಾರೆ. ಪ್ರಜಾಪ್ರಭುತ್ವದಲ್ಲಿ ನಮ್ಮ ಪಕ್ಷದ ವಿರುದ್ಧ ಚುನಾವಣೆಗೆ ನಿಂತಾಗ ನಮ್ಮ ಪಕ್ಷದ ಅಭ್ಯರ್ಥಿಯನ್ನು ಹಾಕಿದ್ದೇವೆ. ಇಲ್ಲವೆಂದು ಹೇಳುವುದಿಲ್ಲ. ನೀವು ಏನಾದರೂ withdraw ಮಾಡಿದ್ದೀರಾ?

**ಶ್ರೀ ಬಸವರಾಜ ಬೊಮ್ಮಾಯಿ:-** ಅವತ್ತು ಕಾಂಗ್ರೆಸ್‌ನವರು ಎಸ್.ಕೆ. ಪಾಟೀಲ್‌ರನ್ನು ಹಾಕಿದ್ದರು. ಚುನಾವಣೆಯನ್ನು ದೊಡ್ಡ ಪ್ರಮಾಣದಲ್ಲಿ ನಡೆಸಿದರು.

**ಶ್ರೀ ಬಿ.ಕೆ.ಹರಿಪ್ರಸಾದ್ :-** ಮಾನ್ಯ ಸಭಾಪತಿಯವರೆ, ಅವತ್ತು ಮುಕುಲ್ ವಾಸ್ನಿಕ್ ರವರು ಎಸ್.ಕೆ.ಪಾಟೀಲ್ ರವರೊಂದಿಗೆ regional constituency ಇಂದ fight ಮಾಡಿ ……..

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ನಮಗೂ ಸ್ವಲ್ಪ ಗೊತ್ತಿದೆ. ಅದನ್ನು ಹೇಳುತ್ತೇವೆ. ಬಹಿರಂಗವಾಗಿ support ಮಾಡಿದ್ದರೆ, ಅದು ಹಿಂದೂ ಮಹಾ ಸಭಾ ಒಂದೇ. ಮತ್ತೆ ಯಾರೂ ಅಲ್ಲ. ಇದನ್ನು ತಾವು ತಿಳಿದುಕೊಳ್ಳಬೇಕು. ಓಪನ್ ಆಗಿ ಅಂಬೇಡ್ಕರ್‌ರವರಿಗೆ support ಮಾಡಿದ್ದು ಅವರೇ. ಇದು ಸತ್ಯ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನೀವು ಅರ್ಧ ಸತ್ಯ ಹೇಳಿದರೆ ಹೇಗೆ? ನಾನು ಪೂರ್ಣ ಸತ್ಯ ಹೇಳುತ್ತೇನೆ,

**ಶ್ರೀ ಬಸವರಾಜ ಬೊಮ್ಮಾಯಿ:-** ಕೇಳಿ. ನಿಮಗೆ ಪೂರ್ಣ ಸತ್ಯ ಎಂದೂ ಹೇಳಲಿಕ್ಕೆ ಆಗುವುದಿಲ್ಲ. ಪ್ರಯತ್ನ ಮಾಡಲಿಕ್ಕೆ ಹೋಗಬೇಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ನಾನು ಪೂರ್ಣ ಸತ್ಯವನ್ನು ಹೇಳುತ್ತೇನೆ, ಕೇಳಿ.

**ಶ್ರೀ ಬಸವರಾಜ ಬೊಮ್ಮಾಯಿ:-** ನಿಮ್ಮ ಕೈಯಲ್ಲಿ ಆಗುವುದಿಲ್ಲ, ನೀವು ಪ್ರಯತ್ನ ಮಾಡುವುದಕ್ಕೆ ಹೋಗಬೇಡಿ. ನಿಮ್ಮ ಕೈಯಲ್ಲಿ ಹೇಳಲಿಕ್ಕೆ ಸಾಧ್ಯವಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನೀವು ಹರಿಶ್ಚಂದ್ರ ಮನೆ ಪಕ್ಕದಲ್ಲಿಯೇ ಇದ್ದೀರಿ, ಬಿಡಿ.

**ಶ್ರೀ ಬಸವರಾಜ ಬೊಮ್ಮಾಯಿ:-** ತಾವು ಇಟಲಿ ಬಗ್ಗೆ ಮಾತನಾಡಿದ್ದೀರಿ. ನಾವೇನೂ ಆ ವಿಚಾರವನ್ನು ತೆಗೆದಿಲ್ಲ, ನೀವೇ ತೆಗೆದಿದ್ದೀರಿ.

**ಶ್ರೀ ಬಿ.ಕೆ.ಹರಿಪ್ರಸಾದ್:-**ನಾವು ತೆಗೆದಿಲ್ಲ, ಅದನ್ನು ನಿಮ್ಮ ಮಾಮೂಲಿ ಗಿರಾಕಿ ತೆಗೆದಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಎಲ್ಲಾ ಸದಸ್ಯರಿಗೂ ಗೌರವ ಇದೆ, ಯಾರು ಮೂಂಲಿ ಇಲ್ಲ. ಈ ರೀತಿ ಮಾತನಾಡಬಾರದು. ಆ ಕಡೆಯು ಇದೆ, ಈ ಕಡೆಯು ಇದೆ. ನಾವು ನಿಮ್ಮವರಿಗೆ ಯಾರಿಗಾದರೂ ಮಾಮೂಲಿ ಎಂದರೆ ನೀವು ಸುಮ್ಮನೆ ಇರುತ್ತೀರಾ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಪ್ರತಿಯೊಂದು ಭಾಷಣದಲ್ಲಿಯೂ ಅಡ್ಡ ಹಾಕುವುದನ್ನು ಮಾಮೂಲಿ ಅನ್ನುತ್ತಾರೆ.

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತಕರು):-** ಮಾಮೂಲಿ ಗಿರಾಕಿ ಎಂದರೇನು? ನೋಡಿಕೊಂಡು ಮಾತನಾಡಿ.

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾಮೂಲಿ ಎನ್ನುವ ಶಬ್ದ ಸರಿ ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-**ನೋಡಿಕೊಂಡು ಮಾತನಾಡಿ ಎಂದು ಹೇಳುತ್ತಿದ್ದೀರಿ, ಹಾಗೆ ಹೇಳಿದರೆ ನೀವು ಏನು ಮಾಡುವವರಿದ್ದೀರಿ.

**(ಗೊಂದಲ)**

**Sri B.K. HARIPRASAD:-** I know better ethics than you.

**ಡಾ॥ ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೆ, you must protect the interest of members present in the House.

**(ಗೊಂದಲ)**

**ಸಭಾಪತಿಯವರು:-** ಶ್ರೀಯುತ ನಾರಾಯಣಸ್ವಾಮಿಯವರೆ, ತಾವು ಕುಳಿತುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನಾನು ಇಟಲಿ ಎಂದು ಹೇಳಿದ್ದು, ನಿಮ್ಮ ಮೂಲ ಇರುವುದೇ ಮುಸೋಲಿನಿಯಲ್ಲಿ.

**ಡಾ॥ ವೈ.ಎ.ನಾರಾಯಣ ಸ್ವಾಮಿ:-** ನಿಮ್ಮ ಮೂಲ ಮಾಫಿಯಾ ನಲ್ಲಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನಿಮ್ಮ ಮೂಲ ಇರುವುದೇ ಮುಸೋಲಿನಿಯಲ್ಲಿ.

**ಶ್ರೀ ಬಸವರಾಜ ಬೊಮ್ಮಾಯಿ:-** ದಯವಿಟ್ಟು ನೀವು ಇಟಲಿಗೆ ಹೋಗಬೇಡಿ ಇಲ್ಲಿಯೇ ಇರಿ ಎಂದು ಪ್ರಾರ್ಥನೆ ಅಷ್ಟೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನಾನು ಹೋಗುತ್ತೇನೆ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ:-** ದಯವಿಟ್ಟು ನೀವು ಇಟಲಿಗೆ ಹೋಗಬೇಡಿ. ನಾಗ್‌ಪುರ್‌ಗೆ ಹೋಗುವವರು ನೀವೇ, ಇಟಲಿಗೆ ಹೋಗುವವರು ನೀವೇ. ಇಟಲಿ ಬಗ್ಗೆ ಚರ್ಚೆ ಮಾಡೋಣ ಎಂದರೆ, ಅದಕ್ಕೂ ತಯಾರು ಇದ್ದೇವೆ, ಆದರೆ ಈಗ ಬೇಡ. ನೋಡಿ, ಮುಸೋಲಿನಿಯ ಬಗ್ಗೆ ನೀವೇ ಮಾತನಾಡುತ್ತೀರಿ, ಅದು ಏಕೆ ನಿಮ್ಮ ತಲೆಯಲ್ಲಿ ಇದೆ ಎಂದು ಗೊತ್ತಿಲ್ಲ. ಇಟಲಿ

ಎಂದರೆ ಮುಸೋಲಿನಿ ಮಾತ್ರ. ಇಲ್ಲಿ ಇಟಲಿ ಎಂದರೆ ಮಾಫಿಯಾ, ನೆಪೋಲಿಯನ್ ಕೂಡ ಇದೆ. ಅದರ ಬಗ್ಗೆ ಏತಕ್ಕೆ ಸುಮ್ಮನೆ ಮಾತನಾಡಬೇಕು. ಬೇಡ ಎಂದು ನಾನು ಹೇಳುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನಾವು ಏತಕ್ಕೆ ಹೇಳುತ್ತಿದ್ದೇವೆಂದರೆ, **ವಸುಧೈವ ಕುಟುಂಬಕಂ** ಎಂದು ನೀವು ಆಗಾಗ dialogue ಹೊಡೆಯುತ್ತಿರುತ್ತೀರಿ.

**ಡಾ॥ ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೆ, that is our moto.

**ಶ್ರೀ ಬಿ.ಕೆ.ಹರಿಪ್ರಸಾದ್:-** ನೀವು ಸಹ ಹೊಸದಾಗಿ convert ಆಗಿರುವವರು, ಸುಮ್ಮನೆ ಇರಿ. ಅವರೇನಾದರೂ moto ಎಂದರೆ ಕೇಳುತ್ತೇನೆ. ನಿಮ್ಮ moto ನ್ನು ನಾನು ಏಕೆ ಹೇಳುವುದಕ್ಕೆ ಹೋಗುತ್ತೀರಿ. You are also converted ….

(ಗೊಂದಲ)

**ಶ್ರೀ ಪ್ರಾಣೇಶ್ ಎಂ.ಕೆ.(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇವರು ಡಾ॥ ಬಿ.ಆರ್. ಅಂಬೇಡ್ಕರ್‌ರವರನ್ನು ಸೋಲಿಸಿದವರಿಗೆ ಭಾರತ ರತ್ನವನ್ನು ಕೊಟ್ಟಂತಹವರು. ಇವರು ಅವರ ಬಗ್ಗೆ ಏನು ಮಾತನಾಡುತ್ತಾರೆ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡವರು ನಾವು ಏನಾದರೂ ಏಕಾಧಿಪತ್ಯ ಎಂದು ಹೇಳಿ ನಾವು ಗೆದ್ದವರನ್ನೆಲ್ಲಾ ಖರೀದಿ ಮಾಡಿ, ಸರ್ಕಾರಗಳನ್ನು ಬದಲಾವಣೆ ಮಾಡುವವರು ನಾವಲ್ಲ. ದಿನಾ ಖರೀದಿ ಮಾಡುತ್ತಿದ್ದಾರೆ. ನಿನ್ನೆ ಗೋವಾದಲ್ಲಿ ಖರೀದಿ ಮಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡಿರುವವರು ನಾವು.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೆ, The first defection in the Country was in Kerala. ಏತಕ್ಕೆ ಮಾಡಿದ್ದಾರೆ? ಅದಕ್ಕೆ rebel ಆದವರು ಯಾರು ಎಂದು ಇಲ್ಲಿ ಸ್ವಲ್ಪ ಹೇಳಬೇಕು. ಆ ಕಾರಣಕ್ಕೆ rebel ಆದವರು ಯಾರು? ಇಲ್ಲಿ ಇವರು ಪಾಠ ಓದಿಕೊಂಡು ಹೋಗುತ್ತಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಶ್ರೀಯುತ ಮಾಧು ಸ್ವಾಮಿಯವರು ಇಲ್ಲಿ ಗಮನಿಸಬೇಕು.

**ಶ್ರೀ ನಸೀರ್ ಅಹ್ಮದ್:–** ಸಂಸದೀಯ ಸಚಿವರು ಹೇಳುತ್ತಿರುವುದು 100% correct ಇದೆ. ಸಾಕಷ್ಟು ರೀತಿಯಲ್ಲಿ defection ಆಗಿದೆ. ಹರಿಯಾಣದಲ್ಲಿ ಬೆಳಗ್ಗೆ ಒಂದು, ಸಾಯಂಕಾಲ ಒಂದು, ಮಧ್ಯಾಹ್ನ ಒಂದು. ಇದೆಲ್ಲವೂ ಆಗಿದೆ. ನಾವು ಇಲ್ಲಿ refer ಮಾಡುತ್ತಿದ್ದು, ಅಪರೇಷನ್ ಕಮಲದ ಬಗ್ಗೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಈ ರಾಷ್ಟ್ರದಲ್ಲಿ Aya Ram, Gaya Ram ಬಗ್ಗೆ ಮಾತನಾಡುತ್ತಿದ್ದೇವೆ. ಬರಿ ಅಪರೇಷನ್ ಕಮಲ ಆಗಿಲ್ಲ. ಒಂದು ಸರ್ಕಾರವೇ ಬೇರೆ ಇನ್ನೊಂದು ಸರ್ಕಾರವಾಗಿದೆ. ಅಂತಹ ಒಂದು ಕೆಟ್ಟ ಪಾಪ ಅಗಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಶ್ರೀಯುತ ಮಾಧುಸ್ವಾಮಿಯವರೆ, ಒಳ್ಳೆಯ ಕೆಲಸ, ಕೆಟ್ಟ ಕೆಲಸ ಈ ಮತಾಂತರದಲ್ಲೂ ಇಲ್ಲ, ನಿಮ್ಮ ಪಕ್ಷಾಂತರದಲ್ಲೂ ಇಲ್ಲವೆಂದು ತಾವು ಹೇಳುತ್ತಿದ್ದೀರಿ. ಪಕ್ಷಾಂತರಕ್ಕೂ ಮತಾಂತರಕ್ಕೂ ಬಹಳ ವ್ಯತ್ಯಾಸ ಇದೆ. ಪಕ್ಷಾಂತರಕ್ಕೆ ಒಳ್ಳೆಯ ಆಯಾಮ ಮಾಡಿದ್ದು, 1998ನೇ ಇಸವಿಯಲ್ಲಿ ಗೋವಾದಲ್ಲಿ ಆಗಿದೆ. Losing fellow ಎಂದು ಹೇಳಿ ಒಬ್ಬ ಮುಖ್ಯಮಂತ್ರಿ ಆಗುತ್ತಾರೆ, ಏಕಾಏಕಿ ಎಲ್ಲರನ್ನು ಖರೀದಿ ಮಾಡಿ ತಾವು ಅಲ್ಲಿ ಸರ್ಕಾರವನ್ನು ರಚನೆ ಮಾಡುತ್ತೀರಿ.

**(ಮುಂದು)**

**(847) 15.09.2022 01.50 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಹರಿಪ್ರಸಾದ್ ಅವರೇ, ಇತಿಹಾಸ ತಮಗೂ ತಿಳಿದಿದೆ. ಕಾಂಗ್ರೆಸ್ ಪಕ್ಷದ ಒಬ್ಬ ಅಧಿಕೃತ ಕ್ಯಾಂಡಿಡೇಟ್ ವಿರುದ್ಧವಾಗಿ canvass ಮಾಡಿ ಗೆಲ್ಲಿಸಿದವರು ನೀವು. ಪಾಠ ಹೇಳ್ತೀರಲ್ರೀ ದೇಶಕ್ಕೆ...ರಾಷ್ಟ್ರಪತಿಗೆ...ಏನು ಪಾಠ ಹೇಳ್ತೀರ್ರೀ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಮಾಧುಸ್ವಾಮಿಯವರೇ, ಹೇಳ್ರೀ... ಯಾರು ಅಂತ? ಹೆಸರು ಹೇಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಹರಿಪ್ರಸಾದ್ ಅವರೇ, ನೀಲಂ ಸಂಜೀವರೆಡ್ಡಿ ಯಾಕ್ರೀ ಸೋತರು? ಯಾರು ಗೆದ್ದಿದ್ದು? ಅವರು ಯಾರ ಕ್ಯಾಂಡಿಡೇಟ್?

**ಶ್ರೀ ಬಿ.ಕೆ.ಹರಿಪ್ರಸಾದ್:-** ವಿ.ವಿ.ಗಿರಿ ಗೆದ್ದಿದ್ದರು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಯಾರವರು? ಯಾರವರು?

**ಶ್ರೀ ಬಿ.ಕೆ.ಹರಿಪ್ರಸಾದ್:-** ಕಾಂಗ್ರೆಸ್ ಕ್ಯಾಂಡಿಡೇಟ್.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಅವರು ಇಂಡಿಪೆಂಡೆಂಟ್ ಕ್ಯಾಂಡಿಡೇಟ್. ಮುಂದೆ ನಿಂತು ಕಾಂಗ್ರೆಸ್ ಕ್ಯಾಂಡಿಡೇಟ್ ಅನ್ನು ಸೋಲಿಸಿದ್ರಿ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸಾಲಿನಿಂದ ಹೇ...ಹೇ... ಎನ್ನುವ ಉದ್ಗಾರ ಕೇಳಿಬಂದಿತು)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಮಾಧುಸ್ವಾಮಿಯವರೇ, ತಾವು ಕಾನೂನಿನಲ್ಲಿ ನುರಿತರು. ರಾಷ್ಟ್ರಪತಿ ಸ್ಥಾನಕ್ಕೆ ಅರ್ಜಿಯನ್ನು ಕೊಡುವಾಗ ಎಲ್ಲರೂ ಸಹ ಪಕ್ಷಕ್ಕೆ ರಾಜೀನಾಮೆಯನ್ನು ಕೊಡುತ್ತಾರೆ. ಸಭಾಪತಿಯಾಗಬೇಕಾದರೂ ಪಕ್ಷಕ್ಕೆ ರಾಜೀನಾಮೆ ಕೊಟ್ಟು ಸಭಾಪತಿಯಾಗುತ್ತಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** Congress parliamentary oath ತೆಗೆದುಕೊಂಡಂತಹ ತೀರ್ಮಾನಕ್ಕೆ ವಿರುದ್ಧವಾಗಿ ಕೆಲಸ ಮಾಡುವಂತಹ ಸಣ್ಣ ಸ್ಥಿತಿಗೆ ಬರಬೇಕಿತ್ತಾ?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಮಾನ್ಯ ಮಾಧುಸ್ವಾಮಿಯವರು ಕೆಟ್ಟ ಕೇಸಿಗೆ ಒಳ್ಳೆಯ ಲಾಯರ್. ನಾವು ಮ್ಯಾನೇಜ್ ಮಾಡುತ್ತಿದ್ದೇವೆ, ಸುಮ್ಮನೆ ಇರಪ್ಪ ಎಂದು ಅವರೇ ಮೊನ್ನೆ ಹೇಳಿದ್ದಾರೆ.

**Sri BASAVARAJ BOMMAI:-** Management is a part of Administration.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸಂವಿಧಾನ ಏಕೆ ಪವಿತ್ರವಾಗಿದೆ ಎಂದು ನಾನು ಹೇಳಬೇಕಾದರೆ ಕ್ರಿಶ್ಚಿಯನ್, ಮುಸ್ಲಿಂ, ಹಿಂದೂ, ಬೌದ್ಧ, ಸಿಖ್, ಜೊರಾಸ್ಟ್ರಿಯನ್, ಜೈನ ಧರ್ಮ ಇದ್ದು, ಇವೆಲ್ಲವನ್ನೂ divide ಮಾಡಿಟ್ಟಿದೆ. ಮಾನ್ಯ ಬೊಮ್ಮಾಯಿಯವರಿಗೆ ತಿಳಿದಿರುವಂತೆ ಈ ದೇಶದಲ್ಲಿ ಏಳು ಧರ್ಮಗಳಿವೆ. ಅಂತರರಾಷ್ಟ್ರೀಯ ಮಟ್ಟದಲ್ಲಿರುವಂತಹ ಮೂರು ಧರ್ಮಗಳಿವೆ. ಇವೆಲ್ಲವನ್ನೂ ಸಹ ಒಂದು ಮಾಡಿರುವುದು ಈ ಸಂವಿಧಾನ. ಸಂವಿಧಾನದ ಅಡಿಯಲ್ಲಿ ಎಲ್ಲರೂ ಸಮಾನರು. ಯಾರಿಗೂ ಸಹ ಮೇಲು-ಕೀಳು ಭೇದ ಭಾವವಿಲ್ಲ. ಈ ಒಂದು ಸಂದರ್ಭದಲ್ಲಿ ಮತಾಂತರ ಏಕೆ ಆಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಮತಾಂತರ ಆಗಬೇಕು ಎನ್ನುವುದಿದ್ದರೆ ಏನಾದರೂ ಕಾರಣ ಇರುತ್ತದೆಯಲ್ಲವೆ?

ನಾವು Scheduled Castes (SCs) and Scheduled Tribes (STs) ಎಂದು ಹೇಳುತ್ತೇವೆ. ಇಂಗ್ಲಿಷ್‌ನಲ್ಲಿ, they (Dalits) are outcasts ಎಂದು ಹೇಳುತ್ತಾರೆ. ದಿವಂಗತ ಕೆ.ಆರ್.ನಾರಾಯಣನ್ ಅವರು ಈ ರಾಷ್ಟ್ರದ ರಾಷ್ಟ್ರಪತಿಯಾಗಿದ್ದರು. ಅವರು ಬಹಳ ಸ್ಪಷ್ಟವಾಗಿ ಹೇಳುತ್ತಾರೆ, 'They do not come under the Hindu Religion, they are outcasts.' ಅವರೇನಾದರೂ ನಾವು ಹಿಂದುಗಳಲ್ಲ ಎಂದರೆ ನಾಳೆಯೇ ಇವರು

ಅಲ್ಪಸಂಖ್ಯಾತರಾಗುತ್ತಾರೆ. ಅದಕ್ಕೆ ಬಲವಂತವಾಗಿ ಅವರನ್ನು ಇಟ್ಟುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಏನೇ ಅನಾಹುತಗಳಾದರೂ ಸಹ ಅವರನ್ನು ಭಯಪಡಿಸಿಯಾದರೂ ಜೊತೆಯಲ್ಲಿಟ್ಟುಕೊಂಡಿದ್ದಾರೆ.

ಕ್ರೈಸ್ತರು 1.6%, ಮುಸ್ಲಿಂ 13-14%, ಬೌದ್ಧರು 0.86% ಈ ರೀತಿ ಎಲ್ಲವೂ ಸೇರಿದರೆ 20% ಆಗುವುದಿಲ್ಲ. 80% ಹಿಂದುತ್ವವಾದಿಗಳು ಮತ್ತು ಹಿಂದೂಧರ್ಮದವರು. ಏಕೆ ಅವರ ಬಗ್ಗೆ ಭಯಪಡಬೇಕು? ಅವರು ಸಾವಿರಾರು ವರ್ಷಗಳಿಂದ ಈ ದೇಶದಲ್ಲಿ ಯಾರಿಗೂ ತೊಂದರೆ ಕೊಡದೆ ಬದುಕುತ್ತಾ ಬಂದಿದ್ದಾರೆ. ಸಂಪೂರ್ಣವಾಗಿ ಅವರನ್ನು ಎರಡನೆಯ ದರ್ಜೆ ನಾಗರಿಕರನ್ನಾಗಿ ಮಾಡುವ ಹುನ್ನಾರ ಇದು. ಸಮಾನತೆ ವಿರುದ್ಧ ಮಾಡತಕ್ಕಂತಹ ಹುನ್ನಾರ ಇದು. ಏಕೆಂದರೆ ಅವನು ದೇವಸ್ಥಾನಕ್ಕೆ ಹೋಗುವುದಕ್ಕಾಗುವುದಿಲ್ಲ. ಪ್ರಾಣಿಗಳಿಗಿಂತ ಕಡೆಯಾಗಿ treat ಮಾಡುವಂತಹ ಈ ಸಮಾಜದಲ್ಲಿ ಅವನೂ ಸಹ ಆತ್ಮಗೌರವದಿಂದ ಬಾಳಬೇಕು. ಆ humiliation ತಡೆಯುವುದಕ್ಕಾಗದೆ ವೇಮುಲ ಎನ್ನುವ ಪಿ.ಹೆಚ್.ಡಿ. ಪದವೀಧರ ಹೈದರಾಬಾದ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡನು. ನಾನು ಆ ರೀತಿಯ ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು. ಅದಕ್ಕೆ ಭಾರತ ದೇಶದ್ದು ಬೇಡ, ಕರ್ನಾಟಕ ರಾಜ್ಯದ ಬಗ್ಗೆ ಮಾತನಾಡಿ ಎಂದು ಹೇಳುತ್ತೀರಿ. ಅದೇ ರೀತಿ ಕರ್ನಾಟಕದ ಒಂದು ಹುಡುಗಿ ಚಂಡೀಗಢದಲ್ಲಿ ಎಂ.ಡಿ. ವ್ಯಾಸಂಗ ಮಾಡುತ್ತಿದ್ದಳು. ನಿಂದನೆ ತಡೆಯಲಿಕ್ಕಾಗದೆ ಅವರೂ ಸಹ suicide ಮಾಡಿಕೊಂಡಿದ್ದಾರೆ. ಆ ರೀತಿಯ ಉದಾಹರಣೆಗಳನ್ನು ಸಾಕಷ್ಟು ಕೊಡಬಹುದು. ಯಾವ ಧರ್ಮದಲ್ಲಿ ಸಮಾನತೆ ಇರುವುದಿಲ್ಲ, ಗೌರವ ಇರುವುದಿಲ್ಲವೋ ಆಗ ಅವರು ಆ ಧರ್ಮವನ್ನು ಬಿಡಲಿಕ್ಕೆ ಪ್ರಯತ್ನ ಮಾಡುತ್ತಾರೆ. ಅದಕ್ಕೆ ಏಕೆ ಅವರ ಮೇಲೆ ನಿರ್ಬಂಧ ಹೇರುತ್ತೀರಿ? ಅದರಲ್ಲಿಯೂ ನಿಮ್ಮ ಕಾನೂನು ಹೇಗಿದೆ? ಬೇರೆ ಯಾರೂ ಸಾಕ್ಷಿ ಹೇಳುವಂತಿಲ್ಲ. ಏಕೆ ಮತಾಂತರ ಆಗಿದ್ದು ಎಂದು ಅವರೇ ಬಂದು ಸಾಕ್ಷಿ ಹೇಳಬೇಕು.

ಇನ್ನೊಂದು ಕಾರಣ ಇದೆ. ಕ್ರೈಸ್ತರ ಮೇಲೆ ಬಲವಂತವಾಗಿ ಮತಾಂತರ ನಿಷೇಧ ಮಾಡುತ್ತೇವೆಂದು ಅವರಿಗೆ ಭಯ ಮೂಡಿಸತಕ್ಕಂತಹ ಕೆಲಸ ಮಾಡತಕ್ಕಂಥದ್ದು. ಭಾರತದಲ್ಲಿ ಇತ್ತೀಚಿನ ದಿನಗಳಲ್ಲಿ ಅತ್ಯಂತ ಹೆಚ್ಚು ಕ್ರೈಸ್ತರ ಮೇಲೆ ದಾಳಿ ನಡೆದಿದ್ದರೆ ಅದು ಕರ್ನಾಟಕ ರಾಜ್ಯದಲ್ಲಿ.

ಕರ್ನಾಟಕದಲ್ಲಿ ಯಾವತ್ತೂ ಸಹ ಈ ರೀತಿ ನಡೆದಿರಲಿಲ್ಲ. ನಾವು ಪ್ರಗತಿಪರ ರಾಜ್ಯದವರು. ಯು.ಪಿ.ಮಾದರಿ ಎಂದು ಹೇಳುತ್ತಾರೆ. ಅದು ಎಲ್ಲಿಗೆ ಹೋಗುತ್ತದೆ, ನೋಡೋಣ. ಅಭಿವೃದ್ಧಿ ರಾಜಕಾರಣಕ್ಕೆ ಹೆಸರುವಾಸಿಯಾದವರು. ಕಾಂಗ್ರೆಸ್ ಇರಬಹುದು, ರಾಮಕೃಷ್ಣ ಹೆಗಡೆಯವರಿರಬಹುದು. ತಮ್ಮ ತಂದೆಯವರು ಜನತಾದಳದವರಾಗಿದ್ದರು. ಅವರು ಬಿ.ಜೆ.ಪಿ.ಯವರಲ್ಲ. ಇಂದು ಏನಾಗಿದೆ? ಕೇವಲ ಕೋಮು ಗಲಭೆಗಳಲ್ಲಿ ನಾವು busy ಆಗಿದ್ದೇವೆ. ಹಿಜಾಬ್, ಆಜಾನ್, ಹಲಾಲ್ ಇವುಗಳಲ್ಲೇ ಮುಳುಗಿದ್ದೇವೆ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಅದಕ್ಕೆ ಕಾರಣರು ಯಾರು?

**ಶ್ರೀ ಸಲೀಂ ಅಹ್ಮದ್ (ಕುಳಿತುಕೊಂಡು):-** ನೀವೇ..

**ಶ್ರೀ ಬಸವರಾಜ ಬೊಮ್ಮಾಯಿ:-** ಯಾಕೆ? ಸ್ವಾಮಿ, ಕಾನೂನಿನ ವಿರುದ್ಧ ನಡೆದುಕೊಂಡು ಸಣ್ಣ ಸಣ್ಣ ಮಕ್ಕಳಲ್ಲಿ ದ್ವೇಷಭಾವನೆ ತುಂಬುವಂತಹ ಸಂಸ್ಥೆಗಳ ವಿರುದ್ಧ ಧ್ವನಿ ಎತ್ತುವುದಕ್ಕೆ ನಿಮಗೆ ಆಗುತ್ತಿಲ್ಲ. ಕಾನೂನು ಪ್ರಕಾರ ನಾವು ಕ್ರಮ ತೆಗೆದುಕೊಂಡರೆ ನಾವು ಕಾರಣ ಎನ್ನುತ್ತೀರಾ? ಶಾಂತಿ-ಸುವ್ಯವಸ್ಥೆಯನ್ನು ಕದಡುವವರು ಯಾರು?

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಅವರನ್ನು target ಮಾಡುತ್ತಿದ್ದೀರಿ.

**ಶ್ರೀ ಬಸವರಾಜ ಬೊಮ್ಮಾಯಿ:-** Target ನೀವು ಮಾಡುತ್ತಿದ್ದೀರಿ. Target ಎನ್ನುವ ಹೆಸರನ್ನು ಏಕೆ ತರುತ್ತೀರಿ? ನೀವು ಅವರಿಗೆ full support ಮಾಡುತ್ತಿದ್ದೀರಿ? ನಾವು action ತೆಗೆದುಕೊಂಡರೆ...

**(ಗೊಂದಲ)**

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ನಾನು ಆಗಲೇ ಹೇಳಿದೆ. ಎಲ್ಲಾ ಧರ್ಮಗಳಲ್ಲಿ ಬಹಳಷ್ಟು ಬಿಗಿ ವಿಚಾರಗಳು ಹೊರಬಾರದಂತಹ ವಿಚಾರಗಳಿವೆ. ಎಲ್ಲಾ

ಧರ್ಮಗಳಲ್ಲಿಯೂ ಇವೆ. ನಾನು ಆ ಧರ್ಮ, ಈ ಧರ್ಮ ಎಂದು ಭೇದ ಭಾವ ಮಾಡುವುದಿಲ್ಲ. ಧರ್ಮದ ವಿಚಾರಗಳಲ್ಲಿ ಹಲವಾರು ಧರ್ಮಗಳ ಪ್ರಮುಖರ ಕೈಯಿಂದಲೇ ಸಾಕಷ್ಟು ಅನ್ಯಾಯವಾಗಿರುವುದನ್ನು ನಾವು ನೋಡುತ್ತೇವೆ. ಎಷ್ಟೋ ಕೇಸ್‌ಗಳು ಆಚೆ ಬರದೆ ಇರುವಂತಹ ಕೇಸ್‌ಗಳಿವೆ. ಎಷ್ಟೋ ಕಡೆಗಳಲ್ಲಿ ಧರ್ಮದ ನೇತೃತ್ವ ವಹಿಸಿದವರ ಕಡೆಯಿಂದಲೇ ಅಪಚಾರವಾಗಿರುವುದನ್ನು ನಾವು ನೋಡುತ್ತೇವೆ. ಯಾವ ಧರ್ಮವೂ ಕೂಡ ಅನ್ಯಾಯ ಮಾಡಿ ಎಂದು ಹೇಳುವುದಿಲ್ಲ. ಯಾವುದೇ ಧರ್ಮದಲ್ಲಿ ಅನೀತಿ, ಅತ್ಯಾಚಾರ ಆಗಿದ್ದರೆ ಅದನ್ನು ಸುಧಾರಿಸುವಂತಹ ಕೆಲಸ ಕೂಡ ಈ ದೇಶದಲ್ಲಿ ಆಗಿದೆ.

ಮಾನ್ಯ ಸಭಾಪತಿಯವರೇ, ಒಂದು ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ದೇಶದಲ್ಲಿ ಆಗಿರುವಂತಹ spiritual resolution, ವೈಚಾರಿಕ ಕ್ರಾಂತಿ ಬೇರೆ ಯಾವ ದೇಶದಲ್ಲಿಯೂ ಕೂಡ ಆಗಿರುವುದಿಲ್ಲ. ಕೆಲವು ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಲು ರಾಮಾನುಜಂ ಅವರಿಂದ ಹಿಡಿದು, ರಾಮಕೃಷ್ಣ ಮಠದಿಂದ ಹಿಡಿದು, ಅರಬಿಂದೊ ಅವರಿಂದ ಹಿಡಿದು ಹತ್ತು ಹಲವಾರು ಜನರು ಸುಧಾರಣೆಗಳನ್ನು, ಬದಲಾವಣೆಗಳನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ತಂದಿದ್ದಾರೆ. ಯಾವ ದೇಶದಲ್ಲಿ ಹಿಂದೆ ಕಟ್ಟುಪಾಡುಗಳಿದ್ದವೋ ಅದರ ವಿರುದ್ಧ ಸಮಾಜವು ಎದ್ದು ನಿಂತಿದೆ. ಸಮಾಜ ಸುಧಾರಕರೂ ಕೂಡ ದೊಡ್ಡ ಪ್ರಮಾಣದಲ್ಲಿ ಚಳುವಳಿಯನ್ನು ಮಾಡಿದ್ದಾರೆ. ಬೇರೆ ಯಾವ ದೇಶದಲ್ಲಿಯೂ ನಡೆಯದಿರುವಷ್ಟು ಸುಧಾರಣೆಯ spiritual ಚಳುವಳಿಯು ನಮ್ಮ ದೇಶದಲ್ಲಿ ನಡೆದಿದೆ. ಇದೊಂದು ನಿರಂತರವಾಗಿ ನಡೆದಿರುವ ಪ್ರಕ್ರಿಯೆ.

ಹಾಗೆಂದು ಹೇಳಿ, ನಾವು ಯಾವುದೇ ಒಂದು ವರ್ಗದವರನ್ನು ದೂರವಿಟ್ಟು ಮಾಡುವುದಕ್ಕೆ ಸಾಧ್ಯವಿಲ್ಲ. ಈ ಸ್ವತಂತ್ರ ಭಾರತದಲ್ಲಿ ಅದಕ್ಕೆ ಅವಕಾಶಗಳೇ ಇಲ್ಲ. ಹೀಗಿರುವಾಗ ಎಲ್ಲರಿಗೂ ಅವರವರ ಹಕ್ಕಿದೆ ಎಂದು ನಾವು ಹೇಳುತ್ತಿದ್ದೇವೆ. ಯಾರಾದರೂ ಯಾವುದೇ ಆಸೆ ಆಮಿಷವಿಲ್ಲದೆ, ಒತ್ತಡವಿಲ್ಲದೆ ಬದಲಾವಣೆಯನ್ನು ಬಯಸಿದ್ದರೆ ಅದಕ್ಕೂ ಕೂಡ ಅವಕಾಶವಿದೆ. ಬಹಳ ಸರಳವಾಗಿದೆ. ಈ ಕಾನೂನಿನಿಂದ ವ್ಯವಸ್ಥೆಯ ದುರುಪಯೋಗವಾಗಲೀ ಅಥವಾ ಯಾರಾದರೂ ಅದರ ಮೇಲೆ

ನಿಯಂತ್ರಣ ಮಾಡುವುದಾಗಲೀ ಅಥವಾ ಒತ್ತೆ ಇಟ್ಟುಕೊಳ್ಳುವಂತಹ ಯಾವುದೇ ವಿಚಾರಗಳು ಇದರಲ್ಲಿ ಇಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಲಿಚ್ಛಿಸುತ್ತೇನೆ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಒಂದು ಮಾತನ್ನು ಹೇಳಿದರು. ಸಮಾಜದಲ್ಲಿ ಪ್ರತಿಯೊಬ್ಬರೂ ಯಾವುದೇ ಗುಂಪಿಗೆ ಸೇರಿರಲಿ, ಯಾವುದೇ ಧರ್ಮಕ್ಕೆ ಸೇರಿರಲಿ, ಎಲ್ಲರನ್ನೂ ಒಂದೇ ತರಹ ನೋಡುತ್ತೇವೆ ಎಂದು ಹೇಳಿದರು. ಬಹಳ ಸಂತೋಷ.

**(ಮುಂದು)**

**(848) 15-09-2022 (2.00) ಕೆಜಿ-ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ನಸೀರ್ ಅಹ್ಮದ್ (ಮುಂದು)**

ಅದನ್ನು ನಿಜವಾಗಲೂ appreciate ಮಾಡೋಣ. ಅದಕ್ಕೆ ಪ್ರತಿಯೊಬ್ಬರು ಹಾಗೆಯೇ ಇರಬೇಕು. ಆದರೆ, ಈ ಕಾಲದಲ್ಲಿ ನಡೆಯುತ್ತಿರುವಂಥದ್ದು, ಹಿಂದಿ ಭಾಷೆಯಲ್ಲಿ "ಜಿಸಿಕೀ ಲಾಟಿ, ಉಸುಕೀ ಬೈನ್ಸ್" ಎಂಬ ಗಾದೆ ಮಾತನ್ನು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಯವರಿಗೆ ಗೊತ್ತಿರಬಹುದು. ಒಂದು ವೇಳೆ ಗೊತ್ತಿಲ್ಲವೆಂದರೆ, ಅವರ ಗಮನಕ್ಕೆ ತರಬಯಸುತ್ತೇನೆ. ಶಿವಮೊಗ್ಗದಲ್ಲಿ ಒಂದು ಘಟನೆ ಮತ್ತು ಹುಬ್ಬಳ್ಳಿಯಲ್ಲಿ ಒಂದು ಘಟನೆ ಆಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಅವರು ಈ ವಿಷಯವನ್ನು ಪ್ರತ್ಯೇಕವಾಗಿ ಮಾತನಾಡಲಿ. ಇಲ್ಲಿಗೆ ಏಕೆ ಆ ವಿಷಯವನ್ನು ತರುತ್ತಿದ್ದಾರೆ?

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಇದು ಪ್ರತ್ಯೇಕ ಅಲ್ಲ, ಏಕೆಂದರೆ, ಈಗ ಮಾನ್ಯ ಮುಖ್ಯಮಂತ್ರಿಯವರು ಎಲ್ಲರನ್ನೂ ಒಂದೇ ರೀತಿ ನೋಡುತ್ತೇವೆಂದು ಹೇಳಿದ್ದಾರೆ. ಶಿವಮೊಗ್ಗದ ಘಟನೆಯಲ್ಲಿ under Section 307, I.P.C., ಅಡಿಯಲ್ಲಿ ಕೇಸನ್ನು ಹಾಕುತ್ತಾರೆ.

ಹುಬ್ಬಳ್ಳಿ ಘಟನೆಯಲ್ಲಿ UAPA case ಅನ್ನು ಹಾಕುತ್ತಾರೆ. ಹಾಗಾದರೆ, ಅವರು ಇದನ್ನು ಒಂದೇ ರೀತಿಯಲ್ಲಿ ನೋಡುತ್ತಿದ್ದಾರಾ? ಇವತ್ತು ಅನುಮಾನ ಏಕೆ ಬರುತ್ತಿದೆ.,

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನನಗೆ ಅರ್ಥವಾಗುತ್ತಿಲ್ಲ.,

(ಗೊಂದಲ)

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಅವರಿಗೆ ಏಕೆ ಅರ್ಥವಾಗುತ್ತಿಲ್ಲ?

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಆಯಾಯ ಘಟನೆಗಳ ಆಧಾರದ ಮೇಲೆ ಕೇಸ್ ಹಾಕಬೇಕಾಗುತ್ತದೆ. ಒಂದೇ ಸೆಕ್ಷನ್ ಅನ್ನು ಎಲ್ಲಾ ಘಟನೆಗಳಿಗೂ ಹಾಕುವುದಕ್ಕೆ ಆಗುತ್ತದೆಯೇ?

(ಗೊಂದಲ)

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಅವರು ನಾವು ಪ್ರತಿಯೊಬ್ಬರಿಗೂ ಒಂದೇ ರೀತಿ ನೋಡುತ್ತೇವೆಂದು ಹೇಳುತ್ತಾರೆ ಅಲ್ಲವೇ.,

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, what he means? There is a law of this land.

(ಗೊಂದಲ)

**Sri NASEER AHMED:-** Mr.Chairman Sir, it should be same for both.

(ಗೊಂದಲ)

**Sri BASAVARAJ BOMMAI (Chief Minister):–** Do you want to dictate the law of the land? I don't agree with you.

**Sri NASEER AHMED:–** Mr. Chairman Sir, why there is a discrimination?

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):–** ಅದು terrorist act ಆಗುತ್ತದೆ. ಒಂದು ನಿಮಿಷ. ಅದು UAPA ಪ್ರಕರಣ ಆಗುತ್ತದೆ.

(ಗೊಂದಲ)

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಆ ಘಟನೆಗೆ ಮಾತ್ರ UAPA ಕೇಸ್ ಹಾಕಿದ್ದಾರೆ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಹೌದು. ಆ ತರಹ ಘಟನೆ ಇದೆ, ಅದಕ್ಕೆ ಹಾಕಿದ್ದೇವೆ. ಇದರಲ್ಲಿ ಏನು ತಪ್ಪು ಇದೆ?

(ಗೊಂದಲ)

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಸಮಾನತೆ ಎಲ್ಲಿದೆ? ಆ ಘಟನೆಗೆ ಮಾತ್ರ UAPA ಕೇಸ್ ಹಾಕಿದ್ದಾರೆ.

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಅದು terrorist act ಆಗಲಿ, ಇನ್ನೊಂದಾಗಲಿ why are you ( Sri Naseer Ahmed ) interfering in the investigation? You are putting pressure on the investigation. You are misguiding the investigation. You want to

control the investigation. Your intent is not correct. You are misguiding.

**Sri NASEER AHMED:-** As head of the State, you should treat all the people of the state equally.

**Sri BASAVARAJ BOMMAI (Chief Minister):-** You are not the judge.

**Sri NASEER AHMED:-** You cannot discriminate.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಯಾವುದೇ ಸೆಕ್ಷನ್ ಹಾಕಿದರೂ ಸಹ, ಅದು ನ್ಯಾಯಾಲಯದಲ್ಲಿ ತೀರ್ಮಾನವಾಗುತ್ತದೆ. ಅದನ್ನು ಅವರ ಮನಸ್ಸಾ ಇಚ್ಚೆಯಂತೆ ಹಾಕುವುದಕ್ಕೆ ಆಗುವುದಿಲ್ಲ. ಅವರು ಹೇಳಿದಂತೆ ಕೇಳುವುದಕ್ಕೆ ಆಗುವುದಿಲ್ಲ. Terrorism ಮಾಡಿದರೆ ನಾವು ಸೆಕ್ಷನ್ ಹಾಕಬೇಕೋ, ಬೇಡವೋ?

(ಗೊಂದಲ)

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಯಾರು terrorist ಸ್ವಾಮಿ?

(ಗೊಂದಲ)

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಅವರು ಭಯೋತ್ಪಾದನೆ ಪರವಾಗಿ ಇರುವಂತಹ ಮಾತುಗಳನ್ನು ಮಾತನಾಡುತ್ತಾರೆ.,

(ಗೊಂದಲ)

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ನಿಜ ಮಾತನಾಡಿದರೆ, ಭಯೋತ್ಪಾದನೆ ಎನ್ನುತ್ತಾರೆ. It is coming from the bottom of my heart. Being the head of the State, everybody is same to you.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, you are supporting the terrorism.

(ಗೊಂದಲ)

**ಸಭಾಪತಿಯವರು:-** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 05 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

(849) 15.09.2022 3.20 ವೈಎಲ್-ಎಕೆ

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2 ಗಂಟೆ 05 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

## ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ, 2022ರ

### ಮೇಲಿನ ಮುಂದುವರೆದ ಚರ್ಚೆ

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಒಂದು ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕದ ಮುಂದುವರೆದ ಚರ್ಚೆಯಲ್ಲಿ ಈಗಾಗಲೇ ಪ್ರಸ್ತಾಪ ಮಾಡಿದಂತೆ, ಈ ಒಂದು ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮತಾಂತರ ವಿಚಾರದಲ್ಲಿ ಕ್ರಿಶ್ಚಿಯನ್ ಸಮುದಾಯವನ್ನು ಏತಕ್ಕೆ ಗುರಿ ಮಾಡುತ್ತಿದ್ದಾರೆ ಎಂದು

ಕೇಳಿದೆನು. 1835ನೇ ಸಾಲಿಗೂ ಮೊದಲು ಅಂದರೆ, ಲಾರ್ಡ್ ಮೆಕಾಲೆ ಬರುವ ಮೊದಲು ಈ ದೇಶದಲ್ಲಿ ಸಾಕ್ಷರತೆ ಪ್ರಮಾಣ ಕೇವಲ ಶೇಕಡಾ 2.8 ರಷ್ಟು ಮಾತ್ರ ಇತ್ತು. 117 ವರ್ಷ ಕಳೆದ ನಂತರ 1947ರಲ್ಲಿ ಸಾಕ್ಷರತೆ ಪ್ರಮಾಣ ಸುಮಾರು ಶೇಕಡಾ 11 ಅಥವಾ 12 ರಷ್ಟು ಮಾತ್ರ ಇದ್ದಿದ್ದು, ಈಗ ಶೇಕಡಾ 76 ರಷ್ಟಾಗಿದೆ. 1835ನೇ ಸಾಲಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬಂದ ನಂತರ ಲಾರ್ಡ್ ಮೆಕಾಲೆರವರು ಶಿಕ್ಷಣ ಕ್ಷೇತ್ರದಲ್ಲಿ "ದುರ್ಬಲ ವರ್ಗದವರಿಗೂ ಸಹ ಶಿಕ್ಷಣದ ಅವಕಾಶ ಸಿಗಬೇಕೆಂದು" ಕೆಲವು ಕ್ರಾಂತಿಗಳನ್ನು ಮಾಡಲು ಶುರು ಮಾಡಿದರು. 1835ನೇ ಸಾಲಿನಲ್ಲಿ ಬಹುಸಂಖ್ಯಾತರು ಶಿಕ್ಷಣದಿಂದ ವಂಚಿತರಾಗಿದ್ದು, ಮಹಿಳೆಯರಿಗಂತೂ ಶಿಕ್ಷಣವೇ ಇರಲಿಲ್ಲ. ಜ್ಯೋತಿ ಬಾ ಪುಲೆ ಮತ್ತು ಸಾವಿತ್ರಿ ಬಾಯಿ ಪುಲೆರವರು ಶಿಕ್ಷಣ ಕ್ಷೇತ್ರದಲ್ಲಿ ಬಂದ ನಂತರ ಮಹಿಳೆಯರಿಗೂ ಸಹ ಈ ದೇಶದಲ್ಲಿ ಶಿಕ್ಷಣ ಬೇಕಾಗಿದೆ ಎಂದು ಹೋರಾಟ ಮಾಡಿದ ತಕ್ಷಣ ಮಹಾತ್ಮಗಾಂಧಿಜೀಯವರಿಗಿಂತ ಮೊದಲು ಯಾರಾದರೂ ಮಹಾತ್ಮರು ಇದ್ದರೆ ಅದು ಮಹಾತ್ಮ ಜ್ಯೋತಿ ಬಾ ಪುಲೆರವರು. ಕ್ರಿಶ್ಚಿಯನ್ ಮಿಷಿನರಿಗಳು ಕೂಡಾ ವಿದ್ಯೆಗೆ ಹೆಚ್ಚು ಒತ್ತು ನೀಡಿ, ನಮ್ಮಂತಹ ಶೂದ್ರರಿಗೂ ಸಹ ಶಿಕ್ಷಣದ ಸವಲತ್ತನ್ನು ಕಲ್ಪಿಸಿಕೊಟ್ಟು, ಕೆಲವು ಜಾಗದಲ್ಲಿ ಇಂಗ್ಲಿಷ್ ಅನ್ನು ಕಲಿಯುವಂಥ ಸವಲತ್ತು ನೀಡಿ, ಕೆಲವರಿಗೆ ಮಾತ್ರ ಆಸ್ತಿಯಾಗಿದ್ದ ಶಿಕ್ಷಣವನ್ನು ಬೇರೆಯವರಿಗೂ ಸಹ ಅಭ್ಯಾಸ ಮಾಡಲು ಅಥವಾ ಶಿಕ್ಷಣವನ್ನು ಬಳಸಿಕೊಳ್ಳಲು ಅವಕಾಶ ಕಲ್ಪಿಸಿದ್ದರು. ಜೊತೆಗೆ ಆರೋಗ್ಯ ಕ್ಷೇತ್ರದಲ್ಲಿ ನೋಡಿದಾಗ ಅತೀ ಹೆಚ್ಚಿನ ಆಸ್ಪತ್ರೆಗಳು ಈಗಲೂ ಸಹ ಚಾರಿಟೆಬಲ್ ಇನ್ಸ್‌ಟಿಟ್ಯೂಷನ್ ಎಂದು ಇದ್ದರೆ, ಅದು ಕ್ರಿಶ್ಚಿಯನ್ ಮಿಷಿನರಿಸ್‌ರವರದ್ದಾಗಿದೆ. ಶಿಕ್ಷಣ ಮತ್ತು ಆರೋಗ್ಯ \ ಶೂದ್ರರಿಗೆ, ದಲಿತರಿಗೆ, ಆದಿವಾಸಿಗಳಿಗೆ ಸಿಗುತ್ತಿದೆ ಎನ್ನುವುದೇ ಒಂದು ವರ್ಗಕ್ಕೆ ಆತಂಕ ಆಗಿತ್ತು. ಹಾಗಾಗಿ, ಅವರ ಒಂದು space ಅನ್ನು occupy ಮಾಡುತ್ತಿದ್ದೇವೆ ಎನ್ನುವುದೇ ಅವರ ದೊಡ್ಡ ಆತಂಕ ಮತ್ತು ಕಳವಳವಾಗಿದೆ. ಆದರೆ, ಯಾರ space ಅನ್ನು ಯಾರು ಸಹ occupy ಮಾಡುವುದಿಲ್ಲ. ಆದ್ದರಿಂದ ಇವರ ಮೇಲೆ ಆದಷ್ಟು ಅತ್ಯಾಚಾರ, ದಬ್ಬಾಳಿಕೆ, ದೌರ್ಜನ್ಯ ಮಾಡಿ ಅದರ ಮೂಲಕ ಭಯದ ವಾತಾವರಣ ಸೃಷ್ಟಿ ಮಾಡಿ, ಶೂದ್ರರನ್ನು, ದಲಿತರನ್ನು ಕಪಿಮುಷ್ಠಿಗೆ ತೆಗೆದುಕೊಳ್ಳುವಂಥ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ. ಹಾಗಾಗಿ ಅಂಕಿಅಂಶಗಳನ್ನು

ಕೊಡುವಾಗ,... ಈ ಬಹುಸಂಖ್ಯಾತರಿಗೆ ಏನಾಗಿದೆ ಎಂದರೆ, ಸಣ್ಣ ಸಮುದಾಯದ ಮೇಲೆ ಭಯ ಹುಟ್ಟಿಸಿದಂತಾಗಿದೆ. ಕ್ರಿಶ್ಚಿಯನ್ನರು, ಮುಸ್ಲಿಂರು, ಬೌದ್ಧರು, ಸಿಖ್, ಜೈನ್ ಈ ಎಲ್ಲಾ ಸಮುದಾಯದವರಿಗೆ ಒಂದು ರೀತಿಯ ಅಸ್ಥಿರತೆಯನ್ನು ಸೃಷ್ಠಿ ಮಾಡಿ, ಅವರ ಮೇಲೆ ಸಂಪೂರ್ಣ ಪ್ರಾಬಲ್ಯ ಅಥವಾ ಹಿಡಿತವನ್ನು ಮಾಡಲು ಮಾಡಿರುವಂಥ ಪ್ರಯತ್ನವನ್ನು ನಾವೆಲ್ಲರೂ ನೋಡಿದ್ದೇವೆ. ಆದ್ದರಿಂದ ಈ ಒಂದು ತಿದ್ದುಪಡಿ ವಿಧೇಯಕವನ್ನು ತರಲಾಗಿದೆ. ಇದರ ಜೊತೆಗೆ ಕಾನೂನು ಸಂವಿಧಾನ ಇದ್ದರೂ ಕೂಡಾ ಅನೈತಿಕ ಪೋಲೀಸ್ ಗಿರಿ ನಡೆಯುತ್ತಿದೆ. ಕೇವಲ ಸಂವಿಧಾನದ ಉಲ್ಲಂಘನೆಯಾಗಿಲ್ಲ, ಮಾನವ ಹಕ್ಕುಗಳ ಉಲ್ಲಂಘನೆ ಸಹ ಆಗಿದೆ. ಇದರಿಂದಾಗಿ ಬೇಗ ಎಚ್ಚೆತ್ತುಕೊಳ್ಳಲಿಲ್ಲವೆಂದರೆ, ಏನೇನು ಅನಾಹುತಗಳು ನಡೆಯುತ್ತವೆ ಎಂಬುದನ್ನು ಯಾರೂ ಸಹ ಊಹೆ ಮಾಡಲು ಸಾಧ್ಯವಿಲ್ಲ. ಈಗಾಗಲೇ ಹೇಳಿದ ಹಾಗೆ ಸಂವಿಧಾನದಲ್ಲಿ "ಬಲವಂತವಾಗಿ ಮತಾಂತರ ಮಾಡುವ ಹಾಗಿಲ್ಲ" ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಸಾಕಷ್ಟು ಒಳ್ಳೆಯ ಆರ್ಟಿಕಲ್ಸ್ ಇದೆ. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬೌದ್ಧ ಧರ್ಮಕ್ಕೆ ಮತಾಂತರವಾದ ನಂತರ ನಾಗಪುರದಲ್ಲಿ ಮೊತ್ತೊಂದು ಕಾರ್ಯಕ್ರಮದಲ್ಲಿ Marxist ತತ್ವವನ್ನು ಪ್ರಸ್ತಾಪನೆ ಮಾಡುತ್ತಾರೆ. ಅದೇನೆಂದರೆ, ಮನುಷ್ಯ ಕೇವಲ ಆಹಾರದಿಂದ ಜೀವಿಸಲಾರ, ಆತನಿಗೆ ಮನಸ್ಸು ಎಂಬುದು ಇದೆ. ಅದಕ್ಕೆ ಆಹಾರ ಬೇಕಾಗಿದ್ದು, ಆ ಆಹಾರ ಪಡೆದುಕೊಳ್ಳಲು ಸ್ವಾತಂತ್ರ್ಯ ಬೇಕು ಮತ್ತು ನಿಜವಾದ ಧರ್ಮದಲ್ಲಿ ಚೈತನ್ಯವನ್ನು ಜಾಗೃತಿಗೊಳಿಸುತ್ತದೆ. ನೈಜ ಅರ್ಥದಲ್ಲಿ ಧರ್ಮವಲ್ಲದ ಹಿಂದೂ ಧರ್ಮ ಮಾತ್ರ ಚೈತನ್ಯವನ್ನು ಹುಡುಗಿಸಿತು ಎಂದು ಹೇಳಿದರು. ಕೆಲವು ಸಂದರ್ಭದಲ್ಲಿ ನಮ್ಮನ್ನು ಆಳುವ ಸರ್ಕಾರವು. ಅಂದರೆ, ಪ್ರಭುತ್ವ ಅಧಿಕಾರ ಸೂತ್ರ ಹಿಡಿದ ಪಕ್ಷಗಳು ಏನಾದರೂ ಬಿಕ್ಕಟ್ಟಿಗೆ ಸಿಕ್ಕಿ ಹಾಕಿಕೊಂಡಾಗ, ಆ ಬಿಕ್ಕಟ್ಟಿನಿಂದ ಜನ ಸಾಮಾನ್ಯರು ಆರ್ಥಿಕ ಮತ್ತು ಸಾಮಾಜಿಕವಾಗಿ ತತ್ತರಿಸಿ ಹೋಗುವ ಸಂದರ್ಭದಲ್ಲಿ ನಾವು ಈ ಮತಾಂತರ ನಿಷೇಧ, ಗೋ ರಕ್ಷಣೆ, ಲವ್ ಜಿಹಾದ್ ಇಂತಹ ವಿಷಯಗಳು ಬರುತ್ತಿರುತ್ತವೆ. ಕಳೆದ ಬೆಳಗಾವಿ ವಿಧಾನಸಭೆ ಅಧಿವೇಶನದ ಸಂದರ್ಭದಲ್ಲಿ ಯಾದಗಿರಿ ಜಿಲ್ಲೆಯಲ್ಲಿ ಒಬ್ಬ ವ್ಯಕ್ತಿ ಮನೆಗೆ ನುಗ್ಗಿ ದಲಿತ ಮಹಿಳೆ ಮೇಲೆ ಅತ್ಯಾಚಾರ ಮಾಡುತ್ತಾನೆ. ಆ ಹೆಣ್ಣು ಮಗಳು ಪ್ರತಿರೋಧ ವ್ಯಕ್ತ ಮಾಡಿದಾಗ ಪೆಟ್ರೋಲ್ ಹಾಕಿ ಸುಡುತ್ತಾನೆ. ಇಂದಿನ ಸದನ ಭೋಜನ

ವಿರಾಮಕ್ಕಾಗಿ ಮುಂದೂಡಿದ ನಂತರ ಅಂದರೆ, ಒಂದು ಗಂಟೆ ಮುಂಚೆ ನನಗೆ ಹೊನ್ನಾವರದಿಂದ ಒಬ್ಬ ಹೆಣ್ಣು ಮಗಳು ಕರೆ ಮಾಡಿದ್ದಳು. ಅರಣ್ಯ ಇಲಾಖೆಯಲ್ಲಿ ಹಿಂದುಳಿದ ವರ್ಗದವನೊಬ್ಬ ಕೆಲಸ ಮಾಡುತ್ತಿದ್ದು, ಆತನಿಗೆ ನಿಂದನೆ ಹಾಗೂ ಅಪಮಾನ ಮಾಡಿರುವುದರಿಂದ Death Note ಬರೆದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆತನ ವಿರುದ್ಧವೇ ಐ.ಪಿ.ಸಿ ಸೆಕ್ಷನ್ 306 ರ ಅಡಿಯಲ್ಲಿ ಕೇಸ್ ದಾಖಲಿಸಲಾಗಿದೆ. ಮಾನ್ಯ ನಸೀರ್ ಅಹ್ಮದ್‌ರವರು ಸಹ ಅದೇ ವಿಚಾರವನ್ನು ಹೇಳಿದ್ದು.

(ಮುಂದು)

(850) 15.09.2022/3.30/ಎಸ್‌ಕೆ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್(ಮುಂದು)**

'Rule is a rule even to the fool.' ನಾವೆಲ್ಲರೂ ಶಾಲಾ ಪ್ಯಠ ಪುಸ್ತಕದಲ್ಲಿ ಕಲಿತ್ತಿದ್ದೆವು. ಈಗ 'rules are only for fools' ಎನ್ನುವಂತಹದ್ದು ಆಗಿದೆ. ಬಲಾಢ್ಯರಿಗೆ ಯಾವುದೇ ರೂಲ್ಸ್ ಇಲ್ಲ ಮತ್ತು ಸಂವಿಧಾನ ಇಲ್ಲ. ಇಂತಹ ಪರಿಸ್ಥಿತಿ ಇರುವ ದೇಶದಲ್ಲಿ ನೀವು ಸಂವಿಧಾನಕ್ಕೆ ...

**ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅವನ ಮೇಲೆ ಬೇರೆ ಯಾವ ಸೆಕ್ಷನ್ ಮೇಲೆ ಕೇಸ್ ಹಾಕಬಹುದಾಗಿತ್ತು.

**Sri B.K. HARIPRASAD:-** Murder ಅಂತಾ ಹೇಳಿ ಸೆಕ್ಷನ್ 302 ಹಾಕಿ.

**Sri J.C. MADHU SWAMY:-** When there is a death note, UDR case ತೆಗೆದುಕೊಳ್ಳುತ್ತೇವೆ. Death due to atrocities or death due to harassment ಅಂತಾ ಹೇಳಿ, ಪೊಲೀಸ್‌ನವರು ಕೇಸ್ ತೆಗೆದುಕೊಳ್ಳಬೇಕು. Murder ಮಾಡಿದ್ದಾನೆಂದು ಅವನು ಎಲ್ಲಿಯೂ ಹೇಳಿಲ್ಲವಲ್ಲ. ನಾನು ಸತ್ತಿದ್ದೇನೆ ಎಂದು ಬರೆದಿದ್ದಾನೆ,

**ಶ್ರೀ ಬಿ.ಕೆ. ಹರಿಪ್ರಸಾದ್:-** ತಾವು abatement ಹೇಳುತ್ತಿರುವುದು.

**Sri J.C. MADHU SWAMY:-** No. ನಾನು ಹಿಂಸೆಗೊಳಗಾಗಿ ಸತ್ತಿದ್ದೇನೆ. It attracts only Section ೩೦೬.

**ಶ್ರೀ ಬಿ.ಕೆ.ಹರಿಪ್ರಸಾದ್:-** ಅಷ್ಟೊಂದು ಕಾನೂನಿನ ಪರಿಜ್ಞಾನ ನನಗಿಲ್ಲ. ಅದರ ಬಗ್ಗೆ ತಾವು ಹೇಳಿದ್ದರಿಂದ ತಿಳಿದುಕೊಂಡೆ. ಆದರೆ ಡೆತ್ ನೋಟ್‌ನಲ್ಲಿ ಹೆಸರು ಇರುವಂತಹವರು, ಆರಾಮವಾಗಿ ಓಡಾಡುತ್ತಿದ್ದಾನೆ. ಆ ಹೆಣ್ಣು ಮಗಳು ಹೇಳಲಿಲ್ಲವೆಂದರೆ ನನಗೆ ಇದರ ಬಗ್ಗೆ ಗೊತ್ತಾಗುತ್ತಿರಲಿಲ್ಲ. ಆರಾಮವಾಗಿ ಓಡಾಡುತ್ತಿದ್ದಾನೆ. ಯಾದಗಿರಿ ವಿಚಾರಕ್ಕೆ ಬರುತ್ತೇನೆ. ಪೆಟ್ರೋಲ್ ಹಾಕಿ ಸುಟ್ಟಿದರು. ಆ ತಿಂಗಳಿನಲ್ಲಿ ಸುಮಾರು ಏಳೆಂಟು ಘಟನೆಗಳು ಯಾದಗಿರಿ ಜಿಲ್ಲೆಯಲ್ಲಿಯೇ ನಡೆದಿದೆ. ಅದನ್ನು ತಡೆಯುವುದಕ್ಕೆ ಆಡಳಿತ ವ್ಯವಸ್ಥೆಗೆ ಯಾವುದೂ ಆಗಲಿಲ್ಲ. ಪೊಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಟ್ಟರೆ, ಪೊಲೀಸ್‌ನವರು ಸಹ ದೂರು ತೆಗೆದುಕೊಳ್ಳಲಿಲ್ಲ. Atrocities or rape ಕೇಸ್‌ಗಳು ಬಂದಾಗ, ಪೊಲೀಸ್‌ನವರು avoid ಮಾಡುತ್ತಾರೆ. ಅಂದರೆ, ಬಲಾಢ್ಯರಿಗೆ ಮಾತ್ರ ಇರುವಂತಹ ವ್ಯವಸ್ಥೆ ಇದೆ ಎಂದು ತೋರಿಸುತ್ತಿದೆ. ನಮ್ಮ ಪಕ್ಷ ಅಥವಾ ನಿಮ್ಮ ಪಕ್ಷ ಇರಲಿ, ಯಾವುದೇ ಪಕ್ಷದ ಸರ್ಕಾರವಿರಲಿ, ಇದು ನಡೆಯುತ್ತಲೇ ಬಂದಿದೆ. ಅದನ್ನು ನಾವು ಸರಿಪಡಿಸುವುದಕ್ಕೆ ಆಗಿಲ್ಲ. ಅಂದರೆ ಏನು ಧರ್ಮ ರಕ್ಷಕರು ಅಂತಾ ಹೇಳಿ self-proclaimed protectors of religion ಎನ್ನುವವರಿದ್ದಾರೆ ನೋಡಿ, ಅವರು ಮತಾಂತರವಾದರೆ, ಹಿಂದೂಗಳ ಜನಸಂಖ್ಯೆ ಕಡಿಮೆಯಾಗುತ್ತದೆ ಎಂದು ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್ನರ ಜನಸಂಖ್ಯೆ ಜಾಸ್ತಿಯಾಗುತ್ತಾರೆಂದು ಅವರು ಬೊಬ್ಬೆ ಹಾಕುತ್ತಲೇ ಇದ್ದಾರೆ. ಇದರ ಬಗ್ಗೆ ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಎಲ್ಲಿಯೂ ಸಹ ಕಾಣುತ್ತಿಲ್ಲ. ಕ್ರಿಶ್ಚಿಯನ್ ಜನಸಂಖ್ಯೆ ೨% ಮೇಲೆ ದಾಟಿಯೇ ಇಲ್ಲ. ೫೬ನೇ ಶತಕದಲ್ಲಿ ಈ ದೇಶಕ್ಕೆ ಸೈಂಟ್ ಥಾಮಸ್ ಬಂದಿದ್ದು. ಆದರೆ ಅಲ್ಪಸಂಖ್ಯಾತರ ಮೇಲೆ ಇಷ್ಟೊಂದು ಭಯದ ವಾತಾವರಣವನ್ನು ಸೃಷ್ಟಿ ಮಾಡುವಂತಹದ್ದು ಬೇಕಾಗಿರಲಿಲ್ಲ. ನಾನು ಆಗಲೇ ಹೇಳಿದ್ದೇನೆ. ಗೋಳ್ವಾಲ್ಕರ್‌ರವರ ಪ್ರಕಾರ ಮತಾಂತರ ಹಿಂದೂಗಳ ಸಂಖ್ಯೆಯೇ ಕಡಿಮೆ ಮಾಡುವ ಹುನ್ನಾರವಾಗಿ ಕಂಡಿತ್ತು. ಆದರೆ ಡಾ. ಬಿ.ಆರ್. ಅಂಬೇಡ್ಕರ್‌ರವರು ಏನು ಹೇಳುತ್ತಾರೆಂದರೆ, ಇದೊಂದು

ಗುಲಾಮಗಿರಿಯಿಂದ ಬಿಡುಗಡೆ ದಾರಿ ಎಂದು ಆಗಲೇ ಹೇಳಿದ್ದಾರೆ. ಈಗಾಗಲೇ ನಾನು ಹೇಳಿದ ಹಾಗೇ ಸುಮಾರು ಅಂಕಿ-ಅಂಶಗಳ ಬಗ್ಗೆ ಆಗಾಗ WhatsApp University ನಲ್ಲಿ ಬರುತ್ತದೆ. WhatsApp University ನಲ್ಲಿ ನೋಡಿದಾಗ ಗಾಬರಿಯಾಗಿ ಹೋಗಿ ಬಿಡುತ್ತಾರೆ. ಅಂಕಿ-ಅಂಶಗಳನ್ನು ಕೊಟ್ಟು, ಗೊಲ್ಲೆಬ್ಬಿಸುವ ಪ್ರಸಂಗ. ಅಲ್ಲಿ Registrar General and Census Commissioner of India ಅವರ ಪ್ರಕಾರ ತೆಗೆದುಕೊಂಡರೂ ಸಹ ಕ್ರಿಶ್ಚಿಯನ್ ಜನಸಂಖ್ಯೆ 1.8% ಗಿಂತ ಮೇಲೆ ಹೋಗಿಲ್ಲ. ಡಾ॥ ಬಿ.ಆರ್. ಅಂಬೇಡ್ಕರ್ ಸಾಹೇಬರು ಏನು ಹೇಳುತ್ತಾರೆಂದರೆ, ಮತಾಂತರದ ಕಟ್ಟುಕತೆಯನ್ನು ಕಟ್ಟಿ ತನ್ನ ಹಿಂದೂತ್ವದ ಮೂಲಕ ಶ್ರೇಣಿಕೃತ ಜಾತಿ ವ್ಯವಸ್ಥೆಯ ಬೇರುಗಳನ್ನು ಗಟ್ಟಿಗೊಳಿಸಲು ಮಸಲತ್ತು ನಡೆಸಿರುವ ಶಕ್ತಿಗಳು ವಾಸ್ತವ ಸಂಗತಿಗಳ ಮೇಲೆ ಮುಸುಕೆಳೆಯುವ ಹುನ್ನಾರಗಳನ್ನು ನಡೆಸುತ್ತಲೇ ಇವೆ. ರಾಜರುಗಳ ಕಾಲದಲ್ಲಿ ಈ ದೇಶದ ಅಸ್ಪೃಶ್ಯರು, ಶೂದ್ರರು ಮತ್ತು ಮಹಿಳೆಯರ ಪರಿಸ್ಥಿತಿ ಹೇಗಿತ್ತು ಎಂಬುದು ಬಾಬಾ ಸಾಹೇಬ ಅಂಬೇಡ್ಕರ್, ಜ್ಯೋತಿಬಾಪುಲೆ, ಡಿ.ಡಿ. ಕೋಸಾಂಬ್ ಹಾಗೂ ಪೆರಿಯಾರ್ ಮತ್ತು ರಾಹುಲ್ ಸಂಕ್ರಾತ್ಯಾಯನರವರ ಸಾಕಷ್ಟು ಪುಸ್ತಕಗಳಿವೆ. ಅಂದರೆ, ಇದ್ದಿದ್ದು 542 ರಾಜ ಮಹಾರಾಜರು. ಬ್ರಿಟಿಷರು ಬರುವುದಕ್ಕಿಂತ ಮುಂಚೆ ರಾಷ್ಟ್ರ ಎಂಬ ಪರಿಕಲ್ಪನೆ ಇರಲಿಲ್ಲ ಮತ್ತು ಪ್ರಜಾಪ್ರಭುತ್ವದ ಪರಿಕಲ್ಪನೆಯೇ ಇರಲಿಲ್ಲ. ಈ 542 ರಾಜ ಮಹಾರಾಜರಲ್ಲಿ ಇನ್ನುಳಿದ 280 ರಾಜ ಮಹಾರಾಜರು ಗುಜರಾತ್‌ನವರು. ಐವತ್ತು ಎಕರೆ ಇಟ್ಟುಕೊಂಡಿರುವವನು ರಾಜ, ನೂರು ಎಕರೆ ಇಟ್ಟುಕೊಂಡಿರುವವನು ಮಹಾರಾಜ. ಜಯ ಮಹಲ್‌ನಲ್ಲಿ ಜಯ ಪ್ಯಾಲೇಸ್ ಎಂಬುದು ಇದೆ. ಅದು ಕೂಡ ಪ್ಯಾಲೇಸ್ ಹೋಟೆಲ್ ಆಗಿದೆ. ಆಗಿನ ಗುಜರಾತ್ ರಾಜ್ಯದ ಗೊಂಡಾಲ್ ಮಹಾರಾಜರಿಗೆ ಸೇರಿದ್ದು ಎಂದರು. ಅವರ ಆಸ್ತಿ ನಮ್ಮ ಊರಿನಲ್ಲಿ ಇದೆ. ನಾವು ಅದನ್ನು ನೋಡುವುದಕ್ಕೆ ಹೋದರೆ, ಹೆಚ್.ಎಸ್.ಆರ್. ಲೇಔಟ್‌ನಲ್ಲಿ ಸಾಹುಕಾರರು ದೊಡ್ಡ ಮನೆ ಕಟ್ಟಿರುತ್ತಾರೆ ನೋಡಿ, ಆ ರೀತಿಯ ಮನೆಯಲ್ಲಿ ಕುಳಿತುಕೊಂಡು ಹುಲಿ, ಸಿಂಹ ಹೊಡೆದಿರುವಂತಹ trophy ಅನ್ನು ಇಟ್ಟಿರುವುದು. ಒಂದು ಮುದಿ ಹೆಂಗಸು ಅಲ್ಲಿ ಕೂತಿದೆ. ಅವರು ಯಾರಪ್ಪಾ ಎಂದು ಕೇಳಿದರೆ, ಅವರು ರಾಣಿ ಎಂದು ಹೇಳಿದರು. 280 ರಾಜ ಮಹರಾಜರಿದ್ದ ಊರು. ಅದು ಗುಜರಾತ್ ರಾಜ್ಯ. ಆಗ ಒಂದು

ಊರಿಗೆ ಒಬ್ಬ ರಾಜ ಅವರ ಕೆಳಗಡೆ ನೂರು ಪಾಳೆಗಾರರು. ಪಾಳೆಗಾರರು ಏನು ಮಾಡುತ್ತಾರೆಂಬುದು ನಮಗೆ ಗೊತ್ತಿದೆ ಮತ್ತು ತಮಗೂ ಗೊತ್ತಿದೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಹರಿಪ್ರಸಾದ್‌ರವರೇ, ಒಂದು ನಿಮಿಷ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು yield ಆಗುವುದಿಲ್ಲ.

**ಶ್ರೀ ಎನ್.ರವಿಕುಮಾರ್:-** ಅವರು yield ಆದರೆ...

**ಶ್ರೀ ಬಿ.ಕೆ. ಹರಿಪ್ರಸಾದ್:-** ನನ್ನದೊಂದು ಪರಂಪರೆ ಇದೆ.

**ಸಭಾಪತಿಯವರು:-** ನಾನು ತಮಗೆ ಮಾತನಾಡುವುದಕ್ಕೆ ಹೇಳಲಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದವರು ಮಾತನಾಡುವಾಗ practices and conventions ಇದೆ. ಯಾರೂ ಕೂಡ interfere ಮಾಡಬಾರದು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಬ್ರಿಟಿಷರು ಬರುವುದಕ್ಕಿಂತ ಮುಂಚೆ ರಾಷ್ಟ್ರ ಯಾವ ಕಲ್ಪನೆ ಇತ್ತು ಎಂದು ಹೇಳಿದರೂ ...

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಆಗ ....

**(ಗೊಂದಲ)**

**ಸಭಾಪತಿಯವರು:-** ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ. I have not allowed. ವಿರೋಧ ಪಕ್ಷದ ನಾಯ

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಮಾನ್ಯ ವಿರೋಧ ಪಕ್ಷ ನಾಯಕರನ್ನು ಹೊರತುಪಡಿಸಿ, ಇನ್ನುಳಿದ ಮಾನ್ಯ ಸದಸ್ಯರು ಮಾತನಾಡಿರುವುದನ್ನು ನಡೆವಳಿಗಳಲ್ಲಿ ದಾಖಲಿಸಿರುವುದಿಲ್ಲ)**

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಒಂದೇ ರೀತಿ ಮಾಡಬೇಕು. ಅವರಿಗೊಂದು ರೀತಿ ಹೇಳುತ್ತೀರಿ. ನಮಗೊಂದು ರೀತಿ ಹೇಳುತ್ತೀರಿ. ನಾವು ಮಾತನಾಡಿದ್ದನ್ನು ಕಡತದಲ್ಲಿ ತೆಗೆಯಿರಿ ಎಂದು ಹೇಳುತ್ತೀರಿ. ಅವರು ಏತಕ್ಕೆ ಮಾತನಾಡಬೇಕು? ಮಾನ್ಯ ವಿರೋಧ ಪಕ್ಷದವರು ಏನಾದರೂ yield ಆಗಿದ್ದರಾ. ನಿನ್ನೆ ಕೂಡ ಹೀಗೆ ಆಯಿತು.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ ನಾನು ಏನು ಹೇಳಿದ್ದೇನೆ ಕೇಳಿ. ತಾವು ಸ್ವಲ್ಪ ಮಷಿನ್ ಕಿವಿಗೆ ಹಾಕಿಕೊಂಡು ಕೇಳಿ. ವಿರೋಧ ಪಕ್ಷದ ನಾಯಕರ ಮಾತನ್ನು ಬಿಟ್ಟರೆ, ನಾನು ಯಾರ ಮಾತನ್ನು ಕೇಳುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನಾನು yield ಆಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ನಾನು ಹೇಳಿರುವ ಬಗ್ಗೆ ತಮ್ಮ ಕಿವಿಗೆ ಮಷಿನ್ ಹಾಕಿಕೊಂಡು, ನಾನು ಏನೂ ಹೇಳಿದ್ದೇನೆಂಬ ಬಗ್ಗೆ ಕೇಳಿ. ನಾನು ಹೇಳಿರುವುದೇನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದನ್ನು ಬಿಟ್ಟರೆ, ನಾನು

ಬೇರೆ ಯಾರ ಮಾತನ್ನು ಕೇಳುವುದಿಲ್ಲ. ಅದು ರೆಕಾರ್ಡ್‌ಗೆ ಹೋಗುವುದು ಬೇಡ ಎಂದು ಹೇಳಿದ್ದೇನೆ. ನಾನು ಇನ್ನೇನೂ ಹೇಳಲಿ?

**(ಗೊಂದಲ)**

**Mr. CHAIRMAN:-** You people are habituated.

**ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ಸಂವಿಧಾನಿಕ ಸ್ಥಾನದಲ್ಲಿ ಇರತಕ್ಕಂಥಹವರು. ನಾನೇನದಾರೂ unparliamentary ಮಾತನಾಡಿದ್ದರೆ, ಅದನ್ನು ಕಡತದಿಂದ ತೆಗೆಯಿರಿ. ನಮ್ಮ ಅಪ್ಪ-ಅಮ್ಮ ನನಗೆ ಏನು ಹೇಳಿಕೊಟ್ಟಿದ್ದಾರೆಂದರೆ, ನೀನು ತಪ್ಪು ಮಾಡಿದರೆ, ಕ್ಷಮೆ ಕೇಳಬೇಕು ಎಂದು ಹೇಳಿಕೊಟ್ಟಿದ್ದಾರೆ. ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಸೆಕ್ಷನ್ 302 ಆಗುವುದಿಲ್ಲ, ಸೆಕ್ಷನ್ 306 ಆಗುತ್ತದೆ ಎಂದು ಹೇಳಿದ್ದಾರೆ. ಅವರು ಹೇಳಿರುವುದನ್ನು ನಾನು ಒಪ್ಪಿಕೊಂಡೆ.

**Mr. CHAIRMAN:-** Sportive ಆಗಿ ತೆಗೆದುಕೊಳ್ಳಬೇಕು.

**Sri B.K.HARIPRASAD:-** Not sportive. ಆ ತರಹ ಏನಾದರೂ ತಪ್ಪು ಇದ್ದರೆ, ನಮಗೆ ಮಾರ್ಗದರ್ಶನ ಮಾಡಿ. ಅದನ್ನು ನಾನು ಸರಿಪಡಿಸಿಕೊಳ್ಳುತ್ತೇನೆ. ನಮ್ಮ ಅಪ್ಪ-ಅಮ್ಮ ನನಗೆ ಬುದ್ಧಿ ಹೇಳಿಕೊಟ್ಟಿದ್ದಾರೆ.

**ಸಭಾಪತಿಯವರು:-** ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮತ್ತೆ ಯಾರಾದರೂ ನೀನು ಎಂದರೆ, ನಿಮ್ಮಪ್ಪ ಅಂತಾ ಹೇಳು ಎಂದು ಆ ಬುದ್ಧಿನು ಹೇಳಿಕೊಟ್ಟಿದ್ದಾರೆ.

**ಸಭಾಪತಿಯವರು:-** ಅದು ಬೇಡ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಆ ಎರಡು ಬುದ್ಧಿಯನ್ನು ಹೇಳಿಕೊಟ್ಟಿದ್ದಾರೆ.

**ಸಭಾಪತಿಯವರು:–** ತಮ್ಮ ಸ್ಥಾನ ಮತ್ತು ತಮ್ಮ ಗೌರವಕ್ಕೆ ತಕ್ಕಂತೆ ನಡೆದುಕೊಳ್ಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಸಣ್ಣವರು ಏನಾದರೂ ಒಂದು ಸಣ್ಣಪುಟ್ಟ ತಪ್ಪಗಳನ್ನು ಮಾಡಿದರೆ .... ನಾವು ಕಲಿತಿರುವ ಪಾಠಗಳು.

**ಸಭಾಪತಿಯವರು:–** ತಾವೊಬ್ಬ ವಿರೋಧ ಪಕ್ಷದ ನಾಯಕರು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಬ್ರಿಟಿಷರು ಮತ್ತು ಸಂವಿಧಾನ ಬರುವುದಕ್ಕಿಂತ ಮುಂಚೆ ಗೋವನ್ನು ಮತ್ತು ಬ್ರಾಹ್ಮಣರನ್ನು ಪೂಜೆ ಮಾಡುವವರಿಗೆ ಸ್ವರ್ಗ ಲೋಕದಲ್ಲಿ ಸೀಟ್ ಗ್ಯಾರಂಟಿ ಎಂದು ಹೇಳಿದ್ದರು. ಆದರೆ ಬ್ರಿಟಿಷರು ಬಂದ ಮೇಲೆ ಮತ್ತು ಬಾಬಾ ಸಾಹೇಬ ಅಂಬೇಡ್ಕರ್‌ರವರು ಬಂದ ಮೇಲೆ ಎಲ್ಲರಿಗೂ ಸಹ ಸ್ವರ್ಗದಲ್ಲಿ ಸೀಟ್ ಇದ್ದೆ ಇರುತ್ತದೆ. ಅದಕ್ಕೆ ಏನು ಯೋಚನೆ ಮಾಡಬಾರದು ಎಂದು ಹೇಳಿದರು. ಆದ್ದರಿಂದ, ಈ ಭಾರತ ದೇಶದಲ್ಲಿ ಮತಾಂತರ ಎನ್ನುವಂತಹದ್ದು ಇವತ್ತಿನಿಂದಲ್ಲ. ಅದು ಬಸವಣ್ಣನವರ ಕಾಲದಿಂದಲೂ ನಡೆದಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾಗ ಹೇಳಿದ್ದಾರೆ. ಮತಾಂತರ ಏಕೆ ಆಗುತ್ತಾರೆ ಎಂದು ಹೇಳಿದರೆ, ಪಾಳೆಗಾರರ ಕೆಳಗೆ ಜಮೀನ್ದಾರರು, ಭೂಮಾಲೀಕರು, ಪುರೋಹಿತರ ಹಿಡಿತ, ದಲಿತರ ಮತ್ತು ಶೂದ್ರರ ಏಳಿಗೆಯನ್ನು ಸಹಿಸಲಾರದೇ ಇರುವಂತಹವರು. "ಭೂಮಾಲೀಕರು ಪುರೋಹಿತರ ಉಪಟಳ ಸಹಿಸದೆ ದಲಿತರು, ಶೂದ್ರರು ಮಹಮ್ಮದಿಯರಾದರು" ಎಂದು ಸ್ವಾಮಿ ವಿವೇಕಾನಂದರವರು ಸ್ಪಷ್ಟವಾಗಿ ಹೇಳಿದ್ದಾರೆ. ದಲಿತರು, ಹಿಂದುದವರು, ಈ ನೆಲದ ಮೂಲನಿವಾಸಿಗಳು. ಆ ರೀತಿಯ ಏನಾದರೂ ಮತಾಂತರವಾಗಿದೆ ಎಂದು ಹೇಳುವುದಿದ್ದರೆ, ಭಾರತದಲ್ಲಿ ಆರ್ಯರು ಬಂದ ಮೇಲೆ ಈ ಮೂಲ ನಿವಾಸಿಗಳನ್ನು ಸಂಪೂರ್ಣವಾಗಿ ಕಡೆಗಣಿಸಿ, ಸಂಪೂರ್ಣವಾಗಿ ಅವರ ಸಂಸ್ಕೃತಿಗೆ ಮತಾಂತರ ಮಾಡಿದ್ದಾರೆ ಎಂದು ಹೇಳಬಹುದು. ಆದ್ದರಿಂದ ಈ ದೇಶದಲ್ಲಿ ಮತಾಂತರ ಮಾಡುವುದು ಹೊಸದೇನಲ್ಲ. ಕೇಂದ್ರ ಸರ್ಕಾರದವರು ಎನ್.ಡಿ.ಎ. ಸರ್ಕಾರ

ಎನ್ನುತ್ತೀರಾ ಅಥವಾ ಮಾನ್ಯ ನರೇಂದ್ರ ಮೋದಿಯವರು ಸರ್ಕಾರ ಎನ್ನುತ್ತೀರಾ. ಕೆಲವು ಜಾತಿಗಳನ್ನು tribal ಗೆ ಸೇರಿಸಿದರು. ಅದರಲ್ಲಿ "ಬೆಟ್ಟದ ಕುರಬರು" ಎನ್ನು ಜಾತಿಯನ್ನು tribal ಗೆ ಸೇರಿಸಿದ್ದಾರೆ. ತಮಿಳುನಾಡಿನಲ್ಲಿರುವ "ನರಿ ಕುರಿವರ್" ಎಂಬ ಜಾತಿಯನ್ನು ಸೇರಿಸಿದ್ದಾರೆ. ಮಾನ್ಯ ಜೆ.ಸಿ. ಮಾಧುಸ್ವಾಮಿಯವರೇ, it is very interesting. "ನರಿ ಕುರಿವರ್" ಎಂಬ ಸಮುದಾಯದಲ್ಲಿ ಒಬ್ಬರೇ graduate ಇರುವವರು. ಸೂರ್ಯ ಉದಯವಾದ ಮೇಲೆ, ಅವರ ಎಲ್ಲಿಯೂ ಹೊರಗಡೆ ಕಾಣಿಸುವಾಗಿಲ್ಲ. ಅವರು ಏನಿದ್ದರು ರಾತ್ರಿ ಹೊತ್ತು ಮಾತ್ರ ಓಡಾಡಬೇಕು. ಇಷ್ಟೆಲ್ಲಾ discriminations, disparity, ಬೇಧ-ಭಾವಗಳು ಮತ್ತು ಒಂದು ರೀತಿ ಭಯಾನಕವಾದ ನಿಯಮಗಳಿದ್ದಾಗ, ಅದನ್ನು ಸರಿಪಡಿಸಬೇಕೆಂದು ಹೇಳಿ, ಈ ಸಂವಿಧಾನವನ್ನು ತಂದಿರುವಂತಹದ್ದು. ನಮ್ಮ ಧರ್ಮದಲ್ಲಿ ದಲಿತರು, ಶೂದ್ರರ ಕಥೆ ಈಗ ಕೇಳಿ. ಅವರಿಗೆ ಪಂಕ್ತಿ ಭೋಜನ ಇಲ್ಲವೇ ಇಲ್ಲ.

(ಮುಂದು)

**(851) 15-09-2022, 3.40, ಟಿಸಿಹೆಚ್-ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಿ.ಕೆ.ಹರಿಪ್ರಸಾದ್ (ಮುಂದು)**

ಬೇರೆಯವರು ಎಸೆದಿದ್ದನ್ನು ತಿನ್ನಬೇಕು, ನಾಯಿ-ಬೆಕ್ಕುಗಳಿಗಿಂತಲೂ ಕಡೆ. ಪಲ್ಲಕ್ಕಿ ಹೊರುವುದಕ್ಕೂ ನಾವೇ ಬೇಕು, ತಪ್ಪಾದರೆ ಬರೆ ಹಾಕಿಸಿಕೊಳ್ಳುವುದಕ್ಕೂ ನಾವೇ ಬೇಕು, ಮಡೆ ಸ್ನಾನ ಮಾಡುವುದಕ್ಕೂ ನಾವೇ ಬೇಕು, ಬೆಂಕಿಯ ಮೇಲೆ ನಡೆಯುವುದಕ್ಕೂ ನಾವೇ ಬೇಕು, ದನಗಳು ಸತ್ತರೆ ಅವುಗಳನ್ನು ಹೂಳುವುದಕ್ಕೂ ನಾವೇ ಬೇಕು. ಅದಲ್ಲದೇ ನಮ್ಮನ್ನು ಹೊಡೆಸುವುದಕ್ಕೆ ನಮ್ಮ ಶೂದ್ರರ ಕೈಯಲ್ಲೇ ಲಾಟಿ ಮತ್ತು ತಲವಾರ್‌ಗಳನ್ನೆಲ್ಲಾ ಕೊಟ್ಟುಬಿಟ್ಟು ನಮ್ಮವರಿಂದಲೇ ಕೊಲೆ ಮಾಡಿಸುತ್ತಾರೆ. ಇವತ್ತಿನ ದಿವಸ ಈ ಸ್ಥಿತಿಗೆ ಬಂದಿದ್ದೇವೆ. ಅಂದರೆ ಅಷ್ಟೊಂದು ವಿಷ ಬೀಜವನ್ನು ಬಿತ್ತಿಬಿಟ್ಟಿದ್ದಾರೆ. ಅದು ಬೇಕಾಗಿಲ್ಲ. ಅದಕ್ಕೆ ಬೆಳಗ್ಗೆ ನಾನು 'hate is motivated, it is not inborn quality.' ಎಂದು ಹೇಳಿದೆನು. ಡಾ॥ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹೇಳಿರುವುದನ್ನು ನಾನು ಕೋಟ್

ಮಾಡುತ್ತಿದ್ದೇನೆ. "ಇಲ್ಲಿ ನೆಲೆಸಿರುವ ಯಾವುದೇ ಜಾತಿ ಮತಗಳಾಗಲಿ, ಧರ್ಮಗುರುಗಳಾಗಲಿ, ಮಠಾಧೀಶರಾಗಲಿ, ಕೋಮುವಾದಿ ಪರಿವಾರಗಳಾಗಲಿ ಈ ಸಂವಿಧಾನಕ್ಕಿಂತ ದೊಡ್ಡವರಲ್ಲ. ಬಹು ಧರ್ಮೀಯರು, ಬಹು ಸಂಸ್ಕೃತಿಗಳ, ಬಹು ಭಾಷೆಗಳ ಜನಾಂಗೀಯ ವೈವಿಧ್ಯತೆಗಳನ್ನು ಹೊಂದಿರುವ ಈ ಭಾರತದಲ್ಲಿ ಜಾತ್ಯಾತೀತ ಜನತಂತ್ರ ವ್ಯವಸ್ಥೆಯನ್ನು ಬದುಕಿನ ಅವಿಭಾಜ್ಯ ಅಂಗವೆಂದು ಒಪ್ಪಿಕೊಂಡಿದ್ದೇವೆ. ಅದಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳುವುದು ಎಲ್ಲರ ರಾಷ್ಟ್ರೀಯ ಕರ್ತವ್ಯವಾಗಿದೆ" ಎಂಬುದನ್ನು ಬಾಬಾ ಸಾಹೇಬ್ ಭೀಮ್ ರಾವ್ ಅಂಬೇಡ್ಕರ್ ರವರು ಹೇಳಿರುವುದು. ಕ್ರೈಸ್ತರ ಕೊಡುಗೆ ಬಗ್ಗೆ ಹೇಳುವುದಾದರೆ, ಜನ ರಿಜರ್ವೇಷನ್ ಅಥವಾ ಮೀಸಲಾತಿ ವಿರುದ್ಧ ಮೆರಿಟ್ ಎಂದು ಮಾತನಾಡುತ್ತಿರುತ್ತಾರೆ. ಮೆರಿಟ್ ಗೂ ಟ್ಯಾಲೆಂಟ್‌ಗೂ ಬಹಳ ವ್ಯತ್ಯಾಸ ಇದೆ. ಟ್ಯಾಲೆಂಟ್ ಎನ್ನುವುದು ಅವನ ಪ್ರತಿಭೆ. ಮೆರಿಟ್ ಎನ್ನತಕ್ಕಂಥದ್ದು ಅವನಿಗೆ ಬಂದಿರತಕ್ಕಂಥದ್ದಲ್ಲ, ಕ್ರಿಯೇಟ್ ಮಾಡಿಕೊಂಡಿರತಕ್ಕಂಥದ್ದು; ಅವರದೇ ಆದಂತಹ ನಿಯಮಗಳನ್ನು ಕ್ರಿಯೇಟ್ ಮಾಡಿಕೊಂಡಿರತಕ್ಕಂಥದ್ದು. ಆದರೆ ಈ ದೇಶಕ್ಕೆ ಕ್ರೈಸ್ತರ ಕೊಡುಗೆ ಏನು ಎನ್ನುವುದನ್ನು ಕೂಡ ನಾವು ನೋಡಬೇಕಲ್ಲವೇ? West Bengal – The City of Joy. ಈ ದೇಶದಲ್ಲಿ ಯಾರಿಗಾದರೂ ಕುಷ್ಠರೋಗ ಬಂದರೆ ಒಂದು ಕಾಲದಲ್ಲಿ ಅವರನ್ನು ಕಾಡಿಗೆ ತೆಗೆದುಕೊಂಡು ಹೋಗಿ ಬಿಟ್ಟುಬಿಡುತ್ತಿದ್ದರು. ಈಗಲೂ ಕೂಡ ಅಂತಹ ಅನಿಷ್ಟ ಪದ್ಧತಿಗಳಿವೆ. ಆ ಕುಷ್ಠ ರೋಗಿಗಳನ್ನು ಆರೈಕೆ ಮಾಡುವುದಕ್ಕೋಸ್ಕರ ಶ್ರೀಮತಿ ಮದರ್ ತೆರೆಸಾರವರು ಅಲ್ಲಿ 'Missionaries of Charity' ಎಂಬುದನ್ನು ಓಪನ್ ಮಾಡಿ ಸಾವಿರಾರು ಜನಕ್ಕೆ ಜೀವದಾನ ಮಾಡಿರತಕ್ಕಂಥ ಮಹಾನ್ ಮಹಿಳೆ. ಈಗಾಗಲೇ ನಾನು ಹೇಳಿದಂತೆ, ವಿದ್ಯಾಭ್ಯಾಸ, ಶಿಕ್ಷಣ, ಇವೆಲ್ಲಾ ಅವರ ಕೊಡುಗೆ. ಕನ್ನಡದ ಮೊಟ್ಟಮೊದಲನೆಯ ಡಿಕ್ಷ್ನರಿಯ ಬಗ್ಗೆ ಶ್ರೀಮತಿ ಭಾರತಿ ಶೆಟ್ಟಿ ಅಕ್ಕನವರಿಗೆ ಗೊತ್ತಿರಬೇಕು. ಮಂಗಳೂರಿನಲ್ಲಿ ಆಗಿರತಕ್ಕಂಥ ಮೊದಲನೆಯ ಡಿಕ್ಷ್ನರಿಯನ್ನು 'ಕಿಟಲ್' ಎಂಬುವವರು ಬರೆದರು. ಅದು ಇಂಗ್ಲೀಷ್–ಕನ್ನಡ ಡಿಕ್ಷ್ನರಿ. ಅವರು ಇಷ್ಟೆಲ್ಲಾ ಕೊಡುಗೆ ಕೊಟ್ಟರೂ ಕೂಡ ನಾವು ಅವರನ್ನು ಸಂಶಯಾತ್ಮಕವಾಗಿ ನೋಡುತ್ತಿದ್ದೇವೆಂದರೆ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಈ ಬಿಲ್ ತಂದಿರುವುದು ಯಾರನ್ನೂ ದೂಷಣೆ ಮಾಡುವುದಕ್ಕಲ್ಲ. ಯಾರನ್ನೂ ಮೇಲು ಮತ್ತು ಕೀಳು ಎಂದು ನೋಡುವುದಕ್ಕಲ್ಲ. ಯಾವುದೇ ಒಂದು ಮತವನ್ನು ಅಥವಾ ಒಂದು ಧರ್ಮವನ್ನು ಅವಹೇಳನ ಮಾಡುವುದಕ್ಕಲ್ಲ. ವಂಚನೆಯಿಂದ ಮೋಸ ಮಾಡಿ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆಸೆ-ಆಮಿಷಗಳನ್ನು ಒಡ್ಡಿ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರ ಆಗಬಾರದು ಎನ್ನುವುದೇ ಇದರ ಉದ್ದೇಶ. ಹಾಗಾಗಿ, ಯಾವ ಧರ್ಮ ಕೆಲಸ ಮಾಡಿಲ್ಲವೆಂದು ಹೇಳಿಲ್ಲ. ಯಾವ ಧರ್ಮದ ಕೊಡುಗೆ ಇಲ್ಲವೆಂದು ಹೇಳಲಿಲ್ಲ. ಒಟ್ಟಾರೆಯಾಗಿ ವಂಚನೆ, ಆಮಿಷ ಮತ್ತು ಮೋಸದ ಮೂಲಕ ಮತಾಂತರ ಮಾಡಬಾರದೆಂದು ಹೇಳುವಂತಹ ಬಹಳ ಸರಳವಾಗಿರುವಂಥ ಒಂದು ವಿಧೇಯಕ ಇದಾಗಿದೆ. ಹಾಗಾಗಿ, ಯಾವ ಧರ್ಮವಾದರೂ ಕೂಡ ಅದು ಕ್ರಿಶ್ಚಿಯನ್ ಇರಬಹುದು, ಮುಸ್ಲಿಂ ಇರಬಹುದು, ಅವರ ಕೊಡುಗೆ ಇಲ್ಲವೆಂದು ಯಾರೂ ಹೇಳಿಲ್ಲ. ದಯವಿಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು ಅದರ ಕಡೆ ಗಮನಕೊಡಬೇಕೆಂದು ನನ್ನ ವಿನಂತಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ನಮ್ಮ ಸಂವಿಧಾನದಲ್ಲಿ 124 ತಿದ್ದುಪಡಿಗಳಾಗಿದೆ. 102 ಮತ್ತು 103 ಹಿಂದುಳಿದ ವರ್ಗದವರ ತಿದ್ದುಪಡಿಗೆ ಸಂಬಂಧಿಸಿದಂತೆ ನಾನು ಕೂಡ ಭಾಗವಹಿಸಿದ್ದೇನೆ. ಬಹುತೇಕ ತಿದ್ದುಪಡಿಗಳು ಜಾರಿಯಾಗತಕ್ಕಂಥದ್ದು ಬರೀ ಸಾಮಾಜಿಕ ವಿಷಯದಲ್ಲಿ ಮಾತ್ರ. ನೀವು ಏನಾದರೂ UNO (United Nations Organization) ಗೆ ಹೋದಾಗ, 'Every human being should get a decent employment and decent living.' ಎಂದು ಒಂದು ದೊಡ್ಡ ಬೋರ್ಡ್ ಹಾಕಿದ್ದಾರೆ. ಅಂದರೆ ಒಂದು ಗೌರವಯುತವಾದ ಉದ್ಯೋಗ, ಒಂದು ಗೌರವಯುತವಾದ ಜೀವನ ಈ ಪ್ರಪಂಚದಲ್ಲಿರತಕ್ಕಂಥ ಪ್ರತಿಯೊಬ್ಬರಿಗೂ ಕೂಡ ಬೇಕಾಗುತ್ತದೆ. ನಾನು ಏಕೆ ಯು.ಎನ್.ಓ., ಕೋಟ್ ಮಾಡುತ್ತಿದ್ದೇನೆಂದರೆ, ಇವರು ಆಗಾಗ 'Vasudhaiva Kutumbakam' ಎಂದು ಹೇಳುತ್ತಿರುತ್ತಾರೆ. ಆದ್ದರಿಂದ ಕೇವಲ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಕ್ಕೋಸ್ಕರ ಒಂದು ಧರ್ಮದ ವಿರುದ್ಧ ಮಾಡತಕ್ಕಂಥದ್ದು ಸರಿಯಲ್ಲ. ಸಭಾನಾಯಕರಾದ ಮಾನ್ಯ ಕೋಟ

ಶ್ರೀನಿವಾಸ ಪೂಜಾರಿಯವರು ನಾವು ಯಾವುದೇ ಧರ್ಮದ ವಿರುದ್ಧ ಇಲ್ಲ ಎಂದು ಹೇಳುತ್ತಾರೆ. ಆದರೆ ನಾನು ಡೀಟೈಲ್ ಆಗಿ ಚರ್ಚೆ ಮಾಡಲು ತಯಾರಿಲ್ಲ. ನಾನು ಹೇಳುತ್ತೇನೆ ಕೇಳಿ ಸರ್. ಇದು ಏನೆಂದರೆ, ಅವರಿಗೆ ಶೇ.18 ಮೀಸಲಾತಿ ಕೊಟ್ಟಿದ್ದೇವೆ. ನಿಮ್ಮ ಸರ್ಕಾರ ಸುಮಾರು 75 ವರ್ಷಗಳಿಂದ ಇತ್ತು ಎಂದು ಯಾರಾದರು ಹೇಳಬಹುದು. ನಮ್ಮ ಸರ್ಕಾರದಲ್ಲಿ ಮತ್ತು ನಿಮ್ಮ ಸರ್ಕಾರದಲ್ಲಿ ಎಲ್ಲರೂ ಇದ್ದಾರೆ. ಆದರೆ ಇವತ್ತಿಗೂ ಕೂಡ ನಾವು ಅವರಿಗೆ ಶೇ.14ಕ್ಕಿಂತ ಹೆಚ್ಚಿಗೆ ಕೊಡುವುದಕ್ಕೆ ಆಗಿಲ್ಲ. ಶೇ.27ರಷ್ಟು ಹಿಂದುಳಿದ ವರ್ಗದವರಿಗೆ ಮೀಸಲಾತಿ ಇದೆ. ಆದರೆ ಅವರು ಶೇ.19ಕ್ಕಿಂತ ಹೆಚ್ಚಿಗೆ ಹೋಗಿಲ್ಲ. ಮಾನ್ಯ ದೇವರಾಜ್ ಅರಸ್ ರವರು ಬಂದು ಹಾವನೂರು ಕಮಿಷನ್ ವರದಿಯನ್ನು ಜಾರಿಗೆ ತರುವವರೆಗೂ ಟಾಟಾ ಇನ್ಸ್ಟಿಟ್ಯೂಟ್‌ನಲ್ಲೂ 1974ನೇ ಇಸವಿಯವರೆಗೆ ಯಾವುದೇ ಹಿಂದುಳಿದ ವರ್ಗದವರು ಹಾಗೂ ದಲಿತರಿಗೆ ಅಲ್ಲಿ ಕೆಲಸ ಕೊಡುತ್ತಿರಲಿಲ್ಲ. ಈ ದೇಶದಲ್ಲಿ ಸಾವಿರಾರು ವರ್ಷಗಳಿಂದ ತುಳಿತಕ್ಕೊಳಪಟ್ಟು, ಮೂಢನಂಬಿಕೆಗಳಲ್ಲಿ ಸಿಕ್ಕಿಹಾಕಿಕೊಂಡವರನ್ನು ಬಡಿದು ಎಬ್ಬಿಸುವುದೇ ಕಷ್ಟ. ನಿಧಾನವಾಗಿ ಬದಲಾವಣೆಗಳಾಗುತ್ತದೆ. ಇದು ಒಂದು Civilised Society, ಒಂದು ನಾಗರಿಕ ಸಮಾಜದಲ್ಲಿ ಸುಧಾರಣೆ ಮಾಡಬೇಕೆಂದರೆ; ಏಕಾಏಕಿ ಸುಧಾರಣೆ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಮಾಧುಸ್ವಾಮಿಯವರೇ, ರಕ್ತರಹಿತ ಕ್ರಾಂತಿಯೇ ಆಗಬೇಕಾಗಿದೆಯೇ ವಿನಃ Militarising some community ಅಥವಾ politicising some community ಆಗುವುದಿಲ್ಲ. ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ ಕೇಳಿ, ನಾನು ಆಗಲೇ ಹೇಳಿದಂತೆ; ಚಂಢೀಘಡದಲ್ಲಿ Post Graduation ಮಾಡುತ್ತಿರುವ ಒಬ್ಬ ಮಹಿಳೆ ಆಸ್ಪತ್ರೆಯಲ್ಲಿ suicide ಮಾಡಿಕೊಂಡರು ಎಂದು ಹೇಳಿದೆನು. ಮುಂಬೈನ ಪ್ರತಿಷ್ಠಿತ ವೈದ್ಯಕೀಯ ಕಾಲೇಜ್‌ನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿನಿಯೊಬ್ಬರು ಪ್ರಾಧ್ಯಾಪಕರ ಕಿರುಕುಳ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡರು. ಖಾನ್‌ಪುರದ IIT ಸಂಸ್ಥೆಯ ಪ್ರಾಧ್ಯಾಪಕಿ ತರಗತಿಯಲ್ಲೇ ಹಿಂದುಳಿದ ವರ್ಗಗಳ ಬೌದ್ಧಿಕ ಮಟ್ಟವನ್ನು ಕುರಿತು ಅವಹೇಳನ ಮಾಡಿ ಶಿಕ್ಷೆ ಅನುಭವಿಸಿದರು. ಅದಲ್ಲದೇ ಕಳೆದ ವರ್ಷ ಟೋಕಿಯೋದಲ್ಲಿ ನಡೆದ ಒಲಿಂಪಿಕ್ಸ್ ಗೇಮ್‌ನಲ್ಲಿ ಮಹಿಳೆಯರ ಹಾಕಿ ಟೀಂ ಫೈನಲ್ ವರೆಗೆ ಬಂತು. ಅಂತಿಮವಾಗಿ ಫೈನಲ್‌ನಲ್ಲಿ ಸೋತುಹೋದರು. ಸೋತಿರುವುದಕ್ಕೆ ನಾವು ಆ ಇಡೀ ತಂಡದ ಮೇಲೆ

ಹೇಳಬೇಕು, ಆ ತಂಡ ಸರಿಯಾಗಿ ಆಗಿಲ್ಲವೆಂದು. ಅಲ್ಲಿ ಒಬ್ಬರು ದಲಿತ ಮಹಿಳೆ ವಂದನಾ ಕಟಾರಿಯ ಎಂಬುವರನ್ನು ಮಾತ್ರ ದೂಷಣೆ ಮಾಡಿದರು. ಅವರಿಂದ ಹಾಕಿ ಟೀಂ ಸೋತಿದೆ ಎಂದು ಅವರ ಮನೆಯ ಮುಂದೆ ಹೋಗಿ ಪಟಾಕಿ ಹಾರಿಸಿದರು. ಅದು 2021-22ನೇ ಸಾಲಿನಲ್ಲಿ ಟೋಕಿಯೋ ಒಲಿಂಪಿಕ್ಸ್ ಗೇಮ್ ನಡೆಯಿತು. ಆಗ ಕೋವಿಡ್-19 ಇತ್ತು. ಇಂತಹ ಪರಿಸ್ಥಿತಿಯಲ್ಲೂ ಕೂಡ ನಾವು ಸಂವಿಧಾನದ ಆಶಯಗಳನ್ನೇನಾದರು ಸಡಿಲ ಮಾಡುವುದಕ್ಕೆ ಹೋದರೆ ಯಾವ ರೀತಿ ಜೀವನ ಮಾಡಬೇಕು ಎನ್ನುವುದನ್ನು ತಾವು ಕೂಡ ಯೋಚನೆ ಮಾಡಬೇಕಾಗಿದೆ. ಏತಕ್ಕೋಸ್ಕರ ಮತಾಂತರ ಮಾಡುತ್ತಾರೆಂದರೆ, ದಿನಕ್ಕೆ ಕನಿಷ್ಠ 11 ದಲಿತರ ಕೊಲೆಯಾಗುತ್ತಿದೆ. ಅಷ್ಟೇ ಸಂಖ್ಯೆಯ ದಲಿತ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರವಾಗುತ್ತಿದೆ. ಇದನ್ನು ನಾನು ಹೇಳಿಲ್ಲ, ನ್ಯಾಷನಲ್ ಕ್ರೈಂ ರೆಕಾರ್ಡ್ ಬ್ಯೂರೋ (ಎನ್.ಸಿ.ಆರ್.ಬಿ.,) ಯವರು ಹೇಳಿರುವುದು. ಇಷ್ಟೊಂದು ಅತ್ಯಾಚಾರ, ದಬ್ಬಾಳಿಕೆ ಮತ್ತು ದೌರ್ಜನ್ಯ ಮಾಡಿಕೊಂಡು ಬರುತ್ತಿದ್ದಾರೆ. ಅವರು ಸ್ವತಂತ್ರರಾಗಿರಬೇಕು, ಗೌರವದಿಂದ ಬಾಳಬೇಕು ಎಂದಾಗ ಅವರಿಗೆ ಎಲ್ಲಿ ಗೌರವ ಕೊಡುತ್ತಾರೆ, ಯಾವ ದೇವಸ್ಥಾನದಲ್ಲಿ ನಮಗೆ ಪ್ರವೇಶ ಇರುತ್ತದೋ ಅಲ್ಲಿಗೆ ಹೋಗುತ್ತೇನೆ ಎಂದು ಹೇಳುತ್ತಾರೆ. ಅದಕ್ಕೆ ನಿರ್ಬಂಧ ಹಾಕಲು ಸಂವಿಧಾನದಲ್ಲಿ ಎಲ್ಲೂ ಹೇಳಿಲ್ಲ. ಈಗಾಗಲೇ ನಾನು ಹೇಳಿದೆನು. ಒಬ್ಬ ಹುಡುಗ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರ ರಿಂಗ್ ಟೋನ್ ಹಾಕಿದ್ದಾನೆಂದು ಅವನ ಮೇಲೆ ಹಲ್ಲೆ ನಡೆದಿದೆ. ಒಂದುವೇಳೆ ಏನಾದರು ಸಮಾನತೆ ಎನ್ನುವ ವಿಚಾರ ಬಂದಾಗ, ‘ಇವರೇನಪ್ಪಾ, ನಮ್ಮ ಜೊತೆಗೆ ಬರುತ್ತಾರಲ್ಲಾ’ ಎಂದು ಮೇಲ್ಜಾತಿಯವರು ಒಂದು ರೀತಿ ಕನಸಿನಲ್ಲಿಯೇ ಬೆಚ್ಚುಬೀಳುತ್ತಾರೆ. ಈ ದೇಶದಲ್ಲಿ 130 ಕೋಟಿ ಜನಸಂಖ್ಯೆ ಇದೆ. ಡಾ.ಬಿ.ಆರ್.ಅಂಬೇಡ್ಕರ್‌ರವರು “ಕೊನೆಯದಾಗಿ, ನಾವು ಹಿಂದೂ ಧರ್ಮವನ್ನು ತೊರೆಯುವುದರಿಂದ, ಏನನ್ನೂ ಕಳೆದುಕೊಳ್ಳುವುದಿಲ್ಲ. ಕಳೆದುಕೊಳ್ಳುವುದು ಅಸ್ಪೃಶ್ಯತೆಯ ಕಳಂಕವನ್ನು, ಅವಮಾನವನ್ನು, ಕೀಳರಿಮೆಯನ್ನು, ಮೈಲಿಗೆ ಎನ್ನುವ ಮಿಥ್ಯ ಅಪವಾದವನ್ನು, ಮೌಢ್ಯವನ್ನು, ಅನಕ್ಷರತೆಯನ್ನು ಮತ್ತು ಗುಲಾಮಗಿರಿಯನ್ನು. ಒಟ್ಟಾರೆ ನರಕವನ್ನು ಬದಲಾಗಿ ವಿಶ್ವಧರ್ಮಕ್ಕೆ ಬೆಳೆದಿರುವುದು” ಎಂದು ಹೇಳಿದ್ದಾರೆ. ಅದಕ್ಕಾಗಿ ಡಾ.ಬಿ.ಆರ್.ಅಂಬೇಡ್ಕರ್ ರವರು ಧರ್ಮಾಂತರ ಏಕೆ ಬೇಕು ಎಂದು ಸವಿಸ್ತಾರವಾಗಿ ಹೇಳಿದ್ದಾರೆ. ಧರ್ಮಾಂತರ ಏಕೆ ಬೇಕು ಎಂದು

ಬಸವಣ್ಣನವರು ಹೇಳಿದ ನಂತರ ಮತ್ತೊಬ್ಬ ಮಹಾನ್ ವ್ಯಕ್ತಿ ಹೇಳಿದ್ದರೆ ಅದು ಡಾ.ಬಾಬಾ ಸಾಹೇಬ್ ಭೀಮ್ ರಾವ್ ಅಂಬೇಡ್ಕರ್‌ರವರು. ಮತಾಂತರ ಏಕೆ ಬೇಕು ಎಂದರೆ, 'ಮನುಷ್ಯರ ಬದುಕನ್ನು ಯಶಸ್ವಿಗೊಳಿಸುವುದಕ್ಕಾಗಿ' ಎಂದು ಹೇಳಿದ್ದಾರೆ. ಎಲ್ಲಿ ಬೇಧ-ಭಾವಗಳಿದೆ, ಎಲ್ಲಿ ಮಾನವ ಹಕ್ಕುಗಳು ಉಲ್ಲಂಘನೆಯಾಗುತ್ತದೆ. ಆ ಧರ್ಮದಲ್ಲಿ ಯಾವುದೇ ದುರ್ಬಲ ವರ್ಗದವರ ಏಳಿಗೆಗೆ ಸಾಧ್ಯವಿಲ್ಲ ಎನ್ನುವುದನ್ನೂ ಕೂಡ ಹೇಳಿದ್ದಾರೆ. ಯಾವ ಧರ್ಮದಲ್ಲಿ ಬೇಧ-ಭಾವ ಇರುತ್ತದೆ ಅಲ್ಲಿರುವುದು ಎರಡೇ. ಗುಲಾಮರು ಮತ್ತು ಯಜಮಾನರು. **(ಮುಂದು)**

(852)15.9.2022/3.50/ಎಂ.ಎಂ-ಬಿ.ಎನ್.ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು)**

ಯಾವ ಯಜಮಾನರು ನಡೆಸುತ್ತಾರೆ ಅವರದ್ದು ನಡೆಯುತ್ತಿರುತ್ತದೆ. ಆಗಲೇ ಹೇಳಿದೆ. ಶತಮಾನದಿಂದ ತುಳಿತಕ್ಕೆ ಒಳಪಟ್ಟಿರತಕ್ಕಂತಹವರು ಅವರಿಗೆ ಶಕ್ತಿಯೂ ಇಲ್ಲ. ಪ್ರತಿಭಟನೆ ಮಾಡಬೇಕು, ದಂಗೆ ಮಾಡಬೇಕು ಅಥವಾ ಏನಾದರೂ ಹೋರಾಟ ಮಾಡಬೇಕು. ಅದನ್ನು motivate ಮಾಡಬೇಕೆಂದರೆ ಅವರನ್ನು ತೆಗೆದುಕೊಂಡು ಹೋಗಿ ನಕ್ಸಲೈಟ್ ಎಂದು ಒಳಗಡೆ ಹಾಕುತ್ತಾರೆ. ಈ ದೇಶದಲ್ಲಿ ಒಂದು ತರಹ ಇದೆ. ಮುಸಲ್ಮಾನರು ಗನ್ ಹಿಡಿದುಕೊಂಡರೆ ಅವರು ಪಾಕಿಸ್ತಾನದವರು, ದಲಿತರು ಗನ್ ಹಿಡಿದುಕೊಂಡರೆ ಅವರು ನಕ್ಸಲೈಟರು ಮತ್ತು ರಾಷ್ಟ್ರವಾದಿಗಳೆಂದುಕೊಂಡವರು ಬಾಂಬ್ ಇಟ್ಟರೆ ಅವರಿಗೆ ಸ್ವಲ್ಪ ಬುದ್ಧಿ ಭ್ರಮಣೆಯಾಗಿತ್ತು ಅದಕ್ಕೆ ಬಾಂಬ್ ಇಟ್ಟಿದ್ದರು ಎಂಬ ಇವೆಲ್ಲಾ ವಿಡಂಬನೆಗಳು ಈ ದೇಶದಲ್ಲಿ ಬಹಳಷ್ಟು ಬಂದಿವೆ. ಈ ಮತಾಂತರ ಕಾಯಿದೆ ಸಂವಿಧಾನಿಕವಾಗಿದೆಯೋ ಅಥವಾ ಅಸಾಂವಿಧಾನಿಕವಾಗಿದೆಯೋ ಎನ್ನುವ ಚರ್ಚೆಗಳಿಂದ ಗಮನಿಸಬೇಕಾದ ಕೆಲವು ವಿಷಯಗಳಿವೆ. ಅದಕ್ಕೆ ಮೂಲ ಕಾರಣ ಏನು ಎನ್ನುವುದನ್ನು ಹುಡುಕಬೇಕೇ ವಿನಃ ಇದರಲ್ಲಿ ತಂದು ಮಾಡಿರುವುದು ಅಲ್ಲ. ಒಂದು ನಿರ್ದಿಷ್ಟ ಧರ್ಮ, ಜಾತಿ ಅಥವಾ ಸಮುದಾಯದ ಜನರು ತಮ್ಮ ಮೂಲ ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ ಬದಲಾಗುವುದು ಅಥವಾ ಒಂದು ಧರ್ಮದ ಆಚಾರ ವಿಚಾರಗಳನ್ನು ತ್ಯಜಿಸಿ ಹಲವಾರು

ಸೈದ್ಧಾಂತಿಕ ಕಾರಣಗಳಿಂದ ಸ್ವಯಿಚ್ಛೆಯಿಂದ ಮತ್ತೊಂದು ಧರ್ಮದ ನೀತಿ ನಿಯಮಗಳನ್ನು ಅನುಸರಿಸುವುದೇ ಆಗಿರುತ್ತದೆ. ಮತಾಂತರ ಎಂದರೆ ಆಯಾ ಧರ್ಮಕ್ಕೆ ಸಂಬಂಧಿಸಿದ ರಕ್ತದ ಬದಲಾವಣೆ ಅಲ್ಲ. ಮತಾಂತರ ಎಂದರೆ ಧರ್ಮಕ್ಕೆ ಸಂಬಂಧಿಸಿದ ಹೃದಯ ಬದಲಾವಣೆ ಅಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ(ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):–** ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ ಯೀಲ್ಡ್ ಆಗುತ್ತೀರಾ?

**Sri B.K. HARIPRASAD :–** Yes sir.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಡೀ ಬಿಲ್‌ನಲ್ಲಿ ನಾವೆಲ್ಲಿಯೂ ಮತಾಂತರ ಆಗಬಾರದು ಎಂದು ಹೇಳಿಲ್ಲ. ಇಡೀ ಬಿಲ್‌ನಲ್ಲಿ ನಾವೆಲ್ಲೂ ಇದು ಸಂವಿಧಾನಕ್ಕೆ ವಿರೋಧವಾದುದು ಎಂದು ಒಪ್ಪಲ್ಲ. ಸಂವಿಧಾನದ ಆಶಯದ ಕೆಳಗೆ ಯಾವ ಯಾವ ಮತಾಂತರ ಸಂವಿಧಾನಕ್ಕೆ ವಿರುದ್ಧವಾಗುತ್ತದೆ, ಯಾವ ಮತಾಂತರಗಳಾಗಬಾರದು ಎಂದು ಹೇಳಿದ್ದೇವೆ ಹಾಗೂ Constitutional provisions ಕೆಳಗಡೆಯೇ ಬಿಲ್ ಮಾಡಿದ್ದೇವೆ. ನಾವು ಯಾವುದೋ ಒಂದು ಕಮ್ಯುನಿಟಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಬಿಲ್ ತರುವಂತಹ ಸ್ಥಿತಿಗೆ ಬಂದಿಲ್ಲ. ಏತಕ್ಕೆ ಮಾನ್ಯ ಹರಿಪ್ರಸಾದ್‌ರವರು ಕ್ರಿಶ್ಚಿಯನ್ ಕಮ್ಯುನಿಟಿಗೆ ವಿರುದ್ಧವಾಗಿ ನಾವು ಮಾಡಿದ್ದೇವೆ ಎಂದು ಅವರು ಭಾವಿಸಿದ್ದಾರೋ ನನಗೆ ಗೊತ್ತಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಅಲ್ಪಸಂಖ್ಯಾತರು;

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಅದು ಯಾರಿಗಾದರೂ ಆಗಿರಲಿ ಒಬ್ಬ ಮನುಷ್ಯ ಇಚ್ಛೆ ಪಟ್ಟು ಮತಾಂತರ ಆಗುತ್ತೇನೆಂದರೆ ನಮ್ಮ ಯಾವ ತಕರಾರನ್ನೂ ಈ ಬಿಲ್‌ನಲ್ಲಿ ನಾವು ಮಾಡಿಲ್ಲ. ಆ ಮನುಷ್ಯನಿಗೆ ಬೇರೆ ರೀತಿಯ ಪ್ರಭಾವಗಳನ್ನು ಮಾಡಿ, ಮೋಸ ಮಾಡಿ, ಅವನ weaknesses ಅನ್ನು claim ಮಾಡಿ, ಅವನಿಗೆ ಏನೋ ಇರಬೇಕಾದುದೆಲ್ಲವನ್ನೂ ತೋರಿಸಿಬಿಟ್ಟು ಅವನಿಗೆ

ಗೊತ್ತಿಲ್ಲದೇ ಮಾಡುವ ಮತಾಂತರಕ್ಕೆ ನಾವು ನೋಟಿಸ್ ಕೊಟ್ಟು ಮಾಡಬೇಕು, ಮತಾಂತರ ಆಗಬೇಕಾದರೆ ಅವನು ಒಂದು ಅರ್ಜಿಯನ್ನು ಕೊಡಬೇಕು. ತಾನು ಮತಾಂತರ ಆಗುವುದಕ್ಕೆ ರೆಡಿ ಇದ್ದೇನೆ ಎಂದು ಹೇಳ ಆಗಬೇಕು ಎಂದಷ್ಟೇ ನಾವು ಈ ಬಿಲ್‌ನಲ್ಲಿ ನಿರ್ಬಂಧ ಮಾಡಿದ್ದೇವೆ. ಇದು ಮೊದಲನೆಯದು. ಎರಡನೆಯದಾಗಿ ಮಾನ್ಯ ಹರಿಪ್ರಸಾದ್‌ರವರು ನನ್ನನ್ನು ತಪ್ಪು ತಿಳಿದುಕೊಂಡಿದ್ದಾರೆ. ಡಾ: ಬಿ.ಆರ್. ಅಂಬೇಡ್ಕರ್‌ರವರನ್ನು ಅವರು ಬಹಳ quote ಮಾಡಿದ್ದಾರೆ. ಡಾ: ಬಿ.ಆರ್. ಅಂಬೇಡ್ಕರ್‌ರವರು ಏತಕ್ಕೆ ತಾನು ಕ್ರಿಶ್ಚಿಯನ್ ಆಗಲಿಲ್ಲ ಎಂಬುದನ್ನು ಅವರೇ ಹೇಳಬೇಕು. Why did he opt Buddhism, ಎಂಬುದನ್ನು ಅವರು ಹೇಳಬೇಕು. ನನಗೂ ಒಂದಿಷ್ಟು ಮಾಹಿತಿ ಗೊತ್ತು. Why Dr. B.R. Ambedkar did not become a Christian, ಹೇಳಬೇಕಲ್ಲವೇ? ಅಂಬೇಡ್ಕರ್‌ರವರನ್ನು ಇಷ್ಟು ಸಲ quote ಮಾಡಬೇಕಾದರೆ ದಯವಿಟ್ಟು ಹೇಳಿ. ಅಂಬೇಡ್ಕರ್‌ರವರು "ನಾನು ಈ ಜನ್ಮದಲ್ಲಿ ಕ್ರಿಶ್ಚಿಯನ್ ಆಗುವುದಿಲ್ಲ" ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಏತಕ್ಕೆ ಎಂಬುದನ್ನು ಹೇಳಿ. ತಾನೇಕೆ ಬುದ್ಧಿಸ್ಟ್ ಆಗುತ್ತೇನೆ ಎಂಬುದನ್ನೂ ಅವರು ಹೇಳಿದ್ದಾರೆ. ಅದನ್ನೂ ಹೇಳಿ. Buddhism is part of Hinduism, ಎಂತಲೂ ಹೇಳಿದ್ದಾರೆ ಅದನ್ನೂ ಹೇಳಿ.

**(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ನಾನು ಕೆಣಕುವುದಕ್ಕೆ ಇಷ್ಟ ಪಡಲಿಲ್ಲ. ಏತಕ್ಕೆ ನೀವು ಆ ದೃಷ್ಟಿಯಲ್ಲಿಯೇ ಈ ಬಿಲ್ ಮೇಲೆ without relevance ಆಗಿನಿಂದ ಮಾತನಾಡುತ್ತಿದ್ದಾರೆ ಎಂದು ಕೇಳುತ್ತೇನೆ. ನಾವು ಎಲ್ಲಾದರೂ ನಿಮಗೆ ಕನ್ವರ್ಟ್ ಆಗಬೇಡಿ ಎಂದು ಹೇಳಿದ್ದರೆ ಹೇಳಿ. ನೀವು ಕ್ರಿಶ್ಚಿಯನ್ ಆಗಬೇಡಿ ಎಂದು ಹೇಳಿದ್ದರೆ, ಮುಸ್ಲಿಂ ಆಗಬೇಡಿ ಎಂದು ಹೇಳಿದ್ದರೆ, ಪಾರ್ಸಿ ಆಗಬೇಡಿ ಎಂದು ಹೇಳಿದ್ದರೆ ಹೇಳಿ. We are protecting our religion. ಯಾರು forcibly ಯಾವ ಮನುಷ್ಯನಿಗೆ ಇರಬೇಕಾದಂತಹ ಸಣ್ಣ ಪುಟ್ಟ ನ್ಯೂನತೆಗಳನ್ನು, weakness ಅನ್ನು ತೆಗೆದುಕೊಂಡು forcibly conversion ಮಾಡಕೂಡದು ಎಂದು ಈ ಬಿಲ್ ತಂದಿದ್ದೇವೆ. ಈ ಬಿಲ್ ಸಂವಿಧಾನದ ಕೆಳಗೆ ಇದ್ದಂತಹ ಒಂದು

ಅನುಚ್ಛೇದದಲ್ಲಿರುವುದಾಗಿದೆ. ಇಲ್ಲಿ ನಾವು ಮಾಡಿರುವುದೇನೆಂದರೆ, ಕಂಪ್ಲೇಂಟ್ ಯಾರಿಗೆ ಮಾಡಬೇಕು, ಯಾರು investigation ಮಾಡಬೇಕು, ಯಾರು ಕ್ರಮ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಒಂದು ರೂಪ ಕೊಟ್ಟಿರುವುದನ್ನು ಬಿಟ್ಟರೆ, no where we have prohibited any individual from converting on his own desire.

**ಡಾ: ಕೆ. ಗೋವಿಂದರಾಜ್:-** ಇದು ಹಳೆಯ ಮಿಷನ್‌ಗೆ ಆಯುಧ ಪೂಜೆ ಮಾಡಿದ ಹಾಗೆ ಇದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಹಿಂದು ಧರ್ಮದ ರಕ್ಷಣೆಗೋಸ್ಕರ ಈ ಬಿಲ್ ತಂದಿರುವುದಾಗಿ ಹೇಳಿದರು.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, no, even if a Christian converts to Hinduism without his desire, then the Act applies. ಬರೀ ಹಿಂದು ಧರ್ಮಕ್ಕೆ ನಾವು ಹೇಳಿಲ್ಲ. Religions ನ್ನು protect ಮಾಡುತ್ತೇವೆ. ಮುಸ್ಲಿಂರನ್ನು ಬಹುಸಂಖ್ಯಾತರಾದ ನಾವು ಹೆದರಿಸಿಬಿಟ್ಟು ಹಿಂದು ಧರ್ಮಕ್ಕೆ ಕನ್ವರ್ಟ್ ಮಾಡಿಸಿದರೆ ಇದು ಅನ್ವಯವಾಗುತ್ತದೆ. ಬರೀ ಹಿಂದುಗಳಿಗೆಂದು ಇದನ್ನು ನಾವು ಮಾಡಿಲ್ಲ. ಯಾವುದೇ ಧರ್ಮೀಯರನ್ನು ಆತನಿಗಿರಬಹುದಾದ ಸಣ್ಣ ಪುಟ್ಟ ಅಶಕ್ತತೆಯನ್ನು ಬಳಸಿಕೊಂಡು, lustre, love, money, power, education ಇಂತಹ ಸಣ್ಣ ಪುಟ್ಟ ಅನುಕೂಲಗಳನ್ನು ಮಾಡಿಕೊಡುತ್ತೇನೆ, ಧರ್ಮಕ್ಕೆ ಕನ್ವರ್ಟ್ ಆಗು ಎಂದು ಕೇಳುವುದಕ್ಕೆ ವಿರುದ್ಧವಾಗಿ ಈ ಬಿಲ್ ತಂದಿರುವುದನ್ನು ಬಿಟ್ಟರೆ ಹಿಂದುಗಳನ್ನು ಕ್ರಿಶ್ಚಿಯನ್ ಆಗಬಾರದು ಎಂತಲೂ ಹೇಳಿಲ್ಲ, ಕ್ರಿಶ್ಚಿಯನ್‌ರನ್ನು ಹಿಂದುಗಳಾಗಬಾರದು ಎಂತಲೂ ಹೇಳಿಲ್ಲ. ಅವರು ಸ್ವಂತ ಇಚ್ಛೆಯಿಂದ ಮುಕ್ತ ಮನಸ್ಸಿನಿಂದ ಮತಾಂತರವಾದರೆ ಈ ಬಿಲ್‌ನಲ್ಲಿ ಯಾವ ತಕರಾರೂ ಇಲ್ಲ. ಇಷ್ಟೊತ್ತಿನವರೆಗೂ ಏತಕ್ಕೆ ಅವರು ಒಂದು ಕಮ್ಯುನಿಟಿಯನ್ನು ವಹಿಸಿಕೊಂಡು ಇನ್ನೊಂದು ಧರ್ಮವನ್ನು ವಿರೋಧ ಮಾಡಿ ಮಾತನಾಡಿದರು ಎಂದು ನಮಗೆ ಅರ್ಥವಾಗಲಿಲ್ಲ. We have never said, never mentioned, never made a

provision, ಯಾರೂ ಕ್ರಿಶ್ಚಿಯನ್ ಆಗಬಾರದೆಂದು ನಾವು ಮಾಡಿಲ್ಲ. ಯಾರೂ ಮುಸ್ಲಿಂ ಆಗಬಾರದು ಎಂದೂ ನಾವು ಮಾಡಿಲ್ಲ. ಯಾರೂ ಹಿಂದುಗಳಾಗಬಾರದು ಎಂತಲೂ ನಾವು ಮಾಡಿಲ್ಲ. ಯಾವ್ಯಾವ ರೀತಿಯಲ್ಲಿ ಆಗಬಾರದು, gift, gratification, easy money or material benefit ಕೊಟ್ಟು ಯಾರನ್ನೂ ಮತಾಂತರ ಮಾಡಬೇಡಿ, ಉದ್ಯೋಗ, ಉಚಿತ ಶಿಕ್ಷಣ ಕೊಡುತ್ತೇವೆಂದು ಮತಾಂತರ ಮಾಡಬೇಡಿ, promise to marry, ಜಿಹಾದ್ ಮಾಡುತ್ತೇವೆಂದು ಮತಾಂತರ ಮಾಡಬೇಡಿ, better lifestyle create ಮಾಡಿಕೊಡುತ್ತೇವೆಂದು ಮಾಡಬೇಡಿ, portraying practice, rituals and ceremonies ಮಾಡಬೇಡಿ ಎಂದು ನಾವು ಇಷ್ಟು ಹೇಳಿದ್ದೇವೆ. Glorifying, ಒಂದು ಧರ್ಮವನ್ನು ಭಾರಿ ಹೊಗಳಿಬಿಟ್ಟು ಮಾಡಬೇಡಿ ಎಂದು ಹೇಳಿದ್ದೇವೆ. He is free, ಮಾನ್ಯ ಹರಿಪ್ರಸಾದ್‌ರವರು ನಾಳೆ ಬೆಳಗ್ಗೆ ಕ್ರಿಶ್ಚಿಯನ್ ಆಗುವುದಾದರೆ ನಮ್ಮದೇನೂ ತಕರಾರಿಲ್ಲ. ನಾವೇಕೆ ತಕರಾರು ಮಾಡೋಣ?

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಮೇಜು ಕುಟ್ಟಿ ಹರ್ಷಿಸಿದರು)**

ಒಂದು ಅರ್ಜಿ ಕೊಡಿ ಎಂದು ಕೇಳುತ್ತೇವೆ. ನನ್ನ ಸ್ವಂತ ಇಚ್ಛೆಯಿಂದ ನಾನು ಕ್ರಿಶ್ಚಿಯನ್ ಆಗುತ್ತಿದ್ದೇನೆ ಎಂದು ಒಂದು ಅರ್ಜಿಯನ್ನು ಕೊಡಿ. ಕ್ರಿಶ್ಚಿಯನ್ ಸಮುದಾಯ ಏನೇನು ಅನುಕೂಲ ಮಾಡಿದೆ ಅದೆಲ್ಲವನ್ನೂ ತಾವು ಉಪಯೋಗ ಮಾಡಿಕೊಳ್ಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅರ್ಜಿಯನ್ನು ನಿಮಗೆ ಕೊಡಬೇಕೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಅರ್ಜಿಯನ್ನು ಯಾರಿಗೆ ಕೊಡಬೇಕು ಎಂದು ಬಿಲ್‌ನಲ್ಲಿ ಹೇಳಿದ್ದೇವೆ. That is the Bill.

**ಶ್ರೀ ಅಬ್ದುಲ್ ಜಬ್ಬರ್:-** ಅರ್ಜಿಯನ್ನು ಏತಕ್ಕೆ ಕೊಡಬೇಕು?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, this is the point ಅರ್ಜಿಯನ್ನು ಯಾರಿಗೆ ಕೊಡಬೇಕು, (**interruption**) ….. ಯಾರು ಮಾಡಬೇಕು . . .

**ಶ್ರೀ ಮಂಜುನಾಥ ಭಂಡಾರಿ:-** ಅರ್ಜಿಯನ್ನು ಏತಕ್ಕೆ ಕೊಡಬೇಕೆಂದು ಕೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಅಷ್ಟೇ ಈ ಬಿಲ್.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ 25ರಲ್ಲಿ propagate, practice, preach, ಎಂದು ಇದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಚಿವರೇ ದಯವಿಟ್ಟು ಕುಳಿತುಕೊಳ್ಳಿ. ತಾವು ಹೇಳಿದ್ದನ್ನು ನಾನು ಕೇಳಿದ್ದೇನೆ ಕುಳಿತುಕೊಳ್ಳಿ. You all have agreed with Article 25 of the Constitution. ರೋಹಿಂಗ್ಟನ್ ನಾರಿಮನ್ ಅವರ ಮುಂದೆ ಒಬ್ಬ ಸಂಘ ಪರಿವಾರದವರೇ ಹೋಗಿ ಒಂದು ಪಿ.ಐ.ಎಲ್., ಫೈಲ್ ಮಾಡುತ್ತಾರೆ. ಏನೆಂದು ಎಂದರೆ ಹಿಂದು ಜನಸಂಖ್ಯೆ ಕಡಿಮೆ ಮಾಡಿ ಮುಸಲ್ಮಾನರ ಮತ್ತು ಕ್ರಿಶ್ಚಿಯನ್ನರ ಜನಸಂಖ್ಯೆ ಜಾಸ್ತಿಯಾಗಿದೆ, ತಕ್ಷಣವೇ ಅದನ್ನು ತಡೆಯುವುದಕ್ಕೆ ಮತಾಂತರ ಕಾನೂನನ್ನು ತರಬೇಕೆಂದು ಫೈಲ್ ಮಾಡುತ್ತಾರೆ. ಒಂದೇ ಒಂದು ದಿವಸದಲ್ಲಿ ಅದನ್ನು ರಿಜೆಕ್ಟ್ ಮಾಡಿ ಕಳುಹಿಸುತ್ತಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಲ್ಲಿ 'anti-conversion' ಎಂಬ ಪದವನ್ನು ಬಳಸಲೇ ಇಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಚಿವರೇ, ನೀವು running commentary ಮಾಡಿದರೆ ಕಷ್ಟ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾಡಲೇಬೇಕಲ್ಲವೇ.

**ಶ್ರೀ ಬಿ.ಕೆ. ಹರಿಪ್ರಸಾದ್:-** ನೀವು ಹೇಳಿದ್ದಕ್ಕೆ ನಾನು ಕೇಳಿದೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಇವರು ಬಿಲ್ ತಂದಿದ್ದಾರೆ, ಮಂತ್ರಿಗಳು, ತಾವು, ಮುಖ್ಯಮಂತ್ರಿಗಳೆಲ್ಲರೂ ವಿವರಣೆ ಕೊಟ್ಟಿದ್ದಾರೆ. ನಾವು ಈ ಬಿಲ್ ಬಗ್ಗೆ ನಮ್ಮ ಅಭಿಪ್ರಾಯ ಏನಿದೆ ಎಂಬುದನ್ನು ನಾವು ಹೇಳುತ್ತೇವೆ. ದಯವಿಟ್ಟು ಸುಮ್ಮನಿರಿ.

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಇದು ನಾವು ತಂದ ಹೊಸ ಬಿಲ್ ಅಲ್ಲ. ನೀವು ತಂದಂತಹ ಹೊಸ ಬಿಲ್. ಅದನ್ನು ನಾವು ಮುಂದುವರೆಸಿದ್ದೇವೆ ಅಷ್ಟೇ. ನೀವು ಕಾಂಗ್ರೆಸ್‌ನವರು ಅಲ್ಲಿ ನಿಲ್ಲಿಸಿದ್ದಿರಿ, ನಾವು ಅದನ್ನು ಸದನದಲ್ಲಿ ಮಂಡನೆ ಮಾಡಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಮಾಡಿದ್ದರಲ್ಲಿ ಏನಿದೆ, ನೀವು ಮಾಡಿದ್ದರಲ್ಲಿ ಏನಿದೆ ಎನ್ನುವುದನ್ನು ರಾಜ್ಯದ ಜನಕ್ಕೆ ಹೇಳುತ್ತೇವೆ. ದಯವಿಟ್ಟು ಅವಕಾಶ ಕೊಡಿ.

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಮರಿತಿಬ್ಬೇಗೌಡರೇ, ನೀವು ಯಾವಾಗ ಕಾಂಗ್ರೆಸ್ ಪಕ್ಷಕ್ಕೆ ಸೇರಿಕೊಂಡು ನಾವು ಮಾಡಿದ್ದೇವೆ ಎಂದು ಬಿಟ್ಟಿರಲ್ಲ?

**ಶ್ರೀ ಮರಿತಿಬ್ಬೇಗೌಡ:-** ಜನತಾ ದಳ, ಜನತಾ ಪರಿವಾರ ಎಲ್ಲಾ ಈ ರಾಜ್ಯದಲ್ಲಿ ನಾಲ್ಕಾರು ಬಾರಿ ಅಧಿಕಾರಕ್ಕೆ ಬಂದಿದ್ದೇವೆ. ಕಾಂಗ್ರೆಸ್ ಪಕ್ಷ ಅಂತಲ್ಲ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಮರಿತಿಬ್ಬೇಗೌಡರೇ, ಗೃಹ ಸಚಿವರು ಹೇಳಿದ್ದು ಇದು ಕಾಂಗ್ರೆಸ್ ಸರ್ಕಾರ ತಯಾರು ಮಾಡಿದ ಬಿಲ್.

**ಶ್ರೀ ಎಂ.ನಾಗರಾಜು:-** ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ Law Commission recommend ಮಾಡಿರುವಂತಹದ್ದು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ತಯಾರಿಸಿದ ಬಿಲ್ಲಿನ ಡ್ರಾಫ್ಟ್ ಇದು ಎಂದು ಹೇಳುತ್ತಿದ್ದಾರೆ. ಇದು ನೀವೇ ಮಾಡಿರುವುದು, ನಿಮ್ಮ

ಕಾನೂನು ಸಚಿವರೇ scrutiny ಮಾಡಿರುವುದು, ನೀವೇ ಕ್ಯಾಬಿನೆಟ್ ಮುಂದೆ ತಂದಿದ್ದಂತಹ ಬಿಲ್ ಎಂದು ಹೇಳುತ್ತಿದ್ದೇವೆ.

**ಶ್ರೀ ಮರಿತಿಬ್ಬೇಗೌಡ:-** ಅದರ ಬಗ್ಗೆಯೂ ಮಾತನಾಡುತ್ತೇವೆ.

**ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಈ ಬಿಲ್ಲನ್ನು ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿರಬೇಕಾದರೆ draft ತರುವುದಕ್ಕೆ Law Commission ಗೆ ಕಳುಹಿಸಿದರು. ನಮ್ಮ ಸರ್ಕಾರದ ಕ್ಯಾಬಿನೆಟ್ ಅದನ್ನು ತರಲಿಲ್ಲ. ದಯವಿಟ್ಟು ನಮ್ಮ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಬೇಡಿ. No, that is wrong accusation against Congress.

**ಡಾ: ವೈ.ಎ. ನಾರಾಯಣಸ್ವಾಮಿ(ಸರ್ಕಾರದ ಮುಖ್ಯ ಸಚೇತಕರು):-** ಬಿಲ್ ಡ್ರಾಫ್ಟ್ ಮಾಡಿದ್ದು ನೀವೇ.

**ಶ್ರೀ ಆರಗ ಜ್ಞಾನೇಂದ್ರ:-** ಅದೇನು ಒತ್ತಡ ನಿಮಗೆ? ದೆಹಲಿಯಿಂದ ಬಂತೋ ಇಟಲಿಯಿಂದ ಬಂತೋ ಎಂಬುದನ್ನು ನೀವೇ ಹೇಳಬೇಕು.

(ಮುಂದು)

(೮೫೩) ೧೫-೦೯-೨೦೨೨ KH-BNS ೪-೦೦ (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಎಲ್ಲರೂ ಕೂಡ ಅಣ್ಣ-ತಮ್ಮಂದಿರಾಗಿ ಇರಬೇಕು, ಅಂತಹ ಕಾನೂನನ್ನು ತರಬೇಕು. ಇವರು ಮಾಡುತ್ತಿರುವುದು. ಈ ದೇಶವನ್ನು ವಿಭಜನೆ ಮಾಡಲು ಮಾಡುತ್ತಿರುವಂತಹದ್ದಾಗಿದೆ.

**(ಗೊಂದಲ)**

**ಶ್ರೀ ಜೆ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ಮಾಜಿ ಸಿದ್ಧರಾಮಯ್ಯನವರು, "ಸಚಿವ ಸಂಪುಟದ ಮುಂದೆ ಮಂಡಿಸಿ" ಎಂದು ಹೇಳಿರುವುದು ಬೆಳಗಾವಿಯಲ್ಲಿ ನಡೆದ ಅಸೆಂಬ್ಲಿಯ ಮುಂದೆ ಪ್ರೂವ್ ಆಗಿದೆ. ಇಲ್ಲಿ ಚರ್ಚೆ ಮಾಡುವಂತಹ ಅಗತ್ಯ ಇಲ್ಲ. ಅಲ್ಲಿಯೇ ನಾವು ಮಾತನಾಡಿದ್ದೇವೆ.

**(ಗೊಂದಲ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಇದನ್ನು ಹಾಗೇ ತರಲಿಲ್ಲ. ಬದಲಾವಣೆ ಮಾಡಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, intent of the Government is important.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಚಿವರಾದ ಜೆ.ಸಿ.ಮಾಧುಸ್ವಾಮಿಯವರೇ, ತಮಗೂ ಮತ್ತು ಮಾನ್ಯ ಆರಗ ಜ್ಞಾನೇಂದ್ರ ರವರಿಗೆ ಕಾಂಗ್ರೆಸ್ ತಂದಿರುವಂತಹ ಕಾರ್ಯಕ್ರಮಗಳ ಮೇಲೆ ಬಹಳ ಗೌರವ ಇದೆ. ಹಾಗಾಗಿ, ನಾವು ತಂದಿರುವುದೆಲ್ಲಾ ತಾವು ಒಪ್ಪಿಕೊಳ್ಳಿ. ಯಾರು ಬೇಡ ಎನ್ನುತ್ತಾರೆ. ನಾವು ಮಾತೇ ಆಡುವುದಿಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, ತಾವು ಎಲ್ಲಿ ಒಪ್ಪಿಕೊಂಡಿದ್ದೀರಾ? ನೀವೆಲ್ಲಾ ಸ್ವಾತಂತ್ರ್ಯಕ್ಕೆ ವಿರೋಧವಾಗಿ ಇದ್ದವರು. ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ತಂದಿದ್ದೇವೆ. House has passed the Bill ಎಂದು ಹೇಳುತ್ತೇವೆಯೇ ಹೊರತು, BJP has passed the Bill ಎಂದು ಹೇಳಲಾಗುತ್ತದೆಯೇ?

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ಈಗ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಹತ್ತಿರ ಬರೋಣ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ವಿಧಾನ ಪರಿಷತ್ತು ಬಿಲ್ ಪಾಸ್ ಮಾಡಿತು ಎಂದು ಹೇಳುವುದು. ಬಿಲ್ ಅನ್ನು ಪಾಸ್ ಮಾಡಿಬಿಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ಆಯಿತು. ಈಗ ನಾವು ಬಿಲ್ ಪಾಸ್ ಮಾಡದೇ ಇದ್ದರೂ ನೀವು ಬಿಲ್ ಪಾಸ್ ಮಾಡಿಕೊಳ್ಳುತ್ತೀರಾ. ಬಿಲ್ ಪಾಸ್ ಮಾಡಿಕೊಳ್ಳುವುದಕ್ಕೆ ತಮಗೆ ಸಂಖ್ಯಾಬಲ ಇದೆ, ಮಾಡಿಕೊಳ್ಳಿ. ಅದಕ್ಕೆ ನಮ್ಮ ಅಭ್ಯಂತರ ಏನು ಇಲ್ಲ. ನಮ್ಮ ಜವಾಬ್ದಾರಿ ಏನಿದೆ, ನಮ್ಮ ಡ್ಯೂಟಿ ಏನಿದೆ, ಅದನ್ನು ನಾವು ಮಾಡುತ್ತೇವೆ. ಎಲ್ಲಾ ಧರ್ಮವನ್ನು ರಕ್ಷಣೆ ಮಾಡುವುದಕ್ಕೋಸ್ಕರ ಎಂದು ತಾವು ಹೇಳಿದ್ದೀರಿ. 5000 ವರ್ಷಗಳಿಂದ ಈ ಹಿಂದೂ ಧರ್ಮ ಇದೆ. ಇನ್ನು ಯಾವುದೋ ಒಂದು ಸಂಘಟನೆಗೆ 100 ವರ್ಷಗಳು ಆಗಿಲ್ಲ. ಅವರು ಬಂದು ಈ ಧರ್ಮವನ್ನು ರಕ್ಷಣೆ ಮಾಡುತ್ತಾರೆಯೇ? ಯಾವುದೇ ಇರಲಿ. 5 ಸಾವಿರ ವರ್ಷ. ಇದಕ್ಕೆ ಅಪ್ಲಿಕೇಷನ್ ಕೊಡಿ ಎಂದು ಹೇಳಿದ್ದೀರಿ. I am a proud Hindu. ಯಾವುದೇ ಹಿಂದುತ್ವವಾದಿಗಳು ನಾನು ಯಾವ ಧರ್ಮವನ್ನು ಫಾಲೋ ಮಾಡಬೇಕೆಂದು ನನಗೆ ಹೇಳುವುದು ಬೇಕಾಗಿಲ್ಲ. ನಾನು ದೇವರನ್ನು ಸಹ ಪೂಜೆ ಮಾಡುವುದಿಲ್ಲ. ಕರಾವಳಿ ಪ್ರದೇಶದಲ್ಲಿ ನಾನು ಮಾತನಾಡುವ ಭೂತಗಳನ್ನೇ ಪೂಜೆ ಮಾಡುವುದು. ಆದ್ದರಿಂದ, ಅವೆಲ್ಲಾ ಇಟ್ಟುಕೊಳ್ಳುವುದಕ್ಕೆ ಹೋಗಬೇಡಿ. ಇದನ್ನು ಕ್ರಿಶ್ಚಿಯನ್‌ಗೆ ಕೊಡಿ, ಮುಸ್ಲಿಂಗೆ ಕೊಡಿ ಎಂದು ಹೇಳಿ ......

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಭೂತ, ಶಿಲಭೆ ಎಂದು ನಾವು bifurcate ಮಾಡುತ್ತಿಲ್ಲ. ಆಗಿನಿಂದ ತಾವು ಒಂದು ಧರ್ಮವನ್ನು ಬಾರಿ ಮೇಲೆತ್ತಿ ಮಾತನಾಡುತ್ತಿದ್ದೀರಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, ಇಲ್ಲ. ತಾವು ಟಾರ್ಗೆಟ್ ಮಾಡಿರುವುದೇನು?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಬಾರಿ ಮೇಲೆತ್ತಿ ಮಾತನಾಡುತ್ತಿದ್ದೀರಾ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, ಮೇಲೆತ್ತುವುದು ಎಂದರೆ ಏನು? ಕೆಳಗಿಳಿಸಿ ಮಾಡನಾಡಬೇಕೆ?

**Sri J.C. MADHUSWAMY:-** Hon'ble Chairman, it is irrelevant.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, no question of it. ಶೇಕಡಾ 1.7 ರಷ್ಟು ಜನಸಂಖ್ಯೆ ಇರುವ ಕ್ರಿಶ್ಚಿಯನ್ನರ ಮೇಲೆ ದಬ್ಬಾಳಿಕೆ ಮಾಡಿದರೆ ಹೇಗೆ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಕ್ರಿಶ್ಚಿಯನ್ ರವರ ಬಗ್ಗೆ ವಿಧೇಯಕದಲ್ಲಿ ಮಾತನಾಡಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, ಇನ್ಯಾವುದರ ಬಗ್ಗೆ ಮಾತನಾಡಿದ್ದೀರಾ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು 'protection of religion' ಎಂದು ಹೇಳಿದ್ದೇವೆ. ಈ ದೇಶದಲ್ಲಿರೋ ಎಲ್ಲಾ ಧರ್ಮಗಳಿಗೆ ಈ ಬಿಲ್ ನಲ್ಲಿ ರಕ್ಷಣೆ ಸಿಗುತ್ತದೆ ಎನ್ನುವುದು ನಮ್ಮ ಅಭಿಪ್ರಾಯ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ನಾನು ಕೂಡ protection of religion ಬಗ್ಗೆಯೇ ಮಾತನಾಡುತ್ತಿರುವುದು ಸ್ವಾಮಿ. ತಾವು ಹೇಳುತ್ತಿರುವುದು ಹಳೆಯ ಡೈಲಾಗ್. ಅದೇನು ನಡೆಯುವುದಕ್ಕೆ ಆಗುವುದಿಲ್ಲ. ನನಗೆ ತಮ್ಮ ತಂತ್ರಗಳು ಅರ್ಥವಾಗುತ್ತದೆ, ತಮ್ಮ ಕುತಂತ್ರಗಳು ಅರ್ಥವಾಗುತ್ತದೆ. ಹಾಗೆಯೇ ಷಡ್ಯಂತ್ರಗಳು ಅರ್ಥವಾಗಬೇಕಾದರೆ 7 ಕೆರೆಗಳ ನೀರನ್ನು ಕುಡಿಯಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ಷಡ್ಯಂತ್ರದ ಕಾಗುಣಿತವೇ ನಮಗೆ ಗೊತ್ತಿಲ್ಲ. ಈ ಪದ ಬಳಕೆ . . .

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ಷಡ್ಯಂತ್ರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಬಿಲ್ ಅನ್ನು ತಂದಿಲ್ಲ ಎಂದು ಹೇಳಿ.

(ಗೊಂದಲ)

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, (ಗೊಂದಲ) ಷಡ್ಯಂತ್ರದ ಇನ್ನೊಂದು ಹೆಸರು ಕಾಂಗ್ರೆಸ್ ಎಂದು. ಕಾಂಗ್ರೆಸ್ ಅನ್ನೇ ಷಡ್ಯಂತ್ರ ಎನ್ನುವುದು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ಯಾರನ್ನು ಗುರಿ ಮಾಡಿಕೊಂಡು ತಾವು ಈ ಬಿಲ್ ಅನ್ನು ತಂದಿದ್ದೀರಾ ಎನ್ನುವುದು ಬಹಳ ಸ್ಪಷ್ಟವಾಗಿ ಈ ಪ್ರಪಂಚಕ್ಕೆ ಗೊತ್ತಿದೆ. ನೀವು ಮಾಡುತ್ತಿದ್ದೀರಾ ಎಂದು ನೀವು ತಿಳಿದುಕೊಂಡಿರಬೇಕು. ಇದನ್ನು ಜನ ನಂಬುವುದಕ್ಕೆ ತಯಾರಿಲ್ಲ. ತಾವು ತಪ್ಪು ತಿಳಿದುಕೊಂಡಿದ್ದೀರಾ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಬಿಲ್ ಅನ್ನು ಇಟ್ಟುಕೊಂಡು ಯಾವುದೋ ಒಂದು minor community ಯ advantage ನ್ನು ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಬೇಡಿ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, ಯಾವುದೋ ಒಂದು ಕಮ್ಯೂನಿಟಿ ಅಲ್ಲ. ಇದು ಈ ದೇಶದ ಕಮ್ಯೂನಿಟಿ ಅದು. (ಗೊಂದಲ) ಇಲ್ಲಿ ಹುಟ್ಟಿರುವ ಪ್ರತಿಯೊಬ್ಬರಿಗೂ ಹಕ್ಕಿದೆ. ನಿಮಗೆ ಮಾತ್ರ ಅಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಯಾರನ್ನೋ ಓಲೈಸುವುದಕ್ಕೆ ಇಷ್ಟು ಹೊತ್ತು ಮಾತನಾಡಿದ್ದಾರೆ ಎನ್ನುವುದು ಜನರಿಗೆ ಅರ್ಥವಾಗುತ್ತದೆ. ತೊಂದರೆ ಇಲ್ಲ.

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಚಿವರೇ, ತಾವು ಸುಮ್ಮಸುಮ್ಮನೆ ಬಿಲ್ ಅನ್ನು ತಂದಿದ್ದೀರಾ. ನಾವು ಮಾಡಿರುವಂತಹ ಬಿಲ್ ಅನ್ನು ತಾವೇಕೆ ತಂದಿದ್ದೀರಿ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಬಿಲ್ ಅನ್ನು ಓದಿ ಅದರಲ್ಲಿ ಏನಾದರೂ provisions ತಪ್ಪು ಇದ್ದರೆ . . . ನಾವು ಕೇಳುತ್ತೇವೆ. (ಗೊಂದಲ) ಬರೀ ಒಂದು ಜನಾಂಗವನ್ನು ಓಲೈಸಿಕೊಂಡು Macaulay ಯಿಂದ ಇಲ್ಲಿಯತನಕ ಬಂದರೆ ನಮ್ಮ ಗತಿ ಏನು?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, ಒಳ್ಳೆಯದಾಯಿತಲ್ಲವೇ? ಹಾಗಾದರೆ, ನಮಗೆ ನೀವು ಶಿಕ್ಷಣ ಕೊಟ್ಟಿದ್ದೀರಿಯೇ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮೆಕಾಲೆ ಬರುವುದಕ್ಕಿಂತ ಮೊದಲೇ this Country was proud in education, mathematics …..

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, 2.8% ಸಾಕ್ಷರತೆ ಇತ್ತು. ನಿಜ, ಅದಕ್ಕೆ ರಾಜ್ಯ ಈ ಸ್ಥಿತಿಯಲ್ಲಿ ಇದ್ದದ್ದು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಳಂದಾ ವಿಶ್ವವಿದ್ಯಾನಿಲಯವನ್ನು ಮೆಕಾಲೆ ಪ್ರಾರಂಭ ಮಾಡಲಿಲ್ಲ.

(ಗೊಂದಲ)

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಇದಕ್ಕೆ ಏನು ಮಾಡಬೇಕೆಂದು ಹೇಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಳಂದಾ ವಿಶ್ವವಿದ್ಯಾನಿಲಯವನ್ನು ಮೆಕಾಲೆ ಪ್ರಾರಂಭ ಮಾಡಿರುವುದೇ?

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, ನಳಂದ ವಿಶ್ವವಿದ್ಯಾನಿಲಯವನ್ನು ಗುಪ್ತರು ಮಾಡಿರುವುದು. ನಿಮ್ಮ ಸಿದ್ಧಾಂತಕ್ಕೆ ವಿರೋಧವಾಗಿದ್ದಂತಹ ಮೌರ್ಯರು, ಗುಪ್ತರು ಮಾಡಿರುವಂತಹದ್ದು ನೀವಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಯಾರಾದರೂ ಆಗಲಿ. (ಗೊಂದಲ) Second Division Clerk ….. Macaulay … (ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, Macaulay First Division or Second Division Clerk ಆದರೆ, ಚಂದ್ರಗುಪ್ತ ಮೌರ್ಯ ಯಾರು? ನಳಂದ ಯೂನಿವರ್ಸಿಟಿಯನ್ನು ಗುಪ್ತರು ಮಾಡಿದ್ದು. ನೀವಲ್ಲ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಯಾರಿಗೂ civil service ಗೆ ಹೋಗುವುದನ್ನು ನಿಮ್ಮ ಮೆಕಾಲೆ ಕಲಿಸಲಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಚಿವರೇ, ಅದನ್ನು ಕಲಿಸಿದ್ದು ಕಾಂಗ್ರೆಸ್ ರವರು ಎಂದು ಒಪ್ಪಿಕೊಳ್ಳಿ.

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಚರ್ಚೆಗಳು ಬಿಲ್‌ಗೆ ಸೀಮಿತವಾಗಿರಲಿ. ಸ್ವಲ್ಪ ನಿಯಂತ್ರಣ ತಪ್ಪಿ ಎಲ್ಲೆಲ್ಲಿಗೋ ಹೋಗುತ್ತಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇವರು ಇದನ್ನು ಕೇಳಬೇಕು. It is my right.

**ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಇವರು ಇಷ್ಟು ಹೊತ್ತು . . .

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಯಾವುದೂ ಕಡತಕ್ಕೆ ಹೋಗುವ ಆಗಿಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಮಾತನಾಡುವುದಕ್ಕೆ ಚಾಲು ಮಾಡಿದರೆ ಎಲ್ಲರೂ ಮಾತನಾಡುವುದನ್ನು ನಿಲ್ಲಿಸಿಬಿಡುತ್ತಾರೆ. ತಾವು ಮಾತನಾಡಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಪ್ರಾಣೇಶ್ ರವರೇ, ಅವರು ಮಾತನಾಡಲಿ. ಕುಳಿತುಕೊಳ್ಳಿ.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಮರಿತಿಬ್ಬೇಗೌಡರವರೇ, ನಾನು ಮಾನ್ಯ ಸಭಾಪತಿಯವರ ಹತ್ತಿರ ಮಾತನಾಡುತ್ತಿದ್ದೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಕುಳಿತುಕೊಂಡಿದ್ದಾರೆ. ನೀವೇ ನಿಂತುಕೊಂಡಿದ್ದೀರಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರು ನಿಂತುಕೊಂಡು ಮಾತನಾಡುವುದೇ? ಅವರನ್ನು ಕೂರಿಸಿ.

**ಸಭಾಪತಿಯವರು:-** ಮಾನ್ಯ ಎಂ.ಕೆ.ಪ್ರಾಣೇಶ್‌ರವರು ಕುಳಿತುಕೊಂಡಿದ್ದಾರೆ. ನಿಮಗೂ ಚಟ ಇದೆ. ಅವರಿಗೂ ಚಟ ಇದೆ. ನಾನು ಏನು ಮಾಡಲಿ. ನಾನೇನು ಚಟ ಹಾಕಿಲ್ಲ. ನಿಮ್ಮದೇ ಚಟಗಳು ಅವು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇವರು ಬಿಲ್‌ಗಳನ್ನು ಏಕೆ ತರುತ್ತಾರೆ ಎಂದು ಹೇಳುತ್ತೇನೆ ಕೇಳಿ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮೊದಲು ವಿಷಯಕ್ಕೆ ಬನ್ನಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಹೇಳುವ ಪ್ರಕಾರ ದಲಿತರಿಗೆ ಆಸೆ-ಆಮಿಷಗಳನ್ನು ತೋರಿಸಿ ಮತಾಂತರ ಮಾಡುತ್ತಿದ್ದಾರೆ. ಅದಕ್ಕೆ ನಾನು ದಲಿತರ ಪರಿಸ್ಥಿತಿಯನ್ನು ತಮಗೆ ಹೇಳುತ್ತಿದ್ದೇನೆ. ಈ ಸದನದ ಮೂಲಕ ರಾಜ್ಯಕ್ಕೆ ಹೇಳುತ್ತಿದ್ದೇನೆ. ತಾವು ವಿಷಯಕ್ಕೆ ಬನ್ನಿ ಎಂದರೆ, ಅದೇ ವಿಷಯದ ಮೇಲೆ ಬಿಲ್ ಬಂದಿದೆ. ತಾವು ಅದರ ಮೇಲೂ ಮಾತನಾಡಬೇಡಿ ಎಂದು ಹೇಳಿದರೆ ನಮಗೆ ಅದಕ್ಕೂ ದಾರಿ ಇದೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷ ನಾಯಕರೇ, ಪರ ವಿರುದ್ಧ ಅಲ್ಲ. ತಾವು ಮಾತನಾಡುವುದಕ್ಕೆ ಚಾಲು ಮಾಡಿದರೆ ಈ ವಿಷಯ ಮುಗಿಯುವುದಿಲ್ಲ ಎಂದು ಹೇಳುತ್ತಿದ್ದೇನೆ ಅಷ್ಟೇ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಪರ ವಿರೋಧ ಎನ್ನುವ ಪ್ರಶ್ನೆ ಅಲ್ಲ. ಅವರು ಬಹಳ ಸ್ಪಷ್ಟವಾಗಿ ಈ ಬಿಲ್ ನಲ್ಲಿ ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಅಷ್ಟಾಗಿ ನೀವು ಮಾತನಾಡಿದರೆ ನಾನೇನು ಬೇಡ ಎಂದು ಹೇಳುತ್ತಿಲ್ಲ. ನೀವು ಪರಸ್ಪರ ಮಾತನಾಡುತ್ತಿದ್ದರೆ ನಾನೇನಾದರೂ ಹೇಳುತ್ತಿದ್ದೇನೆಯೇ. ಅವರು ಕೇಳಿರುವುದನ್ನು ನಾನು ಹೇಳುತ್ತಿದ್ದೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕೆಲವು ಸಮುದಾಯಗಳನ್ನು ಆಸೆ-ಆಮಿಷ, ಗಿಫ್ಟ್, ಅದೇನೇನೋ ಹೇಳಿದರು. ಶೇಕಡಾ 40 ರಷ್ಟು, ಶೇಕಡಾ 50 ರಷ್ಟು ಇದೆಲ್ಲಾವನ್ನೂ ತೋರಿಸಿ ಮತಾಂತರ ಮಾಡಿಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಆ ಸಮುದಾಯದವರು ಏಕೆ ಮತಾಂತರವಾಗುತ್ತಾರೆ ಎನ್ನುವುದಕ್ಕೋಸ್ಕರ ಈ ಬಿಲ್ ಮೇಲೆ ಮಾತನಾಡುತ್ತಿದ್ದೇನೆ. ಸ್ವಲ್ಪ patience ಇಟ್ಟುಕೊಳ್ಳಿ.

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ನಿಮ್ಮ ಮಾತನ್ನು ಪೂರ್ತಿಯಾಗಿ patience ನಿಂದ ಕೇಳುತ್ತಿದ್ದಾರೆ. ನಿಮ್ಮ ಮೇಲೆ ನೀವೇಕೆ ಸಂಶಯ ಪಡುತ್ತೀರಿ? ಅವರು ಎಷ್ಟು patience ನಿಂದ ಕೇಳುತ್ತಿದ್ದಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ನನ್ನ ಮೇಲೆ ಸಂಶಯ ಬಿದ್ದಿದ್ದರೆ ನಾನು ಇಷ್ಟು ದೂರ ಬರುತ್ತಲೇ ಇರಲಿಲ್ಲ. ಇವರ ಹೊಡೆತ ತಡೆದುಕೊಂಡು ತಡೆದುಕೊಂಡು ಇಷ್ಟು ದೂರ ಬಂದಿದ್ದೇನೆ. ಇನ್ನೂ ತಡೆದುಕೊಳ್ಳುತ್ತೇನೆ. ಇನ್ನೂ ಏನು ತೊಂದರೆ ಇಲ್ಲ, ಸಾಯುವವರೆಗೂ ತಡೆದುಕೊಳ್ಳುತ್ತೇನೆ.

**ಡಾ॥ ವೈ.ಎ. ನಾರಾಯಣಸ್ವಾಮಿ (ಸರ್ಕಾರದ ಮುಖ್ಯ ಸಚೇತರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ಭಾರತ್ ಜೋಡೊ….

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ಭಾರತ್ ಜೋಡೊನೋ, ನಿಮ್ಮ ಜೋಡೋನೋ. ಅದನ್ನು ಆಮೇಲೆ ನೋಡಿಕೊಳ್ಳೋಣ. ಈ ಒಂದು ಮತಾಂತರ ಇದೆಯಲ್ಲವೇ ಸ್ವಾಮಿ, ನಮ್ಮನ್ನು ಯಾವ ಪರಿಸ್ಥಿತಿಗೆ ತರುತ್ತಾರೆ ಎಂದರೆ, ನಾವು ಜೀವನ ಮಾಡುವುದಕ್ಕೆ ಯೋಗ್ಯರಲ್ಲ ಎನ್ನುವಂತಹ ಸ್ಥಿತಿಗೆ ತೆಗೆದುಕೊಂಡು ಬರುತ್ತಾರೆ. ಯಾರಾದರೂ ಮಡೆಸ್ನಾನ ಮಾಡಿಸುತ್ತಾರೆಯೇ? ಇಂತಹದೆಲ್ಲಾ ಅನಿಷ್ಠ ಪದ್ಧತಿಗಳು ಇದೆ. ಇದರಿಂದ ಕೀಳರಿಮೆ ಬರುವಂತಹ ಕೆಲಸವನ್ನು systematic ಆಗಿ ಮಾಡುತ್ತಾರೆ. ಇಷ್ಟೆಲ್ಲಾ ಹೇಳುತ್ತಾರೆಯಲ್ಲವೇ ಸ್ವಾಮಿ. ನೆನ್ನೆಯೇ ಯು.ಪಿ. ಮಾಡೆಲ್, ಯು.ಪಿ. ಮಾಡೆಲ್ ಎಂದು ಹೇಳುತ್ತಾರೆ. ಲಖೀಂಪುರ್ ಕೇರಿಯಲ್ಲಿ ಎರಡು ದಲಿತ ಮಕ್ಕಳನ್ನು ಕಿಡ್ನಾಪ್ ಮಾಡಿ ರೇಪ್ ಮಾಡಿ ಸುಟ್ಟು ಬಿಸಾಕಿ ಆಯಿತು. ಇನ್ನು ನಾವು ಅದನ್ನು ಕೇಳಬೇಕೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಡೆ ಸ್ನಾನ ಈಗ ನಿಯಂತ್ರಣಕ್ಕೆ ಬಂದಿದೆ. ಇವರ ಕಾಲದಲ್ಲಿ ಏನೇನು ಆಗಿದೆ ಎಂಬುದನ್ನು ನೋಡಿ. ಮಡೆ ಸ್ನಾನ ಮಾಡಿದವರು ಯಾರು ಎಂದು ಕೇಳಿ. ಮಡೆಸ್ನಾನ ಪ್ರಾರಂಭವಾಗಿದ್ದು ಯಾವಾಗ? ಅದನ್ನು ನಿಲ್ಲಿಸಿದವರು ಯಾರು ಎಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕರೇ ತಾವೇ ಹೇಳಿ. ಮಡೆಸ್ನಾನ ಯಾವತ್ತಿನಿಂದ ಪ್ರಾರಂಭವಾಗಿದ್ದು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, . . .

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾನಾಯಕರೇ, ಮಡೆ ಸ್ನಾನ ಕಾಂಗ್ರೆಸ್ ಪಾರ್ಟಿ ಮಾಡಿದ್ದು ಅಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನೀವು ಮಾಡಿದ್ದೀರಿ ಎಂದು ನಾನು ಹೇಳಲಿಲ್ಲ. ಇದು ಯಾರ ಕಾಲದಲ್ಲಿ ಇತ್ತು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾನಾಯಕರೇ, ಮಡೆ ಸ್ನಾನ 5 ಸಾವಿರ ವರ್ಷಗಳಿಂದ ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಇರಬಹುದು. ಇದನ್ನು ನಿಲ್ಲಿಸಿದವರು ಯಾರು? ಇದನ್ನು ನಮ್ಮ ಸರ್ಕಾರ ನಿಲ್ಲಿಸಿದ್ದು.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾನಾಯಕರೇ, ಇನ್ನೂ ಮಡೆಸ್ನಾನ ನಡೆಯುತ್ತಿದೆ. ಮೈಗೆ ಬಟ್ಟೆ ಹಾಕದೇ ಇರುವಂತಹ ಸ್ನಾನಗಳು ನಡೆಯುತ್ತಿವೆ. ಇನ್ನೂ ಹೇಳಬೇಕೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ವಿಷಯ ಎಂದ ಮೇಲೆ ಮಾತನಾಡಲೇ ಬೇಕು.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ದೇವದಾಸಿ ಪದ್ಧತಿ ನಿಂತಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸದಸ್ಯರೇ, ದೇವದಾಸಿ ಪದ್ಧತಿ ನಿಂತಿದೆ. ಇದು ನಿಮ್ಮ ಚಂದ್ರಗುತ್ತಿಯಲ್ಲಿ ನಡೆಯುತ್ತಿತ್ತು. ದೇವದಾಸಿ ಪದ್ಧತಿ ನಿಂತಿದೆ ಎಂದು ಹೇಳುತ್ತಾರೆಯಲ್ಲವೇ,

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನೀವು ಹೀಗೆ ಅಡ್ಡ ಬರುತ್ತಿದ್ದರೆ ಅವರು ಹಾಗೇ ಹೋಗುತ್ತಿರುತ್ತಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಲಕ್ಷ್ಮಣ ಸವದಿಯವರ ಬೆಳಗಾವಿ ಜಿಲ್ಲೆಗೆ ಹೋಗಿದ್ದೆ. ಗೋಕಾಕ್‌ನಲ್ಲಿ ಒಂದು ದೇವದಾಸಿ ಪುನರ್‌ವಸತಿ ಕೇಂದ್ರಕ್ಕೆ ನಾನು ಎಂಎಲ್‌ಸಿ ಫಂಡ್‌ನಿಂದ 15 ಲಕ್ಷ ರೂಪಾಯಿಗಳನ್ನು ಕೊಟ್ಟಾಗ ಅದರ inauguration ಗೆ ನನ್ನ ಕರೆಸಿದ್ದರು. ಈಗ ಮಾನ್ಯ ಉಮೇಶ್ ಕತ್ತಿಯವರು ಇಲ್ಲ. ಮಾನ್ಯ ಹರಿಪ್ರಸಾದ್‌ರವರೇ ಅಲ್ಲೆಲ್ಲಿ ಇದ್ದಾರೆ ದೇವದಾಸಿಯರು ಎಂದು ಹೇಳಿದರು. ನಾನು ಅಲ್ಲಿಗೆ ಹೋಗಿದ್ದೆ. ಅಲ್ಲಿಗೆ 4,500 ಜನ

ದೇವದಾಸಿಯರು ಆ ಕಾರ್ಯಕ್ರಮಕ್ಕೆ ಬಂದಿದ್ದರು. ಆಮೇಲೆ ನಾನು ಕೇಳಿದೆ. ಬೆಳಗಾವಿಯಲ್ಲಿ ಎಷ್ಟು ಜನ ಇದ್ದಾರೆ ಎಂದು ಕೇಳಿದಾಗ ರಾಯಭಾಗ ಮತ್ತು ಅಥಣಿಯಲ್ಲಿ 15 ಸಾವಿರ ಜನ ದೇವದಾಸಿಯರು ಇದ್ದಾರೆ ಎಂದು ಹೇಳಿದರು. ನಮ್ಮಲ್ಲಿ ಕಾನೂನಿಗೇನೂ ಕಡಿಮೆ ಇಲ್ಲ. Laws are overflowing. ಆದರೆ, ಇದು ಅನುಷ್ಠಾನಕ್ಕೆ ಎಲ್ಲಿ ಬರುತ್ತಿದೆ ಎನ್ನುವುದು ಪ್ರಶ್ನೆ.

(ಮುಂದು)

(854)15-09-2022(04-10)bsd-ks

**ಶ್ರೀ ಬಿ.ಕೆ. ಹರಿಪ್ರಸಾದ್ (ಮುಂದು)**

ಈಗಲೂ ಸಹ ಹಳ್ಳಿಗಳಲ್ಲಿ ಹೊಟೇಲ್‌ಗಳಿಗೆ ಅಷ್ಟು ಸುಲಭವಾಗಿ ಬಿಡುವುದಿಲ್ಲ, ದೇವಸ್ಥಾನಗಳಿಗೆ ಬಿಡುವುದೇ ಇಲ್ಲ, ಸಾಮಾಜಿಕ ಸ್ಥಾನಮಾನಗಳನ್ನು ಆಧಾರವಾಗಿಟ್ಟುಕೊಂಡು ಪ್ರವೇಶವನ್ನು ನಿಷೇಧ ಮಾಡುತ್ತಾರೆ. ಆ ರೀತಿ ಮನಸ್ಸಿಗೆ ನೋವಾದಾಗ ಅವನು ಏನು ಮಾಡುತ್ತಾನೆ ಮತ್ತು ಏನು ಮಾಡಬೇಕು ಎಂಬುದನ್ನು ಹೇಳಲಿ. ಅದಕ್ಕೆ ನಾನು ನಮ್ಮ ಅಪ್ಪ-ಅಮ್ಮ ನನಗೆ ಏನು ಹೇಳಿಕೊಟ್ಟಿದ್ದಾರೆ ಎಂಬುದನ್ನು ಹೇಳಿದೆ. ಆದ್ದರಿಂದ ಒಂದು ಧರ್ಮ ಅಥವಾ ಸಂಪ್ರದಾಯದಿಂದ ಆತನ ಆತ್ಮಗೌರವಕ್ಕೆ ಧಕ್ಕೆ ಆದಾಗ ಅವನು ಏನು ಮಾಡುತ್ತಾನೆ? ಯಾವ ಧರ್ಮದಲ್ಲಿ ಗೌರವ ಸಿಗುತ್ತದೋ, ಅಲ್ಲಿಗೆ ಹೋಗುತ್ತಾನೆ. ವಿವಿಧ ಧರ್ಮ-ಸಂಪ್ರದಾಯಗಳ ಆಚರಣೆ ಮೇಲೆ ಪ್ರಬಲವಾದ ಧರ್ಮದ ಜ್ಞಾನಿಗಳು one nation, one language and one religion ಎಂದು ಹೇಳಿಬಿಟ್ಟಿದ್ದಾರೆ, ಇದು ಎಲ್ಲಿ ಆಗುತ್ತದೆ? ಇದು ಬಹುತ್ವದ ರಾಷ್ಟ್ರ! ಆರ್ಯರು, ದ್ರಾವಿಡರು ಮತ್ತು ಮಂಗೋಲಿಯನ್ನರು ಸೇರಿ ಮೂರು ಧರ್ಮಗಳನ್ನು ಹೊಂದಿರುವ ರಾಷ್ಟ್ರವಾಗಿದೆ. ಇದರ ಜೊತೆಗೆ ಮಡೆಸ್ನಾನ, ಗೋ ಮಾಂಸ ನಿಷೇಧ, ಅರೆಬೆತ್ತಲೆ ಸೇವೆ ಇಂತಹ ಅನಿಷ್ಠ ಪದ್ಧತಿಗಳನ್ನು ನಮ್ಮ ಮೇಲೆ ಹೇರುತ್ತಾರೆ. ಇವರ್‍ಯಾರೂ ಅದನ್ನು practice ಮಾಡುವುದಿಲ್ಲ. ಆದ್ದರಿಂದ ಭಾರತದ ಸಂವಿಧಾನದಲ್ಲಿ magna carta ಎಂದು

ಹೆಸರಾಗಿರುವ ಮೂಲಭೂತ ಹಕ್ಕುಗಳನ್ನು ನೋಡಿದಾಗ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಈ ದೇಶದ ಪ್ರಜೆಗಳಿಗೆ ಧಾರ್ಮಿಕವಾಗಿ ಜೀವಿಸಲು ಆದ್ಯತೆ ನೀಡಿದೆ. ಅನುಚ್ಛೇದ 25,26,27 ಮತ್ತು 28 ಗಳಲ್ಲಿ ಸಂಪೂರ್ಣವಾಗಿ ಸಂವಿಧಾನದಲ್ಲಿ ಒಳಗೊಂಡಿದೆ. ಯಾವುದೇ ಧರ್ಮವನ್ನು ಸ್ವೀಕರಿಸುವ, ಆಚರಿಸುವ ಮತ್ತು ಪ್ರಚಾರ ಮಾಡುವ ಹಕ್ಕನ್ನು ಅದರಲ್ಲಿ ನೀಡಲಾಗಿದೆ. ಯಾವುದೇ ಒಂದು ನಿರ್ದಿಷ್ಟವಾದ ಧರ್ಮವನ್ನು ಪ್ರಚಾರ ಮಾಡಬಾರದು ಎಂದು ಎಲ್ಲಿಯೂ ಇಲ್ಲ. ಮಡೆಸ್ನಾನ ಪದ್ಧತಿಯ ವಿರುದ್ಧ ದಲಿತರು, ಹಿಂದುಳಿದವರು ಹೋರಾಟ ಮಾಡಿದಾಗ ಅವರ ವಿರುದ್ಧ 182 ಕೇಸ್‌ಗಳನ್ನು ಯಾವ ಸರ್ಕಾರ ಹಾಕಿದೆ ಎಂಬುದನ್ನು ನೋಡಲಿ. ಆದ್ದರಿಂದ ಈ ಕೇಸ್ ಹಾಕಿದವರು ಈಗಾಗಲೇ ವಾಪಸ್ಸು ತೆಗೆದುಕೊಳ್ಳುವ ಮಟ್ಟಕ್ಕೆ ಹೋಗಿದ್ದಾರೆ. ಮತಾಂತರ ನಿಷೇಧ ಕಾಯ್ದೆಯು ಸ್ವಾತಂತ್ರ್ಯ ಬಂದ ನಂತರ ಜಾಸ್ತಿಯಾಗಿದೆ. ಅದಕ್ಕೆ ಮೊದಲು ಯಾರೂ ಕೇಳುತ್ತಿರಲಿಲ್ಲ. ಕೋಮುವಾದಿ ಶಕ್ತಿಗಳು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವುದಕ್ಕೆ ಇದೊಂದು ತಂತ್ರವನ್ನು ಮಾಡಿಕೊಂಡಿದ್ದಾರೆ. ಸರ್ಕಾರ ನಡೆಸಲು ವಿಫಲರಾದಾಗ, ಜನರ ಆಕರ್ಷಣೆ ಪಡೆಯಲು ಇಂತಹ ಹುನ್ನಾರಗಳನ್ನು ನಾವು ನೋಡಿದ್ದೇವೆ. ಸುಪ್ರೀಂ ಕೋರ್ಟ್‌ನಲ್ಲಿ Advocate ಮತ್ತು ಅವರದೇ ಪಕ್ಷದವರಾದ ಶ್ರೀ ಅಶ್ವಿನ್ ಕುಮಾರ್ ಉಪಾಧ್ಯಾಯ ಎಂಬುವವರು PIL ಹಾಕಿದಾಗ ರೋಹಿಂಗ್‌ಟನ್ ಫಾಲಿ ನಾರೀಮನ್ reject ಮಾಡುತ್ತಾರೆ. ಈ ಬಗ್ಗೆ ಕೆಲವು ಸಂಗತಿಗಳು ಹೈಕೋರ್ಟ್‌ಗೆ ಹೋಗಿವೆ. ಮತಾಂತರ ವಿರೋಧ ಕಾನೂನಿನ ವಿರುದ್ಧ ಅರ್ಜಿ ಸಲ್ಲಿಸಿದ್ದರಿಂದ ಹೈಕೋರ್ಟ್ ಕರ್ನಾಟಕ ಸರ್ಕಾರಕ್ಕೆ ನೋಟೀಸ್ ಜಾರಿಮಾಡಿದೆ. ಕರ್ನಾಟಕ ಹೈಕೋರ್ಟ್‌ನ ತೀರ್ಪನ್ನು ನೋಡಿಕೊಂಡು ಈ ಬಿಲ್ ತರಬಹುದಾಗಿತ್ತು. ಹೈಕೋರ್ಟ್‌ನಲ್ಲಿರುವ ವಿಚಾರ ಮಾನ್ಯ ಗೃಹ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಅದಾದ ನಂತರ ತರಬಹುದಾಗಿದ್ದರೂ ಬಹಳ ಅವಸರವಾಗಿ ತಂದಿದ್ದಾರೆ. ಆದರೆ ಮತಾಂತರ ಎಂಬುದು ಅಪರಾಧ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಅಂದರೆ ಮತಾಂತರ ಆಗುವುದು ಏಕೆ ಎಂಬ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಹೋಗಲಿಲ್ಲ. ಈ 75 ವರ್ಷಗಳಲ್ಲಿ ಸಂವಿಧಾನ ಸಾಕಷ್ಟು ಬದಲಾವಣೆಗಳನ್ನು ತಂದಿದೆ. ಸಂವಿಧಾನವೇ ಸರ್ವೋಚ್ಛವಾಗಿದ್ದು, ರಾಜ್ಯ ಅಥವಾ ಕೇಂದ್ರ ಸರ್ಕಾರಗಳಲ್ಲ! ಆ ಸಂವಿಧಾನದ ಮೂಲ ಆಶೋತ್ತರಗಳಿಗೆ ವಿರೋಧ

ಆಗಬಾರದೆಂಬ ಉದ್ದೇಶ ಇರಬೇಕು. ಏಕೆಂದರೆ, ಈ ತಿದ್ದುಪಡಿ ಸಂವಿಧಾನಕ್ಕೆ ವಿರುದ್ಧವಾಗಿದೆ ಎಂಬುದು ನಮ್ಮ ಭಾವನೆಯಾಗಿದೆ. ಇದು ಅವರಿಗೆ ಇಲ್ಲದೇ ಇರಬಹುದು. ನಮ್ಮ ಅನಿಸಿಕೆಯಂತೆ ಸಂವಿಧಾನದ, Article 15- right to make choice, Conversion may happen when only individual chooses a choice ಎಂದು ಇದ್ದು, ಯಾರನ್ನೂ ಸಹ force ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ Registrar General and Census Commissioner of India ರವರು ಕೊಟ್ಟಿರುವ ಅಂಕಿ ಅಂಶಗಳನ್ನು ಹೇಳಿದ್ದೇನೆ. ಡಾ: ಅಂಬೇಡ್ಕರ್ ರವರು, '*He wrote in a what path to Salvation emphasizing the liberty every persons had to choose their faith for whatever reasons as long as it was a conscious choice freely made*' ಎಂದು ಹೇಳಿದ್ದಾರೆ. ಅಂಬೇಡ್ಕರ್‌ರವರು Christianity ಗೆ ಏಕೆ ಹೋಗಲಿಲ್ಲ ಎಂದು ಬಂತು, ಅವರು ಇವರನ್ನು ಕೇಳ ಹೋಗಬೇಕೇ? ಅವರು " ಹುಟ್ಟುವಾಗ ಹಿಂದೂ ಆಗಿ ಹುಟ್ಟಿದೆ, ಸಾಯುವಾಗ ಹಿಂದೂ ಆಗಿ ಸಾಯುವುದಿಲ್ಲ" ಎಂದು ಹೇಳಿರುವುದಷ್ಟೆ ಅವರೆಲ್ಲರಿಗೂ clear signal ಆಗಿದೆ. Christianity ಮತ್ತು Islam ಗೆ ಏಕೆ ಹೋಗಲಿಲ್ಲ ಎಂಬ ಬಗ್ಗೆ ಅವರನ್ನು ಕೇಳ ಹೋಗಬೇಕೇ? ಸಂವಿಧಾನ ರಚಿಸಿ, ಪ್ರತಿಯೊಬ್ಬರಿಗೂ ಹಕ್ಕಿದೆ ಎಂದು ತೋರಿಸಿಕೊಟ್ಟವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರು by force ಎಂದು ಹೇಳಿದರು. Marriage ಎಲ್ಲಿಯಾದರೂ by force ಎಂದಾಗುತ್ತದೆಯೇ? ಉತ್ತರ ಪ್ರದೇಶದ ಲವ್-ಜಿಹಾದ್ ಕೇಸ್‌ನಲ್ಲಿ ಅಲಹಾಬಾದ್ ಹೈಕೋರ್ಟ್ reject ಮಾಡಿದೆ ಮತ್ತು ಗುಜರಾತ್ ಕೋರ್ಟ್ ಸಹ reject ಮಾಡಿದೆ. ಇಷ್ಟೆಲ್ಲಾ ಕೋರ್ಟ್ ತೀರ್ಪುಗಳಿದ್ದರೂ ಅವರ ಮೇಲೆ ಮಾಡುತ್ತಿರುವ ದೌರ್ಜನ್ಯ ಕಡಿಮೆಯಾಗಿಲ್ಲ. ದುರ್ಬಲ ವರ್ಗದವರ ಮೇಲೆ ದೌರ್ಜನ್ಯ ನಿಲ್ಲಬೇಕಾದರೆ ಅವರು ಸ್ವತಂತ್ರವಾಗಿ ಓಡಾಡಲು ಅವಕಾಶಗಳಿರಬೇಕು. 1950ನೇ ಇಸವಿಯ ಗಣರಾಜ್ಯೋತ್ಸವದಲ್ಲಿ ಡಾ: ಬಾಬಾ ಸಾಹೇಬ್ ಅಂಬೇಡ್ಕರ್ ರವರು " ನಮಗೆಲ್ಲರಿಗೂ ರಾಜಕೀಯ ಸ್ವಾತಂತ್ರ್ಯ ಸಿಕ್ಕದೆ, ಆದರೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಸಿಕ್ಕಿಲ್ಲ" ಎಂದು ಹೇಳಿದ್ದಾರೆ. ಮಾನ್ಯ ಜನಾರ್ಧನ್ ಪೂಜಾರಿಯವರು ಬರುವವರೆಗೂ ಮತ್ತು ಬ್ಯಾಂಕ್‌ಗಳು ರಾಷ್ಟ್ರೀಕರಣ ಆಗುವವರೆಗೂ ಯಾರಿಗೂ

ಬ್ಯಾಂಕ್‌ಗಳಲ್ಲಿ entry ಇರಲಿಲ್ಲ. ಮಾನ್ಯ ಬಸವಲಿಂಗಪ್ಪನವರು ಕೆಲವು ಕ್ರಾಂತಿಕಾರಿ ಹೆಜ್ಜೆಗಳನ್ನಿಟ್ಟಾಗ ಬಹಳಷ್ಟು ಸುಧಾರಣೆಗಳಾಗಿವೆ. ಅವರು ಕಾಂಗ್ರೆಸ್‌ನವರು ತಂದಿದ್ದು ಎಂದು ಹೇಳುತ್ತಿದ್ದರು. ಕಾಂಗ್ರೆಸ್‌ನವರು ತಂದಿದ್ದನ್ನು ಅವರು ಮಾಡಿಕೊಂಡು ಹೋಗಲಿ. ಆದರೆ ಕಾಂಗ್ರೆಸ್‌ನವರು ತಂದಿರುವುದೆಲ್ಲವನ್ನು ಉಲ್ಟಾ ಮಾಡಿದರೆ ಅರ್ಥ ಏನು? ಅದರರ್ಥ ಬಹಳ ಸ್ಪಷ್ಟವಾಗಿ ಇದೆ. ಇಲ್ಲಿ ಒಂದು ಧರ್ಮದ ಬಗ್ಗೆ ಹೇಳಿದರೆ ಆ ಧರ್ಮಕ್ಕೆ ಸೇರಿದವರು ಎಂದು ಹೇಳುತ್ತಾರೆ. ಅವರನ್ನು ಕೇಳಿ ನಾನು ಧರ್ಮದಲ್ಲಿ ಹುಟ್ಟಿಲ್ಲ. ಆದ್ದರಿಂದ ಅಲ್ಪಸಂಖ್ಯಾತ ಸಮುದಾಯದ ಮೇಲೆ ದ್ವೇಷ ಭಾವನೆಯನ್ನು motivate ಮಾಡಿ, ಭಯದ ವಾತಾವರಣವನ್ನು ಸೃಷ್ಟಿ ಮಾಡುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ. ನಾನು ಸೆಂಟ್ ಥಾಮಸ್‌ರವರ ಬಗ್ಗೆ ಆಗಲೇ ಹೇಳಿದ್ದೇನೆ. St. Thomas first set up Churches in Malabar coast in AD (after death) 52 ಎಂದು ಹೇಳಿದ್ದೇನೆ. ಕ್ರಿಸ್ತಪೂರ್ವದಲ್ಲಿ ಬಂದಿರುವ ಇಷ್ಟು ಹಳೆಯ ಸಮುದಾಯದ ಮೇಲೆ ಸಂಶಯ ವ್ಯಕ್ತ ಮಾಡುವುದು ಸರಿಯಲ್ಲ. ನಾನು ಆಗಲೇ ಕಂದಮಾಲ್ ಬಗ್ಗೆ ಹೇಳಿದೆ. ಅದಕ್ಕಿಂತ ಮೊದಲು 1999ನೇ ಇಸ್ವಿಯಲ್ಲಿ ಒಡಿಸ್ಸಾದಲ್ಲಿ Keonjhar ಎಂಬ ಜಿಲ್ಲೆಯ ಮನೋಹರ್‌ಪುರದಲ್ಲಿ Graham Staines ಎಂಬ Australian Pastor ಕುಷ್ಟರೋಗಿಗಳ ಸೇವೆ ಮಾಡುತ್ತಿರುತ್ತಾನೆ. ಅವರು ರಾತ್ರಿ camper ನಲ್ಲಿದ್ದಾಗ ಕೆಲವರು ಹೋಗಿ ಅವರನ್ನು ಸಾಯಿಸಿ, ಅವರ 6 ವರ್ಷದ ಮತ್ತು 9 ವರ್ಷದ ಮಕ್ಕಳು ಜೀಪ್‌ನಲ್ಲಿ ಮಲಗಿರುತ್ತಾರೆ, ಅವರಿಬ್ಬರನ್ನು ಜೀವಂತವಾಗಿ ಸುಡುತ್ತಾರೆ. ಅದಾದ ನಂತರ Kandhamal Riot ಆಗುತ್ತದೆ. ಆದ್ದರಿಂದ ಅಷ್ಟು ಸುಲಭವಾಗಿ ಅವರು ಹೇಳಿದಂತೆ ನಾವು ಕೇಳಲು ತಯಾರಿಲ್ಲ. ದೇಶದಲ್ಲಿ ಆಗಿರುವ ಅನಾಹುತಗಳು, ಅದರಲ್ಲೂ ಅಲ್ಪಸಂಖ್ಯಾತರ ಮೇಲೆ ಆಗಿರುವ ಅನಾಹುತಗಳು ಏನಿವೆ, ಹಿಂದುಳಿದ ಹಾಗು ದುರ್ಬಲ ವರ್ಗದವರಿಗೆ ಶೈಕ್ಷಣಿಕವಾಗಿ, ಆರೋಗ್ಯಕ್ಕಾಗಿ ಏನೇನು ಮಾಡುತ್ತಿದ್ದಾರೋ, ಅದು ಸಿಗಬಾರದು ಎಂದು ಹೇಳಿ ಮಾಡುವುದು ಬೇಡ. ಏಕೆಂದರೆ ದಲಿತರು ಮತ್ತು ಹಿಂದುಳಿದ ವರ್ಗದವರು ಎಲ್ಲಾ ಸೌಲಭ್ಯಗಳಿಂದ ವಂಚಿತರಾದವರಾಗಿದ್ದಾರೆ. ಇವರಿಗೆ ಇಷ್ಟೊಂದು ಅವಕಾಶಗಳು ಸಿಗುತ್ತಿವೆ ಎಂದು ಇಷ್ಟೆಲ್ಲಾ ಸರ್ಕಸ್ ಮಾಡಿ ಈ ಬಿಲ್ ಅನ್ನು ತಂದಿದ್ದಾರೆ. ಆದ್ದರಿಂದ ಈ ಬಿಲ್ ಅನ್ನು ನಾವು ಸಾರಾಸಗಟಾಗಿ ವಿರೋಧ ಮಾಡುತ್ತೇವೆ, ಈ ಬಗ್ಗೆ

ಬೇರೆ ಮಾನ್ಯ ಸದಸ್ಯರು ಮಾತನಾಡುವವರಿದ್ದು, ಅವರ ಅನಿಸಿಕೆಗಳನ್ನು ಕೇಳಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುವ ಮುನ್ನ ಈ ತಿದ್ದುಪಡಿಗೆ ನಮ್ಮ ವಿರೋಧ ಇದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಪ್ರಥಮವಾಗಿ ನಾನೊಬ್ಬ ಹೊಸ ಸದಸ್ಯನಾಗಿದ್ದರೂ ಚೊಚ್ಚಲ ಸದನ ಪ್ರವೇಶದ ಸಂದರ್ಭದಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿನ ರಕ್ಷಣೆ ವಿಧೇಯಕ ವಿಷಯದಲ್ಲಿ ಮಾತನಾಡಲು ಅನುವು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

(ಮುಂದು)

(855) 15.09.2022 4.20 ಹೆಚ್‌ವಿ:ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಹಲವರು ಮುಖಂಡರುಗಳು ಹಲವು ವಿಚಾರಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಮತಾಂತರವಾಗುವುದಕ್ಕೆ ಅಥವಾ ತಮ್ಮ ಸ್ವ ಧರ್ಮವನ್ನು ಬಿಟ್ಟು ಮತ್ತೊಂದು ಧರ್ಮವನ್ನು ಆಯ್ಕೆ ಮಾಡಿಕೊಳ್ಳುವುದಕ್ಕೆ ಯಾರೂ ಕೂಡ ಅಡ್ಡಿಪಡಿಸುವುದಿಲ್ಲ ಎನ್ನುವುದನ್ನು ಈ ವಿಧೇಯಕ ಒಳಗೊಂಡಿದೆ. ಆಗಿದ್ದರೂ ಕೂಡ ಅನೇಕ ವಿಚಾರಗಳು ಇಲ್ಲಿ ಚರ್ಚೆಗೆ ಬಂದವು. ಯಾರು ಈ ಚರ್ಚೆಯಲ್ಲಿ ಭಾಗವಹಿಸಿ, "ಈ ವಿಧೇಯಕದಿಂದ ಬಹಳ ದೊಡ್ಡ ಅನಾಹುತವಾಗುತ್ತಿದೆ; ಇದನ್ನು ತಡೆಯಬೇಕು" ಎಂದು ಮಾತನಾಡುತ್ತಿದ್ದಾರೆ, ಅವರಿಗೆ ಇದು ಸಂಬಂಧಪಟ್ಟದೇ ಇರುವಂತಹ ವಿಚಾರವಾಗಿದೆ. ಸಮಾಜದಲ್ಲಿರುವ ನ್ಯೂನತೆಗಳು ಮತ್ತು ವ್ಯತ್ಯಾಸಗಳನ್ನು ನಾವೆಲ್ಲರೂ ಅರ್ಥ ಮಾಡಿಕೊಂಡಿದ್ದೇವೆ. ಇಂತಹ ಸಂದರ್ಭದಲ್ಲಿ ಯಾರು ಮತಾಂತರಗೊಳ್ಳುತ್ತಿದ್ದಾರೆ, ಇದಕ್ಕೆ ಕಾರಣಗಳೇನು ಎನ್ನುವ ಅಂಶಗಳ ಬಗ್ಗೆ ಅವಲೋಕನ ಮಾಡುವಂತಹ ಪ್ರಯತ್ನವನ್ನು ನಾವು ಮಾಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಜಾತಿ ವ್ಯವಸ್ಥೆ ಇದೆ. ಈ ಜಾತಿ ವ್ಯವಸ್ಥೆಯಲ್ಲಿ ಮೇಲ್ವರ್ಗ ಮತ್ತು ಕೆಳವರ್ಗ ಎನ್ನುವ ವಿಭಾಗಗಳಿವೆ. ನಾನು ಕೆಳ ಸಮೂದಾಯದಿಂದ ಬಂದಿದ್ದೇನೆ. ಇಂತಹ ಸಮುದಾಯಗಳಿಗೆ ಇರುವಂತಹ ತೊಂದರೆಗಳೇನು ಎನ್ನುವುದು ಸರ್ಕಾರದ ಗಮನದಲ್ಲಿದೆ. ಈ ಸಮುದಾಯಗಳಲ್ಲಿ ಇರುವಂತಹ ತೊಂದರೆಗಳಿಗೆ, ಆಸೆ-ಆಮಿಷಗಳನ್ನು ತೋರಿಸಿ ಯಾರು ಈ ಸಮುದಾಯಗಳನ್ನು ಸೆಳೆಯುತ್ತಿದ್ದಾರೆ ಮತ್ತು ಮತಾಂತರಗೊಳಿಸುತ್ತಿದ್ದಾರೆ ಎನ್ನುವುದು ನಮ್ಮೆಲ್ಲರಿಗೂ ತಿಳಿದಿರುವಂತಹ ವಿಚಾರವಾಗಿದೆ. ಇವತ್ತು ಲವ್ ಜಿಹಾದ್‌ನ ವಿಚಾರ ಪ್ರಚಲಿತದಲ್ಲಿದೆ. ಪ್ರೀತಿ ಮಾಡಿ ಒಂದು ಜನಾಂಗದ ಹೆಣ್ಣುಮಕ್ಕಳನ್ನು ಹೊತ್ತುಕೊಂಡು ಹೋಗಿ ಮದುವೆ ಮಾಡಿಕೊಳ್ಳುತ್ತಿರುವುದು ಒಂದು ರೀತಿಯ ಮತಾಂತರವಾಗಿದೆ. ಮತ್ತೊಂದು ವಿಧಾನವೆಂದರೆ, ಪ್ರಚಾರದ ಮೂಲಕ ದೈವಿಕ ಭಾವನೆಗಳನ್ನು ಬಿತ್ತುವುದು, "ಹಿಂದೂ ದೇವರಲ್ಲಿ ಶಕ್ತಿ ಇಲ್ಲ ಆದ್ದರಿಂದ ನಮ್ಮ ದೇವರು ನಿಮ್ಮ ಪಾಪಗಳನ್ನು ತೊಳೆಯುತ್ತಾನೆ; ನಮ್ಮ ದೇವರನ್ನು ನೀವು ನಂಬಿದರೆ ಸಾಕು ನಿಮಗೆ ಇರುವಂತಹ ರೋಗಗಳನ್ನೆಲ್ಲ ವಾಸಿ ಮಾಡುತ್ತಾನೆ" ಎಂದು ಪ್ರಚಾರ ಮಾಡುವ ಮೂಲಕ ಸಮಾಜದಲ್ಲಿರುವ ಒಂದು ಸಮುದಾಯದವರನ್ನು ಸೆಳೆಯುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇದರಲ್ಲಿ ಯಾವಯಾವ ವಿಧವಾದ ಸೆಳೆತಗಳು ಇವೆ ಎನ್ನುವುದರ ಬಗ್ಗೆ ನಾನು ಹೇಳುತ್ತೇನೆ.

ಸನ್ಮಾನ್ಯ ಸಭಾಪತಿಯವರೇ, Evangelical Societies ಎಂದು ಇದೆ. Evangelism ಎಂದರೆ ಉಪದೇಶ ಅಥವಾ ಭೋದನೆಗಳನ್ನು ಮಾಡುವುದು. Biblically Evangelism ನಲ್ಲಿ ಯಾವ ಯಾವ ರೀತಿ ಇದೆ ಎನ್ನುವುದನ್ನು ನಾನು ಹೇಳುತ್ತೇನೆ. Evangelist ಎನ್ನುವುದಕ್ಕೆ Definition ಇದೆ. What is the purpose of Evangelism ಎಂದರೆ, *The primary aim is the conversion of the individual to the Christian life.* ಇದನ್ನು ಇವತ್ತು ನಾವು ನೋಡಬಹುದಾಗಿದೆ. ಅಂದರೆ, ಕ್ರೈಸ್ತರು ನೇರವಾಗಿ ಮತಾಂತರ ಮಾಡುತ್ತಿದ್ದಾರೆ ಎನ್ನುವುದನ್ನು ಇದು ಪ್ರಚಾರಪಡಿಸುತ್ತದೆ. There are six styles of Evangelism. ಅವರು ಯಾವಯಾವ ರೀತಿಯಲ್ಲಿ ಮತಾಂತರ ಮಾಡುತ್ತಾರೆಂದರೆ;

1. Direct Style: ನೇರನೇರವಾಗಿ ಒಬ್ಬರನ್ನೊಬ್ಬರು ಭೇಟಿ ಮಾಡಿ ಸೆಳೆಯುವುದು.

2. Intellectual Style: ಅಂದರೆ, ಬುದ್ಧಿವಂತಿಕೆಯಿಂದ ಬೌದ್ಧಿಕವಾಗಿ ಸೆಳೆಯುವುದು.

3. Testimonial Style: ಅಂದರೆ, ಪ್ರಶಂಸಾತ್ಮಕವಾಗಿ ಅವರನ್ನು ಪರಿವರ್ತನೆ ಮಾಡುವುದು.

4. Relational Style: ಅಂದರೆ, ಸಂಬಂಧಗಳನ್ನು ಬೆಳೆಸುವ ಮೂಲಕ ಸೆಳೆಯುವುದು.

5. Invitational Style: ಅಂದರೆ, ಆಹ್ವಾನಾತ್ಮಕವಾಗಿ ಸೆಳೆಯುವದು.

6. Serving Style: ಅಂದರೆ, ಸೇವೆಯ ಮೂಲಕ ಸೆಳೆಯುವುದು.

What is Serving style? ಇದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವಾಗ ಉಲ್ಲೇಖ ಮಾಡಿದರು. ವಿದ್ಯಾಭ್ಯಾಸ ಮಾಡಿಸುತ್ತೇವೆ ಎನ್ನುವುದು ಸರ್ವೀಸ್, ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಮತ್ತು ಸೇವೆ ಮಾಡುತ್ತೇವೆ ಎನ್ನುವುದು ಸಹ ಸರ್ವೀಸ್, ಜೀವನದಲ್ಲಿ ಉತ್ತಮವಾಗಿರುವ ಭವಿಷ್ಯವನ್ನು ರೂಪಿಸಿಕೊಡುತ್ತೇವೆಂದು ಹೇಳುವುದು ಸರ್ವೀಸ್ ಆಗಿದೆ. ಕೆಳ ಸಮುದಾಯಗಳಲ್ಲಿ ಬಹಳಷ್ಟು ಜನರು ಬಡತನದಿಂದ ಬಳಲುತ್ತಿದ್ದಾರೆ. ಅವರಿಗೆ ನೋವುಗಳಿವೆ ಮತ್ತು ಹಲವಾರು ಸಮಸ್ಯೆಗಳಿವೆ. ಪ್ರತಿನಿತ್ಯ ಜೀವನವನ್ನು ಸಾಗಿಸುವುದೇ ಕಷ್ಟ ಎನ್ನುವ ಸಂದರ್ಭದಲ್ಲಿ ಸೆಳೆತಕ್ಕೆ ಸಹಜವಾಗಿಯೇ ಅವರು ಆಕರ್ಷಿತರಾಗುತ್ತಾರೆ. "**ಕೊಡುತ್ತೇನೆ ಎಂದರೆ ಆಸೆ; ಹೊಡಿತ್ತೇನೆ ಎಂದರೆ ಭಯ**" ಎನ್ನುವ ಗಾದೆ ಮಾತು ನಮ್ಮ ಹಳ್ಳಿ ಕಡೆ ಇದೆ. ಕೊಡುತ್ತೇನೆ ಎಂದರೆ ನಮ್ಮ ಜನರು ಆಸೆಗೆ ಬೀಳುತ್ತಾರೆ. ನಮಗೆ ಎಲ್ಲವೂ ಇದ್ದರೆ ನಾವು ಆಸೆಗೆ ಬೀಳುವ ಸಂದರ್ಭ ಬರುವುದಿಲ್ಲ. ಕೂಲಿ ಮಾಡದೇ ಬದುಕುವುದಕ್ಕೆ ಆಗುವುದಿಲ್ಲ ಎನ್ನುವಷ್ಟರ ಮಟ್ಟಿಗೆ ನಮ್ಮಲ್ಲಿ ನಿರ್ಗತಿಕರಿದ್ದಾರೆ. ಇಂತಹ ಸಮುದಾಯಗಳು ಮಾತ್ರವೇ ಆಸೆಗಳಿಗೆ, ಆಮಿಷಗಳಿಗೆ ಮತ್ತು ಆಕರ್ಷಣೆಗಳಿಗೆ ಒಳಗಾಗುತ್ತಿವೆ. ಬೇರೆ ಯಾರೂ ಈ ರೀತಿಯ ಸೆಳೆತಕ್ಕೆ ಒಳಗಾಗುವ ಸಾಧ್ಯತೆಗಳು ಇಲ್ಲ. ಇವತ್ತು ಇಲ್ಲಿ ಮಾತನಾಡಿದವರಾರು ಕೂಡ ಕ್ರಿಶ್ಚಿಯನ್ ಅಥವಾ ಮುಸ್ಲಿಂ ಆಗಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಒಂದು ವಿಷಾದದ ಸಂಗತಿಯನ್ನು ಹೇಳಬೇಕಾದರೆ, ಹಿಂದು ಧರ್ಮ ಬೇರೆ ಧರ್ಮದವರನ್ನು ಮತಾಂತರಗೊಂಡು ನಮ್ಮ ಧರ್ಮಕ್ಕೆ ಬಂದು ಸೇರಿಕೊಳ್ಳಿ ಎಂದು ಹೇಳಿರುವ ಪ್ರಕರಣಗಳನ್ನು ನಾನು ಎಲ್ಲಿಯೂ ನೋಡಿಲ್ಲ. ಬೌದ್ಧ ಧರ್ಮದ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಉಲ್ಲೇಖ ಮಾಡಿದ್ದಾರೆ. 1956ರಲ್ಲಿ ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಧರ್ಮಾಂತರಗೊಂಡರು. ಅವರು ಬೌದ್ಧ ಧರ್ಮವನ್ನು ಸ್ವೀಕಾರ ಮಾಡಿದ ಕಾರಣದಿಂದಾಗಿಯೇ ಅನೇಕರು ಅವರ ಹೆಜ್ಜೆಯ ಜಾಡಿನಲ್ಲಿ ಹೊರಟಿರುವುದನ್ನು ನಾವು ಗಮನಿಸಿದ್ದೇವೆ. ಇಲ್ಲದಿದ್ದರೆ, ಬೌದ್ಧ ಧರ್ಮದವರು ಸಹ "ನಮ್ಮ ಧರ್ಮಕ್ಕೆ ಬಂದು ಸೇರಿಕೊಳ್ಳಿ" ಎನ್ನುವ ಪ್ರಚಾರವನ್ನು ಮಾಡುವುದಿಲ್ಲ. ಉಳಿದ ಧರ್ಮಗಳು ಸಹ ಆ ರೀತಿಯ ಪ್ರಚಾರವನ್ನು ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ನಮ್ಮ ಭಾರತ ದೇಶದಲ್ಲಿ ಒಂದು ಕ್ರೈಸ್ತ ಧರ್ಮ ಮತ್ತೊಂದು ಇಸ್ಲಾಂ ಧರ್ಮ ಈ ಎರಡು ಧರ್ಮಗಳು ಮತಾಂತರವನ್ನು ಪ್ರೋತ್ಸಾಹಿಸುತ್ತವೆ ಎನ್ನುವುದು ನಮ್ಮೆಲ್ಲರಿಗೂ ತಿಳಿದಿದೆ. ಕ್ರೈಸ್ತ ಧರ್ಮ ಯಾವಯಾವ ರೀತಿಯಲ್ಲಿ ಇತರ ಧರ್ಮೀಯರನ್ನು ಆಕರ್ಷಿಸುತ್ತಿದೆ ಎನ್ನುವುದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಬಹಳಷ್ಟು ಪ್ರಚಾರವನ್ನು ಅವರು ಮಾಡುತ್ತಾರೆ. For an example of Evangelism…….

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು);-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೊಸದಾಗಿ ಆಯ್ಕೆಗೊಂಡು ಈ ಸದನಕ್ಕೆ ಬಂದಿದ್ದಾರೆ. ಅವರ ಮಾತಿಗೆ ನಾನು ಅಡ್ಡಿಪಡಿಸಬಾರದು. ಆದರೆ, ಈಗತಾನೇ ಮಾನ್ಯ ಮಾಧುಸ್ವಾಮಿಯವರು, "ನಾವು ಯಾವುದೇ ಧರ್ಮದವರು ಮತಾಂತರ ಮಾಡುತ್ತಿದ್ದಾರೆಂದು ಹೇಳಿಲ್ಲ" ಎಂದು ಹೇಳಿದರು. ಆದರೆ, ಮಾನ್ಯ ಸದಸ್ಯರು ಯಾವ ಧರ್ಮಗಳು ಮತಾಂತರ ಮಾಡುತ್ತಿವೆಯೆಂದು ಹೇಳುತ್ತಾ, ಆ ಧರ್ಮಗಳ ಹೆಸರುಗಳನ್ನು ಹೇಳುತ್ತಿದ್ದಾರೆ. ಹೊಸ ಸದಸ್ಯರು ಸ್ವಲ್ಪ ನೋಡಿಕೊಂಡು ಮಾತನಾಡುವುದು ಒಳ್ಳೆಯದು ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ನಾವು ತಂದಿರುವ ವಿಧೇಯಕದಲ್ಲಿ ಎಲ್ಲಿಯೂ ಯಾವ ಧರ್ಮದ ಬಗ್ಗೆಯೂ ಸೀಮಿತವಾಗಿ ಉಲ್ಲೇಖ ಮಾಡಿಲ್ಲ. ಮಾನ್ಯ ಸದಸ್ಯರು ವೈಯಕ್ತಿಕವಾಗಿ ಮಾತನಾಡುತ್ತಿರುವಾಗ ಉಲ್ಲೇಖ ಮಾಡಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಸನ್ಮಾನ್ಯ ಸಭಾಪತಿಯವರೇ, ಮತಾಂತರ ಮಾಡಿರುವ ಧರ್ಮಗಳ ಬಗ್ಗೆ ನಾನು ಇಲ್ಲಿ ಉಲ್ಲೇಖ ಮಾಡುತ್ತಿದ್ದೇನೆ. ಉದಾಹರಣೆಗೆ ಹೇಳಬೇಕಾದರೆ, ನಾನು ಯಾವುದಾದರೊಂದು ಧರ್ಮಕ್ಕೆ ಸೇರಬೇಕೆಂದರೆ, ಇಲ್ಲಿರುವಂತಹ ಯಾರನ್ನೂ ಕೇಳಬೇಕಾಗಿಲ್ಲ. ಅದು ನನ್ನ ಹಕ್ಕು; ಡಾ॥ ಬಿ.ಆರ್.ಅಂಬೇಡ್ಕರ್‌ರವರು ನನಗೆ ಇಚ್ಛೆ ಇರುವ ಧರ್ಮಕ್ಕೆ ಸೇರಲು ಹಕ್ಕು ಕೊಟ್ಟಿದ್ದಾರೆ. ಡಾ॥ ಬಿ.ಆರ್.ಅಂಬೇಡ್ಕರ್‌ರವರು ಯಾವ ರೀತಿಯಲ್ಲಿ ಪರ ಧರ್ಮವನ್ನು ಸೇರಿದ್ದಾರೆಯೋ ಅದೇ ರೀತಿಯ ಹಕ್ಕು ನನಗೂ ಇದೆ. ನನಗೆ ಬೇಕಾದ ಧರ್ಮವನ್ನು ಆಯ್ಕೆ ಮಾಡುವುದು ನನ್ನ ಹಕ್ಕು. ಇದಕ್ಕೆ ಈ ವಿಧೇಯಕದಲ್ಲಿ ನಿರ್ಬಂಧವನ್ನು ವಿಧಿಸಿಲ್ಲ. ಆದರೆ, ಯಾರಾದರು ಬೇರೆ ಧರ್ಮಕ್ಕೆ ಸೇರುವುದೇ ಆದರೆ, ಒಂದು ಅರ್ಜಿಯನ್ನು ಕೊಟ್ಟು declare ಮಾಡಿಕೊಳ್ಳಿ, ನಿಮಗೆ ಇಷ್ಟಬಂದ ಧರ್ಮಕ್ಕೆ ಸೇರಿಕೊಳ್ಳಿ ಎಂದು ಹೇಳುವುದರ ಜೊತೆಗೆ ತಾವು ಯಾವ ಧರ್ಮಕ್ಕೆ ಹೋಗಿದ್ದೀರಿ ಎನ್ನುವ ಮಾಹಿತಿ ಕಡತದಲ್ಲಿ ಇರಬೇಕು ಎಂದು ಹೇಳಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಯಾವ ರೀತಿಯಲ್ಲಿ ಮತಾಂತರವಾಗುತ್ತಿದೆ ಎನ್ನುವುದನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಬೆಂಗಳೂರು ಗ್ರಾಮಾಂತರವಾಗಿರಬಹುದು, ಕೋಲಾರವಾಗಿರಬಹುದು ಅಥವಾ ತಮ್ಮ ಜಿಲ್ಲೆಯಾಗಿರುವ ಬೀದರ್ ಜಿಲ್ಲೆಯಾಗಿರಬಹುದು ಎಲ್ಲ ಕಡೆಗಳಲ್ಲಿಯೂ ಬಹಳಷ್ಟು ಜನರು ತಮ್ಮ ಮೂಲ ಧರ್ಮವನ್ನು ಬಿಟ್ಟು ಬೇರೆಬೇರೆ ಧರ್ಮಗಳಿಗೆ ಹೋಗಿದ್ದಾರೆ. ತಮ್ಮೆಲ್ಲರಿಗೂ ಗೊತ್ತಿರುವಂತೆ ಸರ್ಟಿಫಿಕೇಟ್‌ನಲ್ಲಿ ಮಾತ್ರ ಎಸ್.ಸಿ. (Scheduled Caste), ಎಂದು ಇರುತ್ತದೆ. ಸರ್ಟಿಫಿಕೇಟ್ ಅನ್ನು ಹೊರತುಪಡಿಸಿದರೆ ಬೇರೆ ಧರ್ಮವನ್ನು ಅನುಸರಿಸುತ್ತಿದ್ದಾರೆ. ಮನೆಗಳಲ್ಲಿ ಅವರ ಚಟುವಟಿಕೆಗಳೇ ಬೇರೆಯಾಗಿದೆ. ಹೊರಗಡೆ ಬಂದಾಗ ಸರ್ಟಿಫಿಕೇಟ್ ತೋರಿಸುತ್ತಾರೆ. ಇದು ಇವತ್ತು ನಡೆಯುತ್ತಿರುವಂತಹ ವ್ಯವಸ್ಥೆಯಾಗಿದೆ. ಎಲ್ಲರಿಗೂ

ಅವರದೇ ಆಗಿರುವಂತಹ ಒಂದು ಜಾತಿ ಇದೆ. ಜಾತಿ ಬಿಟ್ಟು ಇವತ್ತು ರಾಜಕಾರಣವೂ ಇಲ್ಲ, ಯಾವುದೂ ಇಲ್ಲ.

(ಮುಂದು)

(856) 15.9.2022 4.30 ಪಿಕೆ:ಜಿಆರ್

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ಮುಂದು)**

ಜಾತಿಯ ಆಧಾರದ ಮೇಲೆಯೇ ನಾವು ಎಲ್ಲವನ್ನೂ ಕ್ಲೇಮ್ ಮಾಡುತ್ತೇವೆ. ಜಾತಿಯ ಮೇಲೆ ನನಗೂ ಕೂಡ ಆಸೆ ಇದೆ. ಪರಿಶಿಷ್ಟ ಜಾತಿಗಳು ಒಗ್ಗಟ್ಟಾಗಿ ಇರಬೇಕು; ನಮ್ಮ ಧರ್ಮವನ್ನು ಬಿಟ್ಟು ಹೋಗಬಾರದು. ಜಾತಿಯ ಮೇಲೆಯೇ ನಮ್ಮನ್ನು ತೀರ್ಮಾನ ಮಾಡುವಾಗ ನಮಗೂ ಹಕ್ಕಿರುತ್ತದೆ ಅಲ್ಲವೇ? ನಮ್ಮ ಒಗ್ಗಟ್ಟನ್ನು ನಾವು ಪ್ರದರ್ಶನ ಮಾಡಿದಾಗಲೇ ನಮ್ಮ ಹಕ್ಕುಗಳು ಸಿಗುತ್ತವೆ. ಅನೇಕರು, ಆ ಜನಾಂಗದವರು ಸವಲತ್ತುಗಳನ್ನು ತೆಗೆದುಕೊಂಡರೆ ನಿಮಗೇನು ಕಷ್ಟ ಎಂದು ಕೇಳುತ್ತಾರೆ. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಲ್ಲಿ ಒಂದು ಉನ್ನತ ಹುದ್ದೆಯಲ್ಲಿದ್ದ ನಮ್ಮವರೇ ಆದ ಒಬ್ಬ ವ್ಯಕ್ತಿ ಧರ್ಮಾಂತರ ಆಗಿಹೋದರು. ಆದರೆ, ಇಲ್ಲಿ ಅವರ ಹೆಸರೇ ಬೇರೆ. ಅಲ್ಲಿ ಅವರ ಜಾತಿಯೇ ಬೇರೆ. ಆದರೂ ಕೂಡ ಸವಲತ್ತುಗಳೆಲ್ಲವನ್ನೂ ಪಡೆದುಕೊಂಡು ಹೊರಟು ಹೋದರು. ಹೊರಗಡೆ ಏನಾಗುತ್ತಿದೆ ಎಂದರೆ, ಹೆಸರಿಗೆ ಎಸ್‌ಸಿ ಆಗಿರುತ್ತಾರೆ. ನಮ್ಮ ಊರಿನಲ್ಲಿ ಒಬ್ಬ ಮುನಿಯಪ್ಪ ಎನ್ನುವ ವ್ಯಕ್ತಿ ಇದ್ದ. ಆತನ ಧರ್ಮಾಂತರವಾಯಿತು. ಧರ್ಮಾಂತರಗೊಂಡ ಮೇಲೆ ಆತನ ಹೆಸರು ಪೌಲ್ ಮುನಿಯಪ್ಪ ಎಂದಾಯಿತು. ದೇಶದಲ್ಲಿ ದಲಿತರು ಎಲ್ಲೇ ಹೋದರು ಅವರ ಪರಿಸ್ಥಿತಿ ಹಾಗೆಯೇ ಇರುತ್ತದೆ. ಅಲ್ಲಿ ಹೋದರೂ, ದಲಿತ ಕ್ರಿಶ್ಚಿಯನ್ ಹೋರಾಟ ನಡೆಯುತ್ತಿದೆ. ಏಕೆ ನಡೆಯುತ್ತಿದೆ ಹೇಳಿ? ಈಗ ದಲಿತ ಕ್ರಿಶ್ಚಿಯನ್ನರೂ ಕೂಡ ನಮಗೂ ಮೀಸಲಾತಿ ಕೊಡಿ ಎಂದು ಹೋರಾಟ ಮಾಡುತ್ತಿದ್ದಾರೆ. ಏಕೆ ಹೋರಾಟ ಮಾಡುತ್ತಿದ್ದಾರೆ? ನೀವು ಯಾರು ಯಾರನ್ನು ಸೆಳೆಯುತ್ತೀರೋ ಅವರನ್ನು ನಡು ನೀರಿನಲ್ಲಿ ಬಿಟ್ಟಿದ್ದೀರಿ. ಈಗ ಅವರಿಗೆ ಮನವರಿಕೆ ಆಗುವುದಕ್ಕೆ ಪ್ರಾರಂಭವಾಗಿದೆ. 'ನ ಘರ್ ಕಾ, ನ ಘಾಟ್ ಕಾ' ಎನ್ನುವ ಪರಿಸ್ಥಿತಿಯಲ್ಲಿ ಅವರಿದ್ದಾರೆ. ನಮ್ಮ

ಸದಸ್ಯರೊಬ್ಬರು ಈ ವಿಷಯ ಕುರಿತು ಮಾತನಾಡಿ ಆಚೆ ಹೋಗಿದ್ದಾರೆ. ಅವರು, 'ಜಿಸಕೀ ಲಾಠೀ ಉಸಕೀ ಭೈಸ್' ಎನ್ನುವ ಮಾತನ್ನು ಹೇಳಿದರು. ಹೌದು, ನಿಮ್ಮ ಹತ್ತಿರ ಲಾಠೀ ಇದೆ, ನಾವು ಎಮ್ಮೆಗಳು, ನಮ್ಮನ್ನೆಲ್ಲಾ ಕರೆದುಕೊಂಡು ಹೋಗುತ್ತೀರಾ? ಈ ಸಮಾಜದಲ್ಲಿ ನಾವು ಎಮ್ಮೆಗಳು, ಹಸುಗಳು, ದನಗಳಾಗಿದ್ದೇವೆಯೇ? ಪರಿಸ್ಥಿತಿ ನಿಮಗೆಲ್ಲಾ ಗೊತ್ತಿದೆ ಅಲ್ಲವೇ? ತಳ ಸಮುದಾಯಗಳು ಇವತ್ತು ಯಾವರೀತಿ ಸಂಕಷ್ಟದಲ್ಲಿದೆ ಎನ್ನುವುದು ಗೊತ್ತಿದೆ. ಯಾರೇ ಆಗಿರಲಿ ಕೇವಲ ಭಾಷಣವನ್ನು ಮಾಡಬೇಡಿ. ಇವತ್ತು ದೇಶದಲ್ಲಿ ಇಂಥದ್ದೇ ಪರಿಸ್ಥಿತಿ ಇದೆ ಎಂದು ನೀವೇ ಮಾತಾಡುತ್ತೀರಿ. ಆದರೆ ಅದನ್ನು ಸರಿ ಮಾಡುವುದಕ್ಕೆ ನೀಮಗೇನು ತೊಡಕಾಗಿದೆ? ಇವತ್ತೂ ಕೂಡ ಹಳ್ಳಿಗಳಲ್ಲಿ, ನಮ್ಮನ್ನು ಮನೆಗಳಲ್ಲಿ ಬಿಟ್ಟುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಛಲವಾದಿ ನಾರಾಯಣಸ್ವಾಮಿಯವರೇ, ಜಿಸಕೀ ಲಾಠೀ ಉಸಕೀ ಭೈಸ್ ಎಂದು ಮಾನ್ಯ ನಜೀರ್ ಅಹ್ಮದ್‌ರವರು ಪ್ರಸ್ತಾಪ ಮಾಡಿದರು. ಅವರು ಒಂದು ಸಮುದಾಯವನ್ನು ಗಮನದಲ್ಲಿಟ್ಟುಕೊಂಡು ಹೇಳಿದ್ದಲ್ಲ. ಅವರು, ಕಾನೂನು ಒಂದೇ ರೀತಿ ಇರಬೇಕು. ಶಿವಮೊಗ್ಗದಲ್ಲೂ ಒಂದೇ ಇರಬೇಕು; ಹುಬ್ಬಳ್ಳಿಯಲ್ಲೂ ಒಂದೇ ಇರಬೇಕು ಎನ್ನುವ ಹಿನ್ನೆಲೆಯಲ್ಲಿ ಹೇಳಿದ್ದಾರೆ. ಕೆಳ ಸಮುದಾಯದವರನ್ನು ಕುರಿತು ಹೇಳಿದ್ದಲ್ಲ.

**ಸಭಾಪತಿಯವರು:–** ಅವರು ಯಾವ ಅರ್ಥದಲ್ಲಿ ಹೇಳಿದ್ದಾರೆ ಎನ್ನುವುದು ಅವರಿಗೆಯೇ ಗೊತ್ತು. ಆದರೆ ಮಾನ್ಯ ಛಲವಾದಿ ನಾರಾಯಣಸ್ವಾಮಿಯವರು ಈ ರೀತಿ ಅರ್ಥ ಮಾಡಿಕೊಂಡಿದ್ದಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಜಿಸಕೀ ಲಾಠೀ ಉಸಕೀ ಭೈಸ್ ಎಂದರೆ, ಯಾರಿಗೆ ತಾಕತ್ತು ಇದೆಯೋ ಅವರು ಕಾನೂನಿನ ಅಡಿಯಲ್ಲಿ ತರಲಿ ಎನ್ನುವ ಹಿನ್ನೆಲೆಯಲ್ಲಿ ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ನಜೀರ್ ಅಹ್ಮದ್‌ರವರು ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಆದರೆ ಮಾನ್ಯ ಸದಸ್ಯರು ತಮ್ಮದೇ ಆದ ರೀತಿಯಲ್ಲಿ ಅರ್ಥ ಮಾಡಿಕೊಂಡಿದ್ದಾರೆ; ಏನು ಮಾಡುವುದಕ್ಕಾಗುತ್ತದೆ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಇವರು ಹೊಸ ಸದಸ್ಯರಾಗಿರುವುದರಿಂದ ಸ್ವಲ್ಪ ಹುಷಾರಾಗಿ ಮಾತನಾಡುವುದು ಒಳ್ಳೆಯದು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ನಾನು ಹೊಸದಾಗಿ ಬಂದಿದ್ದೇನೆ. ನಾನು ಏನಾದರೂ ತಪ್ಪು ಮಾಡಿದರೆ ತಕ್ಷಣ ಮನವರಿಕೆ ಮಾಡಿಕೊಡಿ, ನಾನು ತಿದ್ದಿಕೊಳ್ಳುತ್ತೇನೆ.

ತಳ ಸಮುದಾಯಗಳು ಏನು ಮತಾಂತರ ಆಗುತ್ತಿರುವ ವಿಚಾರ ಇದೆಯೋ, ಇದರಿಂದ ಅವರೇ ವಂಚನೆಗೆ ಒಳಗಾಗುತ್ತಿದ್ದಾರೆ. ತೊಂದರೆಗಳನ್ನು ಅನುಭವಿಸುತ್ತಿರುವವರು ನಾವೇ ಆಗಿದ್ದೇವೆ. ನ್ಯಾಷನಲ್ ಕೌನ್ಸಿಲ್ ಆಫ್ ಚರ್ಚಸ್ ಇನ್ ಇಂಡಿಯಾ ಎನ್ನುವ ಒಂದು ಕ್ರಿಶ್ಚಿಯನ್ ಸಂಸ್ಥೆ ಇದೆ. ಆ ಸಂಸ್ಥೆ ತನ್ನ 70ನೇ ವಾರ್ಷಿಕೋತ್ಸವ ಮಾಡಿ, ಅದರಲ್ಲಿ, ದೇಶದಲ್ಲಿರುವ ಅಷ್ಟೂ ಕ್ರೈಸ್ತರ ಪೈಕಿ ಶೇಕಡ 70 ರಷ್ಟು ಜನಸಂಖ್ಯೆ ದಲಿತ ಸಮುದಾಯದಿಂದ ನಮ್ಮ ಸಮುದಾಯಕ್ಕೆ ಬಂದಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಅಂದರೆ, ಅವರ ಜನಸಂಖ್ಯೆ ಜಾಸ್ತಿ ಆಗಿದೆ. ಪರಿಶಿಷ್ಟ ಜಾತಿ ವರ್ಗಗಳಿಂದ, ತಳ ಸಮುದಾಯಗಳಿಂದ ಜನರನ್ನು ಸೆಳೆದು ಅವರ ಧರ್ಮದವರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದ್ದಾರೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಡಾ: ತೇಜಸ್ವಿನಿ ಗೌಡ ಅವರು ಪೀಠಾಸೀನರಾದರು)**

ಅಂದರೆ, ಇಲ್ಲಿ ನಷ್ಟವಾಗುತ್ತಿರುವುದು ಯಾರಿಗೆ? ಪರಿಶಿಷ್ಟ ಜಾತಿ-ವರ್ಗದವರಿಗೆ ನಷ್ಟವಾಗುತ್ತಿದೆ. ಕಾಡು ಕುರುಬ ಇರಬಹುದು, ಜೇನು ಕುರುಬ ಇರಬಹುದು, ಎಸ್‌ಟಿಗಳಿರಬಹುದು, ಕಾಡು ಗೊಲ್ಲ ಇರಬಹುದು, ಇಂಥವರು ವಾಸಿಸುವ ಗುಡ್ಡಗಾಡು ಪ್ರದೇಶಗಳಲ್ಲಿ ಚರ್ಚುಗಳಾಗಿವೆ. ಇವತ್ತು ನೀವು ಸರ್ವೆ ಮಾಡಿಸಿ. ಬೆಂಗಳೂರು ಗ್ರಾಮಾಂತರ ಪ್ರದೇಶ, ದೇವನಳ್ಳಿ ಇರಬಹುದು, ಚಿಕ್ಕಬಳ್ಳಾಪುರ ಇರಬಹುದು, ಶಿಡ್ಲಘಟ್ಟ ಇರಬಹುದು, ಕನಕಪುರ ಇರಬಹುದು, ಬಂಗಾರ ಪೇಟೆ ಇರಬಹುದು

ಅಥವಾ ಹೊಸಕೋಟೆ ಇರಬಹುದು ಇಲ್ಲಿ ಚರ್ಚುಗಳಾಗುತ್ತಿವೆ. ಅಲ್ಲಿ ಕಾಲೇಜಗಳೂ ಕೂಡ ಇವೆ. ಆ ಕಾಲೇಜುಗಳಲ್ಲಿ, ಯಾವರೀತಿ ಪ್ರೀಚ್ ಮಾಡಬೇಕು, ಜನರನ್ನು ಯಾವರೀತಿ ಸೆಳೆಯಬೇಕು ಎಂದು ಹೇಳಿಕೊಡುತ್ತಾರೆ. ಹೊಸಕೋಟೆಯಲ್ಲಿ ಕೆಲವು ಸಂಸ್ಥೆಗಳಿವೆ. ಇವಾಂಜಲೀಸ್ ಸೊಸೈಟಿ ಎನ್ನುವ ಸಂಸ್ಥೆ ಏನಿದೆ, ಅದು ಬೆಳಗ್ಗೆಯಿಂದ ಸಂಜೆಯವರೆಗೆ ಬೋಧನೆ ಮಾಡುತ್ತಲೇ ಇರುತ್ತದೆ; ಅದೇ ಅದರ ಕೆಲಸವಾಗಿದೆ. ಅವರಿಗೆ ಅದಕ್ಕೆಂದೇ ಸಂಬಳ ಕೊಡುತ್ತಾರೆ. ಇದಕ್ಕೆ ಹಣ ಎಲ್ಲಿಂದ ಬರುತ್ತದೆ ಎನ್ನುವುದು ನಮಗೂ ಗೊತ್ತು, ನಿಮಗೂ ಗೊತ್ತು. ಈ ರೀತಿ ಇವತ್ತು ಜನರನ್ನು ಸೆಳೆಯುವುದು; ಬೋಧನೆ ಮಾಡುವುದು ನಡೆಯುತ್ತಿದೆ. ಇಲ್ಲಿ ಪರಿಶಿಷ್ಟ ಜಾತಿ-ವರ್ಗಗಳು, ಅಂದರೆ ತಳ ಸಮುದಾಯಗಳೇ ಅವರ ಗುರಿಯಾಗಿರುತ್ತದೆ. ತಳ ಸಮುದಾಯಗಳೇ ಅವರ ಟಾರ್ಗೆಟ್ ಆಗಿರುವುದರಿಂದ ಇವತ್ತು ನಮ್ಮ ಜನಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಇವತ್ತು ಸರ್ಕಾರ ಈ ವಿಧೇಯಕವನ್ನು ಮಂಡಿಸಿದೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಚರ್ಚುಗಳು ಹೇಗೆ ಹೆಚ್ಚಾಯಿತು ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಾನು ಹನೂರು ತಾಲ್ಲೂಕಿಗೆ ಹೋಗಿದ್ದೆ. 3 ಕಿ.ಮೀ. ವ್ಯಾಪ್ತಿಯಲ್ಲಿ 22 ಚರ್ಚುಗಳಾಗಿವೆ. ಮಾನ್ಯ ಸದಸ್ಯರೇ ತಾವು ಬೇಕಾದರೆ ಹೋಗಿ ನೋಡಿ, ನಿಮಗೆ ಗೊತ್ತಾಗುತ್ತದೆ.

**ಶ್ರೀ ಕೆ.ಅಬ್ದುಲ್ ಜಬ್ಬರ್:-** ಅದಕ್ಕಾಗಿಯೇ ಅವರು ಶಾಲೆಗೆ ಹೋಗುವುದಕ್ಕೆ ಅವಕಾಶ ಕೊಡಿ. ನ್ಯಾಷನಲ್ ಸೆನ್ಸಸ್ ಪ್ರಕಾರ ಕ್ರಿಶ್ಚಿಯನ್ನರ್ ಸಂಖ್ಯೆ ಕಡಿಮೆಯಾಗಿದೆ ಎಂದಿದೆಯಲ್ಲವೇ?

**ಡಾ॥ ವೈ.ಎ. ನಾರಾಯಣಸ್ವಾಮಿ:-** ಮಾನ್ಯ ವಿರೋಧ ಪಕ್ಷದ ನಾಯಕರು ಸೆನ್ಸಸ್‌ಗಳ ಅಂಕಿ ಅಂಶಗಳನ್ನು ಪರ್ಸೆಂಟೇಜ್‌ನಲ್ಲಿ ಹೇಳಿದ್ದಾರೆ. ಆದರೆ, ಪ್ರಪೋರ್ಷನೇಟ್ ತೆಗೆದುಕೊಂಡರೆ ಏರಿಕೆಯ ಪ್ರಮಾಣ ಬಹಳ ದೊಡ್ಡದಾಗಿದೆ. ನಮ್ಮವರು ಮಾತನಾಡಬೇಕಾದರೆ ಅದರ ಸ್ಪಷ್ಟ ಅಂಕಿಅಂಶಗಳನ್ನು ಕೊಡುತ್ತಾರೆ. ಕೆಳಮನೆಯಲ್ಲಿ ಮಾನ್ಯ ಸಿದ್ಧರಾಮಯ್ಯನವರು ಏನು ಅಂಕಿ ಅಂಶಗಳನ್ನು ಕೊಟ್ಟಿದ್ದರೋ ಅದನ್ನು ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಉಲ್ಲೇಖ ಮಾಡಿದ್ದಾರೆ.

ವಾಸ್ತವದಲ್ಲಿ ಅದು ಹಾಗಿಲ್ಲ. ವಾಸ್ತವ ಬೇರೆ ಇದೆ. ನಾವು ವಾಸ್ತವ ಅಂಕಿ ಅಂಶಗಳನ್ನು ಕೊಡುತ್ತೇವೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ನಮ್ಮ ಸುತ್ತಮುತ್ತ ನಡೆಯುತ್ತಿರುವ ವಿಚಾರಗಳಿಗೆ ಸಂಬಂಧಪಟ್ಟಂತೆ ವಿವರಗಳನ್ನು ನೀಡುತ್ತಿದ್ದೇನೆ. ಕ್ರಿಶ್ಚಿಯನ್ ಧರ್ಮ ಇರಬಹುದು, ಇಸ್ಲಾಂ ಧರ್ಮ ಇರಬಹುದು ಅಥವಾ ಬೇರೆ ಯಾವುದೇ ಧರ್ಮ ಇರಬಹುದು, ಮಾನ್ಯ ಅಂಬೇಡ್ಕರ್‌ರವರು, ನಾನು ಹಿಂದೂವಾಗಿ ಹುಟ್ಟಿದ್ದೇನೆ, ಆದರೆ ಹಿಂದೂ ಆಗಿ ಸಾಯುವುದಿಲ್ಲ ಎಂದು ಹೇಳಿದ್ದರು. ಏಕೆ? ಅವರು ಸಣ್ಣ ವಯಸ್ಸಿನಿಂದ ಅವರ ಅನುಭವಕ್ಕೆ ಬಂದಿದ್ದನ್ನು ಸರಿ ಮಾಡಲಿಕ್ಕೆ ಪ್ರಯತ್ನ ಮಾಡಿದರು. ಅವರ ಕಾಲಾವಧಿಯಲ್ಲಿ ಅದು ಸರಿಹೋಗಲಿಲ್ಲ. ಅವರು ಇನ್ನಷ್ಟು ಕಾಲ ಇದ್ದಿದ್ದರೇ, ಇನ್ನೂ ಏನೇನು ಪರಿವರ್ತನೆಗಳು ಆಗುತ್ತಿದ್ದವು ಎನ್ನುವುದನ್ನು ನಾವು ನೋಡಬಹುದಾಗಿತ್ತು. ಆದರೆ, ದೇಶದಲ್ಲಿ ಬದುಕುವ ನಮ್ಮೆಲ್ಲರಿಗೂ ಕೂಡ ಹಕ್ಕುಗಳನ್ನು ಕೊಟ್ಟು ಹೋಗಿದ್ದಾರೆ. ಮಾತು-ಮಾತಿಗೂ ನಾವು ಸಂವಿಧಾನವನ್ನು ಮುಂದಿಡುತ್ತೇವೆ. ಸಂವಿಧಾನದ ಪ್ರಕಾರವಾಗಿ ನಾವು ಕೇವಲ ಭಾಷಣ ಮಾಡುವುದಲ್ಲ, ಅದರಲ್ಲಿರುವಂತೆ ನಡತೆಯನ್ನೂ ಕಲಿತುಕೊಳ್ಳಬೇಕು. ಸಂವಿಧಾನ ಶಿಲ್ಪಿ ಅಂಬೇಡ್ಕರ್ ಎಂದು ಅವರ ಹೆಸರನ್ನು ಕೇವಲ ಬಾಯಲ್ಲಿ ಮಾತ್ರ ಹೇಳುತ್ತೇವೆ. ಆದರೆ ಮಾಡತಕ್ಕಂಥದ್ದು ಏನು? ಈ ದೇಶದಲ್ಲಿ ಶ್ರೀ ಅಂಬೇಡ್ಕರ್‌ರವರಿಗೆ ಗೌರವ ಕೊಡಲಾರದಂತಹ ಪರಿಸ್ಥಿತಿ ಇದ್ದುದನ್ನು ನೋಡಿದ್ದೇವೆ. ಅವರು ಈ ವಿಚಾರವಾಗಿ ಏನು ಹೇಳಿ ಹೋಗಿದ್ದರೆ ಎನ್ನುವುದನ್ನು ನಾನು ಇಲ್ಲಿ ಹೇಳಿದರೆ ನಮ್ಮ ಸದಸ್ಯರು ಬೇಜಾರು ಪಟ್ಟುಕೊಳ್ಳಬಹುದು. ಆದ್ದರಿಂದ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, ಇವತ್ತು ತಳ ವರ್ಗದವರು ಆಕರ್ಷಣೆಗೆ ಒಳಪಟ್ಟು, ಆಸೆ-ಆಮಿಷಗಳಿಗೆ ಕಟ್ಟುಬಿದ್ದು ಬೇರೆ ಧರ್ಮಗಳನ್ನು ಸ್ವೀಕಾರ ಮಾಡುತ್ತಿರುವುದನ್ನು ನಾನು ಕಂಡಿದ್ದೇನೆ. ಇವತ್ತು ನಾನು ಅವರಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಯಾರು ತೊಂದರೆಗೆ ಒಳಗಾಗಿದ್ದಾರೋ, ಯಾವ ಯಾವ ಧರ್ಮಕ್ಕೋ ಹೋಗಿ ಬೀದಿ ಪಾಲಾಗಿದ್ದೀರೋ, ಅವರೆಲ್ಲರೂ ವಾಪಸ್ಸು ಬರಬೇಕು. **(ಮುಂದು)**

(857) 15-09-2022 4.40 ಡಿಎಸ್-ಜಿಆರ್

**ಛಲವಾದಿ ಟಿ.ನಾರಾಯಣಸ್ವಾಮಿ(ಮುಂದು)**

ಇವತ್ತು ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ, ನಿಮ್ಮ ಪುನರ್ವಸತಿ ಮಾಡುವುದಕ್ಕೆ ಸರ್ಕಾರ ಬದ್ಧವಾಗಿರುತ್ತದೆ, ನೀವು ವಾಪಸ್ ಬನ್ನಿ ಎಂದು ಹೇಳುತ್ತಿದ್ದೇನೆ. ಅದಾದ ನಂತರ ಯಾರು ಬರೀ ಎಸ್.ಸಿ., ಸರ್ಟಿಫಿಕೇಟ್ ಇಟ್ಟುಕೊಂಡು ನೀವು ಬೇರೆ ಧರ್ಮಕ್ಕೆ ಹೋಗಿ ಕಳ್ಳತನದಲ್ಲಿ ಬದುಕಬೇಡಿ. ನಿಮ್ಮನ್ನು ನೀವು ಧೈರ್ಯವಾಗಿ ಘೋಷಣೆ ಮಾಡಿಕೊಳ್ಳಿ. ನೀವು ಯಾವ ಧರ್ಮಕ್ಕೆ ಹೋಗಬೇಕೆಂದು ತೀರ್ಮಾನ ಮಾಡಿದ್ದರೆ ಅದನ್ನು ಘೋಷಣೆ ಮಾಡಿಕೊಳ್ಳಿ. ಇಲ್ಲದಿದ್ದರೆ ನಾನು ಸರ್ಕಾರಕ್ಕೂ ಒತ್ತಾಯ ಮಾಡುತ್ತಿದ್ದೇನೆ, ಯಾರು ಸರ್ಟಿಫಿಕೇಟ್‌ಗೆ ಮಾತ್ರ ಎಸ್.ಸಿ., ಆಗಿ ಹೊರಗಡೆ ಬೇರೆ ಧರ್ಮ ಮಾಡಿಕೊಂಡಿದ್ದರೆ ಅವರಿಗೆ ಕೊಡತಕ್ಕಂಥ ಸವಲತ್ತುಗಳನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ, ಪರಿಶಿಷ್ಟ ಜಾತಿಯ ಜನರು ಇವತ್ತು ಹಳ್ಳಿಗಾಡಿನಲ್ಲಿ ಇನ್ನೂ ಸವಲತ್ತುಗಳು ಸಿಗದೆ ಪರಿತಪಿಸಿರುವಂತಹ ಸಂದರ್ಭಗಳಿವೆ. ಇವತ್ತೇನು ಸರ್ಕಾರಗಳು ನಮಗೆ ಹಣವನ್ನು ಕೊಡುತ್ತಿದೆ ಅದು ಅಲ್ಲಿಯವರೆಗೆ ಮುಟ್ಟುತ್ತಿಲ್ಲ. ಯಾರು ನಕಲಿ ಪತ್ರಗಳನ್ನಿಟ್ಟುಕೊಂಡು ಧರ್ಮಾಂತರ ಮಾಡಿಕೊಂಡಿದ್ದಾರೆಯೋ ಅವರೇ ಇನ್ನೂ ಕಬಳಿಸಿ ತಿನ್ನತಕ್ಕಂಥ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ನಾನು ಸರ್ಕಾರಕ್ಕೆ ಮನವಿ ಮಾಡುತ್ತಿದ್ದೇನೆ, ಸರ್ಕಾರ ಎಲ್ಲರನ್ನು books ಗೆ ತರಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಏಕೆಂದರೆ, ತೊಂದರೆಗೀಡಾಗುತ್ತಿರುವುದು ನನ್ನ ಜನ. ಈಗ ಡಾ:ಬಿ.ಆರ್.ಅಂಬೇಡ್ಕರ್‌ರವರು ಇದ್ದರೂ ಕೂಡ ಇದೇ ಮಾತನ್ನು ಹೇಳುತ್ತಿದ್ದರು. ನಮ್ಮಲ್ಲಿ ಬೌದ್ಧ ಧರ್ಮಕ್ಕೆ ಬಹಳಷ್ಟು ಜನರು ಸೇರಿಕೊಂಡಿದ್ದಾರೆ. ನಾವು ಅವರನ್ನು ವಿರೋಧ ಮಾಡುವುದಿಲ್ಲ. ಏಕೆಂದರೆ, ಅದು ಡಾ:ಬಿ.ಆರ್.ಅಂಬೇಡ್ಕರ್‌ರವರು ತೋರಿಸಿ ಕೊಟ್ಟಿರುವಂತಹ ಮಾರ್ಗ. ಬೌದ್ಧಧರ್ಮ ನಮ್ಮ ಹಿಂದುತ್ವದ ಮತ್ತೊಂದು ಭಾಗ ಅಷ್ಟೆ. ನಮಗೇನು ತೊಂದರೆ ಇಲ್ಲ. ಅಲ್ಲಿಗೆ ಹೋದರೂ ಕೂಡ ನಮಗೆ ಮೀಸಲಾತಿಯ ತೊಂದರೆ ಏನು ಇಲ್ಲ. ನಮಗೆ ಮೀಸಲಾತಿ ಅಲ್ಲಿಯೂ ಕೂಡ ಸಿಗುತ್ತಿದೆ. ಒಂದು ಸಮಯ ಅದು ಇಲ್ಲದಿದ್ದರೆ ನಾವು ಅಲ್ಲಿಗೆ ಹೋಗುವುದು ತಪ್ಪಾಗುತ್ತಿತ್ತು. ಆದರೆ ಡಾ:ಬಿ.ಆರ್.ಅಂಬೇಡ್ಕರ್‌ರವರೇ ಇವತ್ತು ನಮಗೆ ಆ

ಮಾರ್ಗವನ್ನು ತೋರಿಸಿ ಹೋಗಿದ್ದಾರೆ. ನಾವು ಅದೊಂದನ್ನು ಬಿಟ್ಟು ಬೇರೆ ಯಾವುದೇ ಧರ್ಮಕ್ಕೆ ಪರಿಶಿಷ್ಟ ಜಾತಿ ವರ್ಗಗಳು ಸೇರುವುದನ್ನು ನಾನು ಕೂಡ ವಿರೋಧ ಮಾಡುತ್ತೇನೆ. ಆದ್ದರಿಂದ ಇವತ್ತಿನ ದಿವಸ ನಾನು ಹೇಳುವುದೇನೆಂದರೆ, ಯಾರು ಕೂಡ ಮತ್ತೊಂದು ಧರ್ಮ ಸ್ವೀಕಾರ ಮಾಡುವವರನ್ನು ವಿರೋಧ ಮಾಡತಕ್ಕಂಥ ವಿಧೇಯಕ ಇದಲ್ಲ. ಇದು ಕೇವಲ ಅವರ ಹಕ್ಕನ್ನು ರಕ್ಷಣೆ ಮಾಡತಕ್ಕಂಥ ವಿಧೇಯಕವಾಗಿದೆ. ಆದರೆ ಷರತ್ತುಗಳೇನೆಂದರೆ, ನೀವು ಆಸೆ, ಆಮಿಷಗಳಿಗೆ ಬೀಳಬೇಡಿ. ನೀವು ಆಕರ್ಷಣೆಗಳಿಗೆ ಬಿದ್ದರೆ ಮುಂದೆ ದಾರಿ ತಪ್ಪಿದ ಮಕ್ಕಳಾಗುತ್ತೀರಿ. ಆ ಕಾರಣಗಳಿಂದಾಗಿ ಇವತ್ತು ಲವ್ ಜಿಹಾದ್ ಕೂಡ ನಡೆಯುತ್ತಿದೆ. ಅದನ್ನು ಅನೇಕ ರೀತಿಯಲ್ಲಿ ವಿವರಣೆ ಮಾಡಬಹುದು. ಅದರಿಂದ ಆಗುತ್ತಿರುವಂತಹ ತೊಂದರೆಗಳೇನು ಅದನ್ನು ನಾವು ನೋಡಿದ್ದೇವೆ. ಚಿತಾಪುರ ನನ್ನ ಕ್ಷೇತ್ರವಾಗಿದೆ. ಅಲ್ಲಿ ಇತ್ತೀಚೆಗೆ ಒಂದು ಘಟನೆ ಆಯಿತು, ಒಬ್ಬ ಹಿಂದೂ ಹುಡುಗ ಮುಸಲ್ಮಾನ್ ಹೆಣ್ಣುಮಗಳನ್ನು ಪ್ರೀತಿ ಮಾಡಿಬಿಟ್ಟ, ಪ್ರೀತಿ ಮಾಡಿದ ತಕ್ಷಣ ಬೀದಿಯಲ್ಲೇ ಕಡಿದುಬಿಟ್ಟರು. ಮರ್ಡರ್ ಆಗಿ ಹೋಯಿತು. ಮುಂದೆ ಏನು ಕಾನೂನು ಕ್ರಮ ಇರುತ್ತದೆಯೋ ಅದು ನಡೆಯುತ್ತದೆ. ಅದು ಬೇರೆ ವಿಚಾರ. ಅದೇ ನಮ್ಮ ಹೆಣ್ಣುಮಗಳನ್ನು ಅವರು ಮದುವೆ ಮಾಡಿಕೊಂಡು ಹೋದರೆ ನಾವು ಯಾರು ಕೇಳುವುದಿಲ್ಲ. ಅದು ಬೇರೆ ರೀತಿಯಾಗುತ್ತಿದೆ. ಆದರೆ ಅವರ ಹೆಣ್ಣುಮಕ್ಕಳನ್ನು ನಾವು ಯಾರಾದರು ದಲಿತರು ಮದುವೆಯಾದರೆ ಬೀದಿಯಲ್ಲಿ ಕಡಿದುಬಿಡುತ್ತಾರೆ. ಈ ರೀತಿ ಏಕೆ? ಇಷ್ಟೊಂದು ಅಪ್ಪುಗೆ ಮಾಡಿಕೊಳ್ಳುವಂಥವರು, ಇವೆಲ್ಲಾ ಆಗಬಾರದು ಎನ್ನತಕ್ಕಂಥವರು ಕುಳಿತು ತೀರ್ಮಾನ ತೆಗೆದುಕೊಂಡು ಆಗಿದ್ದಾಗಿದೆ, ನಿಮ್ಮ ಕೆಲಸ ನಿಮ್ಮ ದಾರಿ ನೀವು ಮಾಡಿ, ನಾವು ನಿಮ್ಮನ್ನು ಒಪ್ಪಿಕೊಂಡಿದ್ದೇವೆ, ನಾವು ಸೇರಿಸಿಕೊಂಡಿದ್ದೇವೆ ಎಂದು ಏಕೆ ಹೇಳುವುದಿಲ್ಲ? ಹೇಳುವುದು ಮಾತ್ರ ಬೇರೆ. ಆದರೆ ಮಾಡುವುದೇ ಬೇರೆ. ಇದು ಸಮಾಜದಲ್ಲಿ ಆಗಬಾರದು. ನಾನು ಈ ವಿಧೇಯಕದ ಪರವಾಗಿದ್ದೇನೆ. ಇವತ್ತೇನು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ ಅದನ್ನು ನಾನು ಒಪ್ಪುತ್ತೇನೆ. ಆದ್ದರಿಂದ ನನ್ನ ಜನ ಇವತ್ತು ಆಕರ್ಷಣೆಗೆ ಬೀಳಬಾರದು, ದಾರಿ ತಪ್ಪಬಾರದು. ಒಂದು ಸಮಯ ನೀವೇನಾದರೂ ಹೋಗಲೇಬೇಕೆಂದು ತೀರ್ಮಾನ ಮಾಡಿದ್ದರೆ ಅರ್ಜಿ ಕೊಡಿ, ಜಾಗ ಖಾಲಿ ಮಾಡಿ. ನೀವು ಯಾರು ಈಗಾಗಲೇ

ಹೋಗಿದ್ದೀರಿ, ತಪ್ಪಾಗಿಬಿಟ್ಟಿದೆ, ನೀವು ಅದಕ್ಕೂ ಕೂಡ ವಾಪಸ್ ಬರಬೇಕೆಂದು ಇದ್ದರೆ ಹೇಳಿ, ನಾನು ನಮ್ಮ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಇಲ್ಲಿ ಘರ್‌ವಾಪ್ಸಿ ಮಾಡಿ ಕೊಡತಕ್ಕಂಥ ಕೆಲಸಗಳನ್ನು ಮಾಡುವುದಕ್ಕೆ ಅವಕಾಶ ಇದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ದಿನ ಸರ್ಕಾರದವರು ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕವನ್ನು ತಂದಿದ್ದಾರೆ. ಈಗಾಗಲೇ ಇದನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದಿದ್ದಾರೆ. ಆದರೂ ನಮ್ಮ ಸಂವಿಧಾನದ ನಿಯಮಾವಳಿ ಪ್ರಕಾರ ಈ ಸದನದ ಒಪ್ಪಿಗೆಯನ್ನು ಪಡೆಯುವುದಕ್ಕೆ ವಿಧೇಯಕವನ್ನು ತಂದಿದ್ದಾರೆ. ಈಗಾಗಲೇ ಮಾನ್ಯ ಗೃಹ ಸಚಿವರು ಈ ವಿಧೇಯಕದ ಬಗ್ಗೆ ಸಂಪೂರ್ಣವಾದಂತಹ ವಿವರಣೆಯನ್ನು ಕೊಟ್ಟಿದ್ದಾರೆ. ಮತಾಂತರಕ್ಕೆ ನಾವು ಎಲ್ಲೂ ಕೂಡ ಅಡ್ಡಿಪಡಿಸುತ್ತಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಮತಾಂತರಕ್ಕೆ ನಾವು ಮುಕ್ತವಾದಂತಹ ಅವಕಾಶವನ್ನು ಕೊಟ್ಟಿದ್ದೇವೆ ಎನ್ನುವಂಥದ್ದನ್ನು ಪದೇಪದೇ ಹೇಳಿದ್ದಾರೆ. ಆದರೆ ಮತಾಂತರ ಎಂದು ಹೇಳಿದರೆ, ಈ ದೇಶಕ್ಕೆ ಸಂವಿಧಾನ ಕೊಟ್ಟಂಥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಕೂಡ ಮತಾಂತರ ಹೊಂದಿದ್ದಾರೆ. ನಮ್ಮ ದೇಶದ ಸಂವಿಧಾನ ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನತಕ್ಕಂಥದ್ದನ್ನು ನಮಗೆ ಕೊಟ್ಟಿದೆ. ಪ್ರತಿಯೊಬ್ಬ ವ್ಯಕ್ತಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟಿದೆ. ಈ ಮತಾಂತರ ಆಗುವಂತಹ ಸಂದರ್ಭದಲ್ಲಿ ನಾವು ನಮ್ಮ ಸ್ವಇಚ್ಛೆಯಿಂದ ಮತಾಂತರ ಆಗುವಂಥದ್ದು. ಪ್ರಚೋದನೆ ಮಾಡುತ್ತಾರೆ, ವಂಚನೆ ಮಾಡುತ್ತಾರೆ, ಸುಳ್ಳು ಆಶ್ವಾಸನೆ ಕೊಡುತ್ತಾರೆ, ಮೋಸ ಮಾಡಿ ನಿಮ್ಮನ್ನು ಬಲವಂತವಾಗಿ ಮತಾಂತರ ಮಾಡುತ್ತಾರೆ ಎನ್ನುವುದು ವಿಧೇಯಕದಲ್ಲಿರುವಂಥದ್ದು. ಇಂತಹ ವಿಷಯದಲ್ಲಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಎಲ್ಲೂ ಕೂಡ ಬಲವಂತವಾಗಿ ನನ್ನನ್ನು ಮತಾಂತರ ಮಾಡಿದರು ಎನ್ನತಕ್ಕಂಥ ದೂರುಗಳಿಲ್ಲ. ಆದರೆ ಮಾನ್ಯ ಸಚಿವರು ಒಂದು ಕಾಯ್ದೆಯನ್ನು ತಂದಿದ್ದಾರೆ. ಮತಾಂತರಕ್ಕೆ ಅವಕಾಶ ಕೊಡುತ್ತೇವೆ, ಆದರೆ ಮತಾಂತರ ಮಾಡುವಾಗ ವಂಚನೆ, ಮೋಸ ಮಾಡಬಾರದು, ದಬ್ಬಾಳಿಕೆ, ದೌರ್ಜನ್ಯ ಮಾಡಬಾರದು,

ಅದನ್ನು ನಿಷೇಧ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಎಲ್ಲೋ ಒಂದು ಕಡೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂವಿಧಾನಕ್ಕೆ ವಿರೋಧವಾದಂತಹ ಕಾಯ್ದೆ ಎನ್ನುವಂಥದ್ದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅದು ಹೇಗೆಂದರೆ, ವಿಧೇಯಕದ ಪ್ಯಾರ 4 ರಲ್ಲಿ, “ದೂರನ್ನು ದಾಖಲಿಸಲು ಸಕ್ಷಮನಾದ ವ್ಯಕ್ತಿ-ಯಾರೇ ಮತಾಂತರಗೊಂಡ ವ್ಯಕ್ತಿ, ಆತನ ಪಾಲಕರು, ಸೋದರ, ಸೋದರಿ ಅಥವಾ ಆತನಿಗೆ ರಕ್ತ ಸಂಬಂಧಿ, ಮದುವೆ ಅಥವಾ ದತ್ತು ಮೂಲಕ ಸಂಬಂಧಿಯಾದ ಅಥವಾ ಯಾವುದೇ ರೂಪದಲ್ಲಿ ಸಹವರ್ತಿ ಅಥವಾ ಸಹೋದ್ಯೋಗಿಯಾದ ಇತರ ಯಾರೇ ವ್ಯಕ್ತಿಯು 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವಂಥ ಮತಾಂತರದ ಬಗ್ಗೆ ದೂರನ್ನು ದಾಖಲು ಮಾಡಬಹುದು” ಎಂದು ಹೇಳಿದ್ದಾರೆ. ಹೀಗೆ ಹೇಳಿದರೆ ಇದು ಸಂವಿಧಾನ ವಿರೋಧಿಯಲ್ಲವೇ? ಈಗ ನನ್ನ ಕುಟುಂಬದಲ್ಲಿ ನಾನು ಮತಾಂತರ ಹೊಂದಬೇಕು. ಅದು ನನ್ನ ಇಚ್ಛೆಯಾಗಿರುತ್ತದೆ. ನಾನು ಮತಾಂತರ ಪಡೆಯುತ್ತೇನೆ. ಆದರೆ ನನ್ನ ಹೆಂಡತಿಗೆ ಇಚ್ಛೆಯಿಲ್ಲ. ನನ್ನ ಮಕ್ಕಳಿಗೆ ಇಚ್ಛೆಯಿಲ್ಲ. ನನ್ನ ಸಹೋದರರಿಗೆ ಇಚ್ಛೆಯಿಲ್ಲ. ನನ್ನ ಸಹೋದರಿಯರಿಗೆ ಇಚ್ಛೆಯಿಲ್ಲ. ಸಹೋದರ, ಸಹೋದರಿ, ರಕ್ತ ಸಂಬಂಧ ಇವರೆಲ್ಲರನ್ನು ಬಿಟ್ಟುಬಿಡಿ. ಸಹಪಾಠಿಗಳು, ನನ್ನ ಮಿತ್ರರು, ಯಾರಾದರೂ ಸರಿ ಈ ರಾಜ್ಯದ ನಾಗರಿಕರು ಮರಿತಿಬ್ಬೇಗೌಡ ಮತಾಂತರ ಆಗುತ್ತಿರುವುದು ಸರಿಯಿಲ್ಲವೆಂದರೆ ವಿಚಾರಣೆಗೆ ಗುರಿಪಡಿಸುತ್ತೇವೆಂದು ಈ ಕಾಯ್ದೆಯಲ್ಲಿ ತಂದಿದ್ದಾರಲ್ಲಾ ಇದರ ಬಗ್ಗೆ ನಾನು ಹೇಳುತ್ತಿರುವಂಥದ್ದು. ಇದು ಸಂವಿಧಾನದ ವಿರೋಧಿ ಎಂದು ನಾನು ಹೇಳುತ್ತಿದ್ದೇನೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ವಿರೋಧವಾಗಿದೆ. ನನ್ನನ್ನು ಬಲವಂತವಾಗಿ ಮತಾಂತರ ಮಾಡಿದರು, ಮೋಸ ಮಾಡಿದರು, ಆಸೆ ಹುಟ್ಟಿಸಿದರು ಎನ್ನುವಂತಹ ದೂರು ಬಂದರೆ ಈ ಕಾನೂನು ಚೌಕಟ್ಟಿನಲ್ಲಿ ಶಿಕ್ಷೆಗೆ ಗುರಿ ಮಾಡಲಿ. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ನನಗೆ ಹಕ್ಕು, ಸ್ವಾತಂತ್ರ್ಯವಿದೆ. ನಾನು ಯಾವುದೇ ಧರ್ಮವನ್ನು ಸೇರುವುದಕ್ಕೆ ಸಂವಿಧಾನದಲ್ಲಿ ನನಗೆ ಅವಕಾಶ ಕೊಟ್ಟಿದೆ. ಈ ವಿಧೇಯಕದಲ್ಲಿ ನನ್ನ ಸ್ವಾತಂತ್ರ್ಯವನ್ನೇ ಮೊಟಕುಗೊಳಿಸುವಂಥದ್ದು ಆಗುತ್ತಿದೆ. **(ಮುಂದು)**

**(೮೫೮) 4:50 15/09/2022 ಎಸ್‌ಪಿಆರ್/ಎಂಡಿ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಮರಿತಿಬ್ಬೇಗೌಡ(ಮುಂದು)**

ಈ ನಾಡಿನ ಪ್ರಜೆಯಾಗಿ ಯಾರಾದರೂ ಸರಿ, ನನ್ನ ಸ್ನೇಹಿತರೊಬ್ಬರು ನಾನು ಮತಾಂತರಗೊಳ್ಳುತ್ತಿರುವುದು ಸರಿ ಇಲ್ಲ ಎಂದು ಹೇಳಿ ದೂರನ್ನು ನೀಡಿದರೆ, ಆಗ ಮತಾಂತರಗೊಂಡ ವ್ಯಕ್ತಿಯನ್ನು ವಿಚಾರಣೆಗೊಳಪಡಿಸಿ, ಶಿಕ್ಷೆಗೊಳಪಡಿಸಲಾಗುತ್ತದೆ. ವಿಧೇಯಕದ ಪ್ರಕರಣ (4) ರಲ್ಲಿ ಈ ಬಗ್ಗೆ ಸ್ಪಷ್ಟಪಡಿಸಲಾಗಿದೆ. ರಕ್ತ ಸಂಬಂಧಿ, ಸ್ನೇಹಿತ ಅಥವಾ ಯಾರಾದರೂ ದೂರನ್ನು ಸಲ್ಲಿಸಿದರೆ, ಆ ವ್ಯಕ್ತಿಯು ಮತಾಂತರಗೊಳ್ಳುವಂತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀ ಮರಿತಿಬ್ಬೇಗೌಡ ಹಾಗೂ ನನಗೂ ಸ್ನೇಹವಿದೆ. ಸದಸ್ಯರಿಗೆ ಇರುವ ಆತಂಕ ಮತ್ತು ಜಿಜ್ಞಾಸೆಗಳನ್ನು ಅವರು ಉಲ್ಲೇಖಿಸಿದ್ದಾರೆ. ಯಾರಿಗೆ ಈ ದೂರುಗಳು ಅನ್ವಯಿಸುತ್ತವೆ ಎಂದರೆ, ಮತಾಂತರಗೊಳ್ಳುವ ವ್ಯಕ್ತಿಯ ಸಂಬಂಧಿಕರು, ಪತ್ನಿ, ಮಗ, ಸಹೋದರ ಅಥವಾ ಬಂಧುಗಳು ಯಾರಾದರೂ ಸಹ ದೂರು ನೀಡಿದರೆ, ತನಿಖೆಗೊಳಪಡಿಸಲಾಗುತ್ತದೆ ಎಂದು ತಿಳಿಸಲಾಗಿದೆ. ಆದರೆ, ಇಲ್ಲಿ ಎಂತಹ ಪ್ರಕರಣಗಳು ಎಂದರೆ, ವಂಚನೆ ಹಾಗೂ ಮೋಸದ ಮತಾಂತರ ಆಗಿದೆ ಎಂದು ಅವರುಗಳಿಗೆ ಅನ್ನಿಸಿದರೆ, ಅಂತಹವರ ಸಂಬಂಧಿಕರು ದೂರನ್ನು ಸಲ್ಲಿಸಬಹುದು ಎಂಬುದಾಗಿ ಮಾತ್ರವೇ ವಿಧೇಯಕದಲ್ಲಿ ತಿಳಿಸಲಾಗಿದೆ. ಇದನ್ನು ಹೊರತುಪಡಿಸಿ, ಬೇರೆ ಇನ್ನೇನೂ ಇಲ್ಲ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇಲ್ಲಿ ವಂಚನೆ ಎನ್ನುವುದು ಅಲ್ಲ. ವಂಚನೆಯಾಗಿದೆ ಎಂದು ಮತಾಂತರಗೊಳ್ಳುವ ವ್ಯಕ್ತಿಯು ದೂರನ್ನು ನೀಡಬೇಕು. ನನ್ನನ್ನು ಮೋಸ ಮಾಡಿ, ಆಮಿಶವೊಡ್ಡಿ ಮತಾಂತರಗೊಳಿಸಿದ್ದಾರೆ ಎಂದು ಆ ವ್ಯಕ್ತಿಯು ತಿಳಿಸಬೇಕು. ಯಾವುದೇ ವ್ಯಕ್ತಿಯು ಮತಾಂತರಗೊಳ್ಳುತ್ತಿರುವುದು ಸರಿ ಇಲ್ಲ ಎಂಬುದಾಗಿ ಆ ವ್ಯಕ್ತಿಯ ಕುಟುಂಬದ ಬೇರೆ ಸದಸ್ಯರು ಅಥವಾ ಸ್ನೇಹಿತರು ಇಲ್ಲಿ ದೂರು

ನೀಡುವುದಲ್ಲ. ವಿಧೇಯಕದಲ್ಲಿ ಏನು ತಿಳಿಸಲಾಗಿದೆ ಎಂದು ಸಭಾನಾಯಕರು ಸ್ಪಷ್ಟವಾಗಿ ನೋಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಆರೂವರೆ ಕೋಟಿ ಜನರು ಶ್ರೀ ಮರಿತಿಬ್ಬೇಗೌಡರಂತೆ ಸಮರ್ಥರು ಮತ್ತು ಶಕ್ತಿಶಾಲಿಗಳಾಗಿರಲು ಸಾಧ್ಯವಿಲ್ಲ. ಮುಗ್ಧ ವ್ಯಕ್ತಿಯನ್ನು ವಂಚಿಸಿ ಮತಾಂತರಗೊಳಿಸಿದ್ದಾರೆ ಎಂದು ಆತನ ಬಂಧುಗಳಿಗೆ ಅನ್ನಿಸಿದರೆ, ಸತ್ಯವನ್ನು ಪರಿಶೀಲಿಸಿ ಎಂದು ದೂರನ್ನು ನೀಡಬಹುದು ಎಂಬುದಾಗಿರುತ್ತದೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇದರಿಂದಾಗಿ ಏನು ಆಗುತ್ತದೆ ಎಂದರೆ,...

**ವೈಸ್ ಛೇರ್ಮನ್:–** ಸಭಾನಾಯಕರು ಸರ್ಕಾರದ ಆಶಯವನ್ನು ತಿಳಿಸುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇದರಿಂದಾಗಿ ದೊಡ್ಡ ಮಟ್ಟದ ದುರುಪಯೋಗವಾಗುತ್ತದೆ. ಆಗ ಮತಾಂತರಗೊಳ್ಳಬೇಕಾದರೆ, ಅಪಾರ ಪ್ರಮಾಣದ ಲಂಚವನ್ನು ನೀಡಬೇಕಾಗುತ್ತದೆ. ಇದರಿಂದ ಮತಾಂತರಗೊಳ್ಳುತ್ತಿರುವ ವ್ಯಕ್ತಿಯ ಬಗ್ಗೆ ಸಂಬಂಧಿಕರು ಅಥವಾ ಯಾರೂ ಸಹ ದೂರನ್ನು ಸಲ್ಲಿಸಬೇಡಿ ಎಂಬ ಅರ್ಥವಾಗುತ್ತದೆ ಹಾಗೂ ಅವರುಗಳಿಗೆ ಲಂಚವನ್ನು ನೀಡಬೇಕಾಗುತ್ತದೆ.

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಇಲ್ಲಿರುವ ತಪ್ಪನ್ನು ನಾನು ಸರಿಪಡಿಸುತ್ತೇನೆ. ಯಾವುದೇ ವ್ಯಕ್ತಿ ಮತಾಂತರಗೊಳ್ಳುವುದಕ್ಕೆ ವೈಯಕ್ತಿಕವಾದ ಸ್ವಾತಂತ್ರವಿದೆ. ಇದನ್ನು ಎಲ್ಲಿಯೂ ಸಹ ಮೊಟಕುಗೊಳಿಸಿಲ್ಲ. ಆದರೆ, ಮತಾಂತರಗೊಳ್ಳುವ ವ್ಯಕ್ತಿಯು ತನ್ನ ಮೂಲ ಜಾತಿಯನ್ನು ಕಳೆದುಕೊಳ್ಳಬೇಕು. ಏಕೆಂದರೆ, ಇಲ್ಲಿ ಸರ್ಕಾರ ನೀಡುವ ಅನೇಕ ಸೌಲಭ್ಯಗಳ ಪ್ರಶ್ನೆ ಇದೆ. ಆ ವ್ಯಕ್ತಿಯ ನೇಮಕಾತಿ ಹಾಗೂ ಪದೋನ್ನತಿಯ ಸಂದರ್ಭಗಳಲ್ಲಿರುವ ಮೀಸಲಾತಿಯ ಪ್ರಶ್ನೆಯು ಇಲ್ಲಿದೆ. ಶ್ರೀ ನಾರಾಯಣಸ್ವಾಮಿಯವರು

ಮಾತನಾಡುವ ಸಂದರ್ಭದಲ್ಲಿ ಪ್ರಸ್ತಾಪಿಸಿದಂತೆ, ಮತಾಂತರಗೊಳ್ಳುವ ವ್ಯಕ್ತಿಯು ನೇರವಾಗಿ ಹೋಗಬೇಕು. ಏಕೆಂದರೆ, ಆತನಿಗೆ ಆ ಧರ್ಮದಲ್ಲಿ ಇಚ್ಛೆ ಇಲ್ಲ; ಹೀಗಾಗಿ ಮತ್ತೊಂದು ಧರ್ಮಕ್ಕೆ ಹೋಗಲು ಸ್ವಾತಂತ್ರವಿದೆ. ಆದರೆ, ಈ ಮತಾಂತರದ ಬಗ್ಗೆ ಘೋಷಿಸಿದರೆ ಸಾಕು. ಇದಕ್ಕೆ ಯಾರದ್ದೂ ಸಹ ಆಕ್ಷೇಪಣೆ / ತಡೆಗಟ್ಟುಗಳಿಲ್ಲ. ಆ ವ್ಯಕ್ತಿಯು ಸ್ವ ಇಚ್ಛೆಯಿಂದ ತನ್ನ ಹೆಂಡತಿ ಮತ್ತು ಮಕ್ಕಳನ್ನು ಬಿಟ್ಟು ತಾನೊಬ್ಬನೇ ಮತಾಂತರಗೊಳ್ಳಬಹುದು. ಇದಕ್ಕೆ ಯಾವುದೇ ರೀತಿಯಾದ ತೊಂದರೆಗಳಿಲ್ಲ. ಮಾನ್ಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಎರಡು ವಿಷಯಗಳ ಬಗ್ಗೆ ಪ್ರಸ್ತಾಪಿಸಿದರು. ಆದರೆ, ಕೆಲವರು ಮತಾಂತರಗೊಂಡ ನಂತರವೂ ಸಹ ಆ ವ್ಯಕ್ತಿಯು ಅದೇ ಹೆಸರನ್ನೇ ಇಟ್ಟುಕೊಳ್ಳುತ್ತಾನೆ ನಂತರದಲ್ಲಿ ಆ ಹೆಸರಿನಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳುತ್ತಾರೆ. ಈ ರೀತಿಯ ಪ್ರಸಂಗಗಳಾಗುತ್ತವೆ. ಉದಾಹರಣೆಗೆ 'ಮರಿತಿಬ್ಬೇಗೌಡ ಫರ್ನಾಂಡಿಸ್' ಎಂದು ಇಟ್ಟುಕೊಳ್ಳುತ್ತಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಅದು 'ಮರಿ ಫರ್ನಾಂಡಿಸ್' ಆಗುತ್ತದೆ. ಏಕೆಂದರೆ ಕ್ರಿಶ್ಚಿಯನ್ ಸಮುದಾಯದಲ್ಲಿ "ಮರಿ ಜೋಸೆಫ್" ಎಂಬ ಹೆಸರುಗಳು ಬಹಳವಾಗಿವೆ.

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಜನಗಣತಿಯಲ್ಲಿ ಯಾವ ಯಾವ ಧರ್ಮದವರು ಎಷ್ಟೆಷ್ಟು ಸಂಖ್ಯೆಯಲ್ಲಿದ್ದಾರೆ ಎಂಬುದರ ಬಗ್ಗೆ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿದರು. ಇಂತಹ ವ್ಯಾಪಕವಾದ ವಂಚನೆಯೂ ಸಹ ಈ ದೇಶದಲ್ಲಿ ನಡೆಯುತ್ತಿದೆ. ಜನಗಣತಿಯ ಸಂದರ್ಭದಲ್ಲಿ ಆ ವ್ಯಕ್ತಿಯು ಇದೇ ಧರ್ಮದಲ್ಲಿದ್ದೇನೆ ಎಂಬ ಮಾಹಿತಿಯನ್ನು ನೀಡುತ್ತಾನೆ. ಆದರೆ ನಿಜವಾಗಿಯೂ ಸಹ ಆತ ಬೇರೆ ಧರ್ಮದ ಆಚರಣೆಯನ್ನು ಮಾಡುತ್ತಿರುತ್ತಾನೆ. ಈ ಹಿನ್ನೆಲೆಯು ಆ ವ್ಯಕ್ತಿಯ ರಕ್ತ ಸಂಬಂಧಿಗಳಿಗೆ ತಿಳಿದಿರುತ್ತದೆ. ನಾನು ಪ್ರತಿನಿಧಿಸುವ ಕ್ಷೇತ್ರದಲ್ಲಿನ ಒಂದು ಉದಾಹರಣೆಯನ್ನು ನಾನು ಈ ಸಂದರ್ಭದಲ್ಲಿ ಉಲ್ಲೇಖಿಸಬಯಸುತ್ತೇನೆ. ಆದರೆ, ಇಲ್ಲಿ ನಾನು ಯಾವುದೇ ಒಂದು ಧರ್ಮದ ಬಗ್ಗೆ ಹೇಳುತ್ತಿಲ್ಲ.

ದಂಪತಿಯೋರ್ವರ ಪೈಕಿ, ಹೆಂಡತಿಯು ಕ್ರಿಶ್ಚಿಯನ್ ಸಮುದಾಯಕ್ಕೆ ಮತಾಂತರಗೊಂಡಳು; ಆದರೆ ಗಂಡ ಮತಾಂತರಗೊಳ್ಳಲಿಲ್ಲ. ಆಗ ಮತಾಂತರಗೊಂಡ ಹೆಂಡತಿಯು ಮನೆಯಲ್ಲಿದ್ದ ತುಳಸಿ ಕಟ್ಟೆಯನ್ನು ತೆಗೆಯುವಂತೆ ಹೇಳಿದಳು. ಆದರೆ ಇದನ್ನು ವಿರೋಧಿಸಿದ ಗಂಡ, ಇದನ್ನು ಪರಂಪರಾಗತವಾಗಿ ಇಲ್ಲಿಟ್ಟುಕೊಂಡು ಬಂದಿದ್ದೇವೆ; ಹೀಗಾಗಿ ತುಳಸಿ ಕಟ್ಟೆಯು ಮನೆಯ ಎದುರುಗಡೆಯೇ ಇರಬೇಕು ಎಂದು ಹೇಳಿದನು. ಈ ರೀತಿಯ ಪರಿಸ್ಥಿತಿಯಿಂದಾಗಿ ಕ್ಷೋಭೆ ನಿರ್ಮಾಣವಾಗಿದೆ. ಮತಾಂತರಗೊಂಡಿರುವ ಬಗ್ಗೆ ಘೋಷಣೆ ಮಾಡಿದರೆ ಸಾಕಾಗುತ್ತದೆ. ಇದರಲ್ಲಿ ಇನ್ನ್ಯಾವುದೇ ರೀತಿಯ ಸಮಸ್ಯೆ ಇಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಗೃಹ ಸಚಿವರು ಮಾತನಾಡುವ ಸಂದರ್ಭದಲ್ಲಿ ಜನಗಣತಿಯ ಅಂಕಿ-ಅಂಶಗಳನ್ನು ನಾನು ನೀಡಿದ್ದೇನೆ, ಹೀಗಾಗಿ ಇದರಲ್ಲಿ ಏನೋ ಇದೆ ಎಂದು ತಿಳಿಸಿದರು. ಈಗ್ಗೆ ಎಂಟು ವರ್ಷಗಳಿಂದ ಸರ್ಕಾರ ಅವರದ್ದೇ ಇದೆ. Registrar General and Census Commissioner ನವರು ಜನಗಣತಿಯನ್ನು ಕೈಗೊಳ್ಳುತ್ತಾರೆ. ಹೀಗಾಗಿ ಸರ್ಕಾರವು ಇವರನ್ನು ತರಾಟೆಗೆ ತೆಗೆದುಕೊಳ್ಳಬೇಕು; ಇದಕ್ಕೆ ಯಾರು ನಿರ್ಭಂದಿಸಿದ್ದಾರೆ?

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಇವರೂ ಸಹ ಏನೂ ಮಾಡುವುದಕ್ಕಾಗುವುದಿಲ್ಲ ಏಕೆಂದರೆ, ....

**Sri B.K.HARIPRASAD:-** No, no. ಹಾಗಾದರೆ ಅವರು ಸರ್ಕಾರವನ್ನು ನಡೆಸುತ್ತಿಲ್ಲವೆನ್ನುವುದು ಇದರರ್ಥ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಜನಗಣತಿಯ ಸಂದರ್ಭದಲ್ಲಿ ಮನೆಗೆ ಬಂದು ನಿಮ್ಮ ಧರ್ಮ ಯಾವುದೆಂದು ಕೇಳಿದಾಗ, ಅವರು ಹೇಳಿದ ಧರ್ಮವನ್ನು ಇಲಾಖೆಯವರು ದಾಖಲಿಸಬೇಕಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಗೃಹ ಸಚಿವರು ನಾನು ಹೇಳುವುದನ್ನು ಕೇಳಬೇಕು. ಕೆಲವರು ತಮ್ಮ ಜಾತಿಗಳನ್ನು ಹೇಳಿಕೊಳ್ಳಲು ಹಿಂದು-ಮುಂದು ನೋಡುತ್ತಾರೆ. ಏಕೆಂದರೆ, ಒಂದು ವೇಳೆ ಆ ವ್ಯಕ್ತಿಯ ಜಾತಿಯ ಹೆಸರನ್ನು ಬಹಿರಂಗಪಡಿಸಿದರೆ, ತಮ್ಮನ್ನು ಕೀಳು ಮಟ್ಟದಲ್ಲಿ ಕಾಣುತ್ತಾರೆ ಎಂಬ ಆತಂಕವು ಅವರಲ್ಲಿದೆ. ಇಂತಹ ಪರಿಸ್ಥಿತಿಗಳೂ ಸಹ ಸಮಾಜದಲ್ಲಿವೆ. ಆದ್ದರಿಂದ ಅಧಿಕಾರದಲ್ಲಿರುವ ಸರ್ಕಾರವು Office of the Registrar General of Census Commissioner ಎನ್ನುವ ಸಂವಿಧಾನಿಕ ಸಂಸ್ಥೆಯನ್ನು ತರಾಟೆಗೆ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ನನ್ನ ಸ್ನೇಹಿತರಾದ ಶ್ರೀ ನಾರಾಯಣಸ್ವಾಮಿರವರು ಪ್ರಸ್ತಾಪಿಸಿದಂತೆ.... ಸರ್ಕಾರವು ಸರಿಯಾದ ಅಂಕಿ-ಅಂಶವನ್ನು ನೀಡಬೇಕು.

**ವೈಸ್ ಛೇರ್ಮನ್:-** ಗೃಹ ಸಚಿವರೇ, ಸರ್ಕಾರದ ಯೋಜನೆಗಳು ಸಫಲವಾಗಿ ತಲುಪಬೇಕಾದರೆ, ಸರ್ಕಾರವು ಕಾಲ ಕಾಲಕ್ಕೆ ಅಂಕಿ-ಅಂಶಗಳನ್ನು ಅತೀ ಶೀಘ್ರವಾಗಿ ಪಡೆದುಕೊಳ್ಳುವುದು ಒಳ್ಳೆಯದು.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, 10 ವರ್ಷಗಳಿಗೊಮ್ಮೆ ಜನಗಣತಿಯನ್ನು ಮಾಡಲಾಗುತ್ತದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕಳೆದ 75 ವರ್ಷಗಳಿಂದ ಜನಗಣತಿಯು ನಡೆಯುತ್ತಲೇ ಇದೆ. ಶೇಕಡಾ 1.6 ರಿಂದ ಶೇಕಡಾ 1.8 ರ ವರೆಗೆ ಕ್ರಿಶ್ಚಿಯನ್

ಸಮುದಾಯವು ಏರಿಕೆಯಾಗಲೇ ಇಲ್ಲ. ಶೇಕಡಾ 13 ರಿಂದ ಶೇಕಡಾ 16 ರಷ್ಟು ಮುಸ್ಲಿಂ ಸಮುದಾಯದ ಏರಿಕೆಯಾಗಿದೆ. ಇನ್ನಿತರೆ ಧರ್ಮಗಳನ್ನು ಒಟ್ಟುಗೂಡಿಸಿದರೆ, ಶೇಕಡಾ 20 ಕ್ಕಿಂತಲೂ ಹೆಚ್ಚಿಗೆ ಆಗುವುದೇ ಇಲ್ಲ. ಈ ರೀತಿಯಾಗಿ ಜನಗಣತಿಯು ಕಳೆದ 75 ವರ್ಷಗಳಿಂದ ಕುತಂತ್ರ ನಡೆಯುತ್ತಲೇ ಇದೆಯೇ? ಇದನ್ನು ಯಾರೂ ಸಹ ಒಪ್ಪುವುದಿಲ್ಲ ಏಕೆಂದರೆ, ಇದು "ವ್ಯಾಟ್ಸ್-ಅಪ್ ಯೂನಿವರ್ಸಿಟಿ"ಯ ಕಥೆಯಾಗಿದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಗೃಹ ಸಚಿವರು ಹೇಳಿರುವುದನ್ನು ನಾನು ಒಪ್ಪುತ್ತೇನೆ. ಮತಾಂತರಗೊಂಡ ವ್ಯಕ್ತಿಯು ಮತಾಂತರ ಆದ ಕೂಡಲೇ, ಈ ಹಿಂದೆ ಯಾವುದೇ ಧರ್ಮದಲ್ಲಿದ್ದರೂ ಅದರ ಹಕ್ಕುಗಳನ್ನು ಕಟ್ ಮಾಡಲಾಗುತ್ತದೆ. ಇದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಯಾವುದೇ ಮತಾಂತರಗೊಳ್ಳುವ ವ್ಯಕ್ತಿಯ ಬಗ್ಗೆ ಆತನ ರಕ್ತ ಸಂಬಂಧಿಕರು ಹಾಗೂ ಸ್ನೇಹಿತರೇ ದೂರು ನೀಡಿದರೆ, ಅದನ್ನು ವಿಚಾರಣೆ ಮಾಡಲಾಗುತ್ತದೆ. ಇದೇ ಅಂಶವು ಒಟ್ಟಾರೆಯಾಗಿ ವಿಧೇಯಕದಲ್ಲಿದೆ. ಇದರಿಂದ ಯಾವುದೇ ವ್ಯಕ್ತಿಯು ಯಾವುದೇ ಧರ್ಮಕ್ಕೆ ಮತಾಂತರಗೊಳ್ಳುವುದಕ್ಕೆ ಸ್ವಾತಂತ್ರ್ಯವಿಲ್ಲದಂತಾಗುತ್ತದೆ. ಸಚಿವರು ಪ್ರಸ್ತಾಪಿಸಿರುವ ಎಲ್ಲಾ ಅಂಶಗಳನ್ನು ನಾನು ಒಪ್ಪುಕೊಳ್ಳುತ್ತೇನೆ. ಈ ಬಗ್ಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರೂ ಸಹ ಸ್ಪಷ್ಟಪಡಿಸಿದ್ದು, ಅದನ್ನೂ ಸಹ ನಾನು ಒಪ್ಪಿಕೊಳ್ಳುತ್ತೇನೆ. ಯಾವುದೇ ಪ್ರಜೆ ಅಥವಾ ಮತಾಂತರಗೊಳ್ಳುವ ವ್ಯಕ್ತಿಯ ಸ್ನೇಹಿತರು ದೂರು ನೀಡಿದ ತಕ್ಷಣ, ಆ ವ್ಯಕ್ತಿಯು ಮತಾಂತರಗೊಳ್ಳುವಂತಿಲ್ಲ. ಈ ಬಗ್ಗೆ ವಿಚಾರಣೆಗಳು ಪ್ರಾರಂಭಗೊಳ್ಳುತ್ತವೆ ಹಾಗೂ ಆ ವ್ಯಕ್ತಿಗೆ ಜೈಲು ಶಿಕ್ಷೆಯಾಗುತ್ತದೆ. ಈ ಅಂಶವನ್ನೇ ಮೂಲಭೂತವಾದಿಗಳು ವಿಧೇಯಕದಲ್ಲಿ ತಂದಿರುವುದ್ದಾಗಿದೆ. ಯಾವುದೇ ಒಂದು ಸಮುದಾಯವನ್ನು ಸರ್ಕಾರವು ಮಾನದಂಡವಾಗಿ ಇಟ್ಟುಕೊಂಡಿದೆ ಎಂಬುದಾಗಿ ನಾನು ಹೇಳುತ್ತಿದ್ದೇನೆ. ಮುಂದುವರೆದು, ಸರ್ಕಾರವು ಪ್ರಸ್ತುತ ವಿಧೇಯಕವನ್ನು ಮಂಡಿಸಿದೆ. ನಮ್ಮ ರಾಜ್ಯದಲ್ಲಿನ ಇದುವರೆವಿಗಿನ ಅಂಕಿ-ಅಂಶಗಳನ್ನು ಪರಿಗಣಿಸೋಣ. ಹೆಚ್ಚು ಮತಾಂತರಗೊಂಡಿರುವ ವ್ಯಕ್ತಿಯು ಯಾವ ಧರ್ಮ-ಜಾತಿಗೆ

ಸೇರಿದವರಾಗಿದ್ದರು ಹಾಗೂ ಅವರುಗಳು ಯಾವ ಧರ್ಮ-ಜಾತಿಗೆ ಮತಾಂತರಗೊಂಡಿದ್ದಾರೆ ಎನ್ನುವುದನ್ನು ನೋಡಬೇಕು. ನನಗೆ ತಿಳಿದ ಮಟ್ಟಿಗೆ ಹಿಂದೂ ಧರ್ಮದಿಂದ ಅದರಲ್ಲೂ ಹೆಚ್ಚು ಹಿಂದುಳಿದ ವರ್ಗ, ದಲಿತ ಸಮುದಾಯದಿಂದ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿರುವ ಸಂಖ್ಯೆಯೇ ಜಾಸ್ತಿ ಇದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಈ ಸಂಗತಿಯನ್ನೇ ಉದ್ದೇಶವಾಗಿಟ್ಟುಕೊಂಡು ಸರ್ಕಾರವು ಪ್ರಸ್ತುತ ವಿಧೇಯಕವನ್ನು ಮಂಡಿಸಲಾಗಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಪ್ರಸ್ತಾಪಿಸಿದಂತೆ, ಕ್ರಿಶ್ಚಿಯನ್ ಧರ್ಮ ..., ಪ್ರಪಂಚದಲ್ಲಿ ಎರಡು ಮಹಾಯುದ್ಧಗಳು ನಡೆದು ರಕ್ತಪಾತಗಳು ಆಗಿರುವುದು ಕ್ರಿಶ್ಚಯನ್ ಸಮುದಾಯದಿಂದಾಗಿ. ಈ ಸಮುದಾಯದಿಂದಾಗಿಯೇ ಜಗತ್ತಿನಲ್ಲಿಯೇ ರಕ್ತಪಾತಗಳಾಗಿದ್ದು. ಎರಡು ಮಹಾಯುದ್ಧಗಳು ಕ್ರಿಶ್ಚಿಯನ್ ಸಮುದಾಯದ ನಡುವೆಯೇ ನಡೆದಿವೆ. ಆದರೆ, ಈ ಅಂಶವನ್ನೇ ನಾವು ಪರಿಗಣಿಸಬಾರದು. ಆದರೆ, ಈ ಸಮುದಾಯದಿಂದಾಗಿ, ಜಗತ್ತಿನಲ್ಲಿ, ನಮ್ಮ ದೇಶ ಮತ್ತು ನಾಡಿನಲ್ಲಿ ಆಗುತ್ತಿರುವ ಸಾಮಾಜಿಕ ಸುಧಾರಣೆಗಳನ್ನೂ ಸಹ ನಾವು ಗಮನಿಸಬೇಕು. ಅದೇ ರೀತಿಯಾಗಿ ಮುಸ್ಲಿಂ ಸಮುದಾಯವನ್ನೂ ಸಹ ಪರಿಗಣಿಸಬೇಕು. ಎಲ್ಲಾ ಧರ್ಮ, ಜಾತಿ, ವರ್ಗಗಳಲ್ಲಿಯೂ ಸಹ ಒಳ್ಳೆಯವರು, ಕೆಟ್ಟವರು, ಕ್ರಿಮಿನಲ್‌ಗಳು, ಸುಧಾರಕರು, ಚಿಂತರಕು ಹೀಗೆ ಎಲ್ಲಾ ರೀತಿಯವರಿದ್ದಾರೆ. ನನ್ನ ಒಂದು ಪ್ರಶ್ನೆ ಏನೆಂದರೆ, ನಾನು ನಮ್ಮ ಅಪ್ಪ, ತಾತ ಇವರುಗಳ ವಿವರಗಳನ್ನು ಹೇಳುತ್ತೇನೆ. ಇವರುಗಳಿಂದ ಮುಂದಕ್ಕೆ ಏನು ಎನ್ನುವುದು ನನಗೆ ಗೊತ್ತಿಲ್ಲ ಹಾಗೂ ನೆನಪೂ ಸಹ ಇಲ್ಲ. ಇತಿಹಾಸವನ್ನು ಓದಿದರೆ ಮಾತ್ರವೇ ನನಗೆ ಅರ್ಥವಾಗುತ್ತದೆ. ನಮ್ಮ ದೇಶ ಹಾಗೂ ಪ್ರಪಂಚದಲ್ಲಿರುವವರೆಲ್ಲರೂ ಸಹ ಕ್ರಾಸ್ ಆಗಿರುವವರೆ ಆಗಿದ್ದಾರೆ. ಒಂದು ಶತಮಾನದ ಹಿಂದೆ ನಾವು ಯಾವ ಜಾತಿಯಲ್ಲಿದ್ದೇವು, ನಮ್ಮ ಪೂರ್ವಿಕರು ಯಾವ ಧರ್ಮದಲ್ಲಿದ್ದರೋ, ಎನ್ನುವುದು ಇವತ್ತಿನ ದಿವಸ ನಮಗೆ ಗೊತ್ತಾಗುತ್ತಿಲ್ಲ. ಎಲ್ಲರೂ ಸಹ ಮಿಕ್ಸ್ ಆಗಿದ್ದೇವೆ. ನಾವುಗಳೆಲ್ಲರೂ ಸಹ ಸಾಚಾ ಅಸಲಿ ಎಂದು ಹೇಳಿಕೊಳ್ಳಲು ಯಾವುದೇ ಮಾಹಿತಿ ಇಲ್ಲ. ಇತಿಹಾಸ ಹೇಳಿದಂತೆ, ಒಬ್ಬೊಬ್ಬರ ರಾಜವಂಶರ ಕಾಲದಲ್ಲಿ ಒಂದೊಂದು ರೀತಿಯಾಗಿ ಈ ಜಗತ್ತನ್ನು ಆಳುತ್ತಿದ್ದರು. ಇದನ್ನು ನಾವು ನೋಡಿದ್ದೇವೆ. ಹಿಂದೂ ಧರ್ಮದವರು ಮತಾಂತರಗೊಂಡು ಮುಸ್ಲಿಂ

ಸಮುದಾಯದವರಾಗಿಲ್ಲವೇ? ಅದೇ ರೀತಿಯಾಗಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯದವರು ಹಿಂದೂಗಳಾಗಿ ಮತಾಂತರಗೊಂಡಿಲ್ಲವೇ? ಅವರುಗಳಿಗೇ ತಿಳಿದಿಲ್ಲ. ಈಗ್ಗೆ ಒಂದು ಶತಮಾನದ ಹಿಂದೆ, ನಾವುಗಳು ಯಾವ ಜನಾಂಗ, ಧರ್ಮದಲ್ಲಿದ್ದೆವೋ ಎನ್ನುವುದು ತಿಳಿದಿಲ್ಲ. ಆದರೆ, ಇವತ್ತಿನ ದಿವಸ ಸರ್ಕಾರವು ಪ್ರಸ್ತುತ ವಿಧೇಯಕವನ್ನು ಮಂಡಿಸಿರುವ ಸನ್ನಿವೇಶದಲ್ಲಿ, ಬಹಳ ತರಾತುರಿಯಲ್ಲಿ ಸರ್ಕಾರವು ಸುಗ್ರೀವಾಜ್ಞೆಯನ್ನು ಹೊರಡಿಸಿರುವ ಪ್ರಸಂಗವನ್ನೆಲ್ಲಾ ನೋಡಿದರೆ, ಎಲ್ಲಿಯೋ ಒಂದು ಕಡೆ ತಳ ಸಮುದಾಯ ….. ಅವರು ಯಾವ ತಳ ಸಮುದಾಯದವರು? ಯಾವ ಹಿಂದುಳಿದ ವರ್ಗ, ದಲಿತರು ಮತಾಂತರಗೊಳ್ಳುತ್ತಿದ್ದಾರೆಯೋ ಅಂತಹವರು ಯಾರೇ ಆಗಲಿ ಅವರ ಆತ್ಮ ಶಾಂತಿಗಾಗಿ, ಬದುಕಿಗಾಗಿ ಒಂದು ಧರ್ಮವನ್ನು ತ್ಯಜಿಸಿ, ಮತ್ತೊಂದು ಧರ್ಮಕ್ಕೆ ಹೋಗುತ್ತಾರೆಯೋ … ಮತಾಂತರಗೊಳ್ಳುವವರು ತಮ್ಮ ಧರ್ಮದಲ್ಲಿ ಹಿಂಸೆ, ಕಿರುಕುಳ ಇದೆ ಎಂದು ಭಾವಿಸಿ, ಮತಾಂತರಗೊಳ್ಳುತ್ತಾರೆ. ಈ ಅಭಿಪ್ರಾಯವು ತಪ್ಪಲ್ಲ. ಇದು ಸಂವಿಧಾನದ ಆಶಯವೂ ಸಹ ಆಗಿದೆ.

**(ಮುಂದು)**

859/15-09-2022/5-00/ಬಿಕೆಪಿ-ಎಂಡಿ (ವೈಸ್ ಛೇರ್ಮನ್ ರವರ ಉಪಸ್ಥಿತಿ)

**ಶ್ರೀ ಮರಿತಿಬ್ಬೇಗೌಡ(ಮುಂದು)**

ಆದರೆ, ಇವತ್ತು ಈ ತಳ ಸಮುದಾಯ ಏನನ್ನು ಬಯಸಿ ಮತಾಂತರ ಹೊಂದುತ್ತಿದ್ದಾರೆನ್ನುವ ಎಲ್ಲಾ ಮಾಹಿತಿ ಸರ್ಕಾರಕ್ಕೆ ಇದೆ. ಅದೆಲ್ಲವನ್ನೂ ಕೂಡ ಒದಗಿಸಿ. ಆ ಸಮುದಾಯ ಮತಾಂತರ ಅಗದೇ ಇರುವ ರೀತಿಯಲ್ಲಿ ಎಲ್ಲಾ ಮೂಲಭೂತ ಸವಲತ್ತುಗಳನ್ನು ಒದಗಿಸುವಂತಹ ಕಾರ್ಯಕ್ರಮವನ್ನು ಸರ್ಕಾರದಿಂದ ಕೊಡಿ. ಆಗ ತನಗೆ ತಾನೇ ಮತಾಂತರ ನಿಲ್ಲುತ್ತದೆ. ಆ ರೀತಿಯಲ್ಲಿ ಆದರೆ, ಮತಾಂತರ ಏತಕ್ಕೆ ಆಗುತ್ತಾರೆಂದರೆ, ಅವರ ಆತ್ಮ ಶಾಂತಿಗಾಗಿ, ನನ್ನ ಬದುಕಿಗಾಗಿ ಎಂದು ಎರಡೇ ಕಾರಣಕ್ಕೆ ಮತಾಂತರ ಹೊಂದುತ್ತಾರೆ. ಬೇರೆ ಯಾವುದೇ ಕಾರಣಕ್ಕೂ ಮತಾಂತರ ಹೊಂದುವುದಿಲ್ಲ. ನನ್ನ ಸಂತೋಷ, ನನ್ನ ಬದುಕು. ಇವತ್ತು ಈ ಕಾಯಿದೆಯನ್ನು ತಂದಿರುವುದರಿಂದ, ಅಂತರ್ ಜಾತಿಯ ವಿವಾಹ, ಅಂತರ್ ಧರ್ಮೀಯ ವಿವಾಹ, ಎಲ್ಲದಕ್ಕೂ ಇದು

ದೊಡ್ಡ ಕಂಟಕ. ಇವತ್ತು ವಿಶ್ವದಲ್ಲಿ ನಾವೆಲ್ಲರೂ ಬದುಕುತ್ತಿದ್ದೇವೆ. ಇವತ್ತು ಅಂತರ್ ಜಾತಿ-ಧರ್ಮಗಳ ಮದುವೆಗಳನ್ನು ನಮ್ಮ ಎಲ್ಲಾ ಸರ್ಕಾರಗಳು ಪ್ರೋತ್ಸಾಹಿಸಬೇಕು. ಇಡಿ ಜಗತ್ತೇ ಒಂದು ಎನ್ನುವಂತಹದ್ದನ್ನು ತರಬೇಕು. ಪಂಪ ಮಹಾ ಕವಿ ಹೇಳಿದಂತೆ " **ಮಾನವ ಒಂದೇ ಜಾತಿ** ಎಂದು ಪರಿಗಣಿಸಬೇಕು. ಈ ಕೆಲಸವನ್ನು ಇವತ್ತು ನಮ್ಮ ಸರ್ಕಾರಗಳು ಮಾಡಬೇಕಾಗಿದೆ. ನೋಡಿ, **ಹಿಂದು ಮೆದುಳು, ಇಸ್ಲಾಂ ದೇಹ, ಕ್ರಿಶ್ಚಿಯನ್ ಚಟುವಟಿಕೆ ಎಂದು ಸ್ವಾಮಿ ವಿವೇಕಾನಂದರವರು ಒಂದು ಕಡೆ ಹೇಳುತ್ತಾರೆ.** ಇವುಗಳು ಮೂರು ಒಂದಾದರೆ, ಇಡಿ ಜಗತ್ತಿನಲ್ಲಿ ಭಾರತ ಮೊದಲನೆ ಸ್ಥಾನದಲ್ಲಿ ಅಭಿವೃದ್ಧಿಯಾಗುತ್ತದೆ. ಇದನ್ನು ನಾನು ಹೇಳಿದ್ದಲ್ಲ. ಸ್ವಾಮಿ ವಿವೇಕಾನಂದರವರು ಹೇಳುತ್ತಾರೆ. ಎಲ್ಲಾ ಧರ್ಮಗಳಲ್ಲೂ ಕೂಡ ಇಸ್ಲಾಂ ಧರ್ಮದಲ್ಲಿ ರಕ್ತಪಾತ ಇದೆ, ಕ್ರಿಶ್ಚಿಯನ್ ಧರ್ಮದಲ್ಲಿ ರಕ್ತಪಾತ ಇದೆ ಎಂದು ಹೇಳುತ್ತಾರೆ. ಆದರೆ, ಹಿಂದೂ ಧರ್ಮದಲ್ಲಿ ರಕ್ತಪಾತ ಇಲ್ಲ, ಸಹಿಸಿಕೊಳ್ಳಲಿಕ್ಕೆ ಆಗದೇ ಇದ್ದಷ್ಟು, ಕಿರುಕುಳ, ಹಿಂಸೆ, ದಬ್ಬಾಳಿಕೆ, ಹಿಂದೂ ಧರ್ಮದಲ್ಲಿದೆ. ಇದು ರಕ್ತಪಾತಕ್ಕಿಂತ ಹಿಂಸಾವಾದ ಎಂದು ಸ್ವಾಮಿ ವಿವೇಕಾನಂದರು ಬರೆದಿದ್ದಾರೆ. ಅದರ ಬಗ್ಗೆ ಮಾಹಿತಿಯನ್ನು ಕೊಡುತ್ತೇನೆ. ಪುಸ್ತಕವನ್ನೇ ತಂದು ತೋರಿಸುತ್ತೇನೆ. ನಾನು ಅದನ್ನು ಓದಿದ್ದೇನೆ. ಇವತ್ತು ಜಗತ್ತಿನಲ್ಲಿ ಸ್ವಾಮಿ ವಿವೇಕಾನಂದರವರು ಹೇಳುತ್ತಾರೆ. ಧರ್ಮ ಎಂದರೆ, ಯಾವುದೋ ಒಂದು ಆಚರಣೆ ಅಷ್ಟೇ ಅಲ್ಲ, ಒಂದು ಒತ್ತು ಊಟಕ್ಕೂ ಇಲ್ಲದಂತಹವರಿಗೆ ಯಾರು ನೆರವಾಗುತ್ತಾರೆ, ಅದೇ ನಿಜವಾದ ಧರ್ಮ. ಆ ಕೆಲಸವನ್ನು ಹೃದಯದಿಂದ ಮಾಡಬೇಕು, ಮೆದುಳಿನಿಂದ ಮಾಡುವುದಲ್ಲ. ಇವತ್ತು ನಾವು ಮಾಡುತ್ತಿರುವುದು ಏನು? ಎಲ್ಲವನ್ನು ಮೆದುಳಿನಿಂದ ಮಾಡುತ್ತಿದ್ದೇವೆ. ಇವರ ಪರವಾಗಿ ಯಾವ ಸರ್ಕಾರವೂ ಸಹ ಹೃದಯದಿಂದ ಮಾಡುತ್ತಿಲ್ಲ.

**ವೈಸ್ ಛೇರ್ಮನ್:-**ಗೌಡರೆ, ತಾವು ಹಿರಿಯ ಸದಸ್ಯರಿದ್ದೀರಿ, ಈ ಬಿಲ್‌ನಲ್ಲಿ ಏನಾಗಬೇಕು, ಏನು ಆಗಬಾರದು ಅಷ್ಟು ಮಾತ್ರ ಹೇಳಿ. ನಿಮ್ಮ ಪಕ್ಷದಿಂದ ಇನ್ನು 10 ಮಂದಿ ಸದಸ್ಯರು ಇದ್ದು, ಅದರಲ್ಲಿ ಇಬ್ಬರು ಸದಸ್ಯರು ಮಾತನಾಡಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಇದು ಬಹಳ ಪ್ರಮುಖವಾದ ವಿಚಾರ.

**ವೈಸ್ ಛೇರ್ಮನ್:-** ಗೌಡರೆ, ಬಹಳ ಚೆನ್ನಾಗಿ ಹೇಳಿದ್ದೀರಿ,

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಇನ್ನು ಸ್ವಲ್ಪ ಸಮಯದಲ್ಲೇ ಮುಗಿಸುತ್ತೇನೆ. ಮಾನ್ಯ ಗೃಹ ಸಚಿವರು ಈ ವಿಚಾರವನ್ನು ಗಮನಿಸಬೇಕು. Leo Tolstoy ರವರು ಏನು ಹೇಳುತ್ತಾರೆಂದರೆ, ಒಂದು ದೇಶ ಸರ್ವನಾಶವಾಗಬೇಕೆಂದರೆ, ಧರ್ಮವೇ ವಿಷಬೀಜ ಎನ್ನುವುದನ್ನು ಒಬ್ಬರು ರಷ್ಯ ಜ್ಞಾನಿ ಹೇಳುತ್ತಾರೆ. ಇದನ್ನು ನಾವು ನೀವು ಎಲ್ಲರೂ ಸೇರಿ ಮಾಡುತ್ತಿದ್ದೇವೆ. ಬಸವಣ್ಣನವರ ಕಾಯಕ ತತ್ವಗಳನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾವು ಮರೆತುಬಿಟ್ಟಿದ್ದೇವೆ. ಬಸವಣ್ಣ "**ಇವನಾರಯ್ಯ, ಇವನಾರಯ್ಯ, ಇವ ನಮ್ಮವ, ಇವ ನಮ್ಮವ**" ಎಂದು ಹೇಳುತ್ತಿದ್ದರು. ನಾವು ಇಲ್ಲಿ ಏನು ಹೇಳುತ್ತಿದ್ದೇವೆ, ಇವ ಆ ಕಡೆ, ಇವ ಆ ಕಡೆ ನಡೆಯಿರಿ, ಮುಟ್ಟುವಂತಿಲ್ಲ, ಇಂತಹ ಸಮಾಜವನ್ನು ನಾವು ನಿರ್ಮಾಣ ಮಾಡುತ್ತಿದ್ದೇವೆ, ಸರ್ಕಾರಗಳು ಮಾಡುತ್ತಿವೆ. ಬುದ್ಧ, ಬಸವಣ್ಣ, ಡಾ॥ ಬಿ.ಆರ್. ಅಂಬೇಡ್ಕರ್‌ರವರ ಚಿಂತನೆಗಳು ಏನು ಸ್ವಾಮಿ? ಅವರ ಚಿಂತನೆಗಳನ್ನು ಸರ್ಕಾರದ ಕಾರ್ಯಕ್ರಮಗಳಲ್ಲಿ ನೋಡಲಿಕ್ಕೆ ಆಗುತ್ತಿದೆಯೇ? ಇವತ್ತು ಜಾತಿ-ಜಾತಿ ನಡುವೆ, ನಮ್ಮ ನಿಮ್ಮಗಳ ನಡುವೆ, ಧರ್ಮಗಳ ನಡುವೆ ಈ ಕ್ರಾಂತಿಯಿಂದ, ಸಂಘರ್ಷದಿಂದ, ಏನಾದರೂ ಈ ಜಗತ್ತಿಗೆ ಒಳ್ಳೆಯದಾಗುತ್ತಿದೆ ಎಂದರೆ ಅದು ಯಾವ ರೀತಿಯಿಂದ ಆಗುತ್ತಿದೆ ಎನ್ನುವುದನ್ನು ಹೇಳಿ. ಮಹಾತ್ಮ ಗಾಂಧೀಜಿಯವರು ಕೊಟ್ಟಂತಹ ಅಹಿಂಸಾ ತತ್ವದಿಂದ ಮಾತ್ರ ಈ ಜಗತ್ತು ಉಳಿಯಲಿಕ್ಕೆ ಸಾಧ್ಯ. ಈ ಸಂಘರ್ಷದಿಂದ, ಈ ಮಹಾ ಯುದ್ಧಗಳಿಂದ, ಜಾತಿ ಧರ್ಮಗಳ ಸಂಘರ್ಷದಿಂದ ಯಾರು ಉಳಿಯಲಿಕ್ಕೆ ಸಾಧ್ಯವಿಲ್ಲ, ನಾನು ಮುಸಲ್ಮಾನರ ಬಗ್ಗೆ ಆಗಲಿ, ಕ್ರಿಶ್ಚಿಯನ್ ಧರ್ಮದ ಬಗ್ಗೆ ಆಗಲಿ, ಸಿಕ್ ಧರ್ಮದ ಬಗ್ಗೆ ಆಗಲಿ, ಇನ್ನೊಂದು ಧರ್ಮದ ಬಗ್ಗೆಯಾಗಲಿ, ಹೇಳುತ್ತಿಲ್ಲ, ಎಲ್ಲಾ ಧರ್ಮಗಳಲ್ಲೂ ಸಮಸ್ಯೆಗಳಿವೆ. ಆದರೆ, ಸರ್ಕಾರಗಳು ಬಂದಾಗ ತಾವು ಮಾಡುವಂತಹ ಕೆಲಸಗಳು, ಈ ದೇಶದ, ಈ ನಾಡಿನ ಅಭಿವೃದ್ಧಿಗೆ ಈ ಬಡ ಜನರ ಅಭಿವೃದ್ಧಿಗೆ ಅನೇಕ ಕಾರ್ಯಕ್ರಮಗಳು, ಯೋಜನೆಗಳು ತಮ್ಮ

ಮುಂದಿವೆ. ಅವುಗಳನ್ನು ತೆಗೆದುಕೊಂಡು ಬಂದು ಮಾಡಿ. ವಿರೋಧ ಪಕ್ಷದ ನಾಯಕರು ವಿಶೇಷವಾಗಿ, ಕ್ರಿಶ್ಚಿಯನ್ ಸಮುದಾಯ, ಮತ್ತೆ ಹಿಂದುಳಿದವರು, ಹರಿಜನ ಗಿರಿಜನರು, ಎಸ್‌ಸಿ-ಎಸ್‌ಟಿ ಎಂದು ಏತಕ್ಕೆ ಹೇಳಿದರು ಎಂದರೆ, ಇವತ್ತು ಮತಾಂತರ ಆಗುತ್ತಿರುವವರ ಸಂಖ್ಯೆ ಆ ವರ್ಗದಲ್ಲಿಯೇ ಹೆಚ್ಚು ಆಗುತ್ತಿದೆ. ಅದನ್ನು ನೀವು ತಡೆಗಟ್ಟಬೇಕು. ಈ ಮಾರಕವಾದ ಕಾಯಿದೆಯಿಂದ ಈ ಕೆಲಸ ಆಗುವುದಿಲ್ಲ. ಈ ಕಾಯಿದೆಯನ್ನು ತರುವುದರ ಜೊತೆಗೆ ಅವನಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಕೊಟ್ಟು, ಅವನು ಬದುಕಲಿಕ್ಕೆ ನೆಮ್ಮದಿಯಾದಂತಹ ಬದುಕು ನಡೆಸಲಿಕ್ಕೆ ಮತ್ತು ಅವನು ಹಿಂದು ಧರ್ಮದಲ್ಲಿ ಉಳಿಯಲಿಕ್ಕೆ ಅವನಿಗೆ ಅಗತ್ಯ ಇರತಕ್ಕಂತಹ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತಹ ಕೆಲಸ ಮಾಡುವಲ್ಲಿ ಚಿಂತನೆ ಸರ್ಕಾರದಿಂದ ಆಗಬೇಕೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಅದನ್ನು ಬಿಟ್ಟು, ಸುಮ್ಮನೆ ಯಾವುದೋ ಒಂದು ದೃಷ್ಟಿಯನ್ನಿಟ್ಟುಕೊಂಡು ನಾವು ಇದನ್ನು ತೆಗೆದುಕೊಂಡು ಬರುವುದು ಸರಿಯಲ್ಲ. ಈ ರೀತಿ ಮಾಡುವಂತಹದ್ದು ಒಳಿತಲ್ಲ. ಈ ನಾಡಿನಲ್ಲಿ ಮಹಾನುಭಾವ ಬಸವಣ್ಣನವರಿಗಿಂತ ಈ ಜಗತ್ತಿನಲ್ಲಿ ಯಾರು ಇದ್ದಾರೆ? ಬಸವಣ್ಣನವರು ಕರ್ನಾಟಕ ರಾಜ್ಯದಲ್ಲಿ ಹುಟ್ಟಿದಂತಹ ಮಹಾಪುರುಷ. ಸಮಾನತೆ ತರಬೇಕು, ಜಾತಿ ಎನ್ನುವುದನ್ನು ಹೋಗಲಾಡಿಸಬೇಕೆಂದು 12ನೇ ಶತಮಾನದಲ್ಲಿ ಮಾಡಿದ್ದನ್ನು ಜನಪ್ರತಿನಿಧಿಗಳಾದ ನಾವು ಕಿಂಚಿತ್ತು ಆದರೂ ಇಟ್ಟುಕೊಂಡಿದ್ದೇವೆಯೇ? ಇಟ್ಟುಕೊಂಡಿದ್ದರೆ, ಈ ರೀತಿಯಲ್ಲಿ ಆಗುತ್ತಿರಲಿಲ್ಲ? ಈ ಸಂಘರ್ಷಗಳೇ ಬರುತ್ತಿರಲಿಲ್ಲ. ಈ ಸಂಬಂಧ ನಾನು ಒಂದು ಉದಾಹರಣೆಯನ್ನು ಹೇಳಲಿಕ್ಕೆ ಬಯಸುತ್ತೇನೆ. ಗೃಹ ಸಚಿವರು ಗಮನಿಸಬೇಕು. ಮೊನ್ನೆ ಗಣಪತಿ ಉತ್ಸವ ಸಂದರ್ಭದಲ್ಲಿ...

**ವೈಸ್ ಛೇರ್ಮನ್:-** ಗೌಡರೆ, ಸಮಯ ಆಯಿತು.

**ಶ್ರೀ ಮರಿತಿಬ್ಬೇಗೌಡ:-** ಶಿವಮೊಗ್ಗದಲ್ಲಿ ಮೆರವಣಿಗೆಯಲ್ಲಿ ಗಣಪತಿ ಪಕ್ಕದಲ್ಲಿ ಗೋಡ್ಸೆ ರವರ ಪೋಟೋವನ್ನು ಹಾಕಿಕೊಂಡು ಮೆರವಣಿಗೆ ಮಾಡಿಕೊಂಡು ಹೋಗುತ್ತಿದ್ದರು.

**(ಗೊಂದಲ)**

**ಶ್ರೀ ಡಿ.ಎಸ್. ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):** ಮಾನ್ಯ ಸಭಾಪತಿಯವರೆ, ಖಂಡಿತವಾಗಿಯೂ ಆ ರೀತಿಯಲ್ಲಿ ನಡೆದಿರುವುದಿಲ್ಲ.

**ವೈಸ್ ಛೇರ್ಮನ್:-** ಆ ರೀತಿಯಲ್ಲಿ ಇಲ್ಲವೆಂದು ಸ್ಥಳೀಯ ಶಾಸಕರು ಹೇಳುತ್ತಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:-** ಮತ್ತೆ ಬಸ್ ಸ್ಟ್ಯಾಂಡ್ ಪಕ್ಕದಲ್ಲಿ ಅಶೋಕ ಸ್ಥಂಭ ಇದೆ. ಅದರ ಮೇಲೆ ಒಂದು ರಾಷ್ಟ್ರೀಯ ಲಾಂಛನವಿದೆ ಆ ಲಾಂಛನದ ಮೇಲೆ ಭಗವತ್ ಧ್ವಜವನ್ನು ಇದೇ ಸಂದರ್ಭದಲ್ಲಿ ಹಾರಿಸುತ್ತಾರೆ.

**ಶ್ರೀ ಡಿ.ಎಸ್. ಅರುಣ್:** – ಮಾನ್ಯ ಸಭಾಪತಿಯವರೆ,

**ವೈಸ್ ಛೇರ್ಮನ್:-** ಗೌಡರೆ, ತಾವು ಸ್ವಲ್ಪ yield ಆಗುತ್ತೀರಾ?

**ಶ್ರೀ ಮರಿತಿಬ್ಬೇಗೌಡ:-** ಹಿಂದೂ ಮಹಾಸಭಾ ಸಂಘಟನೆಯವರು...

**ವೈಸ್ ಛೇರ್ಮನ್:-** ಗೌಡರೆ, ಶ್ರೀಯುತ ಡಿ.ಎಸ್. ಅರುಣ್‌ರವರು ಮಾತನಾಡುತ್ತಾರೆ, ತಾವು ಸ್ವಲ್ಪ yield ಆಗುತ್ತೀರಾ?

**ಶ್ರೀ ಡಿ.ಎಸ್. ಅರುಣ್:-**ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ತಪ್ಪು ಮಾಹಿತಿಯನ್ನು ಕೊಡುವುದು ಬೇಡ.

**ಶ್ರೀ ಮರಿತಿಬ್ಬೇಗೌಡ:-** ಹಿಂದೂ ಮಹಾಸಭಾ ಸಂಘಟನೆಯವರು ಪ್ರಚಾರ ಮಾಡಲಿಕ್ಕೆ ಅವರ ಸಂಘಟನೆಯ ಪದಾಧಿಕಾರಿಗಳು ರಾಜ್ಯದಾದ್ಯಂತ, ದೇಶದಾದ್ಯಂತ ಓಡಾಡಲಿಕ್ಕೆ ನನ್ನದು ಯಾವುದೂ ಅಡ್ಡಿಯಿಲ್ಲ. ನನ್ನ ಅಕ್ಷೇಪಣೆಯೂ ಇಲ್ಲ. ಆದರೆ, ಮಹಾತ್ಮ ಗಾಂಧೀಜಿಯವರನ್ನು ಈ ಜಗತ್ತೇ **"ಮಹಾತ್ಮ"** ಎಂದು ಕರೆದಿರುವಾಗ **"ಭಾರತದ ಪಿತಾಮಹಾ"** ಎಂದು ಈ ಜಗತ್ತೇ ಒಪ್ಪಿಕೊಂಡಿರುವಾಗ ಅವರನ್ನು ಕೊಲೆ ಮಾಡಿದಂತಹ ಗೋಡ್ಸೆ ಭಾವಚಿತ್ರವನ್ನು ಗಣಪತಿ ಪಕ್ಕದಲ್ಲಿ ಇಡುತ್ತಾರೆಂದರೆ ಇದರ ಬಗ್ಗೆ ಸರ್ಕಾರದ ಕ್ರಮ ಏನು ಎಂದು ಕೇಳಲಿಕ್ಕೆ

ಬಯಸುತ್ತೇನೆ. ನಾವು ಯಾವ ದೇಶದಲ್ಲಿ, ಯಾವ ಜಗತ್ತಿನಲ್ಲಿ ಬದುಕುತ್ತಿದ್ದೇವೆ? ನಿಮ್ಮ ಸರ್ಕಾರ ಯಾರಿಗೆ ಕುಮ್ಮಕ್ಕು ಕೊಡುತ್ತಿದೆ?

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಮತ್ತೆ, ಮತ್ತೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ಪತ್ರಿಕೆಯಲ್ಲಿ ಬಂದಿರುವುದನ್ನು ತೋರಿಸುತ್ತೇನೆ. ಇವತ್ತು, ಗಾಂಧೀ ಭವನದ ಅಧ್ಯಕ್ಷರು ಈ ಬಗ್ಗೆ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ.

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಅಶೋಕ ಸ್ಥಂಭದ ಮೇಲೆ ಹಾಕಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಧರ್ಮದ ರಾಜಕಾರಣ ಮಾಡುತ್ತಿಲ್ಲ, ಜಾತಿ ರಾಜಕಾರಣ ಮಾಡುತ್ತಿಲ್ಲವೆಂದು ಹೇಳುತ್ತಿದ್ದೀರಿ. ನೀವು ಸಂಘರ್ಷದ ರಾಜಕಾರಣ ಮಾಡುತ್ತಿದ್ದೀರಿ. ನೀವು vote bank ರಾಜಕಾರಣ ಮಾಡುತ್ತಿದ್ದೀರಿ.

**ವೈಸ್ ಛೇರ್ಮನ್:-** ಗೌಡರೆ, ಶ್ರೀಯುತ ಡಿ.ಎಸ್. ಅರುಣ್‌ರವರು ಮಾತನಾಡುತ್ತಾರೆ, ಅವರಿಂದ ಇದರ ಬಗ್ಗೆ ಸ್ಪಷ್ಟತೆಯನ್ನು ತೆಗೆದುಕೊಳ್ಳಿ.

**ಶ್ರೀ ಡಿ.ಎಸ್. ಅರುಣ್:** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಎರಡು ವಿಷಯಗಳ ಬಗ್ಗೆ ಹೇಳಿದರು. ಗೋಡ್ಸೆ ವಿಚಾರ ಹೇಳಿದರು. ಅದು ಶಿವಮೊಗ್ಗದಲ್ಲಿ ನಡೆದಿಲ್ಲ. ಅವರ ಹತ್ತಿರ ಯಾವುದು ಮಾಹಿತಿ ಇದೆ, ಅದು ತಪ್ಪು ಮಾಹಿತಿ. ಬೇರೆ ಎಲ್ಲಿಯಾದರೂ ಆಗಿದ್ದರೆ, ಅದನ್ನು ಸರಿಪಡಿಸಿಕೊಳ್ಳಬೇಕು. ಎರಡನೆಯದು, ಅಶೋಕ ವೃತ್ತದಲ್ಲಿ ಸ್ಥಂಭದ ಮೇಲೆ

ಅಲ್ಲ, ಅಶೋಕ ಸ್ಥಂಭದ ಕೆಳಗಡೆ ಕೇಸರಿ ಭಾವುಟಗಳನ್ನು ಅಲಂಕಾರ ಮಾಡಿರುವುದನ್ನು ಬಿಟ್ಟರೆ ಮೇಲೆ ಅಲ್ಲ. ಆ ರೀತಿಯಲ್ಲಿ ಪ್ರತಿ ವರ್ಷವೂ, ಪ್ರತಿ ಸಲವೂ ಎಲ್ಲಾ ಸರ್ಕಲ್‌ಗಳಲ್ಲೂ ಮಾಡುವಂತಹ ಪದ್ಧತಿ ನಮ್ಮದು ಇದೆ. ಅಮೀರ್ ಅಹಮದ್ ಸರ್ಕಲ್ ಎಂದು ಇದೆ.

**(ಮುಂದು)**

**(೮60) 15.09.2022 05.10 ಎಸ್‌ವಿ-ಎಕೆ (ವೈಸ್‌ಛೇರ್‌ಮನ್‌ರವರ ಉಪಸ್ಥಿತಿ)**
**ಶ್ರೀ ಡಿ.ಎಸ್.ಅರುಣ್ (ಮುಂದು)**

ಅಭಿರಾಮ ಸರ್ಕಲ್ ಎಂದು ಇದೆ. ಅಲ್ಲಿಯೂ ಕೂಡ ನಾವು ಕೇಸರಿ ಬಣ್ಣದ ಧ್ವಜವನ್ನು ಇಡೀ ಸರ್ಕಲ್‌ಗೆ ಹಾಕಲಾಗುತ್ತದೆ. ಮಾನ್ಯ ಸದಸ್ಯರು ಎರಡು ತಪ್ಪು ಮಾಹಿತಿಗಳನ್ನು ಸದನಕ್ಕೆ ಕೊಡುತ್ತಿದ್ದಾರೆ. ದಯಮಾಡಿ ಅದನ್ನು ಕಡತದಿಂದ ತೆಗೆಸಬೇಕೆಂದು ಕೇಳಕೊಳ್ಳುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಮರಿತಿಬ್ಬೇಗೌಡರೇ, ಈ ರೀತಿಯ ತಪ್ಪು ಮಾಹಿತಿಗಳು ಹೇಗೆ ಬರುತ್ತವೆ ಎಂದು ತಿಳಿಯುವುದಿಲ್ಲ. ಮಾಧ್ಯಮಗಳಲ್ಲಿ ನಾನು ನೋಡಿದೆ. ನಾನೂ ಶಿವಮೊಗ್ಗ ಜಿಲ್ಲೆಯವನೇ.

**ಶ್ರೀ ಮರಿತಿಬ್ಬೇಗೌಡ (ಕುಳಿತುಕೊಂಡು):-** ಹಾಗಾದರೆ ಮಾಧ್ಯಮಗಳನ್ನು ban ಮಾಡಿ.

**ಶ್ರೀ ಆರಗ ಜ್ಞಾನೇಂದ್ರ:-** ಹಾಗೆಲ್ಲಾ ಮಾಡುವುದಕ್ಕಾಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:-** ಹಿಂದೆ ನೀವು ಮಾಡಿಸಿದ್ದಿರಲ್ಲ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ಇಲ್ಲಿ ಮಾಧ್ಯಮವನ್ನು ಎಳೆದು ತರಬೇಡಿ. ಅದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಅವರ ಮೇಲೆ ಆರೋಪ ಮಾಡಿದರೆ ಅವರು ಇಲ್ಲಿಗೆ ಬಂದು ನಿಮಗೆ ವಿವರಣೆಯನ್ನು ಕೊಡುವುದಕ್ಕಾಗುವುದಿಲ್ಲ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಈ ಹಿಂದೆಯೂ ಕೂಡ ಹೀಗೆಯೇ ಆಗಿತ್ತು. ಮಾನ್ಯ ಡಿ.ಕೆ.ಶಿವಕುಮಾರ್ ಅವರು "ರಾಷ್ಟ್ರಧ್ವಜವನ್ನು ಇಳಿಸಿ ಎ.ಬಿ.ವಿ.ಪಿ. ಧ್ವಜವನ್ನು ಹಾರಿಸಿದರು" ಎಂದು ಹೇಳಿದರು. ಮಾಹಿತಿ ಖಂಡಿತ ತಪ್ಪು. ಆ ಸ್ಥಳದಲ್ಲಿ ಸ್ವತಃ ಎಸ್.ಪಿ. ಯವರೇ ಇದ್ದರು. ಏಕೆ ಈ ರೀತಿ ಹೇಳುತ್ತಾರೆ? ದಯವಿಟ್ಟು ಮಾನ್ಯ ಸದಸ್ಯರು ಮಾಹಿತಿಯನ್ನು ತೆಗೆದುಕೊಂಡು ಹೇಳಲಿ. ಎಲ್ಲಾ ಹಿರಿಯ ಶಾಸಕರಾಗಿದ್ದು, ಈ ರೀತಿ ಶಿವಮೊಗ್ಗದ ಬಗ್ಗೆ ತಪ್ಪು ತಪ್ಪು ಅಭಿಪ್ರಾಯವನ್ನು ಕೊಟ್ಟರೆ ಹೇಗೆ?

**ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಗೃಹ ಸಚಿವರೇ, ಮಾಧ್ಯಮಗಳಲ್ಲಿ ಬಂದಿದೆ ಎಂದು ತಾವೇ ಹೇಳಿದಿರಿ.

**ಶ್ರೀ ಆರಗ ಜ್ಞಾನೇಂದ್ರ:-** ಹೌದು. ಆದರೆ ಮಾಧ್ಯಮಗಳಲ್ಲಿ ಬಂದದ್ದೆಲ್ಲಾ ಸತ್ಯವೇ? ನಾವು ನೀವು ಸ್ವಲ್ಪ ಸರಿಯಾದ ಮಾಹಿತಿಯನ್ನು ತೆಗೆದುಕೊಂಡು ಹೇಳಬೇಕಲ್ಲವೆ? ಏಕೆ ಈ ರೀತಿ ಪ್ರಚಾರವಾಗುತ್ತಿದೆ? ನಾವು ಜವಾಬ್ದಾರಿಯುತ ಸ್ಥಾನದಲ್ಲಿರುವವರು ಮಾತನಾಡುವಾಗ ಮಾಹಿತಿಯನ್ನು ತೆಗೆದುಕೊಂಡು ಮಾತನಾಡಿದರೆ ತುಂಬಾ ಒಳ್ಳೆಯದು. ಈ ರೀತಿ ಹೇಳುವುದು ಅನವಶ್ಯಕ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಗೃಹ ಸಚಿವರೇ, ನಾನು ಹೇಳಿರತಕ್ಕಂಥದ್ದನ್ನು ತಾವು ನಿರಾಕರಿಸುತ್ತಿದ್ದೀರಿ. ಆದರೆ ಮಾಧ್ಯಮಗಳಲ್ಲಿ ನೋಡಿದ್ದೇನೆ ಎಂದು ತಮ್ಮ ಮಾತುಗಳಲ್ಲಿಯೇ ಹೇಳಿದಿರಿ. ನಾನು ಕೂಡ ಅದೇ ಮಾಧ್ಯಮಗಳು, ಪತ್ರಿಕೆಗಳಲ್ಲಿಯೇ ಓದಿದ್ದೇನೆ. ಈ ದಿನದ ಪ್ರಜಾವಾಣಿಯಲ್ಲಿ ಗಾಂಧಿ ಪ್ರತಿಷ್ಠಾನದ ಅಧ್ಯಕ್ಷರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನೂ ನಾನು ಇವತ್ತು ಓದಿದ್ದೇನೆ. ಇವೆಲ್ಲಾ ಮಾಹಿತಿಯನ್ನು ಇಟ್ಟುಕೊಂಡೇ ನಾನು ಮಾತನಾಡುತ್ತಿದ್ದೇನೆ. ಒಂದು ವೇಳೆ ಮಾಧ್ಯಮದವರು ತಪ್ಪು ಸಂದೇಶ ಕೊಟ್ಟಿದ್ದಾರೆ ಎಂದರೆ ಅವರಿಗೆ ಕೂಡಲೇ ಗಲ್ಲುಶಿಕ್ಷೆ ಮಾಡಿ.

**ಶ್ರೀ ಆರಗ ಜ್ಞಾನೇಂದ್ರ (ಕುಳಿತುಕೊಂಡು):-** ಅದು ಹೇಗಾಗುತ್ತದೆ?

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಗೃಹಸಚಿವರೇ, ಮಹಾತ್ಮಾ ಗಾಂಧೀಜಿಯವರ ಬಗ್ಗೆ ಈ ರೀತಿಯ ಸುಳ್ಳು ಪುಕಾರುಗಳನ್ನು ಪತ್ರಿಕೆಗಳಲ್ಲಿ ಹಾಕಿ ಜನರನ್ನು....

**ವೈಸ್ ಛೇರ್ಮನ್:-** ಸರ್ಕಾರ ಮಾನ್ಯ ಸದಸ್ಯರ ಕಳಕಳಿಯನ್ನು ಗಮನಿಸಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಗೃಹಸಚಿವರೇ, ಮಾನ್ಯ ಅರುಣ್ ಅವರು ಹೇಳಿದರು. ಮುಂದೆ ಅವರು ಗೃಹ ಮಂತ್ರಿಯಾದಾಗ ಅವರು ಉತ್ತರವನ್ನು ಕೊಡಲಿ. ತಾವು ಜವಾಬ್ದಾರಿಯುತ ಸ್ಥಾನದಲ್ಲಿರತಕ್ಕಂಥವರು. ತಾವು ಇದಕ್ಕೆ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ನಮ್ಮ ಡಬ್ಲ್ಯೂ.ಹೆಚ್. ಹನುಮಂತಪ್ಪ, ಸ್ವಾತಂತ್ರ್ಯ ಹೋರಾಟಗಾರರ ಮೊಮ್ಮಗನಾದ ಶ್ರೀ ಕೃಷ್ಣಾ ವೂಡೇ ಅವರು ಗಾಂಧಿ ಪ್ರತಿಷ್ಠಾನದಿಂದ ಸ್ಟೇಟ್‌ಮೆಂಟ್ ಮಾಡಿದ್ದಾರೆ.

ಅಲ್ಲದೆ, ನಿಮ್ಮ ಪ್ರಾಥಮಿಕ ಶಿಕ್ಷಣ ಸಚಿವರು ತಿಪಟೂರಿನಲ್ಲಿ ಹರ್‌ಘರ್ ತಿರಂಗಾ ಸಂದರ್ಭದಲ್ಲಿ ಕೆಳಗೆ ತ್ರಿವರ್ಣ ಧ್ವಜ, ಮೇಲೆ ಭಗವಾಧ್ವಜವನ್ನು ಇಟ್ಟುಕೊಂಡಿದ್ದು ಪತ್ರಿಕೆಗಳಲ್ಲಿ ಬಂದಿದ್ದನ್ನೂ ನಾವು ನೋಡಿದ್ದೇವೆ. ಅದಕ್ಕೆ ಯಾವುದೇ ಸ್ಪಷ್ಟೀಕರಣ ಬರಲಿಲ್ಲ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಹರಿಪ್ರಸಾದ್‌ರವರೇ, ಸ್ಪಷ್ಟೀಕರಣ ಬಂತು. ಅವರೇ ಹೇಳಿದರು. ಕೆಳಗಡೆ ರಾಷ್ಟ್ರಧ್ವಜವನ್ನು ಸಚಿವರು ಹಿಡಿದುಕೊಂಡಿದ್ದಾರೆ. ಹಿಂದೆ ಇದ್ದಂತಹ ಭಗವಾಧ್ವಜವನ್ನು photography ಯಲ್ಲಿ ಆ ರೀತಿ ತೋರಿಸಿದ್ದಾರೆ. ಇದಕ್ಕೆ ನಾವು ಏನು ಹೇಳಬೇಕೆಂದು ತಿಳಿಯುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಚಿವರೇ, ತಾವು ಗೃಹ ಸಚಿವರು. ಈ ರೀತಿ ಹೇಳಿದರೆ ಯಾರಾದರೂ ನಂಬುತ್ತಾರೆಯೇ?

**ಶ್ರೀ ಆರಗ ಜ್ಞಾನೇಂದ್ರ:-** ನಾನು ತಪ್ಪು ಹೇಳುತ್ತಿಲ್ಲ. ನಾನು ತಪ್ಪು ಮಾಹಿತಿಯನ್ನು ಕೊಟ್ಟರೆ ಕ್ಷಮೆ ಕೇಳುತ್ತೇನೆ. ತಿಪಟೂರಿನಲ್ಲಿ ನಡೆದ ವಿಷಯ ಹೀಗೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಗೃಹ ಸಚಿವರೇ, ರಾಷ್ಟ್ರಧ್ವಜ ನಮ್ಮೆಲ್ಲರ ಗೌರವ, ಹೆಮ್ಮೆ. ಅದಕ್ಕೆ ಅಪಮಾನವಾದಾಗ ನೀವು thorough enquiry ಮಾಡಿಸಬೇಕು. ಆ ರೀತಿಯಾಗಿಲ್ಲ ಎಂದು ಒಂದು ವರದಿಯನ್ನು ಕೊಟ್ಟಾಗ ನಮಗೆಲ್ಲಾ ಸಮಾಧಾನವಾಗುತ್ತದೆ.

**ಶ್ರೀ ಆರಗ ಜ್ಞಾನೇಂದ್ರ:-** ನನಗೆ ಸ್ಪಷ್ಟ ಮಾಹಿತಿಯಿದೆ. ನಾನು ಪೋಲೀಸ್ ಅಧಿಕಾರಿಗಳ ಬಳಿ ಕೇಳಿದ್ದೇನೆ.

**ವೈಸ್ ಛೇರ್ಮನ್:-** ಸಂವಿಧಾನದ ಆಶಯಗಳಿಗೆ ಭಂಗ ಬಾರದಂತೆ ನೋಡಿಕೊಳ್ಳಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಚಿವರೇ, ಇದರ ಬಗ್ಗೆ ಒಂದು ವಿಚಾರಣೆಯನ್ನು ಮಾಡಿ. ಏಕೆಂದರೆ ಮಹಾತ್ಮಾ ಗಾಂಧೀಜಿ, ಗೋಡ್ಸೆ ಸಂಬಂಧವಾಗಿ ಈ ರೀತಿ ನಡೆದರೆ ಜನರಲ್ಲಿ ದೊಡ್ಡ ಅಶಾಂತಿ ಉಂಟಾಗುತ್ತದೆ.

**ವೈಸ್ ಛೇರ್ಮನ್:-** ಮಾನ್ಯ ಮರಿತಿಬ್ಬೇಗೌಡರೇ, ಸಮಯ ಅರ್ಧ ಗಂಟೆಯಾಗಿದೆ. ಪುನರುಚ್ಚಾರ ಮಾಡಬೇಡಿ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಗೃಹ ಸಚಿವರೇ, ಸರ್ಕಾರದಿಂದ ಇದರ ಬಗ್ಗೆ ತನಿಖೆ ಮಾಡಿ, ಹೇಳಿಕೆಯನ್ನು ಮಾಡಲಿ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಮರಿತಿಬ್ಬೇಗೌಡರೇ, ಮಾನ್ಯ ಅರುಣ್ ಅವರು ಈ ಮನೆಯ ಗೌರವಾನ್ವಿತ ಸದಸ್ಯರು. ಅವರು ಆ procession ನಲ್ಲಿ ಜೊತೆಗಿದ್ದಂತಹವರು.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಗೃಹ ಸಚಿವರೇ, ಅವರು ಭಾರತೀಯ ಜನತಾ ಪಾರ್ಟಿಯವರು, ಜನಸಂಘದ ಸಕ್ರಿಯ ಕಾರ್ಯಕರ್ತರು.

**ವೈಸ್ ಛೇರ್ಮನ್:-** ಆ ಸದಸ್ಯರ ಹಕ್ಕನ್ನು ಪ್ರಶ್ನೆ ಮಾಡಲಿಕ್ಕೆ ಬರುವುದಿಲ್ಲ. ಈ ಸದನದ ಎಲ್ಲಾ ಸದಸ್ಯರಿಗೂ ಅವರ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಯಾವುದೇ ರಾಜಕೀಯ ಪಕ್ಷದವರಾದರೂ

ಅವರ ಅಭಿಪ್ರಾಯವನ್ನು ತಿಳಿಸುವ ಹಕ್ಕಿದೆ. ವ್ಯತಿರಿಕ್ತವಾದ ಭಾವನೆ ಇದ್ದರೆ ವ್ಯಕ್ತಪಡಿಸಬಹುದು. ಅಷ್ಟು ಬಿಟ್ಟರೆ ಅವರಿಗೆ ಆ ಹಕ್ಕಿದೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೇ, ನಮ್ಮದೊಂದೇ ಕಳಕಳಿ. ದಯಮಾಡಿ ತಪ್ಪು ಮಾಹಿತಿಯನ್ನು ಕೊಡಬಾರದು.

**ವೈಸ್ ಛೇರ್ಮನ್:-** ಮಾನ್ಯ ಹರಿಪ್ರಸಾದ್ ಅವರೇ, ತಮ್ಮ ಸ್ನೇಹಿತರಾದ ಮಾನ್ಯ ಮರಿತಿಬ್ಬೇಗೌಡರಿಗೆ ತಾವು ಹೇಳಬೇಕು. ನಾನು ಕಾಲಾವಕಾಶವನ್ನು ಕಡಿತಗೊಳಿಸಬೇಕಾಗುತ್ತದೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇಂತಹ ಒಂದು ಗಂಭೀರವಾದ ವಿಚಾರದಲ್ಲಿ ಗೃಹ ಸಚಿವರು ಒಂದು ತನಿಖೆಯನ್ನು ಮಾಡಿಸಿ ನಾಡಿನ ಜನತೆಗೆ ವಾಸ್ತವಿಕತೆಯನ್ನು ತಿಳಿಸಬೇಕು. ಅದನ್ನು ಮಾಡಿದರೆ ಬಹಳ ಸಂತೋಷ. ನಾನು ಸ್ವಾಗತಿಸುತ್ತೇನೆ. ಅದು ಮಾಡಲಿಲ್ಲ ಎಂದರೆ ಆ ಘಟನೆ ನಡೆದಿದೆ ಎಂದು ತಿಳಿದು ನಾನು ಸುಮ್ಮನಾಗಿ ಮುಂದಕ್ಕೆ ಹೋಗುತ್ತೇನೆ.

ಮಾನ್ಯ ಸಭಾಪತಿಯವರೇ, ಕಂಡಿಕೆ 12ರಲ್ಲಿ "ರುಜುವಾತಿನ ಭಾರ" ಎಂದು ಇದೆ. ನಾನು ಮತಾಂತರಗೊಂಡರೆ ನನಗೆ ಇದ್ದಂತಹ ಸಾಕ್ಷಿಗಳು ಅವರು ನ್ಯಾಯಾಲಯದಲ್ಲಿ ಹಿಂಸೆಯಿಂದ, ಕಿರುಕುಳದಿಂದ ಮತಾಂತರವಾಗಿಲ್ಲ. ಇವರ ಮತಾಂತರ ಕ್ರಮಬದ್ಧವಾಗಿ ಆಗಿದೆ ಎಂದು ಅವರು ರುಜುವಾತು ಪಡಿಸಬೇಕು ಎಂದು ಇದೆ. ಇಲ್ಲವಾದರೆ ಅವರಿಗೂ ಶಿಕ್ಷೆ. ಇದಕ್ಕೆ ಬೀಗವನ್ನು ಎಲ್ಲೆಲ್ಲಿ ಇಟ್ಟಿದ್ದಾರೆ ಎಂದರೆ ಯಾರಿಗೂ ಗೊತ್ತಾಗುವುದಿಲ್ಲ. ನನಗೆ ಯಾರು ಪ್ರಚೋದನೆ ಮಾಡುತ್ತಾರೆಯೋ, ಸಹಕಾರ, ನೆರವು ನೀಡುತ್ತಾರೆಯೋ ಅವರೆಲ್ಲರೂ ಜಿಲ್ಲಾಧಿಕಾರಿಗಳ ಮುಂದೆ ರೆಕಾರ್ಡ್ ಆಗುತ್ತಾರೆ. ಒಂದು ವೇಳೆ ಅದರಲ್ಲಿ ತಕರಾರು ಉದ್ಭವಿಸಿದರೆ ಆ ತಕರಾರು clear ಆಗಬೇಕೆಂದರೆ ಇವರೇ ಸಾಬೀತು ಪಡಿಸಬೇಕು. ಇಲ್ಲವಾದಲ್ಲಿ ಇವರನ್ನೇ ಶಿಕ್ಷೆಗೆ ಗುರಿಪಡಿಸಲಾಗುವುದು. ಈ ತರಹದ್ದೆಲ್ಲಾ ಈ ಕಾಯಿದೆಯಲ್ಲಿ ಬೇಡ. ಇವು ನರಕದೃಶ್ಯ.

ಕ್ರಿಶ್ಚಿಯನ್ ಸಮುದಾಯ ಸಮಾಜಕ್ಕಾಗಿ ಏನೆಲ್ಲಾ ಮಾಡುತ್ತಿದೆ? ಎಲ್ಲವನ್ನೂ ಮಾಡುತ್ತಿದೆ. ಇಂದು ಯಾವ ಸಮಾಜದಲ್ಲಿ ಯೋಗ್ಯರಿಲ್ಲ, ಕೆಟ್ಟವರಿಲ್ಲ. ದಯವಿಟ್ಟು ಧರ್ಮದ ಹೆಸರಿನಲ್ಲಿ ದೇಶವನ್ನು ಆಳಬೇಡಿ. ಒಳ್ಳೆಯ ಅಭಿವೃದ್ಧಿ ಚಿಂತನೆಯನ್ನು ಸಾಮರಸ್ಯದಿಂದ ನಾವು-ನೀವು ಕೂಡಿ ಮಾಡಿದರೆ ದೇಶ ಉದ್ಧಾರವಾಗುತ್ತದೆ, ಬೆಳಗುತ್ತದೆ. ಇಂತಹವುಗಳನ್ನು ತರುವುದು ಬೇಡ.

ಈ ಕಾಯಿದೆಯಲ್ಲಿ ಒಂದೆರಡು ವಿಚಾರಗಳನ್ನು ನಾನು ಹೇಳಿದ್ದೇನೆ. ಬಹಳ ಹಿಂದೆಯೇ ಕುವೆಂಪು ಅವರು ಒಂದು ಮಾತನ್ನು ಹೇಳಿದ್ದರು. ಅಂಬೇಡ್ಕರ್ ಅವರ ಕುರಿತು ಕುವೆಂಪು ಅವರ ಚಿಂತನೆಗಳು ಎನ್ನುವಂತಹ ಪುಸ್ತಕದಲ್ಲಿ ಬರೆದಿದ್ದಾರೆ. ಈ ದೇಶದಲ್ಲಿ ಸುಮಾರು ಶೇ.2-3ರಷ್ಟು ಇರುವ ಕೆಲವೇ ಕೆಲವು ಪುರೋಹಿತರ ಕುಟಿಲತೆಗೆ ಶೇ.97 ಇರತಕ್ಕಂತಹ ಶೂದ್ರರು, ದಲಿತರು ಇಂದು ಬಲಿಪಶುಗಳಾಗುತ್ತಿದ್ದಾರೆ. ನೆಮ್ಮದಿಯಿಂದ ಬದುಕಲಿಕ್ಕೆ ಆಗುತ್ತಿಲ್ಲ. ಕಟುಕನ ಕೈನ ಹಸಿರಿಗೆ ಬ್ಯಾಗೊಡುವ ಮಂಕು ಕರುಗಳಿದ್ದಂತೆ ನೀವೆಲ್ಲಾ ಜಾಗೃತರಾಗಬೇಕು ಎಂದು ಹೇಳಿ ವಿದ್ಯಾರ್ಥಿ ಸಮೂಹವನ್ನು ಉದ್ದೇಶಿಸಿ ಭಾಷಣವನ್ನು ಮಾಡುತ್ತಾರೆ. ಇಂದು ನನಗೆ ಅದು ನೆನಪಾಗುತ್ತಿದೆ. ಇವತ್ತು ನಾವು ನೋಡುತ್ತಿದ್ದೇವೆ. ಸಂವಿಧಾನವನ್ನು ಈ ಸರ್ಕಾರ ಹೇಗೆ ಒತ್ತುವರಿ ಮಾಡುತ್ತಿದೆಯೆಂದರೆ ಖಾಸಗಿಯವರನ್ನು ತೆಗೆದುಕೊಂಡು ಬಂದು ಮೀಸಲಾತಿಯನ್ನು ಹಾಳು ಮಾಡುತ್ತಿದ್ದಾರೆ. ಮೀಸಲಾತಿ ಪಡೆದುಕೊಳ್ಳುತ್ತಿದ್ದವರು backward class, scheduled caste, scheduled tribe ಗೆ ಸೇರಿದವರು ಮತ್ತು ಅಲ್ಪಸಂಖ್ಯಾತರು. ಖಾಸಗೀಕರಣ ತಂದರು. ನಿರುದ್ಯೋಗ ತಾಂಡವವಾಡುತ್ತಿದೆ. ಭಾರತ ದೇಶದಲ್ಲಿಯೇ ನಂ.1 ಭ್ರಷ್ಟಾಚಾರ ಕರ್ನಾಟಕದಲ್ಲಿ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರಕ್ಕೆ ಚಿಂತನೆಯಿಲ್ಲ. ಇಂದು ಅತಿವೃಷ್ಟಿಯಾಗಿದೆ. ಎಲ್ಲಾ ಕಡೆಗಳಲ್ಲಿಯೂ ಜನಜೀವನ ಅಸ್ತವ್ಯಸ್ತವಾಗಿದೆ. ಅದರ ಬಗ್ಗೆ ಚಿಂತನೆಯಿಲ್ಲ. ಸರ್ಕಾರದ ಕಾರ್ಯಕ್ರಮಗಳಿಲ್ಲ. ಈ ಬಿಲ್ ಅವಶ್ಯಕತೆಯಿತ್ತೇ? ನಾನು ಹೇಳಿದಂತಹ ಕಂಡಿಕೆ 4 ಮತ್ತು 12ಕ್ಕೆ ದಯವಿಟ್ಟು ತಿದ್ದುಪಡಿ ತರಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುವುದು ಬೇಡ. ಇದು ಸಂವಿಧಾನ ವಿರೋಧಿ. ಇದಕ್ಕೆ ಸಾಕ್ಷಿಗಳಾಗಿ ಸಹಿ ಹಾಕಿದವರನ್ನು ನೇಣುಗಂಬಕ್ಕೆ ಹಾಕುವುದಕ್ಕೆ

ಹೋಗಬೇಡಿ. ನ್ಯಾಯಾಧೀಶರ ಮುಂದೆ prove ಮಾಡುವುದಕ್ಕೆ ಹೋಗಬೇಡಿ. ಅವರನ್ನು ಕೂಡ ಹೊರತುಪಡಿಸಿ ಕಾಯಿದೆಯನ್ನು ತನ್ನಿ. ಆದರೆ ಈ ಮಸೂದೆಗೆ ನನ್ನ ಆತ್ಮಸಾಕ್ಷಿಯಾಗಿ ನಾನು ವಿರೋಧ ಮಾಡುತ್ತೇನೆ. ಇಲ್ಲಿ ಧರ್ಮ ಇಲ್ಲ. ನನ್ನ ಮೆದುಳಿನಿಂದ ಹೇಳುತ್ತಿಲ್ಲ. ನನ್ನ ಆತ್ಮದಿಂದ ನಾನು ಹೇಳುತ್ತಿದ್ದೇನೆ. ನನ್ನ ಹೃದಯದಿಂದ ನಾನು ಹೇಳುತ್ತಿದ್ದೇನೆ. ಸ್ವಾಮಿ ವಿವೇಕಾನಂದರ ಮಾತಿನಂತೆ ಇದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಅವಕಾಶ ಕೊಟ್ಟದ್ದಕ್ಕಾಗಿ ಧನ್ಯವಾದಗಳು.

(ಮುಂದು)

**(861) 15-09-2022 (5.20) ಕೆಜಿ-ಎಕೆ (ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳು. ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ, 2022 ಅನ್ನು ಸರ್ಕಾರದ ವತಿಯಿಂದ ಮಂಡಿಸಿದ್ದಾರೆ. ನಾನು ಇದನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಈ ಕಾಯಿದೆಯನ್ನು ತರುವಂತಹ ಅವಶ್ಯಕತೆ ಇರಲಿಲ್ಲ. ನಮ್ಮ ಸಂವಿಧಾನದ ಅಡಿಯಲ್ಲಿ ಈಗಾಗಲೇ ಇರುವ ಕಾಯಿದೆಯನ್ನು ಧರ್ಮದ ಆಧಾರದ ಮೇಲೆ ದ್ವೇಷದ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಈ ಮಸೂದೆಯನ್ನು ತಂದಿದ್ದಾರೆಂದು ನಾನು ಭಾವಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಮತ್ತು ಸಂರಕ್ಷಣಾ ಕಾಯಿದೆ ರಾಜಸ್ಥಾನ, ಒರಿಸ್ಸಾ, ಅರುಣಾಚಲ ಪ್ರದೇಶ, ಗುಜರಾತ್, ಛತ್ತೀಸ್‌ಘಡ, ಜರ್ಖಂಡ್, ಉತ್ತರಖಂಡಾ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಮಧ್ಯ ಪ್ರದೇಶ ಮತ್ತು ಹರಿಯಾಣ ರಾಜ್ಯಗಳಲ್ಲಿ ಇದೆ. ಇದರಲ್ಲಿ ವಿಶೇಷವಾಗಿ 1967 ರಲ್ಲಿ ಒರಿಸ್ಸಾ ರಾಜ್ಯದಲ್ಲಿ ಈ ಕಾನೂನು ಬಂದಿದೆ. ಈ ಕಾನೂನು ಬಂದಾಗ, ಈಗ ಈ ತಿದ್ದುಪಡಿಯಲ್ಲಿ ತಂದಿರುವಂತಹ Act ಏನಿದೆ, ಇದರಲ್ಲಿ ಇರುವಂತಹ ಯಾವುದೇ ತರಹದ ಕಾಯಿದೆಗಳು 1967-78 ರಲ್ಲಿ ಇಲ್ಲ. 2003ನೇ ಸಾಲಿನಲ್ಲಿ ಗುಜರಾತ್‌ನಲ್ಲಿ ಈ ಕಾಯಿದೆಯನ್ನು ತಂದಿದ್ದಾರೆ. ಈಗ ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು

burden of proof ಬಗ್ಗೆ ಹೇಳುತ್ತಿದ್ದರು. ಈ burden of proof ಗುಜರಾತಿನಲ್ಲಿ ಇಲ್ಲ. ಈ ಕಾನೂನು ಗುಜರಾತ್‌ನಲ್ಲಿ ಇಲ್ಲ. ಇದೇ ತರಹವಾಗಿ 'prohibition on conversion by marriage', ಇದು ಗುಜರಾತ್‌ನಲ್ಲಿ ಇಲ್ಲ. ಈಗ ಸರ್ಕಾರ enquiry ಮಾಡುವುದಕ್ಕೆ ಏನು ಕೊಡುತ್ತಿದೆ, ಅದೂ ಸಹ ಗುಜರಾತ್‌ನಲ್ಲಿ ಇಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ನಾವು ಗುಜರಾತ್‌ನಲ್ಲಿ ಇಲ್ಲದಿರುವಂತಹ ಕಾನೂನನ್ನು ತಂದಿದ್ದೇವೆಂದು ಯಾರು ಹೇಳಿದ್ದಾರೆ? ಇದು ಕರ್ನಾಟಕ ರಾಜ್ಯಕ್ಕೆ ಸೀಮಿತವಾಗಿರುವ ವಿಧೇಯಕವಾಗಿದೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಏಕೆ ಈ ವಿಷಯವನ್ನು ಹೇಳುತ್ತಿದ್ದೇನೆಂದು ಮನವರಿಕೆ ಮಾಡುತ್ತೇನೆ. ಇದೇ ತರಹವಾಗಿ ಗುಜರಾತ್‌ನಲ್ಲಿ public notice ಕೊಡಬೇಕೆಂದು ಅವರ ಕಾನೂನಿನಲ್ಲಿ ಎಲ್ಲೂ ಇಲ್ಲ. Reconversion ಮಾಡುವುದಕ್ಕೆ exemption ಇದೆ ಎಂದು ಗುಜರಾತ್‌ನಲ್ಲಿ ಇಲ್ಲ. ಗುಜರಾತ್‌ನಲ್ಲಿ ಏನಿದೆ ಎಂದರೆ, 'imprisonment up to three years and fine up to Rs.೫೦,೦೦೦/-' ಮಾತ್ರ ಇದೆ. ಹೀಗೆ, ಹಲವಾರು ರಾಜ್ಯಗಳಲ್ಲಿ ಈ ಕಾನೂನನ್ನು ಲಾಗು ಮಾಡಿರುವುದನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯ "The constitutional validity of anti-conversion law in at least four states – Uttar Pradesh, Uttarakhand, Himachal Pradesh and Madhya Pradesh has been pending before the Supreme Court." ಅಂದರೆ, ಈ ಕಾನೂನು ಸಂವಿಧಾನ ಬದ್ಧವಾಗಿದೆಯೋ ಅಥವಾ ಇಲ್ಲವೋ ಎಂಬ ಬಗೆಗಿನ ವಿಷಯ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿದೆ. ಹಲವಾರು ರಾಜ್ಯಗಳಲ್ಲಿ ತಂದಿರುವಂತಹ ಕಾನೂನು, ಇದರಲ್ಲಿ ನಾಲ್ಕು ರಾಜ್ಯಗಳದ್ದು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿದೆ. ಆದರೆ, ಇನ್ನೂ ತೀರ್ಪು ಬಂದಿಲ್ಲ. ಹಾಗಾಗಿ, ಇದನ್ನು ತರಾತುರಿಯಲ್ಲಿ ತರುವುದರಲ್ಲಿ ಸರ್ಕಾರಕ್ಕೆ ಏನು ಅವಶ್ಯಕತೆ ಇದೆ ಎಂದು ನಮಗೆ ಗೊತ್ತಿಲ್ಲ. ಬಹುಶಃ ಇದರ ಹಿನ್ನೆಲೆ ಧಾರ್ಮಿಕ ಭಾವನ್ಮಾತಕ ವಿಷಯವನ್ನು ಮುಂದೆ ಇಟ್ಟುಕೊಂಡು ನಮ್ಮ ರಾಜ್ಯದಲ್ಲಿ ಈ ಮಸೂದೆಯನ್ನು ತಂದಿದ್ದಾರೆಂದು ನಾವು ಭಾವಿಸುತ್ತೇವೆ.

ಮಾನ್ಯ ಸಭಾಪತಿಯವರೇ, ಇದಷ್ಟೇ ಅಲ್ಲ, ಇದರಲ್ಲಿ ಮೊದಲನೆಯದಾಗಿ ಬಲವಂತವಾದ ಮತಂತಾರಕ್ಕೆ ನಾವೆಲ್ಲರೂ ವಿರೋಧವಾಗಿದ್ದೇವೆ. ಇಲ್ಲಿ ಇರುವವರೆಲ್ಲರೂ ಬಲವಂತವಾದ

ಮತಂತಾರಕ್ಕೆ ವಿರೋಧವಾಗಿರುವವರು. ಅದರಲ್ಲಿ dispute ಇಲ್ಲ ಮತ್ತು ಯಾವುದೇ ರೀತಿಯ ತಕರಾರು ಇಲ್ಲ. ಬಲವಂತವಾದ ಮತಂತಾರಕ್ಕೆ ಕಾಂಗ್ರೆಸ್ ಪಕ್ಷದ ವಿರೋಧವು ಇದೆ. ಮೊಟ್ಟ ಮೊದಲ ಬಾರಿಗೆ ಈ ಬಲವಂತವಾದ ಮತಾಂತರ ಕಾಯಿದೆಯ ವಿರುದ್ಧ ಭಾರತದ ಮೊದಲನೇ ಪ್ರಧಾನ ಮಂತ್ರಿಯಾದ ಶ್ರೀ ಜವಾಹರ ಲಾಲ್ ನೆಹರುರವರು ಬಲವಂತವಾದ ಮತಾಂತರ ಇದು ಅನಾಗರೀಕವಾಗಿದೆ, ಬರ್ಬರ ಮತ್ತು ಹೀನ ಕೃತ್ಯವಾಗಿದೆ ಎಂದು ಆಗಲೇ ಹೇಳಿದ್ದಾರೆ. ಈಗಾಗಲೇ ನಮ್ಮ ದೇಶದಲ್ಲಿ ಬಲವಂತವಾದ ಮತಾಂತರಕ್ಕೆ ಸಂಬಂಧಿಸಿದಂತೆ ಕಾನೂನು ಇದೆ. ಹಾಗೆಯೇ, ನಮ್ಮ ಸಂವಿಧಾನದಲ್ಲಿಯೂ ಈ ಕಾನೂನು ಇದೆ. ಈ ಕಾನೂನನ್ನು ಮತ್ತೇ ಪುನರ್‌ರೂಪಕ್ಕೆ ತಂದು ಮತ್ತೆ ಇದರಲ್ಲಿ conditions ಹಾಕಿದ್ದಾರೆ. ನಮ್ಮ ಸಂವಿಧಾನದ ವಿರುದ್ಧವಾದ condition ಗಳನ್ನು ಹಾಕಿದ್ದಾರೆ.

ಮಾನ್ಯ ಸಭಾಪತಿಯವರೇ, Article 25, Article 21 ಹೇಗೆ ಇದರ ವಿರುದ್ಧವಾಗಿದೆ ಎಂದು ಹೇಳುವುದಕ್ಕೆ ಇಚ್ಛೇಪಡುತ್ತೇನೆ. ಇದರಲ್ಲಿ ವಿಶೇಷವಾಗಿ, conversion ಮಾಡುವ ಸಂದರ್ಭದಲ್ಲಿ ಈಗ ಅವರು ಹೇಳಿದಂತೆ, ಜಿಲ್ಲಾಧಿಕಾರಿಯವರ ಬಳಿ ಅರ್ಜಿ ಹಾಕಬೇಕು, ತಹಶೀಲ್ದಾರ್‌ರವರ ಬಳಿ ಅರ್ಜಿ ಹಾಕಬೇಕು, 30 ದಿವಸಗಳವರೆಗೆ ಅದರ objection ತರಬೇಕು. ಇದನ್ನು ಯಾರಾದರೂ violate ಮಾಡಿದರೆ, ನನ್ನ ಪ್ರಕಾರ, ಆ violation ಸಂವಿಧಾನದ 'Right to Privacy' ಯ ವಿರುದ್ಧವಾಗಿದೆ. It is against the Right to Privacy. In recognising the individual's Right to Privacy, the Supreme Court in 2017 has noted that personal choices governing a way of life are intrinsic to privacy. So, this is against the constitution. ಈ ಮಸೂದೆಯಲ್ಲಿ ತಂದಿರುವಂಥದ್ದು ಇದು ನಮ್ಮ ಸಂವಿಧಾನದ ವಿರುದ್ಧವಾಗಿದೆ ಎಂದು ನಾನು ಭಾವಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಮತ್ತೆ ಇದರಲ್ಲಿ ಈಗಾಗಲೇ, Himachal Pradesh High Court ಏನು observe ಮಾಡಿದೆ ಎಂದರೆ, "The Himachal Pradesh Freedom of Religion Act, 2019 repealed the 2006 Act. And the Act does not require a public notice for religious conversion." This decision is delivered by the High Court of Himachal Pradesh. ಇದನ್ನು ಇವರು

ಅಳವಡಿಸಿದ್ದಾರೆ. ಇದರ ವಿರುದ್ಧವಾಗಿ ಯಾರಾದರೂ ನ್ಯಾಯಾಲಯಕ್ಕೆ ಹೋದರೆ, will it stand the test of law? It will not stand. So, ಸರ್ಕಾರ ತಂದಿರುವಂತಹ ವಿಧೇಯಕ ಸಂವಿಧಾನ ವಿರುದ್ಧವಾಗಿದೆ ಹಾಗೂ ನಮಗೆ ಕೊಟ್ಟಿರುವಂತಹ ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಹಲವಾರು ಉಚ್ಚ ನ್ಯಾಯಾಲಯಗಳು ಕೊಟ್ಟಿರುವಂತಹ ಆದೇಶಗಳ ವಿರುದ್ಧವಾಗಿ ಈ ಮಸೂದೆಯನ್ನ ತಂದಿದ್ದಾರೆ. ಈಗ ಸರ್ಕಾರಕ್ಕೆ majority ಇದೆ. This ordinance was promulgated on May 17, 2022. Assembly ಯಲ್ಲಿ December 2021 ನಲ್ಲಿ ಪಾಸ್ ಆಗಿದೆ. ಸರ್ಕಾರ ಇದನ್ನು ಈಗಾಗಲೇ ಜಾರಿಗೆ ತಂದಿದೆ. ಅಲ್ಲಿಂದ ಇಲ್ಲಿಯವರೆಗೆ ಎಷ್ಟು conversion ಆಗಿವೆ, ಇವರು ಎಷ್ಟು prevent ಮಾಡಿದ್ದಾರೆ, ಡಿ.ಸಿ. ಮುಂದೆ ಎಷ್ಟು ಜನ ಆಗಿದ್ದಾರೆಂಬ ಅಂಕಿ-ಸಂಖ್ಯೆಗಳನ್ನು ಸದನಕ್ಕೆ ಹೇಳಲಿ.

ಮಾನ್ಯ ಸಭಾಪತಿಯವರೇ, ನನಗೆ ಇರುವಂತಹ ಮಾಹಿತಿಯ ಪ್ರಕಾರ ಇಂತಹ ಪ್ರಕರಣಗಳು ಎಲ್ಲಿಯೂ conversion ಗೆ ಅರ್ಜಿ ಬಂದಿರುವುದಿಲ್ಲ. ಇದರದ್ದು ಏನಾದರೂ ನಿರ್ಣಯ ಆಗಿದ್ದರೆ ದಯವಿಟ್ಟು ಸರ್ಕಾರ ಸದನಕ್ಕೆ ತಿಳಿಸಬೇಕು. ಈ ಕಾನೂನಿನ ಅವಶ್ಯಕತೆ ಏನಿದೆ? ಸುಮಾರು 6-7 ತಿಂಗಳಿನಿಂದ ಈ ಕಾನೂನು ಜಾರಿಯಲ್ಲಿದೆ. ಸರ್ಕಾರ ರಾಜ್ಯಪಾಲರ ಮುಖಾಂತರ ordinance ಮಾಡಿದೆ. ಆದರೆ, ಇಲ್ಲಿಯವರೆಗೆ ಎಷ್ಟು ಜನ convert ಆಗಿದ್ದಾರೆ? ಎಷ್ಟು ಜನ conversion ನಿಂದ ವಾಪಸ್ ಬಂದಿದ್ದಾರೆ? ದಯವಿಟ್ಟು, ಈ ಮಾಹಿತಿಯನ್ನು ಸರ್ಕಾರ ಕೊಡಬೇಕು.

**(ಮುಂದು)**

**(862) 15-09-2022 (5.30) ಎಂವಿ-ವಿಕೆ (ವೈಸ್ ಛರ್ಮನ್‌ರವರ ಉಪಸ್ಥಿತಿ)**

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರಕಾಶ್ ಕೆ. ರಾಥೋಡ್‌ರವರಿಗೆ ನಾನು ಹೇಳುವುದೇನೆಂದರೆ, ನಾವು ವಿಜಯಪುರ ಜಿಲ್ಲೆ ಮತ್ತು ಬಾಗಲಕೋಟೆ ಜಿಲ್ಲೆಯಿಂದ ಬಂದಂತಹವರು. ಇವತ್ತಿಗೂ ಕೂಡ ತಾಂಡಗಳಲ್ಲಿ ನಿತ್ಯ burning issue ಯಾವ ಸ್ಥಿತಿಯಲ್ಲಿ ನಡೆಯುತ್ತಿದೆ ಎಂದು ಹೇಳಲಿ. ಮಾನ್ಯ ಸದಸ್ಯರ ಬಳಿಗೆ ನಿತ್ಯ ಸಾವಿರಾರು ದೂರುಗಳು ಬರುತ್ತಿವೆ. ಆದುದರಿಂದ ದಯವಿಟ್ಟು ಮಾನ್ಯ ಸದಸ್ಯರು ಆತ್ಮವಂಚನೆ ಮಾಡಿಕೊಂಡು ಮಾತನಾಡುವುದು ಬೇಡ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್‌ರವರು ವಿಶೇಷವಾದಂತಹ ನಮ್ಮ ಸಮಾಜದ ಲಂಬಾಣಿ ಜನಾಂಗದವರ ಮತಾಂತರದ ನಮಗೆ ಹೇಳುತ್ತಿದ್ದಾರೆ. ಈ ರೀತಿ ಆಗಿರುವಂತಹ ನಿದರ್ಶನಗಳು ನನ್ನ ಬಳಿ ಸಹ ಇದೆ. ಆದರೆ, ಸಮಾಜದ ಜವಾಬ್ದಾರಿಯುತ ಒಬ್ಬ ನಾಗರಿಕನಾಗಿ, ನನ್ನ ಸಮಾಜದಲ್ಲಿ ಯಾರು ಮತಾಂತರವಾಗುತ್ತಾರೆ ಮತ್ತು ಮತಾಂತರವಾಗಿದ್ದಾರೆ, ಅವರನ್ನು ತಡೆಹಿಡಿಯುವಂತಹ ಜವಾಬ್ದಾರಿ ನಮ್ಮ ಸಮಾಜ ಮತ್ತು ಸಮಾಜದ ಮುಖಂಡರದ್ದು. ನಮ್ಮ ಸಮಾಜದ ಧರ್ಮಗುರುಗಳು ಇದನ್ನು ಜಾಗೃತ ಮಾಡಿ, ಅದನ್ನು ತಡೆಹಿಡಿಯುವಂತಹ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್‌ರವರು ಏನಾದರೂ ಮಾತನಾಡುವುದಾದರೆ ಅನಂತರ ಮಾತನಾಡಲಿ. ಆದರೆ, ನಾನು ಹೇಳುತ್ತಿರುವುದು ಇದು ಸಂವಿಧಾನ ವಿರೋಧವಾದಂತಹ ಮತ್ತು ಹಲವಾರು ಉಚ್ಚ ನ್ಯಾಯಾಲಯಗಳಲ್ಲಿ ಇದರ ವಿರುದ್ಧ ತಡೆಯಾಗುತ್ತದೆಂದು ಭಾವಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಂದು ಆರ್ಟಿಕಲ್ 21 ಮತ್ತು 25ರ ಅಡಿ ಯಾವುದೇ ರೀತಿಯ ಅಡ್ಡಿ ಬರುವುದಿಲ್ಲವೆಂದು ಹೇಳಿದರು. *"The supreme court has held a law that with a reverse burden of proof may be constitutionally valid. If it meets the following conditions the prosecution establishes foundational facts constituting the crime. The accused does not have to prove the negative fact the accused has the knowledge of special facts. The burden of proving the innocence should not cause hardship to the accused. The Ordinance does not specify any safeguards."* ಅಂದರೆ, ಈ ವಿಧೇಯಕ ಅರ್ಟಿಕಲ್ 21ರ ವಿರುದ್ಧವಿದೆ ಎಂದು ಹೇಳುತ್ತೇನೆ. ಏಕೆಂದರೆ, owners of proof ಏನು ತಂದಿದ್ದಾರೆ, ಇದು ಆರ್ಟಿಕಲ್ 21ರ ವಿರುದ್ಧವಿದೆ. ಈಗಾಗಲೇ ಇದರ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಕೂಡ ಹೇಳಿದೆ. ಈ ವಿಧೇಯಕವನ್ನು ಏಕೆ ತಂದಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಸವದಿ ಲಕ್ಷ್ಮಣ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್‌ರವರು ಒಂದು ಮಾತನ್ನು ಹೇಳಿದರು. ಅದಕ್ಕೆ ಮಾನ್ಯ ಸದಸ್ಯರಾದ ಶ್ರೀ ಪಿ.ಹೆಚ್.ಪೂಜಾರ್‌ರವರು ಪ್ರಶ್ನೆಗಳನ್ನು ಎತ್ತಿದಾಗ, ನಾನು appreciate ಮಾಡುತ್ತೇನೆ. ಹಾಗೆಯೆ ಅವರ ಸಮಾಜ, ಅವರ ಗುರುಗಳು ಮತ್ತು ಮಾನ್ಯ ಸದಸ್ಯರನ್ನು ಅಭಿನಂದಿಸುತ್ತೇನೆ. ನಾನು ಅವರನ್ನು ಏಕೆ ಅಭಿನಂದಿಸುತ್ತೇನೆಂದರೆ, ಇಲ್ಲಿಯವರೆಗೆ ಅವರ ಸಮಾಜದ ಒಬ್ಬ ವ್ಯಕ್ತಿಯನ್ನೂ ಕೂಡ ಮತಾಂತರ ಮಾಡುವುದಕ್ಕೆ ನಾವು ಬಿಟ್ಟಿಲ್ಲವೆಂದರು. ಅದಕ್ಕೆ ಅವರಿಗೆ ಆ ಶಕ್ತಿ ಇದೆ. ಆ ಸಮಾಜದ ಗುರುಗಳಲ್ಲಿ ಆ ರೀತಿಯ ಒಗ್ಗಟ್ಟಿದೆ. ಆ ಶಕ್ತಿ ಇರುವುದರಿಂದ ಮತಾಂತರ ಮಾಡುವುದಕ್ಕೆ ಬಿಟ್ಟಿರುವುದಿಲ್ಲ. ಆದರೆ, ಅಶಕ್ತಿ ಇರತಕ್ಕಂತಹವರು, ಅಸಂಘಟನೆ ಇರತಕ್ಕಂತಹವರು, ಅಸಹಾಯಕತೆ ಇರತಕ್ಕಂತಹವರು, ಬಡತನ ಇರತಕ್ಕಂತಹವರು ಮತ್ತು ಆಸೆಗೆ ಒಳಗಾಗುವಂತಹವರಿಗೆ ಈ ಕಾನೂನಿನ ಅವಶ್ಯಕತೆ ಮತ್ತು ಆಸರೆ ಬೇಕಾಗುತ್ತದೆ. ಅದಕ್ಕೋಸ್ಕರ ಈ ವಿಧೇಯಕವನ್ನು ತರಲಾಗುತ್ತಿದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅಂದರೆ, ಯಾರು ಬಡವರು ಮತ್ತು ಅಶಕ್ತರು ಇದ್ದಾರೆ ಅವರಿಗೆ ನಾವು ರಕ್ಷಣೆ ಮಾಡಬೇಕು ಎಂದು ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಹೇಳಿದರು. ಹಾಗಾದರೆ, ನಮ್ಮ ಸಂವಿಧಾನದಲ್ಲಿ ರಕ್ಷಣೆ ಇಲ್ಲವೇ? ಈಗಾಗಲೇ ನಮ್ಮ ಸಂವಿಧಾನದಲ್ಲಿ Right to Religion Act ಪ್ರಕಾರ ನಮಗೆ ಸ್ವಾತಂತ್ರ್ಯವಿದೆ. ಅದು ಭಾರತದ ಮಾಜಿ ಪ್ರಧಾನ ಮಂತ್ರಿಗಳಾದ ದಿವಂಗತ ಜವಾಹರಲಾಲ್ ನೆಹರುರವರ ಕಾಲದಿಂದಲೂ ಸಹ ಇದೆ. ಅದು ಹೊಸದಾಗಿ ಏನು ಇಲ್ಲ. ಆದರೆ, ಈ ಕಾನೂನು ತರುವಂತಹ ಅವಶ್ಯಕತೆ ಏನು ಇರಲಿಲ್ಲ. ಏಕೆಂದರೆ, ಈಗ ತಂದಿರುವಂತಹ ಈ ಕಾನೂನಿನಲ್ಲಿ ಆರ್ಟಿಕಲ್ 21 ಮತ್ತು 25ಕ್ಕೆ ಸಂಬಂಧಿಸಿದಂತೆ, ಮಾನ್ಯ ಹೈಕೋರ್ಟ್ ಮತ್ತು ಮಾನ್ಯ ಸುಪ್ರೀಂ ಕೋರ್ಟ್ ಕೊಟ್ಟಿರುವಂತಹ ಹಲವಾರು ತೀರ್ಪುಗಳು ಇದಕ್ಕೆ ಅಡ್ಡಿ ಬರುತ್ತದೆ. ಈ ಸರ್ಕಾರ ಇಂತಹ ಒಂದು unscientific law ವನ್ನು ತಂದಿರುವುದು ಬಹುಶಃ ಇದು ಹಾಸ್ಯಾಸ್ಪದವೆಂದು ಭಾವಿಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ ತಾವು ಸ್ವಲ್ಪ ಸಹಕರಿಸಬೇಕು. ಈ ವಿಷಯವನ್ನು ಮುಗಿಸಬೇಕಾಗಿದೆ. ಇನ್ನು ಹೆಚ್ಚಿನ ಸದಸ್ಯರು ಮಾತನಾಡುವವರಿದ್ದಾರೆ. ತಾವು content ಅನ್ನು touch ಮಾಡಿದ್ದೀರಿ. ಆದುದರಿಂದ ತಾವು ವಿಷಯವನ್ನು brief ಆಗಿ ಹೇಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಸಂವಿಧಾನದ ಪರವಾಗಿ ಮತ್ತು ಆರ್ಟಿಕಲ್ ಅನ್ನು ಅಡ್ರೆಸ್ ಮಾಡುತ್ತಿದ್ದೇನೆ., ಇನ್ನು ಸಾಕಷ್ಟು ವಿಷಯಗಳಿವೆ ಅದನ್ನು ಪ್ರಸ್ತಾಪ ಮಾಡುತ್ತೇನೆ. ಮತ್ತೊಂದರ Ordinance ನಲ್ಲಿ clause No.೮ and ೯ರಲ್ಲಿ ಏನು ಹೇಳುತ್ತಾರೆಂದರೆ; "*The DC conducts an enquiry and decides whether the conversion is valid and legal. The ordinance does not provide for an appeal mechanism for parties aggrieved by the DC decision. Additionally, there is no time limit prescribed for the DC to make a decision regarding a religious conversion.*" In other states also it is there. ಈ ಒಂದು ಆರ್ಟಿಕಲ್‌ನಲ್ಲಿ ಜಿಲ್ಲಾಧಿಕಾರಿಗೆ ಏನು ಒಂದು power ಕೊಟ್ಟಿದ್ದಾರೆ, ಆ power ನಲ್ಲಿ ಯಾವುದೇ ರೀತಿಯ time limit ಇಲ್ಲ. ಇವತ್ತು ನಾನು ನೊಂದಿರುವಂತಹವನು ಜಿಲ್ಲಾಧಿಕಾರಿಯ ಮುಂದೆ ಅರ್ಜಿ ಹಾಕುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡರು ಹಲವಾರು ರೀತಿಯ ಉದಾಹರಣೆಗಳನ್ನು ನೀಡಿದ್ದಾರೆ. ಇದನ್ನು ಇಷ್ಟೇ ಸಮಯದಲ್ಲಿ ನಿರ್ಣಯ ಮಾಡುತ್ತೇವೆ ಎನ್ನುವುದು ಎಲ್ಲೂ ಇಲ್ಲವೇ ಇಲ್ಲ. ಜಿಲ್ಲಾಧಿಕಾರಿ ಆರು ತಿಂಗಳು, ಒಂದು ವರ್ಷ ಹಾಗೂ ಎರಡು ವರ್ಷದವರೆಗೆ ಆ ಕಡತವನ್ನು ತಮ್ಮ ಬಳಿಯೇ ಇಟ್ಟುಕೊಳ್ಳುತ್ತಾರೆ. ಈ ರೀತಿಯ ಸಮಸ್ಯೆಯಾದರೆ ಇದು ಏನಾಗುತ್ತದೆ. There is no clarity on this and there is no time limit also. ಅವರು ಈ ರೀತಿಯಲ್ಲಿ ತರಾತುರಿಯಲ್ಲಿ ಕಾನೂನನ್ನು ತಂದು, ತಾವು ವಿಶೇಷವಾಗಿ ಇದನ್ನು ordinance ಅನ್ನು ತಂದಿದ್ದೀರಿ. ಆರೇಳು ತಿಂಗಳ ಕಾಲದ ಹಿಂದೆಯೇ ಈ ಕಾನೂನನ್ನು ಜಾರಿಗೆ ತಂದಿದ್ದಾರೆ. ಆದರೂ ಸಹ ಇಷ್ಟು

ಲೋಪದೋಷಗಳು ಇರುವಂತಹ ಕಾನೂನನ್ನು ಇವತ್ತಿನವರೆಗೆ ಸರಿಪಡಿಸುವುದಕ್ಕೆ ಆಗಲಿಲ್ಲವೆಂದರೆ, ಇದನ್ನು ತಂದಿರುವುದೇ ಅವೈಜ್ಞಾನಿಕವಾದ ಕಾನೂನು ಎಂದು ಭಾವಿಸುತ್ತೇವೆ.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ ತುಂಬಾ ಸಮಯವಾಗಿದೆ. ನಾನು ಇನ್ನು ಹೆಚ್ಚಿನ ಸದಸ್ಯರು ಮಾತನಾಡಲು ಅವಕಾಶ ನೀಡಬೇಕಾಗಿದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಇದರಲ್ಲಿ ಮತ್ತೊಂದು ಏನಿದೆ ಎಂದರೆ, ಇದರಲ್ಲಿ ಶಿಕ್ಷೆ ಎಂದು ಇದೆ. ಈಗ ಎಲ್ಲರಿಗೂ ಸಹ ಒಂದೇ ರೀತಿಯ ಶಿಕ್ಷೆ ಇರಬೇಕಲ್ಲವೇ? ಪರಿಶಿಷ್ಟ ಜಾತಿಯವರಿಗೆ ಒಂದು ರೀತಿಯ ಶಿಕ್ಷೆ ಇದೆ. ಮಹಿಳೆಯರಿಗೆ ಒಂದು ರೀತಿಯ ಶಿಕ್ಷೆ ಇದೆ. ಸಾಮಾನ್ಯ ಜನರಿಗಾದರೆ ಒಂದು ರೀತಿಯ ಶಿಕ್ಷೆ ಇದೆ. ಅವರು ಏನು ಹೇಳುತ್ತಾರೆಂದು ನನಗೆ ಗೊತ್ತಿದೆ. ಅಂದರೆ, ವಿಶೇಷವಾಗಿ ಪರಿಶಿಷ್ಟ ಜಾತಿಯವರಿಗೆ ಮತ್ತು ಮಹಿಳೆಯರಿಗೆ ರಕ್ಷಣೆ ಕೊಡುವುದಕ್ಕೋಸ್ಕರ ಈ ಕಾನೂನು ತಂದಿದ್ದೇವೆಂದು ಹೇಳುತ್ತಾರೆ. ಅಂದರೆ, ನಾವು ಪರಿಶಿಷ್ಟ ಜಾತಿಯಲ್ಲಿ ಇರುವಂತಹವರೆಲ್ಲರೂ ಸಹ ಬುದ್ಧಿಗೇಡಿಗಳೇ? ನಮ್ಮ ಬಳಿ ನಿರ್ಣಯ ತೆಗೆದುಕೊಳ್ಳುವಂತಹ ಶಕ್ತಿ ಇಲ್ಲವೇ? ಸಾವಿರಾರು ವರ್ಷಗಳಿಂದ ಶೋಷಣೆಗೆ ಒಳಗಾದಂತಹ ನಮಗೆ ಇವತ್ತಿಗೂ ಸಹ ತಾರತಮ್ಯ ಮಾಡಿ, ನಮ್ಮ ಜನಾಂಗಕ್ಕೆ ರಕ್ಷಣೆ ಕೊಡುವ ನೆಪದಲ್ಲಿ, ಈ ರೀತಿಯ ಒಂದು ಕಾನೂನನ್ನು ತಂದು, ಬೇರೆಯವರ ಜೊತೆಗೆ ನಮ್ಮನ್ನು ತಾರತಮ್ಯದಿಂದ ನೋಡುತ್ತಿರುವ ಈ ಪ್ರವೃತ್ತಿಯನ್ನು ಖಂಡನೀಯವೆಂದು ಹೇಳುತ್ತೇನೆ. ಕೇವಲ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ರಕ್ಷಣೆ ಕೊಡುವ ನೆಪದಲ್ಲಿ, ನಮ್ಮನ್ನು ತಾರತಮ್ಯ ಮಾಡಿ, ಇವತ್ತು ಪರಿಶಿಷ್ಟ ಜಾತಿಯವರಿಗೆ ಒಂದು ರೀತಿಯ ಶಿಕ್ಷೆ ಮತ್ತು ಸಾಮಾನ್ಯ ಜನರಿಗೆ ಒಂದು ರೀತಿಯ ಶಿಕ್ಷೆ ಕೊಡುವಂತಹ ಈ ಕಾನೂನು ಸರಿಯಿಲ್ಲವೆಂದು ನಾನು ಭಾವಿಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ, repeat ಮಾಡಬೇಡಿ, ನಿಮ್ಮ ಮಾತನ್ನು ಬೇಗ ಮುಕ್ತಾಯಗೊಳಿಸಿ.

**ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ಸಣ್ಣ clarification ಮಾಡುತ್ತೇನೆ. ಏಕೆಂದರೆ, ಅದು ತಪ್ಪಾಗಬಾರದು.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ, ತುಂಬಾ ಸಮಯವಾಗಿದೆ. ನಾನು ಬೇರೆಯವರಿಗೂ ಸಹ ಅವಕಾಶ ನೀಡಬೇಕು. ಇನ್ನು ಮಾತನಾಡುವಂತಹ ಹೆಚ್ಚಿನ ಸದಸ್ಯರಿದ್ದಾರೆ. ಮಾತನಾಡಲು ಎಲ್ಲರಿಗೂ ಅವಕಾಶ ಕೊಡಬೇಕಲ್ಲವೇ? ಏಕೆಂದರೆ, ಇದು ಒಂದು ಮಹತ್ವದ ವಿಧೇಯಕವಾಗಿದೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ,....

**ಡಾ.ಕೆ.ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ತಮ್ಮ ಮಾತುಗಳನ್ನು ಮುಗಿಸಿಬಿಡಲಿ. ಆಮೇಲೆ ಮಾನ್ಯ ಗೃಹ ಸಚಿವರು ಒಟ್ಟಿಗೆ clarification ಮಾಡಲಿ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ರೆಕಾರ್ಡ್‌ಗೆ ತಪ್ಪಾಗಿ ಹೋಗಬಾರದು ಎನ್ನುವ ಕಾರಣಕ್ಕಾಗಿ ಒಂದು ವಿಷಯವನ್ನು ಹೇಳುತ್ತೇನೆ. ದಯವಿಟ್ಟು ಇಲ್ಲಿ ನೋಡಿ, ಅಪ್ರಾಪ್ತ ಅಥವಾ ಅಸ್ವಸ್ಥಚಿತ್ತ ವ್ಯಕ್ತಿ ಅಥವಾ ಮಹಿಳೆ ಅಥವಾ ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದ ವ್ಯಕ್ತಿಯ ಸಂದರ್ಭದಲ್ಲಿ ಶಿಕ್ಷೆ ಜಾಸ್ತಿ ಎಂದು ಇದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಪರಿಶಿಷ್ಟ ಜಾತಿಯವರು ಅಪ್ರಾಪ್ತರು ಮತ್ತು ಅವರಿಗೆ ಬುದ್ಧಿ ಇಲ್ಲವೆಂದು ಆಯಿತೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಇದರ ಆಶಯ ಆ ರೀತಿ ಅಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಪರಿಶಿಷ್ಟ ಜಾತಿ ಮತ್ತು ಮಹಿಳೆಯರನ್ನು ಅಪ್ರಾಪ್ತರ ಜೊತೆಯಲ್ಲಿ ಹೋಲಿಸುತ್ತಿದ್ದಾರೆ. ಹಾಗಾದರೆ, ಮಹಿಳೆಯರಿಗೆ ಶಕ್ತಿ ಇಲ್ಲವೇ? ಅವರು ಈ ರೀತಿಯ ಕಾನೂನನ್ನು ಏಕೆ ತರುತ್ತಿದ್ದಾರೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಹಿಳೆಯರಿಗೆ ಶಕ್ತಿ ಇಲ್ಲವೆಂದು ಅಲ್ಲ. ಮಾನ್ಯ ಸದಸ್ಯರು ಈ ರೀತಿಯ ಪ್ರಚೋದನೆಗೆ ಒಳಗಾಗುವುದು ಒಳ್ಳೆಯದಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರು ಈ ರೀತಿಯ ಕಾನೂನನ್ನು ತಂದು ಪ್ರಚೋದನೆಯನ್ನು ಮಾಡುತ್ತಿದ್ದಾರೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ರೀತಿ declare ಮಾಡಿಕೊಂಡು ಹೋಗುವಂತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡಿದಾಗ, ಈಗ ಎಲ್ಲಾ ದೃಷ್ಟಿಯಿಂದಲೂ ಸಮಸ್ಯೆ.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ ತಾವು ಪೀಠವನ್ನು ನೋಡಿಕೊಂಡು ಮಾತನಾಡಿ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ದಯವಿಟ್ಟು ಮಾನ್ಯ ಸದಸ್ಯರು ವಿಧೇಯಕವನ್ನು ಓದಿ ಸರಿಯಾಗಿ ಅರ್ಥ ಮಾಡಿಕೊಳ್ಳಲಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಓದಿ ಸರಿಯಾಗಿ ಅರ್ಥ ಮಾಡಿಕೊಂಡಿದ್ದೇನೆ.

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೆ, ಸಂವಹನ ಮಾಡಿ, ಸಂಘರ್ಷ ಬೇಡ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನನಗೆ ನೋವಾಗುತ್ತದೆ. ನಾನು ಪರಿಶಿಷ್ಟ ಜಾತಿಯಿಂದ ಬಂದಂತಹವನು. ನಾನು ಶೋಷಣೆಗೆ ಒಳಗಾಗಿರುವಂತಹವನು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರ ಅಭಿಪ್ರಾಯವನ್ನು ಗಮನಿಸಬೇಕು. ಅದೇ ರೀತಿ ಮಾನ್ಯ ಸದಸ್ಯರಾದ ಛಲವಾದಿ ಟಿ. ನಾರಾಯಣಸ್ವಾಮಿಯವರ ಅಭಿಪ್ರಾಯವನ್ನು ಸಹ ಗಮನಿಸಬೇಕು. ಎಲ್ಲರ ಅಭಿಪ್ರಾಯವನ್ನು ಕ್ರೋಢೀಕರಿಸಿ ಈ ವಿಧೇಯಕವನ್ನು ತರಲಾಗಿದೆ. ಈ ವಿಧೇಯಕವನ್ನು ಸ್ವಾಗತಿಸಬೇಕೆಂದು ನನ್ನ ವಿನಂತಿ.

**ವೈಸ್ ಛೇರ್ಮನ್:-** ಆಮೇಲೆ ಸರ್ಕಾರ ಉತ್ತರ ನೀಡುವಾಗ, ಮಾನ್ಯ ಸದಸ್ಯರ ಆತಂಕಗಳಿಗೆ ಸಮಂಜಸವಾದ ಉತ್ತರವನ್ನು ನೀಡಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಛಲವಾದಿ ಟಿ. ನಾರಾಯಣಸ್ವಾಮಿಯವರು ನನ್ನ ಸ್ನೇಹಿತರು. ಅವರು ಸದನದಲ್ಲಿ ಮೊದಲ ಬಾರಿಗೆ ಮಾತನಾಡಿದ್ದಾರೆಂದು ನಾನು ಅದಕ್ಕೆ ಯಾವುದೇ ರೀತಿಯ ಟೀಕೆ-ಟಿಪ್ಪಣಿ ಮಾಡುವುದಕ್ಕೆ ಹೋಗಲಿಲ್ಲ. ಅವರು ಸದನದಲ್ಲಿ ತಮ್ಮ ಅನಿಸಿಕೆಯನ್ನು ಹೇಳುವುದಕ್ಕೆ ಎಲ್ಲಾ ರೀತಿಯ ಅವಕಾಶವಿದೆ. ಅದಕ್ಕೆ ಅವರು ತಮ್ಮ ಅನಿಸಿಕೆಯನ್ನು ಹೇಳಿದ್ದಾರೆ. ನಾನು ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಅಧಿಕಾರವಿದೆ. ನಾನು ಸರ್ಕಾರದ ಗಮನಕ್ಕೆ ತರುತ್ತಿರುವುದು ಏನೆಂದರೆ, ಶೋಷಣೆಗೆ ಒಳಗಾದ ನಮ್ಮನ್ನು ಮತ್ತೆ ಶೋಷಣೆಗೆ ಒಳಪಡಿಸುತ್ತಿದ್ದೀರಿ ಎಂದು ಸರ್ಕಾರಕ್ಕೆ ಇದು ನನ್ನ ಅಪಾಧನೆ. ಅವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ವಿರುದ್ಧ ಈ ಒಂದು ಕಾನೂನಿನ ಮೂಲಕ ಶಿಕ್ಷೆ ಕೊಡುವುದಕ್ಕೆ ತಂದಿದ್ದಾರೆ. ಅವರು ನಮಗೆ ನೋವುಂಟು ಮಾಡಿದ್ದಾರೆ. ನಾವು ಹಲವಾರು ವರ್ಷಗಳಿಂದ ಶೋಷಣೆಗೆ ಒಳಗಾಗಿದ್ದಂತಹವರಿಗೆ ಮತ್ತೆ ಅದೇ ರೀತಿ ಮಾಡುವುದು ಬೇಡ. ಇದರಿಂದ ನಮಗೆ ಬಹಳ ನೋವಾಗುತ್ತಿದೆ.

**ವೈಸ್ ಛೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೆ ತಾವು ಬೇಗ ತಮ್ಮ ಮಾತನ್ನು ಮುಗಿಸಿ. ನಾನು ಎಲ್ಲರಿಗೂ ಸಹ ಅವಕಾಶ ನೀಡಬೇಕು.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಆಯಿತು conclude ಮಾಡುತ್ತೇನೆ. ನಾನು ಹೇಳುವುದು ಏನೆಂದರೆ, ಸರ್ಕಾರ ಈ ಒಂದು ಕಾಯಿದೆಯನ್ನು ತಂದಿರುವುದು ಸಂವಿಧಾನ ಮತ್ತು ಆರ್ಟಿಕಲ್ 21 ಮತ್ತು 25ರ ವಿರುದ್ಧವಿದೆ. ಅದೇ ರೀತಿ ಹಿಮಾಚಲ ಪ್ರದೇಶದ ಉಚ್ಚ ನ್ಯಾಯಾಲಯ ಮತ್ತು ಹಲವಾರು ಉಚ್ಛ ನ್ಯಾಯಾಲಯಗಳ ಏನು ನಿರ್ಣಯವಿದೆ, ಅವುಗಳ ವಿರುದ್ಧ ವಿಧೇಯಕವನ್ನು ತಂದಿದ್ದಾರೆ.

**(ಮುಂದು)**

(863) 15.09.2022 05.40 LL-VK **(ವೈಸ್ ಚೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಪ್ರಕಾಶ್ ಕೆ. ರಾಥೋಡ್(ಮುಂದು):-**

ಅಲ್ಲದೆ, 4 ರಾಜ್ಯಗಳಲ್ಲಿ ಏನು ಸ್ಟೇ ಆರ್ಡರ್ ಇದೆ, ಆ ಸ್ಟೇ ಆರ್ಡರ್‌ನ ವಿರುದ್ಧ ತಾವು ಈ ಕಾನೂನನ್ನು ತಂದಿದ್ದೀರಿ. ನಾಳೆಯ ದಿವಸ ಇದು ತಿರಸ್ಕಾರ ಆಗುತ್ತದೆ ಮತ್ತು ಇದು ಅಸಂವಿಧಾನಿಕ ಎಂದು ಹೇಳುತ್ತಾರೆ. ಆದುದರಿಂದ, ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಇವೊತ್ತಿನ ದಿವಸ ಏನು ವಿಧೇಯಕವನ್ನು ತಿದ್ದುಪಡಿಗೆ ತಂದಿದ್ದಾರೆ, ಇದು ಕಾನೂನಿನಿಂದ ವಿಶೇಷವಾಗಿ... ನನಗೆ ಗೊತ್ತಿಲ್ಲ. ಆದರೆ,

**ವೈಸ್ ಚೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, please conclude. ನಾನು ಶ್ರೀಮತಿ ಭಾರತಿಶೆಟ್ಟಿಯವರನ್ನು ಕರೆದಿದ್ದೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, I am concluding. ನಾನು ಹೇಳುವುದೇನೆಂದರೆ, ನಾವೆಲ್ಲರೂ ಒಂದು ಸಮುದಾಯದ ವಿರುದ್ಧ ಈ ರೀತಿ ಮತಾಂತರ ಮಾಡುತ್ತಾರೆಂದು ಹೇಳುವ ಅವಶ್ಯಕತೆ ಇಲ್ಲ. ನಾನು

ಒಬ್ಬ ಪರಿಶಿಷ್ಟ ಜಾತಿಯಿಂದ ಬಂದವನು. ನಾನು ಕಲಿತಿದ್ದು ಎಲ್ಲಿ ಎಂದರೆ, ಮೊದಲು ಸೈನಿಕ್ ಸ್ಕೂಲ್‌ನಲ್ಲಿ ಕಲಿತಿರುವುದು. ಅದಾದ ಮೇಲೆ, ಗುಲಾಬಿ ಪ್ರೈಮರಿ ಸ್ಕೂಲ್. ತದನಂತರ, St Joseph's Indian High School, St Joseph's College of Commerce ಎಲ್ಲಾ ಇದು ಕ್ರೈಸ್ಟ್ ಸಂಸ್ಥೆಗಳು. ಈ ಸಂಸ್ಥೆಗಳು ಇವೊತ್ತಿನವರೆಗೂ, "ನೀನು ಕ್ರಿಶ್ಚಿಯನ್ ಸಮಾಜಕ್ಕೆ ಬಾ, ನೀನು ಚರ್ಚ್‌ಗೆ ಬಾ" ಎಂದು ಒಂದು ದಿನವೂ ಸಹ ಹೇಳಿರುವುದಿಲ್ಲ. ನಾನು ಒಬ್ಬ ಹಿಂದು ಇದ್ದೇನೆ. ನನ್ನ ಹಿಂದು ಧರ್ಮವನ್ನು ಕಾಪಾಡುವುದಕ್ಕೆ ನನಗೆ ಶಿಕ್ಷಣ ಕೊಟ್ಟಿರುವುದು St Joseph's Indian High School, St Joseph's College of Commerce.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಆ ಶಾಲಾ-ಕಾಲೇಜುಗಳಲ್ಲಿ ಆಡಳಿತ ಪಕ್ಷದ ಸದಸ್ಯರ ಮಕ್ಕಳು ಇವೊತ್ತಿನ ದಿವಸ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಮತ್ತು ಮಾಡಿದ್ದಾರೆಂಬ ಬಗ್ಗೆ ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಒಂದು ಸಮುದಾಯದ ವಿರುದ್ಧ ಅವರು ಹೇಳುವುದಕ್ಕೆ ಮೊದಲು ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅವರ ಎಷ್ಟು ಜನ ಮಕ್ಕಳು ಈ ಶಾಲಾ-ಕಾಲೇಜಿನಲ್ಲಿ ಓದುತ್ತಿದ್ದಾರೆ? ಎಷ್ಟು ಜನ ಫಾರಿನ್‌ಗೆ ಹೋಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆಂದು ಆತ್ಮಾವಲೋಕನ ಮಾಡಿಕೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾವು ಈ ವಿಧೇಯಕದಲ್ಲಿ ಯಾವುದೇ ಸಮುದಾಯದ ಬಗ್ಗೆ ಮಾತನಾಡಿರುವುದಿಲ್ಲ. ಮಾನ್ಯ ಸದಸ್ಯರು ಏತಕ್ಕೆ ಈ ರೀತಿ ಮಾತನಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಅವರು ಮೊದಲು ಆತ್ಮಾವಲೋಕನ ಮಾಡಿಕೊಳ್ಳಬೇಕು.

**(ಗೊಂದಲ)**

**ಶ್ರೀ ಕೆ. ಅಬ್ದುಲ್ ಜಬ್ಬರ್:-** ಮಾನ್ಯ ಸಭಾಪತಿಯವರೇ, ಯಾವ ಸಮುದಾಯ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಯಾರು ವಂಚನೆಯಿಂದ ಮತಾಂತರ ಮಾಡುವುದನ್ನು ಮಾತ್ರ ನಿಷೇಧ ಮಾಡುವುದಕ್ಕೆ ಈ ವಿಧೇಯಕವನ್ನು ತಿದ್ದುಪಡಿಗೆ ತಂದಿದ್ದೇವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಾನು ನನ್ನ ಅಭಿಪ್ರಾಯವನ್ನು ಹೇಳಲೇಬೇಕು. ಅವರು ಈ ರೀತಿ ಅಡ್ಡಿಪಡಿಸಿದರೆ ಹೇಗೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, "ಒಂದು ಧರ್ಮವನ್ನು ಗುರಿಯಾಗಿಟ್ಟುಕೊಂಡು" ಎಂದು ಹೇಳುತ್ತಿದ್ದಾರಲ್ಲ...

**(ಗೊಂದಲ)**

**ವೈಸ್ ಚೇರ್ಮನ್:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ, ತಾವು ಹಿರಿಯ ಸದಸ್ಯರಿದ್ದೀರಿ. ಈ ರೀತಿಯ ವಾಗ್ವಾದದಿಂದ ಏನೂ ಪ್ರಯೋಜನ ಆಗುವುದಿಲ್ಲ. ತಾವು ತಮ್ಮ ಅಭಿಪ್ರಾಯಗಳನ್ನು ಹೇಳಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಮ್ಮ ಸದಸ್ಯರು ಮಾತನಾಡುವ ಪ್ರತಿ ಮಾತಿಗೂ ಮಾನ್ಯ ಸಭಾನಾಯಕರು ಈ ರೀತಿ ಅಡ್ಡಿಪಡಿಸುವುದು ಸರಿಯಲ್ಲ. ನಮ್ಮ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಹಕ್ಕು ಇದೆ. ಅದಕ್ಕೆ ಮಾನ್ಯ

ಗೃಹ ಸಚಿವರು ಉತ್ತರ ನೀಡುವಾಗ ಹೇಳಲಿ. ಅದರ ಬದಲಾಗಿ, ಮಾತು ಮಾತಿಗೆ ಈ ರೀತಿ ಅಡ್ಡಿಪಡಿಸಿದರೆ ಹೇಗೆ?

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ನನ್ನ ಅಭಿಪ್ರಾಯಕ್ಕೆ ಉತ್ತರ ನೀಡಲಿ. ನಾನು ನನ್ನ ಮಾತನ್ನು ಮುಗಿಸುತ್ತೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಷಯದಲ್ಲಿ ಸ್ಪಷ್ಟತೆ ಕೊಡಬೇಕಾಗಿರುವುದು ಸರ್ಕಾರದ ಜವಾಬ್ದಾರಿ. ಆದರೆ, ವಿರೋಧ ಪಕ್ಷದವರು ಪದೇ ಪದೇ ಒಂದು ಸಮುದಾಯ ಎಂದು ಹೇಳುತ್ತಿದ್ದಾರೆ. ಆದರೆ, ನಾವು ಯಾವುದೇ ಸಮುದಾಯದ ವಿರುದ್ಧ ಈ ವಿಧೇಯಕವನ್ನು ತಿದ್ದುಪಡಿಗೆ ತಂದಿರುವುದಿಲ್ಲ.

**(ಗೊಂದಲ)**

**ಡಾ: ಕೆ. ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬೇರೆ ಏನೂ ಹೇಳಿರುವುದಿಲ್ಲ. ಅವರು ಬಹಳ ಲೈಟ್ ಆಗಿ ಹೇಳಿರುವುದೇನೆಂದರೆ, ಎಲ್ಲರ ಮಕ್ಕಳು ಕ್ರಿಶ್ಚಿಯನ್ ಸ್ಕೂಲ್‌ನಲ್ಲಿ ಓದುತ್ತಾರೆ, ಯಾರೂ ಅಪಾರ್ಥ ಮಾಡಿಕೊಳ್ಳಬಾರದೆಂದು ಹೇಳಿದರು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ನಾವೆಲ್ಲರೂ ಈ ಸಮಾಜದಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಎಲ್ಲಾ ಸಮಾಜದವರು ನಮಗೆ ಶಿಕ್ಷಣ ಕೊಡುವುದರಲ್ಲಿ ಸಾಕಷ್ಟು ಕೆಲಸವನ್ನು ಮಾಡಿದ್ದಾರೆ. To become a good citizen. ನಮಗೆ ಏನು ಶಿಕ್ಷಣ ಬೇಕು

ಅದನ್ನು ಕೊಟ್ಟಿದ್ದಾರೆ. ಅದಕ್ಕೆ ತಾವು ಯಾವುದೇ ಒಂದು ಸಮುದಾಯವನ್ನು ಗುರಿ ಮಾಡಬಾರದು. ಅದು ಹಿಂದೂ, ಮುಸಲ್ಮಾನ್, ಕ್ರಿಶ್ಚಿಯನ್, ಜೈನರು, ಸಿಖ್‌ರು ಅಥವಾ ಯಾವುದೇ ಸಮುದಾಯದವರು ಇರಬಹುದು, ನಾವೆಲ್ಲರನ್ನೂ ಭಾರತದ ಪ್ರಜೆಗಳು, ನಮಗೆ ಸಂವಿಧಾನಬದ್ಧವಾದ ಹಕ್ಕು ಇದೆ, ನಾವು ಶೋಷಣೆಗೆ ಒಳಗಾಗಿದ್ದೇವೆ, ಸಂವಿಧಾನದಲ್ಲಿ ನಮಗೆ ಮೀಸಲಾತಿ ಇದೆ, ನಮಗೆ ಇನ್ನೂ ಸಾವಿರಾರು ವರ್ಷ ಮೀಸಲಾತಿ ನೀಡಿದರೂ ಸಹ ಸಮಾಜದಲ್ಲಿ ನಾವು ಮುಂದೆ ಬರುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ, ಈ ವಿಧೇಯಕವನ್ನು ತಿದ್ದುಪಡಿಗೆ ತರಬಾರದೆಂದು ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಸರ್ಕಾರ ತಂದಿರುವಂತಹ ಈ ಒಂದು ಮತಾಂತರ ವಿಧೇಯಕವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಮತಾಂತರದಲ್ಲಿ ಎರಡು ವಿಧಗಳಿವೆ. ಒಂದು ಕಡೆ ಸ್ವ-ಇಚ್ಛೆಯಿಂದ ಮತಾಂತರ ಆಗುತ್ತಾರೆ. ಅದರಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ. ಇನ್ನೊಂದು ಕಡೆ ಆಮಿಷಗಳನ್ನು ಕೊಟ್ಟು, ಮತಾಂತರ ಮಾಡುವಂಥದ್ದು, ಒಂದು ವ್ಯವಸ್ಥಿತವಾದ ಜಾಲ ಇದೆ. ಇದು ಈಗಿನ ವಿಚಾರವಲ್ಲ. ಸ್ವಾತಂತ್ರ್ಯ ಪೂರ್ವದಿಂದ ಕೂಡ ಈ ದೇಶದಲ್ಲಿ ಇದು ನಡೆಯುತ್ತಾ ಬಂದಿದೆ. ಈ ಮತಾಂತರ ಮಾಡುವಂತಹ ಒಂದು ಜಾಲ ಸಕ್ರಿಯವಾಗಿದೆ. ಮತಾಂತರಕ್ಕೆ ಒಡ್ಡುವಂತಹ ಆಮಿಷಗಳ ಬಗ್ಗೆ ಅನೇಕ ಜನ ಮಾನ್ಯ ಸದಸ್ಯರು ಹೇಳಿದರು. ಅದರಲ್ಲಿಯೂ ಕೂಡ, ನನ್ನ ಧರ್ಮಕ್ಕೆ ಆದಂತಹ ಮತ್ತು ನನ್ನ ಧರ್ಮಗಳಲ್ಲಿ ಆದಂತಹ ಮತಾಂತರ ಬಹುಶಃ ಬೇರೆ ಯಾವುದೇ ಧರ್ಮದಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. ಇವೊತ್ತಿನ ದಿವಸ ನಾನು ನನ್ನ ಧರ್ಮವನ್ನು ಪ್ರೀತಿಸಬೇಕು, ಇತರ ಧರ್ಮವನ್ನು ಗೌರವಿಸಬೇಕು. ಇದನ್ನು ಕಲಿತುಕೊಂಡು ಬೆಳೆದು ಬಂದಂತಹವಳು ನಾನು. ಇವೊತ್ತಿನ ದಿವಸ ಇದು ಆದ್ಯ ಕರ್ತವ್ಯವಾಗಿದೆ. ಅದು ಯಾವುದೇ ಸರ್ಕಾರ ಆಗಿರಬಹುದು. ಆ ಸರ್ಕಾರದ ಆದ್ಯ ಕರ್ತವ್ಯವೇನೆಂದರೆ, ಸಮಾಜದಲ್ಲಿರತಕ್ಕಂತಹ ಎಲ್ಲಾ ಧರ್ಮಕ್ಕೆ ರಕ್ಷಣೆ ಕೊಡುವಂತಹ ಕೆಲಸವನ್ನು ಮಾಡುತ್ತದೆ ಮತ್ತು

ಮಾಡಬೇಕು. ಆ ರಕ್ಷಣೆ ಕೊಡುವಂತಹ ಕೆಲಸವನ್ನು ಯಾವಾಗ ಮಾಡಿದ್ದಾರೆ? ಈ ಸಮಾಜದಲ್ಲಿ ನಿರಂತರವಾಗಿ ಹಿಂದೂ ಧರ್ಮದ ಮೇಲೆ ಮತಾಂತರದ ದಾಳಿ ನಡೆಯುತ್ತಾ ಬರುತ್ತಿದೆಯಲ್ಲಾ, ಇದಕ್ಕೆ ಯಾರು ಕಡಿವಾಣ ಹಾಕುವಂತಹ ಕೆಲಸವನ್ನು ಮಾಡಿದ್ದಾರೆ? ಬಹಳ ನಿರೀಕ್ಷೆಯಿಂದ; ಇದರಲ್ಲಿ ನೊಂದು–ಬೆಂದವರು ನಾವು. ಹಿಂದೂ ಧರ್ಮದಲ್ಲಿ ಅನೇಕ ಬೇರೆ ಬೇರೆ ಪದ್ಧತಿಗಳು ಇರುತ್ತವೆ ಎಂದು ಅನೇಕ ಮಾನ್ಯ ಸದಸ್ಯರು ಹೇಳುತ್ತಾರೆ. ಯಾವ ಧರ್ಮದಲ್ಲಿ ಅನಿಷ್ಠ ಪದ್ಧತಿಗಳು ಇರುವುದಿಲ್ಲ? ಎಲ್ಲಾ ಧರ್ಮಗಳಲ್ಲಿಯೂ ಸಹ ಅನಿಷ್ಠ ಪದ್ಧತಿ ಇದೆ. ಹಿಂದೂ ಧರ್ಮದಲ್ಲಿಯೂ ಸಹ ಅನಿಷ್ಠ ಪದ್ಧತಿ ಇರಬಹುದು. ಆದರೆ, ಅದು ಆಚರಣೆ. ಉದಾಹರಣೆಗೆ, ಇವೊತ್ತಿನ ದಿವಸ ಹಿಂದೂ ಧರ್ಮದಲ್ಲಿರುವಂತಹ ಮಡೆಸ್ನಾನ, ಬೆತ್ತಲೆಸೇವೆ, ಬಾಲ್ಯವಿವಾಹ, ಸತಿ ಸಹಗಮನ ಪದ್ಧತಿ ಆಗಿರಬಹುದು, ಇವೆಲ್ಲವನ್ನೂ ಹಿಂದೂ ಧರ್ಮ ನಿಲ್ಲಿಸಿಲ್ಲವೇ? ಈ ಕಾರಣಕ್ಕಾಗಿ, ಅವರು ಬೆಂದು, ಬೇಸತ್ತು ಬೇರೆ ಧರ್ಮಕ್ಕೆ ಹೋಗುತ್ತಾರೆಂಬ ಉಲ್ಲೇಖವನ್ನು ಬಹಳ ಸದಸ್ಯರು ಮಾಡಿದರು. ಆದರೆ, ಇದೆಲ್ಲಾ ಕಾರಣ ಅಲ್ಲ. ಇದು ಕೇವಲ ಹಿಂದುಳಿದ ವರ್ಗದವರದ್ದು, ಎಸ್.ಸಿ/ಎಸ್.ಟಿ. ವಿಭಾಗಕ್ಕೆ ಹೋಗಿ ಮತಾಂತರ ಮಾಡುವುದು ಒಂದು ಭಾಗ. ನಾನು ಒಂದು ಬಾರಿ ಮಾಗಡಿಗೆ ವಿಸ್ತಾರಕಳಾಗಿ ಹೋಗಿ, ಅಲ್ಲಿ ಹದಿನೈದು ದಿವಸ ಇದ್ದೆನು. ಇದು ಯಾರೋ ಹೇಳಿದ ಕಥೆಯನ್ನು ಹೇಳುತ್ತಿಲ್ಲ ಅಥವಾ ಯಾರೋ ಹೇಳಿದಂತಹ ಕೋಡ್ ಅನ್ನು ಕೋಟ್ ಮಾಡುತ್ತಿಲ್ಲ. ಇದು ನನ್ನ ಸ್ವಂತ ಅನುಭವ. ನಾನು ಮಾಗಡಿಗೆ ಹೋದಂತಹ ಸಂದರ್ಭದಲ್ಲಿ ಒಂದು ಇಡೀ ಕೇರಿ ಕ್ರಿಶ್ಚಿಯನ್‌ಮಯವಾಗಿದೆ. ಸ್ವಾಭಾವಿಕವಾಗಿ ಮನೆ ಮನೆಗೆ ಹೋಗುವ ಅಭ್ಯಾಸವಿದ್ದು, ಎಲ್ಲಾ ಮನೆಗಳಿಗೆ ಹೋಗಿ ಮಾತನಾಡಿಕೊಂಡು ಬರುವಾಗ, ಒಂದು ಮನೆಯ ಹೊರಗಡೆ ಒಂದು ಮುದುಕಿ ಕುಳಿತು ಅಳುತ್ತಿದ್ದಳು. ನಾನು ಏತಕ್ಕೆ ಎಂದು ಆಕೆಯನ್ನು ಕೇಳಿದರೆ, ಅದಕ್ಕೆ ಆಕೆ, "ನನ್ನ ಮಗ ಮತ್ತು ಸೊಸೆ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಆಗಿದ್ದಾರೆ. ನನಗೆ ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ. ನಾನು ನನ್ನ ಧರ್ಮವನ್ನು ಬಿಡುವುದಕ್ಕೆ ಆಗುವುದಿಲ್ಲ. ನಾನು ಏಸು ಪೂಜೆ ಮಾಡದೇ ಇದ್ದರೆ, ನನ್ನ ಸೊಸೆ ನನಗೆ ಊಟ ಹಾಕುವುದಿಲ್ಲವೆಂದು ಹೇಳುತ್ತಾಳೆ. ನಾನು ಹೇಗೆ ಬದುಕಬೇಕು" ಎಂದು ಕೇಳುತ್ತಾಳೆ. ಇದನ್ನು ಕೇಳಿದಾಗ ನಮಗೆ ಬಹಳ ನೋವಾಗುತ್ತದೆ. ಮತಾಂತರದಿಂದ ಒಬ್ಬನಿಗೆ ಮಾತ್ರ

ಅನ್ಯಾಯವಾಗುತ್ತಿಲ್ಲ, ಅದು ಇಡೀ ಕುಟುಂಬಕ್ಕೆ ಆಗುತ್ತದೆ. ನಾನು ಸ್ವತಃ ಅದರಿಂದ ನೊಂದಂತಹ ಕುಟುಂಬದಿಂದ ಬಂದಂತಹವಳು. ನನ್ನ ಚಿಕ್ಕ ಅಜ್ಜಿಯ ಮನೆಯಲ್ಲಿ ... ಇದು ಎಸ್.ಸಿ./ಎಸ್.ಟಿ. ಸಮುದಾಯಕ್ಕೆ ಮಾತ್ರ ಮತಾಂತರ ಮೀಸಲಾಗಿರುವುದಿಲ್ಲ. ಬಾಂಬೆಯಲ್ಲಿದ್ದಂತಹ ನನ್ನ ಚಿಕ್ಕಪ್ಪ ಮತ್ತು ಅವರ ಹೆಂಡತಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿ, "ನಮ್ಮ ಜೊತೆ ಇರಬೇಕೆಂದರೆ ನೀನು ಮತಾಂತರವಾಗಬೇಕು" ಎಂದು ನನ್ನ ಅಜ್ಜಿಗೆ ಅಂದರೆ, ಅವರ ತಾಯಿ/ಅತ್ತೆಯವರಿಗೆ ಒತ್ತಾಯ ಮಾಡಿರುತ್ತಾರೆ. ಆದರೆ, ಅವರಿಗೆ ಅದು ಸಾಧ್ಯವಾಗಲಿಲ್ಲ. ಆಗ ಅವರು ಬಾಂಬೆಯಿಂದ ಮಂಗಳೂರಿಗೆ ವಾಪಸ್ಸು ಬಂದರು. ಅವರು ಸತ್ತ ನಂತರ ಅವರ ಚಿತೆಗೆ ಬೆಂಕಿ ಇಡಲು ತನ್ನ ಮಗ ಇರಲಿಲ್ಲ. ಅವರು(ನನ್ನ ಅಜ್ಜಿ) ಸಾಯುವ ಮೊದಲು ಕಣ್ಣೀರು ಹಾಕಿದ್ದನ್ನು ನಾನು ನೋಡಿದ್ದೇನೆ. ಈ ಮತಾಂತರದಿಂದ ಎಷ್ಟು ಹಿಂಸೆ ಆಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ನಾನು ಮದುವೆಯಾದ ನಂತರ ಹಿರಿಯಡ್ಕಕ್ಕೆ ಹೋದೆ. ಅನೇಕ ಮಾನ್ಯ ಸದಸ್ಯರು ಎಸ್.ಸಿ./ಎಸ್.ಟಿ. ಸಮುದಾಯದ ಬಗ್ಗೆ ಹೇಳಿದರು. ಗ್ರಾಮೀಣ ಪ್ರದೇಶದಲ್ಲಿ ಏನಾಗುತ್ತದೆ ಎಂದರೆ, ಗಂಡಸರೆಲ್ಲಾ ದುಡಿಮೆ ಮಾಡಲು ಹೋಟೆಲ್ ಉದ್ಯಮ ಅಥವಾ ಇನ್ನಿತರ ಉದ್ಯೋಗ ಮಾಡಲು ನಗರ ಪ್ರದೇಶಕ್ಕೆ ಬರುತ್ತಾರೆ. ಅಲ್ಲಿ ದೂರ ದೂರ ಮನೆಗಳಿರುತ್ತವೆ. ಆ ಮನೆಯಲ್ಲಿ ಹೆಂಡತಿ ಮತ್ತು ಹೆಣ್ಣು ಮಕ್ಕಳು ಇರುತ್ತಾರೆ. ಆ ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡುತ್ತಿರುತ್ತಾರೆ. ಒಂದು ದಿನ ಸ್ವತಃ ನಾನು ನನ್ನ ಅತ್ತೆ ಮನೆಯಲ್ಲಿ ಒಳಗೆ ಕುಳಿತಿದ್ದಾಗ ಒಂದು ತಂಡ ಬರುತ್ತದೆ. ಅದರಲ್ಲಿ ಒಬ್ಬರು ಗಂಡಸರು, ಮತ್ತಿಬ್ಬರು ಹೆಂಗಸರು ಇದ್ದರು. ಅವರು ನಮ್ಮ ಮನೆಯೊಳಗೇ ಬಂದು ಬೋಧನೆ ಮಾಡುತ್ತಾರೆ. ಜೊತೆಗೆ, ಬೈಬಲ್ ಪುಸ್ತಕವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಾರೆ. ನಾನು ಅದನ್ನು ಮೊದಲೆರಡು ದಿವಸಗಳು ಹಾಗೆಯೇ ಗಮನಿಸಿದೆನು. ಆ ಸಂದರ್ಭದಲ್ಲಿ ಹೇಗೆ ಮಾತನಾಡಬೇಕೆಂಬ ಬಗ್ಗೆ ಭಯ ಇತ್ತು. ಏಕೆಂದರೆ, ನನ್ನ ಅತ್ತೆಯವರು ಏನು ಹೇಳುತ್ತಾರೋ ಎಂಬ ಭಯ ಇತ್ತು. ನಾನು ಆ ಸಮಯದಲ್ಲಿ ಕೋಣೆಯೊಳಗೆ ಇರುತ್ತಿದ್ದೆನು. ಒಂದು ಬಾರಿ ಹೊರಗೆ ಬಂದು ಮಾತನಾಡಿದೆನು. ಅವರಿಗೆ ನಾನು "ಆಯಿತು, ಈಗ ನಮ್ಮ ಊರಿನಲ್ಲಿ ಹಿರಿಯಡ್ಕದ ಜಾತ್ರೆ ನಡೆಯುತ್ತಿದೆ. ನಿಮ್ಮ ಬೈಬಲ್ ಅನ್ನು ನಾನು ತೆಗೆದುಕೊಳ್ಳುತ್ತೇನೆ. ತಾವು ನಮ್ಮ ಭಗವದ್ಗೀತೆಯನ್ನು ತೆಗೆದುಕೊಳ್ಳುವುದಕ್ಕೆ

ತಯಾರಿದ್ದೀರಾ? ನಾನು ನಿಮ್ಮ ಚರ್ಚಿಗೆ ಬಂದು ಕೈ ಮುಗಿಯುತ್ತೇನೆ. ಅದೇ ರೀತಿ, ಈಗ ಹಿರಿಯಡ್ಕದಲ್ಲಿ ಜಾತ್ರೆ ನಡೆಯುತ್ತಿದೆ; ತಾವು ಅಲ್ಲಿಗೆ ಬಂದು, ಆ ದೇವರಿಗೆ ಒಂದೆರಡು ರೂಪಾಯಿ ಕಾಣಿಕೆ ಹಾಕಿ, ದೇವರಿಗೆ ಕೈ ಮುಗಿಯುತ್ತೀರಾ" ಎಂದು ಕೇಳಿದೆನು. ಅದಕ್ಕೆ ಅವರು, "ಅದು ನನಗೆ ಪಾಪ. ಏಸು ಒಬ್ಬನೇ ದೇವರು. ಅವನಿಂದಲೇ ನನ್ನ ಮುಕ್ತಿ" ಎಂದು ಹೇಳಿದರು. ಇದನ್ನು ಹೇಳುವುದಕ್ಕೆ ನನಗೆ ನಗು ಬರುತ್ತಿದೆ. ಈ ಪರಿಸ್ಥಿತಿ...

**ಶ್ರೀ ಸವದಿ ಲಕ್ಷ್ಮಣ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಭಾರತಿ ಶೆಟ್ಟಿಯವರೇ, ಮತಾಂತರ ಮಾಡುವವರನ್ನು ದೇವಸ್ಥಾನಕ್ಕೆ ಬರುತ್ತೀರಾ ಎಂದು ಕೇಳಿದರೆ, ಅವರು ಬರುವುದಿಲ್ಲವೆಂದು ಹೇಳಿದಂತಹ ಹಳೆಯ ವಿಷಯ ಏತಕ್ಕೆ ಹೇಳುತ್ತಿದ್ದೀರಿ? ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ವರಿಷ್ಠರಾದ ಶ್ರೀ ರಾಹುಲ್ ಗಾಂಧಿಯವರು ಹೋದಾಗ, ಒಬ್ಬ ಪಾದ್ರಿಯವರು ಹೇಳಿದ ವಿಷಯವನ್ನು ಹೇಳಿರಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಎಂತಹ ಕೆಟ್ಟ ಪರಿಸ್ಥಿತಿಯಲ್ಲಿ ಈ ಮತಾಂತರ ನಡೆಯುತ್ತಿದೆ ಎಂದು ಹೇಳಿದರೆ, ನಮಗೆ ಬಹಳ ನೋವಾಗುತ್ತದೆ. ಇದನ್ನು ಅನುಭವಿಸಿದವರಿಗೆ ಗೊತ್ತಾಗುತ್ತದೆ. ಬದಲಾಗಿ, ಕೇವಲ ಕಿವಿಯಲ್ಲಿ ಕೇಳಿದವರಿಗೆ ಗೊತ್ತಾಗುವುದಿಲ್ಲ. ಒತ್ತಾಯದಿಂದ ಮತಾಂತರ ಮಾಡುತ್ತಿಲ್ಲವೆಂದು ಅಥವಾ ನನ್ನ ಕ್ಷೇತ್ರದಲ್ಲಿ ಮತಾಂತರ ಆಗುತ್ತಿಲ್ಲ ಎಂದು ಯಾರಾದರೂ ತಮ್ಮ ಆತ್ಮಸಾಕ್ಷಿಯಿಂದ ಹೇಳಲಿ ನೋಡೋಣ. ಮತಾಂತರ ಮಾಡುವವರು ಅಲ್ಲಲ್ಲಿ ಕುಳಿತು ಭಜನೆ ಮಾಡುತ್ತಿಲ್ಲವೆಂದು ಹೇಳಲಿ ನೋಡೋಣ. ನಾವು ಪುರಾಣಗಳನ್ನು ಅಥವಾ ಇತಿಹಾಸದ ಪುಟಗಳನ್ನು ತೆಗೆದು ನೋಡಲಿ. ಅಲ್ಲಿ ಏನು ಹೇಳಿದ್ದಾರೆಂದರೆ, ಬ್ರಿಟಿಷರು ಆಗಿರಬಹುದು ಅಥವಾ ಔರಂಗಜೇಬ ಆಗಿರಬಹುದು ಅಥವಾ ಯಾರಾದರೂ ಬಂದರೂ ಸಹ ಇಲ್ಲಿ ಬಹುಸಂಖ್ಯಾತರನ್ನು ಮತಾಂತರ ಮಾಡಲಿಕ್ಕೆ ಸಾಧ್ಯವಾಯಿತೇ ಎಂದು ಅನೇಕ ಮಾನ್ಯ ಸದಸ್ಯರು ಕೇಳಿದರು. ಅದು ಅಷ್ಟು ಸುಲಭದ ಸನಾತನ ಧರ್ಮ ಅಲ್ಲ. ನನ್ನ ಧರ್ಮದಲ್ಲಿ ನಾನು ಗಾಳಿಯನ್ನು ಪೂಜೆ ಮಾಡುತ್ತೇನೆ.

(864) 15.09.2022 5.50 ವೈಎಲ್-ಬಿಎಸ್ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀಮತಿ ಭಾರತಿ ಶೆಟ್ಟಿ (ಮುಂದು):-**

ನನ್ನ ಕ್ಷೇತ್ರದಲ್ಲಿ ಮತಾಂತರವಾಗುತ್ತಿಲ್ಲ, ಅಲ್ಲಲ್ಲಿ ಕುಳಿತುಕೊಂಡು ಭಜನೆ ಮಾಡುತ್ತಿದ್ದೇವೆ ಎಂದು ಹೇಳಲಿ. ಇವತ್ತು ಪುರಾಣದ ಇತಿಹಾಸದ ಪುಟಗಳನ್ನು ತೆಗೆದು ನೋಡಿದಾಗ ಬ್ರಿಟಿಷ್‌ನವರಾಗಲಿ, ಔರಂಗಜೇಬ್ ಆಗಲಿ, ಯಾರೇ ಬಂದರೂ ಸಹ ಬಹುಸಂಖ್ಯಾತರನ್ನು ಮತಾಂತರ ಮಾಡಲು ಸಾಧ್ಯವಾಯಿತೆ? ನಮ್ಮದು ಅಷ್ಟು ಸುಲಭದ ಸನಾತನ ಧರ್ಮವಾಗಿಲ್ಲ. ನಮ್ಮ ಧರ್ಮದಲ್ಲಿ ಗಾಳಿ, ಸೂರ್ಯ, ನದಿ, ಭೂಮಿಯನ್ನು ಪೂಜೆ ಮಾಡುತ್ತೇವೆ. ಮೊನ್ನೆ ದಿವಸ ಒಬ್ಬ ಪಾದ್ರಿ ಒಬ್ಬರು "ನಾನು ಈ ಭಾರತ ಮಾತೆಯ ಭೂಮಿಯಲ್ಲಿರುವ ಕೊಳೆ ನನ್ನ ಕಾಲಿಗೆ ಅಂಟಬಾರದೆಂದು ಚಪ್ಪಲಿ ಹಾಕಿಕೊಂಡು ಹೋಗುತ್ತೇನೆ, ಬರೀ ಕಾಲಿನಲ್ಲಿ ಹೋಗುವುದಿಲ್ಲ." ಎಂದು ಹೇಳುವಂಥ ಧರ್ಮವಲ್ಲ ನಮ್ಮದು. ಇಂತಹ ಧರ್ಮದಲ್ಲಿ ನನಗೆ ಈ ರೀತಿ ದಾಳಿಯಾಗುತ್ತಿರುವುದನ್ನು ತಡೆಗಟ್ಟುವವರು, ರಕ್ಷಣೆ ಕೊಡುವವರು, ಯಾರು ಇಲ್ಲವೇ? ಸರ್ಕಾರ ಯಾಕೆ ಇರಬೇಕು? ಆದ್ದರಿಂದ ಇಷ್ಟು ಬೇಗ ಧರ್ಮಾಂತರ ಮಾಡಲು ಸಾಧ್ಯವಿಲ್ಲ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ವ್ಯಕ್ತಿಯ ಹೆಸರು Pastor Ponnaiah.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಸಮಯದ ಅಭಾವ ಇರುವುದರಿಂದ ನನ್ನ ಅನಿಸಿಕೆಯನ್ನು ಹೇಳಬೇಕಾಗಿದೆ. ಏಕೆಂದರೆ, ನಮ್ಮ ಧರ್ಮದಲ್ಲಿ ರಾಮಾಯಣ ಏನು ಮಾಡಬೇಕೆಂಬುದನ್ನು ಹೇಳಿದರೆ, ಮಹಾಭಾರತ ಏನು ಮಾಡಬಾರದು ಎಂಬುದನ್ನು ಹೇಳುತ್ತದೆ ಮತ್ತು ಭಗವದ್ಗೀತೆ ಹೇಗೆ ಬದುಕಬೇಕೆಂಬುದನ್ನು ಹೇಳುತ್ತದೆ. ಇವತ್ತು ಭಗವದ್ಗೀತೆಯ 58ನೇ ಅಧ್ಯಾಯವನ್ನು ತೆಗೆದು ನೋಡಿದರೆ ಶ್ರೀ ಕೃಷ್ಣಾ ಪರಮಾತ್ಮ ಅರ್ಜುನನಿಗೆ "ಎಲೈ ಅರ್ಜುನ ನಾನು ಈವರೆಗೂ ಎಲ್ಲಾ ವಿಷಯಗಳನ್ನು ತಿಳಿಸಿ

ಎಲ್ಲವನ್ನೂ ಹೇಳಿದ್ದೇನೆ. ಆದರೆ, ನೀನು ಇದ್ದನ್ನು ಒಬ್ಬ ಪರಮಾತ್ಮ ಹೇಳಿದ್ದಾನೆ ಎಂದು ಕಣ್ಣು ಮುಚ್ಚಿಕೊಂಡು ನಂಬಬೇಡ, ನಾನು ಹೇಳಿದ ಮಾತು ಎಲ್ಲವೂ ಸರಿ ಎಂದು ನಂಬಬೇಡ. ಈ ನಂಬಿಕೆಯನ್ನು ನೀನು ಇಟ್ಟುಕೊಳ್ಳದೇ ಅದನ್ನು ವಿಮರ್ಶೆ ಮಾಡಿಕೋ, ನಾಲ್ಕು ಜನರ ಹತ್ತಿರ ಕೇಳು. ಆಮೇಲೆ ನಿನ್ನ ಮನಸ್ಸಿಗೆ ಅದು ಸರಿ ಅನಿಸಿದರೆ ನೀನು ಮಾಡು" ಎಂದು ಹೇಳುತ್ತಾನೆ. ನಾನು ಸಹ ಅಂತಹ ಒಂದು ಧರ್ಮದಲ್ಲಿ ಹುಟ್ಟಿ ಬಂದಿದ್ದೇನೆ. ಇವತ್ತು ಧರ್ಮವನ್ನು ರಕ್ಷಣೆ ಮಾಡಿದರೆ, ಆ ಧರ್ಮವು ನನ್ನನ್ನು ರಕ್ಷಣೆ ಮಾಡುತ್ತದೆ ಎನ್ನುವಂಥ ಮಾತನ್ನು ಹೇಳುತ್ತಾರೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಕ್ರೈಸ್ತರ ಮೇಲೆ ದಾಳಿಯಾಗುತ್ತಿದೆ ಎನ್ನುವಂಥ ಮಾತನ್ನು ಅವರು ಹೇಳಿದರು. ಏತಕ್ಕೆ ದಾಳಿಯಾಗುತ್ತಿದೆ? ಸುಮ್ಮನೆ ಹೋಗಿ ದಾಳಿ ಮಾಡುತ್ತಾರೆಯೇ? ನಮ್ಮ ಧರ್ಮಕ್ಕೆ ನುಗ್ಗಿ ಮತಾಂತರ ಮಾಡುತ್ತೇವೆ ಎಂದು ಹೇಳಿದರೆ ನಾವು ಅವರ ಮಾತನ್ನು ಕೇಳಿಸಿಕೊಂಡು ಬನ್ನಿ ಎಂದು ಕೈಕಟ್ಟಿ ಕುಳಿತುಕೊಳ್ಳಬೇಕೆ? ಅಹಿಂಸೆಯಿಂದ ಮಾತ್ರ ಸ್ವಾತಂತ್ರ್ಯ ಸಿಗುತ್ತದೆ ಎನ್ನುವಂಥ ಮಾತನ್ನು ಹೇಳಿದರು. ಅಹಿಂಸೆಯಿಂದ ಎಷ್ಟು ಸ್ವಾತಂತ್ರ್ಯ ಸಿಕ್ಕಿದೆ? ಸ್ವಾತಂತ್ರ್ಯವು ಕೇವಲ ಅಹಿಂಸೆಯಿಂದ ಮಾತ್ರ ಸಿಕ್ಕಿಲ್ಲ. ಕ್ರಾಂತಿಕಾರಿಗಳ ಹೋರಾಟದಿಂದ ಈ ದೇಶದಲ್ಲಿ ಸ್ವಾತಂತ್ರ್ಯ ಸಿಕ್ಕಿದೆ. ಹಾಗಾಗಿ, ಅಹಿಂಸೆ ಮತ್ತು ಕ್ರಾಂತಿಕಾರಿ ಎರಡು ಬೇಕು. ಇವತ್ತು ನಾನು ಸುಮ್ಮನೆ ಕುಳಿತಿದ್ದರೆ ಸಭಾಪತಿಯವರು ನನಗೆ ಮಾತನಾಡಲು ಅವಕಾಶ ನೀಡುತ್ತಿರಲಿಲ್ಲ. ಆದರೆ, ನಾನು "ನನಗೆ ನೋವು ಇದೆ, ನನಗೆ ಇದರ ಅನುಭವ ಇದ್ದು, ನನಗೆ ಮಾತನಾಡಲು ಅವಕಾಶ ಕಲ್ಪಿಸಬೇಕು" ಎಂದು ನಮ್ಮ ಸಚೇತಕರ ಹತ್ತಿರ ಗಲಾಟೆ ಮಾಡಿದ್ದೆನು. ಸುಮ್ಮನೆ ಕುಳಿತಿದ್ದರೆ ಮಾತನಾಡಲು ಅವಕಾಶ ನೀಡುತ್ತಿದ್ದರೆ? ಸ್ವಾಮಿ ವಿವೇಕಾನಂದರು ಮತ್ತು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಹೇಳಿದ ಹಾಗೆ ಎಲ್ಲರೂ ಕೂಡಾ ಸ್ವಇಚ್ಛೆಯಿಂದ ಮತಾಂತರಗೊಂಡರೆ ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಬಹಳ ದೊಡ್ಡ ಪ್ರಮಾಣದಲ್ಲಿ ಮತಾಂತರ ನಡೆಯುತ್ತಿದ್ದು, ಅದನ್ನು ತಡೆಗಟ್ಟಲು ಹೋದರೆ ಸಾಕು, ಕೂಡಲೇ ಕೋಮುಗಲಭೆ ನಡೆಯುತ್ತಿದೆ ಎಂದು ದೂರು ಸಲ್ಲಿಸುತ್ತಾರೆ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಅದರ ಅಂಕಿಅಂಶವನ್ನು ಸಲ್ಲಿಸಲು ಹೇಳಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನನ್ನ ಮಾತು ಮುಗಿಸಿಲ್ಲ. ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರು ಬಂದರೆ ಕೇವಲ ಅಂಕಿಅಂಶವೇನು, ಅದರ ಪುಸ್ತಕವನ್ನೇ ನೀಡುತ್ತೇನೆ. ಈ ಸಮಾಜದಲ್ಲಿರುವಂಥ ಎಲ್ಲಾ ಕೋಟ್ಯಾಂತರ ಜನರ ಭಾವನೆಯೇ ಅಂಕಿಅಂಶ. ಅವರ ಕ್ಷೇತ್ರದಲ್ಲಿಯೇ ಮಾನ್ಯ ಸದಸ್ಯರು ಕೇಳಿದರೆ ಅಂಕಿಅಂಶ ಎದ್ದು ಬರುತ್ತದೆ. ಯಾರು ಏನು ಕೊಡಬೇಕಾಗಿಲ್ಲ.

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೆ ಮಾನ್ಯ ಭಾರತಿ ಶೆಟ್ಟಿರವರು ಮಾತನ್ನು ಮುಗಿಸಲಿ. ತಾವು ಏತಕ್ಕೆ ಮಧ್ಯೆ ಎದ್ದು ಮಾತನಾಡುತ್ತೀರಿ?

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿ ವಿಧೇಯಕದಲ್ಲಿರುವ ಯಾವುದನ್ನು ಕಡಿತ ಮಾಡಬೇಡಿ. ಯಾವುದು ಬತ್ತಿ ಇಡುವಂಥದಾಗಿಲ್ಲ. ಬತ್ತಿ ಇಲ್ಲದಿದ್ದರೆ ಅವರು ನಮ್ಮನ್ನೇ ಮುಚ್ಚಿ ಬಿಡುತ್ತಾರೆ. ಹಾಗಾಗಿ ಅಲ್ಲಿ ಬತ್ತಿ ಇಡಲೇಬೇಕು. ಆ ಬತ್ತಿ ಇದ್ದರೆ ಮಾತ್ರ ಮತಾಂತರ ನಿಲ್ಲುತ್ತದೆ. ಹಾಗಾಗಿ ಯಾವುದೇ ಕಡಿತವನ್ನು ಈ ವಿಧೇಯಕದಲ್ಲಿ ಮಾಡಬಾರದು ಎಂದು ಹೇಳಿ, ಈ ತಿದ್ದುಪಡಿ ವಿಧೇಯಕವನ್ನು ಹೃತ್ಪೂರ್ವಕವಾಗಿ ಮನದಾಳದಿಂದ ಸ್ವಾಗತಿಸುತ್ತೇನೆ.

**ಸಭಾಪತಿಯವರು:-** ಶ್ರೀ ಪಿ.ಆರ್.ರಮೇಶ್‌ರವರೆ ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಯವಿಟ್ಟು ನಮ್ಮ ಪಕ್ಷದ ವತಿಯಿಂದ ಒಬ್ಬರೇ ಮಾತನಾಡುತ್ತೇವೆ ಎಂದು ಹೇಳಿದ್ದೆವು. ಆದರೆ, ತಮ್ಮ ಎದುರುಗಡೆ ಕುಳಿತ್ತಿದ್ದರೂ, ನಾವು ತಮ್ಮ ಕಣ್ಣಿಗೆ ಕಾಣಿಸುತ್ತಿಲ್ಲ. ತಮ್ಮ ಎದುರುಗಡೆಯೇ ಕುಳಿತುಕೊಂಡಿದ್ದೇವೆ. ಈಗಾಗಲೇ ನಮ್ಮ ಪಕ್ಷದಿಂದ ಮಾನ್ಯ ತಿಪ್ಪೇಸ್ವಾಮಿಯವರು ಒಬ್ಬರೇ ಮಾತನಾಡುತ್ತಾರೆ ಎಂದು ಹೇಳಿದ್ದೇವೆ. ತಾವು ಕಾಂಗ್ರೆಸ್ ಪಕ್ಷದವರಿಗೆ ಹಾಗೂ ಬಿಜೆಪಿ ಪಕ್ಷದವರಿಗೆ

ಅವಕಾಶ ನೀಡುತ್ತಿದ್ದೀರಿ. ನಾನು ಇಷ್ಟು ಹೊತ್ತು ಸುಮ್ಮನೆ ಏತಕ್ಕೆ ಕುಳಿತುಕೊಂಡಿದ್ದೇನೆ ಎಂದರೆ, ತಮ್ಮ ನೇರ ದೃಷ್ಟಿ ನನ್ನ ಮೇಲೆ ಬೀಳಬಹುದೆಂದು ಕುಳಿತ್ತಿದ್ದೇನೆ. ಆದರೂ ನಿಮ್ಮ ನೇರ ದೃಷ್ಟಿ ನನ್ನ ಮೇಲೆ ಬೀಳುತ್ತಿಲ್ಲ. ಆಡಳಿತ ಪಕ್ಷ ತಂದಿರುವಂಥ ವಿಧೇಯಕದ ಮೇಲೆ ಮಾನ್ಯ ಸಭಾನಾಯಕರು ಹಾಗೂ ಗೃಹ ಸಚಿವರಿಗೆ ಅವಕಾಶ ನೀಡಿ ಮುಗಿಸಿದ್ದರೆ ಸರಿಹೋಗುತ್ತಿತ್ತು.

**ಸಭಾಪತಿಯವರು:–** ಮಾನ್ಯ ಸದಸ್ಯರೆ ಸಮಯವನ್ನು ವ್ಯರ್ಥ ಮಾಡುವುದು ಬೇಡ. ಮಾನ್ಯ ಪಿ.ಆರ್.ರಮೇಶ್‌ರವರು ಮಾತನಾಡಿದ ತಕ್ಷಣ ತಮಗೆ ಮಾತನಾಡಲು ಅವಕಾಶ ನೀಡಲಾಗುವುದು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ವಿರೋಧ ವ್ಯಕ್ತಪಡಿಸುವವರಿಗೆ ಮಾತನಾಡಲು ಅವಕಾಶ ಕಲ್ಪಿಸಬೇಕಲ್ಲವೇ? ಆಡಳಿತ ಪಕ್ಷದವರಿಗೆ ಮಾತನಾಡಲು ಏತಕ್ಕೆ ಅವಕಾಶ ಕಲ್ಪಿಸಬೇಕು?

**ಸಭಾಪತಿಯವರು:–** ಆಯಿತು. ಮಾನ್ಯ ಪಿ.ಆರ್.ರಮೇಶ್ ಮಾತನಾಡಿ.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಸ್ವಾತಂತ್ರ್ಯ ಪೂರ್ವಕ್ಕೂ ಮೊದಲು ನಮ್ಮ ದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮತಾಂತರಗೊಳ್ಳುತ್ತಿದ್ದರು. ಅವತ್ತಿನ ದಿವಸ ಮತಾಂತರಗೊಳ್ಳುವುದಕ್ಕೆ ನಮ್ಮಲ್ಲಿ ಇದ್ದಂತಹ social structure ಆಗಿರಬಹುದು, ಸಾಮಾಜಿಕವಾದಂಥ ಭಾವನೆ ಮತ್ತು ಅದರ ಹಿನ್ನಲೆಯಾಗಿರಬಹುದು. ಅದರಲ್ಲಿ ಜನರಿಗೆ ಸಾಕಷ್ಟು ಹಿಂಸೆಯಾಗುವ ರೀತಿಯಲ್ಲಿ ಇದ್ದಾಗ ಮತಾಂತರಗೊಳ್ಳುತ್ತಿದ್ದರು. ಸ್ವಾತಂತ್ರ್ಯ ಬಂದ ನಂತರ ಯಾವುದೇ ರೀತಿಯ ಹೆಚ್ಚಿನ ಪ್ರಮಾಣದಲ್ಲಿ ಮತಾಂತರವಾಗುತ್ತಿಲ್ಲ. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ಹೋಲಿಕೆ ಮಾಡಿ ನೋಡಿದಾಗ, ಈ ವಿಚಾರವು ಬಹಳ ಮುಖ್ಯವಾಗುತ್ತದೆ. ಸ್ವಾತಂತ್ರ್ಯ ನಂತರ ಏತಕ್ಕೆ ನಾವು ಜಾಸ್ತಿ ಮತಾಂತರಗೊಳ್ಳಲು ಹೋಗುತ್ತಿಲ್ಲವೆಂದಾದರೆ, ಅದು ಸಂವಿಧಾನ ನೀಡಿರುವಂಥ ಅಧಿಕಾರವಾಗಿದೆ. Preamble of the Constitution itself is very clear. It says;

*"**WE, THE PEOPLE OF INDIA**, having solemnly resolved to constitute India into a **SOVEREIGN, SOCIALIST, SECULAR DEMOCRATIC REPUBLIC** and to secure to all its citizens:*

***JUSTICE**, social, economic and political;*

***LIBERTY** of thought, expression, belief, faith and worship;*

***EQUALITY** of status and of opportunity……."*

"Equality of status and of opportunity", ಇದು ಸಹ ಬಹಳ ಮುಖ್ಯವಾದುದಾಗಿದೆ. ಇಷ್ಟಕ್ಕೆ ಓದುವುದನ್ನು ನಿಲ್ಲಿಸುತ್ತೇನೆ. ಅದಕ್ಕೂ ಮುಂದೆ ಓದುವುದಕ್ಕೆ ಹೋಗುವುದಿಲ್ಲ. ಇವತ್ತು ಏತಕ್ಕೆ ಮತಾಂತರವಾಗುತ್ತಿದ್ದಾರೆ ಎನ್ನುವ ಕುರಿತು ಒಂದು ಸಣ್ಣ ಘಟನೆ ಕುರಿತು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇನೆಂದರೆ, ಬಳ್ಳಾರಿ ಜಿಲ್ಲೆಗೆ election campaign ಗೆ ನಾನು ಹೋಗಿದ್ದೆ. ಅಲ್ಲಿಯ ಒಂದು ಊರಿಗೆ ಮೂರ್ನಾಲ್ಕು ಊರಿನವರು ಒಬ್ಬ ಗೌಡರ ಮನೆಗೆ ಬಂದು ಕುಳಿತುಕೊಂಡರು. ಅದರಲ್ಲಿ ಕೆಲವರು ನನಗೆ ಪರಿಚಯಸ್ಥರಿದ್ದರು. ನಾವೆಲ್ಲರೂ ಅಲ್ಲಿರುವ ಒಂದು ಪಡಸಾಲೆಯಲ್ಲಿ ಕುಳಿತುಕೊಂಡಿದ್ದೆವು. ಆ ಪಡಸಾಲೆಗೆ ಒಂದು ಜಾಲರಿ ಹಾಕಲಾಗಿತ್ತು. ಆ ಜಾಲರಿ ಹೊರಗೆ ಕೆಲವರು ಕುಳಿತುಕೊಂಡಿದರು. ಗ್ರಾಮ ಪಂಚಾಯಿತಿಯ ಅಧ್ಯಕ್ಷರೊಬ್ಬರು ಆ ಸಭೆಗೆ ಬಂದಿದ್ದರು. ಅದಕ್ಕೆ ನಾನು, ನೀನು ಈ ಸಭೆಗೆ ಬಂದಿರುವಂಥ ಗ್ರಾಮ ಅಧ್ಯಕ್ಷನಾಗಿದ್ದು, ಏತಕ್ಕೆ ಜಾಲರಿ ಹೊರಗೆ ಕುಳಿತುಕೊಂಡಿದ್ದೀಯಾ, ಒಳಗೆ ಬಾ ಎಂದು ಕರೆದೆನು. ಅದಕ್ಕೆ ಅಲ್ಲಿದ್ದ ಆ ಗೌಡ "ಸ್ವಾಮಿ, ಅವರು ಬರುವ ಹಾಗಿಲ್ಲ." ಎಂದು ಹೇಳುತ್ತಾನೆ. ಗ್ರಾಮ ಪಂಚಾಯಿತಿಯ ಅಧ್ಯಕ್ಷನಿಗೆ ಒಳಗೆ ಬರುವ ಹಾಗಿಲ್ಲ. ನಂತರ ಅಲ್ಲಿದ್ದ ಮತ್ತೊಬ್ಬ ವ್ಯಕ್ತಿ ನನ್ನ ಕಿವಿ ಹತ್ತಿರ ಬಂದು ಆತ ಇಂತಹ ಜಾತಿಯವನು, ಒಳಗೆ ಬರುವ ಹಾಗಿಲ್ಲ ಎಂದು ಹೇಳಿದನು. ನಾನು ಆಗ ಸುಮ್ಮನಾಗಿದ್ದೆನು. ಆತ ಗ್ರಾಮ ಪಂಚಾಯಿತಿ ಅಧ್ಯಕ್ಷನಾದರೂ ಸಹಿತ ಆತನ ಸ್ಟೇಟಸ್ ಎನ್ನುವುದು ಆತನ ಪದವಿಗಾಗಲಿ, ಸ್ಥಾನಮಾನಕ್ಕಾಗಲಿ ಕೊಡಲಿಲ್ಲ. ಆತನ ಜಾತಿ ಮತ್ತು ಸಮುದಾಯ ಆತನಿಗೆ status ನೀಡುತ್ತಿದ್ದೆ. ಇದರಿಂದಾಗಿ ಆತನಿಗೆ ಒಬ್ಬ ಮಗನಿದ್ದರೆ ಅವನಿಗೂ ಎಷ್ಟು ಹಿಂಸೆ ಆಗಬಹುದು? ಇದೇ ರೀತಿಯ

ಘಟನೆಯನ್ನು ಸುಮಾರು 40 ವರ್ಷಗಳ ಹಿಂದೆ ಒಂದು ಹಳ್ಳಿಯಲ್ಲಿ ನೋಡಿದ್ದೆನು. ಆ ಹಳ್ಳಿಯಲ್ಲಿ ನಾನು ಒಂದು ಸಣ್ಣ ಹೋಟೆಲ್‌ಗೆ ಹೋಗಿದ್ದ ಸಂದರ್ಭದಲ್ಲಿ ಕೆಲವರು ಆ ಹೋಟೆಲ್ ಒಳಗೆ ಬರುತ್ತಿದ್ದರು, ಹೊರಗೆ ಹೋಗುತ್ತಿದ್ದರು. ಆದರೆ, ಆ ಹೋಟೆಲ್ ಹೊರಗೆ ಒಂದು ಸಣ್ಣ ಅಲ್ಯೂಮಿನಿಯಮ್ ಗ್ಲಾಸ್ ಇಟ್ಟಿದ್ದರು. ಆ ಹೊರಗೆ ನಿಂತ ವ್ಯಕ್ತಿ ತನ್ನ ಮಗನೊಂದಿಗೆ ಹೊರಗೆ ನಿಂತಿದ್ದಾಗ ಹೋಟೆಲ್ ಒಳಗಿನಿಂದ ಬಂದ ಮತ್ತೊಬ್ಬ ವ್ಯಕ್ತಿ ಅಲ್ಯೂಮಿನಿಯಮ್ ಗ್ಲಾಸ್‌ನಲ್ಲಿ ಕಾಫಿಯನ್ನು ಮೇಲಿಂದ ಸುರಿದರು. ಆತನ ಜೊತೆಗೆ ಬಂದ ಮಗನ ಮನಸ್ಸಿಗೆ “ನನ್ನ ಅಪ್ಪನ ವಯಸ್ಸಿನವರು, ನನ್ನ ವಯಸ್ಸಿನವರು ಒಳಗೆ ಕುಳಿತು ಟೀ, ಊಟ, ಟಿಫನ್ ಮಾಡುತ್ತಿರುವಾಗ ನನ್ನ ಅಪ್ಪ ಮಾತ್ರ ಏತಕ್ಕೆ ಈ ರೀತಿ ಹೊರಗೆ ನಿಂತು ಟೀ ಕುಡಿದುಕೊಂಡು ಬಂದರು” ಎಂದು ಆತನ ಮನಸ್ಸಿನಲ್ಲಿ ಆಳವಾಗಿ ನೋವಾಗುತ್ತದೆ. ಇದರಿಂದಾಗಿ ಕೊನೆಗೆ ಆ ಹುಡುಗ ನನಗೆ ಸ್ಟೇಟಸ್ ಬೇಕು ಎಂದು ಆಫರ್ ಕೊಡುತ್ತಾನೆ. ಆ ಸ್ಟೇಟಸ್ ಏನೆಂದರೆ, ಮತಾಂತರವಾಗುವಂಥದಾಗಿದೆ. ಆತ ಕ್ರಿಶ್ಚಿಯನ್ ಆದ ತಕ್ಷಣ, he will be allowed. (ಮುಂದು)

(865) 15.09.2022/6.00/ಎಸ್‌ಕೆ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಆರ್. ರಮೇಶ್ (ಮುಂದು):-**

ನಮ್ಮ ಹಿಂದೂ ಧರ್ಮದಲ್ಲಿ ತರಬೇಕಾದಂತಹ ಬದಲಾವಣೆ, Constitution ನಲ್ಲಿ ಏನು Status ಕೊಟ್ಟಿದೆಯೆಲ್ಲಾ, ಅದನ್ನು ತರುವಂತಹದ್ದಕ್ಕೆ ವಿಧೇಯಕವನ್ನು ತನ್ನಿ. ಆಗ ಆಚೆ ಕಡೆ ಹೋಗುವಂತಹದ್ದನ್ನು ನಿಲ್ಲಿಸಬಹುದು. ಸರ್ಕಾರ ಮಾಡದೇ ಇದ್ದ ಪಕ್ಷದಲ್ಲಿ, ಇವತ್ತು ಆ ಒಂದು ಸ್ಥಿತಿ ಈ ದೇಶದಲ್ಲಿ ಇಲ್ಲ. ಆದರೆ ಇದೆ, ನಾನು ಇಲ್ಲವೆಂದು ಹೇಳುತ್ತಿಲ್ಲ. But, the rate of conversion has come down because of the Constitution. ಹಾಗಾಗಿ, ಇದು ನಮ್ಮ social structure. ನಮ್ಮ ದೇಶದಲ್ಲಿ ಇವತ್ತಲ್ಲ, ಸಾವಿರಾರು ರೀತಿಯ ಜಾತಿಗಳಿವೆ. ಈ ಹಿನ್ನೆಲೆಯಲ್ಲಿ ಇವತ್ತು ಒಂದು ವಿಧೇಯಕವನ್ನು ತಂದಿದ್ದೀರಿ. ಈ ವಿಧೇಯಕದಲ್ಲಿ statement of objects and reasons ಬಗ್ಗೆ ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರಿಗೆ

ಹೇಳುವುದೇನೆಂದರೆ, "*Right to freedom of Religion is guaranteed under Article 25 of the Constitution of India, subject to public order, morality and health and to the other provisions of part III of the Constitution of India. By virtue of these guaranteed fundamental rights all persons are free to profess, practice and propagate any religion of their choice.*" ಇದು Article 25 ಕೊಟ್ಟಿರುವಂತಹದ್ದು. Further, in Rev. Stanislaus vs. State of Madya Pradesh and Orissa (1977) 1 SCC 677, ಆ ಒಂದು ಪ್ರಕರಣವನ್ನು ರೆಫರ್ ಮಾಡುತ್ತೀರಾ. This is where you have brought this Bill. ಈ ವಿಧೇಯಕದ ಪೂರ್ತಿ 1977 ರಲ್ಲಿ ಆಗಿರುವಂತಹ ಒಂದು ತೀರ್ಪು ಹಿನ್ನೆಲೆಯಾಗಿದೆ. Please note this point.

**ಸಭಾಪತಿಯವರು:-** ಮಾನ್ಯ ಪಿ.ಆರ್. ರಮೇಶ್‌ರವರೇ, ತಮ್ಮ ಮಾತನ್ನು ಮುಗಿಸುತ್ತೀರಾ ಎಂದು ನಾನು ತಿಳಿದುಕೊಂಡಿದ್ದೆನು. ತಾವು ನೀರು ಕುಡಿಯುತ್ತಿರುವುದು ನನಗೆ ಗೊತ್ತಾಗಲಿಲ್ಲ.

**ಶ್ರೀ ಪಿ.ಆರ್. ರಮೇಶ್:-** ಮಾನ್ಯ ಸಭಾಪತಿಯವರೇ, 1977ರಲ್ಲಿ ಆಗಿರುವಂತಹ ತೀರ್ಪಿನ base ಆಗಿ ಇಟ್ಟುಕೊಂಡು, ಈ ವಿಧೇಯಕವನ್ನು ತಂದಿರುವಂತಹದ್ದು. ಈ ವಿಧೇಯಕವನ್ನು ತಂದಿರುವ ಬಗ್ಗೆ ಬಹಳ ಸ್ಪಷ್ಟವಾಗಿ ಇದೆ. The Judgment says, "if forcible conversion had not been prohibited that would have created public disorder in the States. 'public order' ಎಂದರೇನು? It is a community. Community disorder ಆಗದೇ ಇರುವಂತಹ ರೀತಿಯಲ್ಲಿ, ಈ ವಿಧೇಯಕವನ್ನು ತರುವುದು ಬಹಳ ಪ್ರಮುಖವಾದದು. ಆದರೆ ವಿಧೇಯಕದಲ್ಲಿ ಏನೆಲ್ಲಾ ಪ್ರಾವಿಷನ್ ಮಾಡಿರುವಿರಿ. ಅದೇ ತೀರ್ಪಿನಲ್ಲಿ ಈ ರೀತಿ ಹೇಳುತ್ತದೆ; "does not merely affect an individual, it would amount to disturbance of the public order. ...." Individual ಬಗ್ಗೆ ನೋಡಬೇಡಿ, it is not affecting an individual. When this type of conversion is done, it should affect the community overall. ಯಾವುದೋ

ಒಂದು ಕಡೆ ಗಲಭೆಗಳಾಗಿ ಒಂದು ದೊಡ್ಡ ಸುದ್ದಿಯಾಗುತ್ತದೆ. It would disturb the entire State, city, town or village. ಅಂತಹ ಸಂದರ್ಭದಲ್ಲಿ ತೆಗೆದುಕೊಳ್ಳಬೇಕೆಂಬುದು ಇದೆ. ಈ basis ಮೇಲೆ you should bring the ordinance ಅಥವಾ ಯಾವುದೋ ಒಂದು Bill. ಆದರೆ Bill ತಂದಿರುವುದು ಏನು? It is in complete violation of it. Individually ಅಣ್ಣನನ್ನೋ, ತಮ್ಮನನ್ನೋ ತೆಗೆದುಕೊಳ್ಳುತ್ತೀರಾ. According to Section 4 of this Bill, "*any converted person, his parents, brother, sister or any other person .....*" Are they community? Are they Society? If I get converted, my brother, is he a society? ಅವನಿಗೆ ಏನೋ ಇಷ್ಟವಾಗಲಿಲ್ಲವೆಂದು, ಅವನು ತರುತ್ತಾನೆ. He will lodge a complaint. Is he a community? How can you justify on this Judgement? ನೀವು 1977 ತೀರ್ಪಿನ ಆಧಾರದ ಮೇಲೆ ಈ ವಿಧೇಯಕವನ್ನು ತರುತ್ತಿದ್ದೀರಿ. It very clearly states that you cannot make it on the basis of an individual, it should be based on community. Public order should not be disturbed. ಆ ಒಂದು ಆಧಾರದ ಮೇಲೆ ಪ್ರಾವಿಷನ್ 3, 4, 5 ಏನಿದೆ, it is completely in violation of the Judgment itself, where the basis of this Bill is on that Judgment. ಈ ವಿಧೇಯಕ ತಂದಿರುವ ಬಗ್ಗೆ ಏನೆಲ್ಲಾ ಇದೆ, it is not community based. ಯಾರಾದರೂ ಉತ್ತರ ಕೊಡುವಾಗ ದಯವಿಟ್ಟು ನಮಗೆ ಹೇಳಿ. Anything affecting the community...., community ಯನ್ನು base ಆಗಿ ಇಟ್ಟುಕೊಂಡು, ನಮ್ಮ ದೇಶ ಮತ್ತು ರಾಜ್ಯ ಹಾಗೂ ನಗರಗಳನ್ನು base ಆಗಿ ಇಟ್ಟುಕೊಂಡು, ಈ ಒಂದು ವಿಧೇಯಕ ತಂದಿದ್ದರೆ, I would have appreciated. It is already there in the legal enactment. Why this has to be brought on an individual? ನಮ್ಮ ಅಣ್ಣನೋ, ತಮ್ಮನೋ ಅಥವಾ ಸ್ನೇಹಿತನೋ, blood relationship, marriage..... what this is? It is not affecting the society. ಈ ವಿಧೇಯಕವನ್ನು ತರಬೇಕು ಎನ್ನುವುದಾದರೆ ತನ್ನಿ. We appreciate it. ಆದರೆ ಈ ವಿಧೇಯಕವನ್ನು ತಂದಿರುವಂತಹದ್ದು, ಇದರ ಹಿಂದುಗಡೆ ಬೇರೇನೋ intention ಇದೆ. It is motivated. It is just to divert the things ಎನ್ನುವ ತರಹದಲ್ಲಿ ಇದೆ. It is not fair.

ಮಾನ್ಯ ಸಭಾಪತಿಯವರೇ, ನನಗೆ ಅನಿಸುವುದೇನೆಂದರೆ, ಇದರಲ್ಲಿ ಇನ್ನೊಂದು, Sub section (2) of Section 9 of the Bill reads thus:

> *"(2) The District Magistrate shall notify religious conversion on the notice board of the office of the District Magistrate and in the office of the Tahsildar and will call for objections in such cases where no objections were called earlier under section 8."*

ಹಾಗಾಗಿ, ನಾನು first Preamble of the Constitution ಅನ್ನು ಓದಿದ್ದು. ನನ್ನ ಹಕ್ಕನ್ನು ಕಿತ್ತುಕೊಂಡು, ನನಗೆ conversion ಆಗುವುದಕ್ಕೆ ಬಿಡುವುದೇ ಇಲ್ಲ. ನಾನು ಸ್ವಂತವಾಗಿ conversion ಆದರೆ ಅವೊತ್ತಿನಿಂದ ನನಗೆ ಹಿಂಸೆ ಇನ್ನು ಜಾಸ್ತಿಯಾಗುತ್ತದೆ. ನಾನು ಏತಕ್ಕಾಗಿ conversion ಆಗಿಬಿಟ್ಟೆ ಎಂದು ಅನಿಸುತ್ತದೆ. ನಾನು peace of mind ಗಾಗಿ conversion ಆಗಿರುತ್ತೇನೆ. ಅದಕ್ಕಾಗಿ ನಾನು ಕಥೆಯನ್ನು ಹೇಳಿದ್ದು. I want social status, peace of mind and I want to become one of the best citizens of India. For that purpose, on my own consciousness I want to convert myself into some other religion and I want to live there as a human being. ನಾನೊಬ್ಬ ಮನುಷ್ಯನಾಗಿ ಬದುಕಬೇಕು ಎಂದು ಹೇಳಿ ನಾನು convert ಆಗಿದ್ದು. ಆದರೆ, ನಾನು conversion ಆದಮೇಲೆ, ಸರ್ಕಾರ ಕೊಟ್ಟಿರುವಂತಹ ಪ್ರಾವಿಷನ್ ಯಾವ ಮಟ್ಟಕ್ಕೆ ಅವನನ್ನು ತೆಗೆದುಕೊಂಡು ಹೋಗುತ್ತದೆ ಎಂದರೆ, ಅವನು suicide ಮಾಡಿಕೊಳ್ಳುವ level ನವರೆಗೂ ಹೋಗುತ್ತದೆ. This is the provision. So, totally it is in violation of the Constitution and Judgement of the Supreme Court. Completely it is violation. ದಯವಿಟ್ಟು, ಈ ವಿಧೇಯಕವನ್ನು ತರುವಂತಹ ರೀತಿ ಇದಲ್ಲ. ಯಾವ್ಯಾವ ಜಾತಿಯಿಂದ ಆಚೆ ಕಡೆ ಹೋಗುತ್ತಾರೋ, ಅವರಿಗೆ status ಕೊಡುವಂತಹ ರೀತಿಯಲ್ಲಿ ಮಾಡಿ.

ಈ ಒಂದು ವಿಧೇಯಕವನ್ನು ಸಂವಿಧಾನಬದ್ಧವಾದಂತಹ ರೀತಿಯಲ್ಲಿ ತರಬೇಕು. ಕೇವಲ ತೋರುವಿಕೆಗೆ ಮಾಡುವಂತಹ ರೀತಿಯಲ್ಲಿ, ನಾವು ಏನೋ ಒಂದು ಧರ್ಮಕ್ಕೆ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೇವೆ ಎಂಬ ತೋರುವಿಕೆಗೆ ಮಾಡಬೇಡಿ. Be practical. ಸರ್ಕಾರ ಏನೇ ಮಾಡಿದರೂ, ಜನರು overall ಆಗಿ ಒಪ್ಪಬೇಕು. ಆ ರೀತಿಯಾದಂತಹ ಕಾನೂನು ತನ್ನಿ ಎಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ತಾವು ಮಾತನಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇದನ್ನು ಬೇಗ ಮುಗಿಸಿ ಎಂದು ಹೇಳಿದರೆ, ಇದು ಯಾವ ನ್ಯಾಯವಿದೆ ಹೇಳಿ ನೋಡೋಣ. ಮಾನ್ಯ ಸಭಾಪತಿಯವರೇ, ನಾನು ಸರಿಯಾಗಿ ಎದ್ದು ನಿಲ್ಲಲಿಲ್ಲ. ತಾವು ಮುಗಿಸಿ ಎಂದು ಹೇಳಿದರೆ, ಇದು ನ್ಯಾಯನಾ? ಇದು ಶೋಷಣೆಯಾಯಿತು. ಆ ಶೋಷಣೆಗೋಸ್ಕರನೇ ಇದು. ನನಗೆ ಶೋಷಣೆ ಮಾಡುತ್ತಿದ್ದೀರಿ. ಆಡಳಿತ ಪಕ್ಷದಲ್ಲಿ ಒಂದಂತೂ ತೀರ್ಮಾನವಾಗಿದೆ. ರಾತ್ರಿ ಎರಡು ಗಂಟೆಯವರಿಗೆ ಬೇಕಾದರೂ ಭಾಷಣ ಮಾಡಿ, ಈ ವಿಧೇಯಕವನ್ನು ಪಾಸ್ ಮಾಡಿಕೊಂಡು ಹೋಗುವುದೇ ಸರಿ ಎಂದು ಆಡಳಿತ ಪಕ್ಷದವರು ಕುಳಿತುಕೊಂಡಿದ್ದಾರೆ. ಆ ವಿಧೇಯಕವನ್ನು ಪಾಸ್ ಮಾಡಿಕೊಂಡು ಹೋಗುತ್ತಾರೆ, ಅದರಲ್ಲೇನು ಎರಡು ಮಾತಿಲ್ಲ. ಅದಕ್ಕೆ justification ಬೇಕಲ್ಲವೇ? ಮಾನ್ಯ ಸದಸ್ಯರೆಲ್ಲರೂ ಇಷ್ಟೊಂದು ಸಮಯವನ್ನು ತೆಗೆದುಕೊಂಡು ಮಾತನಾಡಿದರು. ಮೊದಲು ಮಾನವನು ಏನಾಗಬೇಕೆಂಬುದರ ಬಗ್ಗೆ ನಮಗೆ ಹೇಳುತ್ತಾರೆ ನೋಡಿ.

**"ಏನಾದರೂ ಆಗು ನೀ ಬಯಸಿದಂತೆ ಆಗು.**
**ಏನಾದರೂ ಆಗು ನಿನ್ನ ಇಚ್ಛೆಯಂತೆ ಆಗು**
**ಏನಾದರೂ ಸರಿಯೇ, ಮೊದಲು ಮಾನವನಾಗು**
**ಮೊದಲು ಮಾನವನಾಗು."**

ಇವತ್ತು ನಾವೆಲ್ಲರೂ ಮೊದಲು ಮಾನವರಾಗಬೇಕಾಗಿದೆ. ಹಾಗಾಗಿ ಬಿಟ್ಟರೆ, ....

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ,

**" ಅವರವರ ಭಾವಕ್ಕೆ ಅವರವರ ಬಕುತಿಗೆ**
**ಅವರವರ ತೆರನಾಗಿ ಇರುತಿಹನು ಶಿವಯೋಗಿ**
**ಹರನ ಭಕ್ತರಿಗೆ ಹರ**
**ಹರಿಯ ಭಕ್ತರಿಗೆ ಹರಿ ನರರೇನು ಭಾವಿಪರೋ ಅದರಂತೆ ತೋರುವನು**
**ಯೇಸು ಭಕ್ತನಿಗೆ ಯೇಸು**
**ಅಲ್ಲನ ಭಕ್ತನಿಗೆ ಅಲ್ಲ."**

ಹಾಗಾಗಿ ಅವರವರ ಧರ್ಮದಲ್ಲಿ ಬದುಕುವುದಕ್ಕೆ ಆದರೆ, ಸಮಾಜ ಚೆನ್ನಾಗಿ ಇರುತ್ತದೆ.

(ಮುಂದು)

**(866) 15-09-2022, 6.10, ಟಿಸಿಹೆಚ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮ್ಮ ಪ್ರತಾಪ್ ಸಿಂಹರವರು ಯಾವಾಗಲೂ ಹೇಳುತ್ತಿರುತ್ತಾರೆ. ಶ್ರೀ ಜಿ.ಎಸ್.ಶಿರುದ್ರಪ್ಪನವರು;

'ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ'

ಎಂದು ಹೇಳುತ್ತಾರೆ. ಅಂದರೆ ನಮ್ಮಲ್ಲಿರತಕ್ಕಂಥ ಪ್ರೀತಿ ಸ್ನೇಹಗಳ ಗುರುತಿಸುವುದಕ್ಕಾಗದೇ ನಾವು ಎಲ್ಲೆಲ್ಲೋ ಕಲ್ಲು ಮಣ್ಣುಗಳ ಗುಡಿಯೊಳಗೆ ದೇವರನ್ನು ಹುಡುಕತಕ್ಕಂಥ ಪರಿಸ್ಥಿತಿಯಲ್ಲಿ ಇವತ್ತಿನ

ದಿವಸ ಇದ್ದೇವೆ. ನಮ್ಮ ನಮ್ಮಲ್ಲಿರತಕ್ಕಂಥ ಅನುಮಾನಗಳಲ್ಲಿ ಇಂತಹ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು, ಸಂರಕ್ಷಣಾ ವಿಧೇಯಕ, 2022 ಬಿಲ್ ಇದು ನಿಜವಾಗಲೂ ಬಹಳ ಘೋರ ಅಪರಾಧ ಎಂದು ಹೇಳುತ್ತಿದ್ದೇನೆ. It is already inbuilt in our Constitution. ಅದು ಈಗಾಗಲೇ ನಮ್ಮ Constitution ನಲ್ಲಿ inbuilt ಇದೆ. 'ಯಾರು ಯಾವತ್ತು ಅವರ ಇಚ್ಛೆಯಂತೆ ಯಾವ ಧರ್ಮಕ್ಕೆ ಬೇಕಾದರೂ ಹೋಗಲು ಸರ್ವ ಸ್ವತಂತ್ರರು' ಎಂದು ಹೇಳಲಾಗಿದೆ. ಮಾನ್ಯ ಸಭಾಪತಿಯವರೇ, ಆದರೆ ಈಗ ಮತ್ತೊಂದು ಬಾರಿ ತಂದಿದ್ದಾರೆ. ಈ ಬಿಲ್ ತಂದಿರತಕ್ಕಂಥ ವಿಚಾರದಲ್ಲಿ ನಮ್ಮ ಯಾರಿಂದಲೂ ಕೂಡ ವಿರೋಧ ಇಲ್ಲ. ಆದರೆ ಅದರೊಳಗಡೆ ಇರತಕತಕ್ಕಂಥ hidden agenda ಇದೆಯಲ್ಲಾ, ಆ hidden agenda ಕ್ಕೆ ನಮ್ಮ ವಿರೋಧವಿದೆ. ಪದೇ ಪದೇ ನಮ್ಮ ಗೃಹ ಸಚಿವರು ನಾವು ಯಾವುದೇ ಒಂದು ಕಮ್ಯೂನಿಟಿಯನ್ನು ಇದರಲ್ಲಿ ನೇರವಾಗಿ ಗುರುತು ಮಾಡುತ್ತಿಲ್ಲವೆಂದು ಹೇಳಿದರು. ನಮ್ಮ ಸ್ನೇಹಿತರಾದ ಡಾ.ವೈ.ಎ.ನಾರಾಯಣಸ್ವಾಮಿಯವರು ಕ್ರಿಶ್ಚಿಯನ್ ಕಮ್ಯೂನಿಟಿ ಎಂದು ಮೂರು ಬಾರಿ ಹೇಳಿದರು. ಆಮೇಲೆ ಶ್ರೀಮತಿ ಭಾರತಿ ಶೆಟ್ಟಿಯವರು ಕೂಡ ಹೇಳಿದರು. ನಾವು ಯಾವುದೂ ಕೂಡ ಇದರಲ್ಲಿ ಇಟ್ಟಿಲ್ಲ, ಇದು ನಮ್ಮ hidden agenda ಅಲ್ಲ, ನಾವು ಒಂದು ಕಮ್ಯುನಿಟಿಯನ್ನು ಇಲ್ಲಿ naming ಮಾಡುತ್ತಿಲ್ಲವೆಂದು ಎಂದು ಹೇಳಿದರು. ಇದು ಎಷ್ಟರಮಟ್ಟಿಗೆ ಸರಿ ಎನ್ನುವುದನ್ನು ತಾವೇ ಆಲೋಚನೆ ಮಾಡಬೇಕಾಗುತ್ತದೆ. ಪುರಂದರ ದಾಸರು "ಮಾನವ ಜನ್ಮ . . .

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ. . .

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಸುಮ್ಮನೆ ಕೂರುವವನಲ್ಲ. ನಾನು ದಯವಿಟ್ಟು ಕೈ ಮುಗಿಯುತ್ತೇನೆ. ತಾವೇಕೆ ನನಗೆ ಆ ರೀತಿ ಮಾಡುತ್ತೀರಿ, ನನಗೆ disturb ಮಾಡಬೇಡಿ.

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ನಾನು ನಿಮಗೆ ಬೇಗ ಮಾತನಾಡಿ ಮುಗಿಸುವಂತೆ ಕೇಳುತ್ತಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಮಾನವ ಜನ್ಮ ಬಹು ದೊಡ್ಡದು ಹುಚ್ಚಪ್ಪಗಳಿರಾ, ಹಾನಿಗೊಡಬೇಡಿ ನಾವೆಲ್ಲಾ ಮಾನವರೆ. ಹಿಂದೂ, ಕ್ರಿಶ್ಚಯನ್, ಮುಸಲ್ಮಾನರು ಮತ್ತು ಯಾರು ಬೇಕಾದರೂ ಇರಬಹುದು. ಇದು 12ನೇ ಶತಮಾನದಲ್ಲಿ ಹೇಳಿರತಕ್ಕಂಥ ಮಾತು. 14ನೇ ಶತಮಾನದಲ್ಲಿ ಕನಕದಾಸರು;

"ಎಂಭತ್ನಾಲ್ಕು ಲಕ್ಷ ಜೀವ ರಾಶಿಗಳ ದಾಟಿ ಬಂದ ಈ ಶರೀರ,
ತಾನಲ್ಲಾ ತನ್ನದಲ್ಲ, ಆಸೆ ತರವಲ್ಲಾ,
ಮುಂದೆ ಬಹುದಲ್ಲಾ, ದಾಸನಾಗು ವಿಶೇಷನಾಗು,
ದಾಸನಾಗು ಭವಪಾಷನೀಗು"

ಎಂದು ಹೇಳಿದ್ದಾರೆ. ಹಾಗಾದರೆ ಬುದ್ಧ, ಬಸವ, ಅಂಬೇಡ್ಕರ್, ಪುರಂದರ ದಾಸರು, ಕನಕದಾಸರುಗಳ ಹೆಸರನ್ನು ನಾವೇಕೆ ಪದೇ ಪದೇ ಹೇಳಬೇಕು? ರಾಷ್ಟ್ರಕವಿ, ಯುಗದ ಕವಿ, ಮೊಟ್ಟಮೊದಲ ಜ್ಞಾನಪೀಠ ಪ್ರಶಸ್ತಿ ಪಡೆದಂತಹ ನಮ್ಮ ಕುವೆಂಪುರವರ ನಾಡಗೀತೆಯನ್ನು ನಮ್ಮ ಪ್ರತಿಯೊಂದು ಮಕ್ಕಳಿಂದ ಏಕೆ ಹಾಡಿಸಬೇಕು?

"ಸರ್ವಜನಾಂಗದ ಶಾಂತಿಯ ತೋಟ
ರಸಿಕರ ಗಂಗಳ ಸೆಳೆಯುವ ನೋಟ
ಹಿಂದೂ, ಕ್ರೈಸ್ತ, ಮುಸಲ್ಮಾನ
ಪಾರಸೀಕ ಜೈನರುದ್ಯಾನ
ಜನಕನ ಹೋಲುವ ದೊರೆಗಳ ಧಾಮ
ಗಾಯಕ ವೈಣಿಕ ರಾರಾಮ
ಕನ್ನಡ ಎನೆಕುಣಿದಾಡುವ ಗೇಹ
ಕನ್ನಡ ತಾಯಿಯ ಮಕ್ಕಳ ದೇಹ,
ಜೈ ಭಾರತ ಜನನಿಯ ತನುಜಾತೆ,
ಜಯಹೇ ಕರ್ನಾಟಕ ಮಾತೆ"

ಎಂದು ಯಾಕ್ರೀ ನಾವು ನಮ್ಮ ಮಕ್ಕಳಿಂದ ಹೇಳಿಸಬೇಕು. Where we are? ನಾವು ಎಲ್ಲಿದ್ದೀವಿ? ಅದಕ್ಕೆ ದಯಮಾಡಿ, ನಾನು ಇದರಲ್ಲಿ ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ. ನಮ್ಮಲ್ಲಿ ನಂಬಿಕೆ ಬಹಳ ಮುಖ್ಯವಾಗುತ್ತದೆ. ಡಾ.ಬಿ.ಆರ್.ಅಂಬೇಡ್ಕರ್‌ರವರು ಕೊಟ್ಟಿರತಕ್ಕಂಥ Constitution of India is very strong, clean and crystal clear. ನಮ್ಮದು ಒಂದು ಪ್ರಜಾಪ್ರಭುತ್ವ ರಾಷ್ಟ್ರ. This is the beauty of democracy. ಆ beauty of democracy ನ್ನು ಇವತ್ತಿನ ದಿವಸ ನಾವು ಇಡೀ ಪ್ರಪಂಚಕ್ಕೆ ಸಾರುತ್ತಿದ್ದೇವೆ. ಇದರ ಜೊತೆಗೆ ಭಾರತ ದೇಶ ಭಾವೈಕ್ಯತೆಯ ನಾಡು. ಈ ಭಾವೈಕ್ಯತೆಯನ್ನು ಇಡೀ ಪ್ರಪಂಚಕ್ಕೆ ಯಾರಾದರೂ ಸಾರಿದ್ದರೆ, ಭಾವೈಕ್ಯತೆಯನ್ನು ಕಲಿಸಿಕೊಟ್ಟಿದ್ದಾರೆಂದರೆ, ನಮ್ಮ 'ಭಾರತ ದೇಶ' ಎಂದು ನಾನು ಇವತ್ತಿನ ದಿವಸ ಅತ್ಯಂತ ಸಂತೋಷದಿಂದ ಹೇಳುತ್ತಿದ್ದೇನೆ. 'ವಸುಧೈವ ಕುಟುಂಬಕಂ' ಎಂದು ಮಾತನಾಡತಕ್ಕಂಥದ್ದಲ್ಲ. 'ಸರ್ವೇಜಹಃ ಸುಖಿನೋಭವಂತು' ಎಂದು ಹೇಳಿದರು. ಇದೇನಾ 'ಸರ್ವೇಜಹಃ ಸುಖಿನೋಭವಂತು. ಸ್ವಾಮಿ, ನಾವ್ಯಾರೂ ಭಯಪೀಡಿತರಾಗಿ ಇರಬಾರದು. ಇಲ್ಲಿ ನಾವು ಸ್ನೇಹ, ಪ್ರೀತಿ ವಿಶ್ವಾಸಗಳಿಂದ ಬದುಕುವಂಹ ಭರತಖಂಡದಲ್ಲಿದ್ದೇವೆ. ಈ ಭರತ ಖಂಡದಲ್ಲಿ ಪ್ರೇಮ, ಪ್ರೀತಿ ಮತ್ತು ವಿಶ್ವಾಸದಿಂದ ಏನನ್ನು ಬೇಕಾದರೂ ಗೆಲ್ಲಬಹುದು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವುದಕ್ಕೆ majority ಪ್ರೀತಿ, ಸ್ನೇಹ ಮತ್ತು ವಿಶ್ವಾಸದಿಂದಲೇ ಮಹಾತ್ಮ ಗಾಂಧೀಜಿಯವರು ಹೋರಾಟ ಮಾಡಿರತಕ್ಕಂಥದ್ದು. ಆದರೆ ಇವತ್ತು ಆ ರೀತಿ ಇಲ್ಲ. ದಯಮಾಡಿ, ನಾನು ಯಾರಿಗೂ ಕೂಡ ಉಪದೇಶ ಮಾಡುತ್ತಿಲ್ಲ. ನನ್ನ ಮನದಾಳದಲ್ಲಿರತಕ್ಕಂಥ ವಿಷಯಗಳನ್ನು ಹೇಳುತ್ತಿದ್ದೇನೆ. ಅದಕ್ಕೆ ನಾನು ಹೃದಯ ಹೃದಯಗಳ ವಾತ್ಸಲ್ಯಕ್ಕೆ ಕೊಂಡಿ ಅವಶ್ಯಕತೆ ಇದೆಯೇ? ಹೌದು ಅದು ಇದೆ. ಯಾವಾಗ ಎಂದರೆ, ಒಬ್ಬರನ್ನೊಬ್ಬರು ಅರಿತಾಗ ಮಾತ್ರ. ಇವತ್ತಿನ ದಿವಸ ಅಂತಹ ಅರಿತ ಹೃದಯಗಳ ಬಾಂಧವ್ಯಕ್ಕೆ ಕೊಂಡಿ ಅವಶ್ಯಕತೆ ಇದೆ. ಅದು ಹಿಂದುಗಳಿರಬಹುದು, ಮುಸಲ್ಮಾನರಿರಬಹುದು ಮತ್ತು ಕ್ರಿಶ್ಚಿಯನ್ಸ್ ಇರಬಹುದು. ಏಕೆಂದರೆ, ಈ ನಾಡಿಗೆ ಅವರದೇ ಆದಂತಹ ಕೊಡುಗೆ ಇದೆ. ಇವತ್ತಿನ ದಿವಸ ಬೆಂಗಳೂರಿನಲ್ಲೇ ಇರತಕ್ಕಂಥ National Law School of India University ಗೆ one of the best

Law schools in the World ಎಂದು ಹೆಸರಿದೆ. ಇನ್ನೊಂದು ಹೆಸರು ಕ್ರೈಸ್ಟ್ (Christ) ಯೂನಿವರ್ಸಿಟಿ. ಆ ಕ್ರೈಸ್ಟ್ ಯೂನಿವರ್ಸಿಟಿಯಲ್ಲಿ ನಮ್ಮ ಎಷ್ಟೋ ಜನ ಮಕ್ಕಳು ಅಲ್ಲಿ ಕಲಿಯುತ್ತಿದ್ದಾರೆ. ಅಷ್ಟು ಜನ ಇವತ್ತಿನ ದಿವಸ ಸೀಟಿ ಹೊಡೆದು strong ಆಗಿ ಕೇಳುತ್ತಿದ್ದಾರೆ. ಅಲ್ಲಿ ತಮ್ಮ ಯಾರೂ ಮಕ್ಕಳು ಓದುತ್ತಿಲ್ಲವೇ? ಇವತ್ತಿನ ದಿವಸ, ‘Christ University is one of the best universities’ ಎಂದು ಹೆಸರು ಬಂದಿದೆ.

**ಶ್ರೀ ಪ್ರಾಣೇಶ್ ಎಂ.ಕೆ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. I am sorry. ನಾನು yield ಆಗಿಲ್ಲ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪ್ರಾಣೇಶ್ ಎಂ.ಕೆಯವರೇ, ಅವರು ಮಾತನಾಡಿ ಮುಗಿಸುತ್ತಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪ್ರಾಣೇಶ್ ಎಂ.ಕೆ:-** ಮಾನ್ಯ ಸಭಾಪತಿಯವರೇ, ಇದು ತಮಗೆ ಗೊತ್ತಿರಲಿ. ಸೆಂಟ್ ಜೋಸೆಫ್ ಯೂರೋಪಿಯನ್ ಸ್ಕೂಲ್‌ನಲ್ಲಿ ಗೋಡೆ ಮೇಲೆ 50% admissions only for Catholics after 50% others..... ಎಂದು ಬೋರ್ಡ್ ಹಾಕಿದ್ದಾರೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, **(ಗೊಂದಲ)** No, That is not true. Hon'ble member don't

tell lies. I will challenge you. ತಾವು ಏನು ಮಾತನಾಡುತ್ತಿದ್ದೀರಿ. ಯಾವ ಸೇಂಟ್ ಜೋಸೆಫ್ ಸ್ಕೂಲ್‌ನಲ್ಲಿ ಶೇ.50 ಇದೆ. ಅವರು ಸುಳ್ಳು ಹೇಳುತ್ತಿದ್ದಾರೆ. ಆ ರೀತಿ ಯಾವ ಕಾಲೇಜ್‌ನಲ್ಲಿದೆ ಹೇಳಲಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಒಂದು ಸದನ ಸಮಿತಿ ಮಾಡಿ.

**(ಗೊಂದಲ)**

**ಶ್ರೀ ಪ್ರಾಣೇಶ್ ಎಂ.ಕೆ:-** ಮಾನ್ಯ ಸಭಾಪತಿಯವರೇ, No, ನನ್ನ ಮಗನನ್ನು ಬಿಟ್ಟಿದ್ದೇನೆ. ನಾನೇ ನನ್ನ ಕಣ್ಣಾರೆ ನೋಡಿದ್ದೇನೆ. ಇದು ಸುಳ್ಳು ಎನ್ನುವುದಾದರೆ, ಅವರ ರಾಜೀನಾಮೆ ಇಲ್ಲವೇ ನನ್ನ ರಾಜೀನಾಮೆ . . .

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಯಾವ ಸ್ಕೂಲ್‌ನಲ್ಲಿ ಆ ರೀತಿ ಇದೆ? ಯಾವ ಕಾಲೇಜ್‌ನಲ್ಲಿದೆ. ನಾವು ಅಲ್ಲೇ ಕಲಿತು ಬಂದವರು.

**(ಗೊಂದಲ)**

**ಶ್ರೀ ಪ್ರಾಣೇಶ್ ಎಂ.ಕೆ:-** ಮಾನ್ಯ ಸಭಾಪತಿಯವರೇ, ಅಲ್ಲಿ ನನ್ನ ಮಗನನ್ನು ಬಿಟ್ಟಿದ್ದೇನೆ. ಸೇಂಟ್ ಜೋಸೆಫ್ ಯೂರೋಪಿಯನ್ ಸ್ಕೂಲ್.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಆ ರೀತಿ ಯಾವ ಕಾಲೇಜ್‌ನಲ್ಲೂ ಇಲ್ಲ. ಎಲ್ಲೂ ಕೂಡ ಅವರು ಅವರಿಗೆನೇ ಕೊಡುತ್ತಾರೆಂದೇನಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್ ರವರೇ, ಅವರು, ಅವರ ಮಗನನ್ನು ಬಿಟ್ಟಿದ್ದೇನೆಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಸುಳ್ಳು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ನಾನು ಸುಳ್ಳು ಹೇಳುತ್ತಿಲ್ಲ. ಯಾಕ್ರೀ ಸುಳ್ಳು ಹೇಳಬೇಕು. ಸುಳ್ಳು ಹೇಳುತ್ತಿದ್ದೇನೆಂದರೆ, ತಂದು prove ಮಾಡಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ನೀವು ಪ್ರೂವ್ ಮಾಡಿ.

**ಸಭಾಪತಿಯವರು:–** ಮಾನ್ಯ ಪ್ರಕಾಶ್ ಕೆ.ರಾಥೋಡ್ ರವರೇ, ಇದನ್ನು ದಯವಿಟ್ಟು ಬೆಳೆಸಬೇಡಿ. ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ತಮ್ಮ ಮಾತನ್ನು ಮುಗಿಸಿಬಿಡಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡುವುದಕ್ಕಾಗುವುದಿಲ್ಲ. ಯಾವ ಸಂಘ–ಸಂಸ್ಥೆಗಳಲ್ಲೂ ಕೂಡ ಆ ರೀತಿ ಹಾಕುವುದಿಲ್ಲ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ.ರಾಥೋಡ್:–** ಮಾನ್ಯ ಸಭಾಪತಿಯವರೇ, ಎಲ್ಲೂ ಹಾಕಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡ ರವರೇ, ತಮ್ಮ ಸಮಯ ಮುಗಿಯುತ್ತಿದೆ, ತಾವು yield ಆಗಬೇಡಿ. ದಯವಿಟ್ಟು ತಾವು ತಮ್ಮ ಮಾತನ್ನು ಮುಗಿಸಿಬಿಡಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆಯಿತು, ಸಂತೋಷ.

**(ಗೊಂದಲ)**

**ಶ್ರೀಮತಿ ಭಾರತಿಶೆಟ್ಟಿ (ನಾಮನಿರ್ದೇಶಕರು):–** ಮಾನ್ಯ ಸಭಾಪತಿಯವರೇ,. . .

**(ಗೊಂದಲ)**

**ಸಭಾಪತಿಯವರು:–** ಶ್ರೀಮತಿ ಭಾರತಿ ಶೆಟ್ಟಿಯವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಬಳೆ ಹಾಕಬೇಡಿ, ಕುಂಕುಮ ಹಾಕಬೇಡಿ, ಹಣೆಯಲ್ಲಿ ಬಟ್ಟು ಇಡಬೇಡಿ ಎಂದು ಶಾಲೆಯವರು protest ಮಾಡಿದ್ದು ತಪ್ಪೇ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಆ ರೀತಿ ಇರಬಹುದು. ಆದರೆ ಜಾತಿ ಧರ್ಮದ ಹೆಸರಿನಲ್ಲಿ ಯಾರೂ ಹೇಳಿಲ್ಲ. ಕುಂಕುಮ, ಬಳೆ ತೊಡಬೇಡಿ ಎನ್ನುವುದು ಇರಬಹುದು. ಕ್ಯಾಥೋಲಿಕ್ ನವರಿಗೆ ಮಾತ್ರ ಶೇ.೫೦ ರಷ್ಟು ಕೊಡುತ್ತೇವೆಂದು ಎಲ್ಲೂ ಇಲ್ಲ.

**(ಗೊಂದಲ)**

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಿ.ಕೆ.ಹರಿಪ್ರಸಾದ್‌ರವರೇ, 2006 ರಲ್ಲಿ ನಾನು ನನ್ನ ಮಗನ ಅಡ್ಮಿಷನ್ ಟೈಂನಲ್ಲಿ ನಾನು ನನ್ನ ಕಣ್ಣಾರೆ ನೋರತಕ್ಕಂಥದ್ದನ್ನು ನಾನು ನಿಮಗೆ ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಆ ರೀತಿ ಹಾಕಲು ಸಾಧ್ಯವೇ ಇಲ್ಲ. **(ಗೊಂದಲ)** ನಾನು ರಾಜೀನಾಮೆ ಕೊಡುವುದಕ್ಕೆ ತಯಾರಿದ್ದೇನೆ. ನೀವು ರಾಜೀನಾಮೆ ಕೊಡುತ್ತೀರಾ. (**ಗೊಂದಲ)** ಈಗ ಕೆಲವರಿಗೆ.... (**ಗೊಂದಲ)** Monopoly ಇದು. ಅದಕ್ಕೆ ಇವರು ಈ ರೀತಿ ಕಿತ್ತಾಡುತ್ತಿರುವುದು.

**(ಗೊಂದಲ)**

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ನಾನು ನೋಡಿರುವಂಥದ್ದು.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೇ ಒಂದು ನಿಮಿಷ. . .

**(ಗೊಂದಲ)**

**ಶ್ರೀ ಪ್ರಾಣೇಶ್ ಎಂ.ಕೆ:–** ಮಾನ್ಯ ಸಭಾಪತಿಯವರೇ, ಈಗ ತೆಗೆಸಿ, ನಾನೇ ನನ್ನ ಕಣ್ಣಾರೆ ನೋಡಿತಕ್ಕಂಥದ್ದು.

**(ಗೊಂದಲ)**

**ಸಭಾಪತಿಯವರು:–** ಈಗ ವಿಷಯ ಮುಗಿಸಬೇಕೋ ಬೇಡವೋ? ಆಯಿತು ಬಿಡಿ. ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ದಯವಿಟ್ಟು conclude ಮಾಡಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಶ್ರೀಮತಿ ಭಾರತಿ ಶೆಟ್ಟಿಯವರೇ, ನೀವ್ಯಾರು ಮಾತನಾಡುವಾಗ ನಾನು ಮಾತನಾಡಿಲ್ಲ, ಈಗ ತಾವೇಕೆ ಮಧ್ಯೆ ಮಾತನಾಡುತ್ತಿದ್ದೀರಿ?

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ರಕ್ಷೆ ಕಟ್ಟಿರುವುದಕ್ಕೆ ವಿರೋಧ ಮಾಡಿದ್ದಾರೆ . . .

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ತಾವು ದಯವಿಟ್ಟು conclude ಮಾಡಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಏಕೆ ಸುತ್ತೂರು ಶಿಕ್ಷಣ ಸಂಸ್ಥೆ ಮಾದರಿ ಶಿಕ್ಷಣವನ್ನು ಕೊಡುತ್ತಿಲ್ಲವೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ರವಿಕುಮಾರ್‌ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಎನ್.ರವಿಕುಮಾರ್‌ರವರು, ನೀವು ಮಾತನಾಡುವಾಗ ನಾನು ಮಧ್ಯೆ ಎದ್ದುನಿಂತು ಮಾತನಾಡಿಲ್ಲ.

ಯಾರು ಮಾತನಾಡಿದ್ದಾರೋ ಅವರಿಗೆ ಮಾತನಾಡಿ. ಈಗ ತಾವೇಕೆ ಮಧ್ಯೆ interfere ಮಾಡುತ್ತಿದ್ದೀರಿ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಅವರ ಕಡೆ ನೋಡಿಕೊಂಡು ಏಕೆ ಮಾತನಾಡುತ್ತೀರಿ. ದಯವಿಟ್ಟು ತಾವು ನನ್ನ ಕಡೆ ನೋಡಿಕೊಂಡು ಮಾತನಾಡಿ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಎಲ್ಲಾ ಮರೆತೇ ಹೋಯಿತು.

**(ಗೊಂದಲ)**

**ಸಭಾಪತಿಯವರು:–** ಎದ್ದುನಿಂತಿರುವವರೆಲ್ಲಾ ದಯವಿಟ್ಟು ಕುಳಿತುಕೊಳ್ಳಿ, ನಾನು ಹ್ಯಾಂಡಲ್ ಮಾಡುತ್ತೇನೆ. **(ಗೊಂದಲ)** ಮಾನ್ಯ ಎಸ್.ಎಲ್.ಭೋಜೇಗೌಡ ರವರೇ, ತಾವು ದಯವಿಟ್ಟು ಒಂದು ಸುಂದರವಾದ ಹಾಡನ್ನು ಹೇಳಿ ಮುಗಿಸಿಬಿಡಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಏಕೆ particular institution ಹೆಸರು ಹೇಳಿದೆನೆಂದರೆ, **(ಗೊಂದಲ)** ಏಕೆ, ಏನೆಂದು ಹೇಳಬೇಕಲ್ಲವೇನ್ರಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡ ರವರೇ, ತಾವು ಮತ್ತೆ ಆ ಕಡೆ ನೋಡಬೇಡಿ. ನೀವು ನನ್ನ ಕಡೆ ನೋಡಿ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಬಿಲ್‌ಗೂ ಆ institute ಗೂ ಏನು ಸಂಬಂಧ?

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈ ಬಿಲ್ ನಂ.೨ರಲ್ಲಿ ಧಾರ್ಮಿಕ ಮತಾಂತರೋತ್ತರ ಘೋಷಣೆ:- (1) (೮) ಆದ ನಂತರ, ವಿವರಣೆಯ ಕೊನೆಯಲ್ಲಿ ಏನು ಹೇಳಿದ್ದಾರೆಂದರೆ, ಈ ಉಪ ಪ್ರಕರಣದ ಉದ್ದೇಶಕ್ಕಾಗಿ " ಸಂಬಂಧಪಟ್ಟ ಪ್ರಾಧಿಕಾರ ಎಂದರೆ, ಆತನ ನಿಯೋಜಕ, ಕಂದಾಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಇತರ ಸಂಬಂಧಪಟ್ಟ ಇಲಾಖೆ, ನಗರ ಮತ್ತು ಗ್ರಾಮೀಣ ಸ್ಥಳೀಯ ನಿಕಾಯಗಳ ಸಿಬ್ಬಂದಿಗಳು ಶೈಕ್ಷಣಿಕ ಸಂಸ್ಥೆಗಳ ಪ್ರಾಂಶುಪಾಲರು ಅಥವಾ ಮುಖ್ಯೋಪಾಧ್ಯಾಯರು ಇತ್ಯಾದಿ" ಎಂದು ಹೇಳಿದ್ದಾರೆ. ಇದನ್ನೆಲ್ಲಾ ಇದರಲ್ಲಿ ತರುವ ಅವಶ್ಯಕತೆ ಇದೆಯೇ ಮಾನ್ಯ ಗೃಹಸಚಿವರೇ? ಒಬ್ಬರು ಪ್ರಾಂಶುಪಾಲರು ಮತ್ತು ಮುಖ್ಯೋಪಾಧ್ಯಾಯರು ಆ institution ಗಳಲ್ಲಿ ಎಲ್ಲೂ ಆಗಿಲ್ಲವೆಂದು ಹೇಳುತ್ತಿದ್ದಾರೆ. ಪ್ರಾಂಶುಪಾಲರು ಮತ್ತು ಮುಖ್ಯೋಪಾಧ್ಯಾಯರ ಹೆಸರನ್ನು ಏಕೆ ಹೇಳಿದ್ದೀರಿ?

**(ಈ ಹಂತದಲ್ಲಿ ಡಾ.ವೈ.ಎ.ನಾರಾಯಣಸ್ವಾಮಿಯವರು ತಮ್ಮ ಸ್ಥಾನ ಬಿಟ್ಟು ಬೇರೆ ಸ್ಥಾನದಲ್ಲಿ ನಿಂತುಕೊಂಡಿದ್ದರು)**

**ಸಭಾಪತಿಯವರು:-** ಡಾ.ವೈ.ಎ.ನಾರಾಯಣಸ್ವಾಮಿಯವರೇ, ತಾವು ದಯವಿಟ್ಟು ನಿಮ್ಮ ಸೀಟಿನಲ್ಲಿ ಬಂದು ಕುಳಿತುಕೊಳ್ಳಿ. ಮಾನ್ಯ ಭೋಜೇಗೌಡರು ತಮ್ಮ ಮಾತನ್ನು ಮುಗಿಸುತ್ತಿದ್ದಾರೆ.

**(ಮುಂದು)**

(867)15.9.2022/6.20/ಎಂ.ಎಂ-ಕೆ.ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಪ್ರಾಂಶುಪಾಲರು ಮುಖ್ಯೋಪಾಧ್ಯಾಯರ ವಿಚಾರವನ್ನು ತಂದಿರುವುದರಿಂದ ನಾಳೆ ಬೆಳಗ್ಗೆ ಇದು institution ಗಳಲ್ಲಿ ದುರುಪಯೋಗವಾಗಬಾರದು. ಅವರು ಇಂತಹ ಒಳ್ಳೆಯ ಶಿಕ್ಷಣ ಕೊಡುತ್ತಿದ್ದಾರೆ, ಸಮಾಜಮುಖಿಯಾಗಿ ಕೆಲಸ ಮಾಡುತ್ತಿದ್ದಾರೆ. ಆ ಸಂದರ್ಭದಲ್ಲಿ ಪ್ರಾಂಶುಪಾಲರು, ಮುಖ್ಯೋಪಾಧ್ಯಾಯರು ಯಾರೋ ಇಲ್ಲ ಸಲ್ಲದವರು complaint ಕೊಟ್ಟರೆ ಬೆಳಗ್ಗೆ ಆ ಮುಖ್ಯೋಪಾಧ್ಯಾಯರನ್ನು, ಪ್ರಾಂಶುಪಾಲರನ್ನು ಎಳೆದುಕೊಂಡು ಬಂದು ಪೋಲೀಸ್ ಸ್ಟೇಷನ್‌ನಲ್ಲಿ ಕೂರಿಸಿದರೆ, what about the fate of the institution? ಅವರ ಪರಿಸ್ಥಿತಿ ಏನಾಗಬಹುದು? ಅದಕ್ಕೋಸ್ಕರವಾಗಿ ನಿರ್ದಿಷ್ಟವಾಗಿ ಆ ಸಂಸ್ಥೆಯ ಹೆಸರನ್ನು ತೆಗೆದದ್ದು ಬಿಟ್ಟರೆ ಬೇರೆ ಯಾವುದೇ ದೃಷ್ಟಿ ಇರಲಿಲ್ಲ. ಈ ನಾಡಿಗೆ ಪ್ರತಿಯೊಬ್ಬರದ್ದೂ ಅವರದ್ದೇ ಆದಂತಹ ಕೊಡುಗೆ ಇದೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ದಯವಿಟ್ಟು ಮುಗಿಸಿ. you have taken time. Conclude ಮಾಡಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ನೀವು ಹೇಗೆ ಹೇಳುತ್ತಿದ್ದೀರಿ ಎಂದರೆ, ಶ್ರೀ ಸುಬ್ರಾಯ ಚೊಕ್ಕಾಡಿ ಅವರ ಕವಿತೆ ಜ್ಞಾಪಕಕ್ಕೆ ಬರುತ್ತಿದೆ. He is one of the famous…….

*ಮುನಿಸು ತರವೇ ಮುಗುದೆ*

*ಹಿತವಾಗಿ ನಗಲು ಬಾರದೆ*

*ಕರಿಮುಗಿಲ ಬಾನಿನಲ್ಲಿ ಮಿಂಚರಳಲು*

*ತಾರೆಗಳು ಮೈಯ ಬಳಸಿ ಝುಮ್ಮೆನ್ನಲು*

*ನವಭಾವ ತುಂಬಿ ತುಂಬಿ ಮನ ಹಾಡಲು*

*ಮುನಿಸೇತಕೆ ಈ ಬಗೆ ಮೂಡಿದೆ*

*ಮುನಿಸು ತರವೇ ಮುಗುದೆ*

*ಹಿತವಾಗಿ ನಗಲು ಬಾರದೆ॥ಪ॥*

*ಎಷ್ಟೊಂದು ಕಾಲದಿಂದ ಹಂಬಲಿಸಿದೆ*

*ನೀ ಬಂದು ಸೇರಿ ನನ್ನ ಮುದಗೊಳಿಸಿದೆ*

*ಜೀವನದ ನೂರು ಕನಸು ನನಸಾಗಿದೆ*

**ಸಭಾಪತಿಯವರು:-** ಡಾ: ತೇಜಸ್ವಿನಿಗೌಡರವರೇ, ನೀವು ಮಾತನಾಡಲು ಪ್ರಾರಂಭಿಸಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಮಾಧುಸ್ವಾಮಿಯವರೇ, ನನಗೆ ಮಾತನಾಡುವುದಕ್ಕೆ ಬಿಟ್ಟಿಲ್ಲ. ಮಾತನಾಡಲು ಬಿಡದಿದ್ದಕ್ಕೆ ನಾನು ಈ ಕೆಲಸ ಮಾಡಿದೆ. ಈ ವಿಚಾರ ಬಹಳ ಗಂಭೀರವಾಗಿದೆ.

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ಧನ್ಯವಾದಗಳು.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ದಯಮಾಡಿ ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಶ್ರೀ ನಾರಾಯಣ ಗುರೂಜಿಯವರು ಶೋಷಣೆಗೊಳಗಾದಂತಹ ಸಂದರ್ಭದಲ್ಲಿ;

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ನಿಮ್ಮದು ಮುಗಿಯಿತು. ಡಾ: ತೇಜಸ್ವಿನಿಗೌಡರವರೇ, ಮಾತನಾಡಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಈ ನಾಡಿನಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟಿ, ಧಾರ್ಮಿಕ ಸಂಸ್ಥೆಗಳನ್ನು ಕಟ್ಟಿ ಅಲ್ಲಿನ reform ಮಾಡಿ ಈ ನಾಡನ್ನು ಬೆಳಗಿದಂತಹವರು. ಸಂತ ಶಿಶುನಾಳ ಷರೀಫರು ಮತ್ತು ಶ್ರೀ ಗೋವಿಂದ ಭಟ್ಟರ ಸಂಬಂಧವನ್ನು ನೋಡಿ.

**ಡಾ: ತೇಜಸ್ವಿನಿಗೌಡ:-** ಮಾನ್ಯ ಭೋಜೇಗೌಡರೇ, ದಯವಿಟ್ಟು ಸಹಕರಿಸಿ.

**ಶ್ರೀ ಎಸ್.ಎಲ್. ಭೋಜೇಗೌಡ:-** ಸಂತ ಶಿಶುನಾಳ ಷರೀಫರು ಮತ್ತು ಶ್ರೀ ಗೋವಿಂದ ಭಟ್ಟರು . . .

**ಡಾ: ತೇಜಸ್ವಿನಿಗೌಡ:-** ಮಾನ್ಯ ಭೋಜೇಗೌಡರೇ, ಇದು ನನ್ನ ಸಮಯ.

**ಶ್ರೀ ಎಸ್.ಎಲ್. ಭೋಜೇಗೌಡ:-** ಸಂತ ಶಿಶುನಾಳ ಷರೀಫರಿಗೆ ಬ್ರಹ್ಮೋಪದೇಶವನ್ನು ಮಾಡಿದವರು ಶ್ರೀ ಗೋವಿಂದ ಭಟ್ಟರು. ದಯಮಾಡಿ ಇದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ 147ನೆಯ ಅಧಿವೇಶನ, ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ 2022 . . .

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ, ನಾನು ಅವರ ಹೆಸರನ್ನು ಕರೆದಿದ್ದೇನೆ.

(ಗೊಂದಲ)

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . . . ನನ್ನ ಸಂಪೂರ್ಣ ವಿರೋಧ ಇದೆ, ದಯಮಾಡಿ ಇಲ್ಲಿರುವಂತಹ ಅಂಶಗಳನ್ನು ಗಮನಿಸಿ. 4 ಮತ್ತು 12ರಲ್ಲಿ ಇರುವಂತಹ ಅಂಶಗಳನ್ನು ಮಾರ್ಪಾಡು ಮಾಡಿಸಿದರೆ ಇದಕ್ಕೆ ನಮ್ಮ ಒಪ್ಪಿಗೆ ಇದೆ, ಇಲ್ಲದಿದ್ದರೆ ಇದನ್ನು ನಾವು ಸಂಪೂರ್ಣವಾಗಿ ವಿರೋಧ ಮಾಡುತ್ತೇವೆ. ಧನ್ಯವಾದಗಳು.

**ಸಭಾಪತಿಯವರು:-** ಮಾನ್ಯ ತೇಜಸ್ವಿನಿಗೌಡರವರೇ, ಐದು ನಿಮಿಷದಲ್ಲಿ conclude ಮಾಡಿ.

**ಡಾ: ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, PREAMBLE ಹೇಳುವುದಕ್ಕಾಗುವುದಿಲ್ಲ, Legal aspects ಮಾತನಾಡೋಣ ಅಂತ ಇತ್ತು.

**Mr. CHAIRMAN:-** Hon'ble member, please manage yourself.

**ಡಾ: ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನಲ್ಲಿ 147ನೇ ಅಧಿವೇಶನದಲ್ಲಿ ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಸಂರಕ್ಷಣಾ ವಿಧೇಯಕ, 2022 ನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಈ ಸದನವು ಇದನ್ನು ಅಂಗೀಕರಿಸಬೇಕೆಂದು ಏತಕ್ಕೆ ಕೇಳುತ್ತೇನೆಂದರೆ, ಈ ಮಸೂದೆ ಮುಖ್ಯವಾಗಿ ಪ್ರಾಸ್ತಾವಿಕ ಶಾಸನಾತ್ಮಕ ಕ್ರಮ ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ. ಎರಡನೆಯದಾಗಿ ನಮ್ಮ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಸಂರಕ್ಷಣೆಯ ಹಕ್ಕಿನ ವಿಚಾರದಲ್ಲಿ ತಂದಿರುವಂತಹ ಈ ಬಿಲ್ ಸಂವಿಧಾನದ 25ನೇ ವಿಧಿಯ *"Right to freedom of religion is guaranteed under Article 25 of the Constitution of India, subject to public order, morality and health and to the other provisions of part III of the Constitution of India...."* ಸಂವಿಧಾನದ ಪಾರ್ಟ್ 3 ಯಾವುದೆಂದರೆ *Fundamental rights of the Citizens,* ನನ್ನ ಧಾರ್ಮಿಕ ಸ್ವಾತಂತ್ರ್ಯ, ನನ್ನ ಧಾರ್ಮಿಕ ಹಕ್ಕು ಮತ್ತೊಬ್ಬರ ಹಕ್ಕನ್ನು ಪಬ್ಲಿಕ್ ಆರ್ಡರ್ ಅಂದರೆ, ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುವಂತಿರಬಾರದು. *Morality* ಎಂದರೇನು ರಾಷ್ಟ್ರಧರ್ಮ ಅಂತಿದೆ. ಇವತ್ತು ವಿಚ್ಛಿದ್ರಕಾರಕ ಶಕ್ತಿಗಳು ಪಾಕಿಸ್ತಾನದಲ್ಲಿ ತರಬೇತಿಯನ್ನು ಪಡೆದು ಭಾರತದಲ್ಲಿ ಮುಸಲ್ಮಾನರಿಗೆ ಅತ್ಯಾಚಾರ ಮಾಡುತ್ತಿದ್ದಾರೆ, ಅನ್ಯಾಯ ಮಾಡುತ್ತಿದ್ದಾರೆ ಎನ್ನುವ ತಪ್ಪು ಮಾಹಿತಿಯನ್ನು ಚಿಕ್ಕ ಚಿಕ್ಕ ಮಕ್ಕಳಿಗೆ ತುಂಬಿ ಅವರ ಭಯೋತ್ಪಾದನೆ ಕೃತ್ಯಕ್ಕೆ ಕಾಶ್ಮೀರದಲ್ಲಿ ಬಂದು ಅಥವಾ ಭಾರತದ ಇತರ ಭಾಗಗಳಲ್ಲಿ ಬಂದು ನಮ್ಮ ಸೇನೆಯನ್ನು ಗುರಿಯಾಗಿಸುತ್ತಿದ್ದಾರೆ. ಸೇನೆಯ ಮೇಲೆ ದಾಳಿ ನಡೆದರೆ ಈ ದೇಶದ ಸಾರ್ವಭೌಮತ್ವಕ್ಕೆ, ಸುರಕ್ಷತೆಗೆ ಧಕ್ಕೆ ಬರುತ್ತದೆ. ರಾಷ್ಟ್ರಧರ್ಮ ಮೊದಲು. ರಾಷ್ಟ್ರಧರ್ಮಕ್ಕೆ ನಮ್ಮ ವೈಯಕ್ತಿಕ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ದುರುಪಯೋಗವಾಗಬಾರದು ಎಂಬತಕ್ಕಂತಹ ದೊಡ್ಡ ಚಿಂತನೆ ಇದರಲ್ಲಿದೆ. ಯಾವುದು morality? ರಾಜಧರ್ಮ, ರಾಷ್ಟ್ರ ಧರ್ಮ, ಸತಿ ಧರ್ಮ, ಪತಿ ಧರ್ಮ ಮತ್ತು ಗುರು ಧರ್ಮ.

ಧರ್ಮದ ವ್ಯಾಖ್ಯಾನ ಮಾಡಬೇಕಾಗಿರುವಂತಹದ್ದು. ನನ್ನ ಧರ್ಮ ಹಿಂದುತ್ವ ಎಂದರೆ, "Hindutva" is a way of life. ಕೋರ್ಟ್ ಹೇಳಿದೆ ಅದನ್ನು ಸ್ವೀಕಾರ ಮಾಡಿ. ನನ್ನ ಧರ್ಮದಲ್ಲಿ ಒಂದೇ ಮದುವೆ ಆಗಬೇಕು ಅಂದರೆ ಏಕಪತ್ನಿ. ಎರಡನೆಯವಳ ಸಹವಾಸವನ್ನು ಮಾಡಿದರೆ ನಮ್ಮ ಹಿರಿಯರು ಅವನನ್ನು ಚಪ್ಪಲಿಯಲ್ಲಿ ಹೊಡೆದು ಆಚೆಗೆ ಹಾಕುತ್ತಾರೆ. ನನ್ನ ಧರ್ಮ ಅದು. ಸತಿ ಧರ್ಮ– ಗಂಡನಿಗೆ ಮೋಸ ಮಾಡಿದರೆ ಅವಳನ್ನು ಚಪ್ಪಲಿಯಲ್ಲಿ ಹೊಡೆದು ಆಚೆಗೆ ಹಾಕುತ್ತಾರೆ ಇದು ನನ್ನ ಧರ್ಮ. ಮಕ್ಕಳನ್ನು ಹುಟ್ಟಿಸಿ ಬೀದಿಗೆ ಬಿಡುವುದಕ್ಕಾಗುವುದಿಲ್ಲ, ಇದು ನನ್ನ ಧರ್ಮ. ಹಿರಿಯರನ್ನು ಬೀದಿಗೆ ಬಿಡುವುದಿಲ್ಲ ಇದು ನನ್ನ ಧರ್ಮ. ಈಗ ಮತ್ತೊಂದು ಧರ್ಮವಾದ ಮುಸಲ್ಮಾನ ಧರ್ಮದ ಬಗ್ಗೆ ಹೇಳುವುದಾದರೆ ಅಲ್ಲಿ ಅವರ ಜೀವನ ಪದ್ಧತಿ ಬೇರೆ ಇದೆ. ಅಲ್ಲಿ ದೊಡ್ಡಮ್ಮನ ಮಕ್ಕಳು ಮತ್ತು ದೊಡ್ಡಪ್ಪನ ಮಕ್ಕಳ ಜೊತೆ ವಿವಾಹ ಪದ್ಧತಿ ಇದೆ. ಅದು ನಮ್ಮ ಕಲ್ಪನೆಗೂ ಮೀರಿದ್ದು. ಈ ಜೀವನ ಪದ್ಧತಿಯನ್ನು ಅರ್ಥ ಮಾಡಿಕೊಳ್ಳಬೇಕು. ಒಬ್ಬರಿಗೆ ಸಹನೆಯಾಗಿದ್ದು ಮತ್ತೊಬ್ಬರ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ. ಭಾರತ ದೇಶದಲ್ಲಿ; ನನಗೆ ತುಂಬಾ ದುಃಖವಾಗುತ್ತದೆ, ಇವತ್ತು ಇಲ್ಲಿ ಒಂದಷ್ಟು ಲಿಸ್ಟ್ ಮಾಡಿದ್ದೇನೆ. ಸಮಯದ ಕೊರತೆ ಇದೆ. ಆದರೂ ಹೇಳುವುದೇನೆಂದರೆ, ಹಿಂದು ಕಾರ್ಯಕರ್ತರ ಹತ್ಯೆಯಾಯಿತು. ಅದನ್ನು ಹೇಳಲೇಬೇಕು. ನಾನು ಕೇಸರಿಯನ್ನು ತಂದೆ. ಇದು ನನ್ನ ಉಡುಗೆ, ನನ್ನ ಸಾಂಸ್ಕೃತಿಕ ಸಂಕೇತ. ಇದು ನನ್ನ ವಿಚಾರಧಾರೆಯ ಸಂಕೇತ. ಇದು ನನ್ನ ರಾಷ್ಟ್ರಧರ್ಮದ ಸಂಕೇತ. ನನ್ನ ಪಕ್ಷದ ಸಂಕೇತ ಇದು. ಭಾರತ ಮತ್ತು ಪಾಕಿಸ್ತಾನ ವಿಭಜನೆಯಾದಾಗ ಅವರು ಹಸಿರನ್ನು ಹೊದ್ದುಕೊಂಡರು, ನಾವು ಕೇಸರಿಯನ್ನು ತೆಗೆದುಕೊಂಡೆವು. ಹಿಂದೂಸ್ಥಾನ್ ಮತ್ತು ಪಾಕಿಸ್ತಾನ್ ಎಂದಾಯಿತು. ಈ ಕೇಸರಿಯ ಕಾರಣಕ್ಕೆ ಹತ್ಯೆಯಾಯಿತು. ಇವತ್ತು ನಮ್ಮ ಕಮಲ್‌ಪೊಳಲಿ, ಅನಂತಪೊಳಲಿ, ಸುಕಾನಿಲ್ ಶೆಟ್ಟಿ, ಸಂತೋಷ್ ಪೊಳಲಿ, ಜಗದೀಶ್ ಪೂಜಾರಿ ಅರ್ಕುಳ, ಉದಯ್ ಕಾಟಿಪಾಳ್ಯ, ಶಿವರಾಜ್ ಕೋಡಿಕೆರೆ, ಪ್ರಶಾಂತ್ ಪೂಜಾರಿ, ಮೂಡಬಿದರಿ; ದೀಪಕ್ ರಾವ್, ಸುರತ್ಕಲ್; ಶರತ್ ಮಡಿವಾಳ, ಪರೇಶ್ ಮೇಸ್ತಾ, ಹರ್ಷ, ಕುಟ್ಟಪ್ಪ . .

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ತೇಜಸ್ವಿನಿಗೌಡರವರೇ, ಬಿಲ್ ಬಗ್ಗೆ ಮಾತನಾಡಿ.

**ಶ್ರೀ ದಿನೇಶ್ ಗೂಳಿಗೌಡ:-** ನೀವು ಬಿಲ್ ಬಗ್ಗೆ ಚರ್ಚೆ ಮಾಡಿ ಅದನ್ನು ಬಿಟ್ಟು ಎಲ್ಲೆಲ್ಲೋ ಹೋಗಬೇಡಿ.

(ಗೊಂದಲ)

**ಡಾ: ತೇಜಸ್ವಿನಿ ಗೌಡ:-** ದಯವಿಟ್ಟು ಸರ್, ಹಿಂದು ಕಾರ್ಯಕರ್ತರ ಪರಿಶ್ರಮ, ಅವರ ತ್ಯಾಗ, ಬಲಿದಾನದಿಂದಲೇ ಈ ಸರ್ಕಾರ ಬಂದಿರುವುದು. ಅದರ ಬಗ್ಗೆ ನಾನು ಮಾತನಾಡಲೇಬೇಕು.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** (ಗೊಂದಲ) ಕಾಂಗ್ರೆಸ್ ಲಿಸ್ಟ್ ಇದೆ.

(ಗೊಂದಲ)

**ಶ್ರೀ ಸಲೀಂ ಅಹಮದ್:-** ಇದು ಬಿಲ್ ಬಗ್ಗೆ ಚರ್ಚೆಯೇ?

**ಡಾ: ತೇಜಸ್ವಿನಿ ಗೌಡ:-** ಇದು ನನ್ನ ಸಮಯ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ತೇಜಸ್ವಿನಿಗೌಡರವರೇ, ಬಿಲ್ ಬಗ್ಗೆ ಏನಾದರೂ ಸಂಶೋಧನೆಗಳಿದ್ದರೆ ಹೇಳಿ.

(ಗೊಂದಲ)

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಎದ್ದು ಕೂಗಿಕೊಂಡರೆ (ಗೊಂದಲ) ಏನು ಬೇಕಾದರೂ ಮಾತನಾಡಿದರೆ (ಗೊಂದಲ)

**ಡಾ: ತೇಜಸ್ವಿನಿ ಗೌಡ:-** ಹಿಂದು ಕಾರ್ಯಕರ್ತರ ಹತ್ಯೆ ಆದದ್ದು ಅವರ ವಿಚಾರದ ಕಾರಣಕ್ಕಾಗಿ, ಧರ್ಮದ ಕಾರಣಕ್ಕಾಗಿ ಆಗಿದೆ, ವೈಯಕ್ತಿಕ ಕಾರಣಕ್ಕಾಗಿ ಅಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡುವುದಕ್ಕೇ ಅವಕಾಶ ಕೊಡಲಿಲ್ಲ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ದೇಶ ಮೊದಲು ಎಂದು ಹೇಳುವಂತಹ ರಾಷ್ಟ್ರ ಧರ್ಮ. ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಅದು. ದೇಶಕ್ಕೆ ವಿರುದ್ಧವಾದ ಒಬ್ಬ ನಕ್ಸಲೈಟ್ ಬಂದು ಪೋಲೀಸರನ್ನು ಕೊಲ್ಲುತ್ತಾರೆ, ಏತಕ್ಕೆ ಕೊಲ್ಲುತ್ತಾರೆ? ಪೋಲೀಸರಿಗೆ ಅದು ರಾಷ್ಟ್ರ ಧರ್ಮ. ಅವರ ಕರ್ತವ್ಯ ಮಾಡುವುದಕ್ಕೆ ಹೋದಾಗ ಕೊಲ್ಲುತ್ತಾರೆ. ವಿಚ್ಛಿದ್ರಕಾರಿ ಶಕ್ತಿಯಾದ ಎಲ್.ಟಿ.ಟಿ.ಇ., ನವರು ಶ್ರೀಮತಿ ಇಂದಿರಾ ಗಾಂಧಿ ಅವರನ್ನು ಏತಕ್ಕೆ ಕೊಂದರು? ಇವತ್ತು ಉತ್ತರ ಕೊಡಿ. ನನಗೆ ಅವಕಾಶ ಕೊಟ್ಟಿದ್ದೀರಿ. ತಮಿಳುನಾಡಿನಲ್ಲಿ ಕ್ರೈಸ್ತ ಧರ್ಮ ದಯೆ, ಕರುಣೆ ಎಂದು ಹೇಳುತ್ತದೆ. Pastor George Ponnaiah ಏನನ್ನು ಹೇಳುತ್ತಾರೆ? ದೇಶದ ಪ್ರಧಾನಿಯನ್ನು, ದೇಶದ ಗೃಹ ಸಚಿವರನ್ನು; ಮಾನ್ಯ ನರೇಂದ್ರ ಮೋದಿ ಮತ್ತು ಮಾನ್ಯ ಅಮಿತ್ ಶಾ ಅವರನ್ನು ಮರೆತುಹೋಗಿ. ಆ ಜಾಗಕ್ಕೆ ಇನ್ನೊಬ್ಬರು ಬರುತ್ತಾರೆ. ಅವರಿಗೆ ಹುಳು ಬಿದ್ದು ಸಾಯಬೇಕೆಂದು ಬಯಸುತ್ತಾರೆ ಇದು ಧರ್ಮ. ಇದನ್ನು ಕ್ರೈಸ್ತ ಧರ್ಮ ಹೇಳುತ್ತದೆಯೇ? ಅವನಿಗೆ ಯಾವ ಶಿಕ್ಷೆಯನ್ನು ಕೊಡಬೇಕು? ದೇಶದಲ್ಲಿ ಇದನ್ನು ಸಹಿಸಬೇಕೇ? ಇಂತಹ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಕೊಟ್ಟಿದ್ದೇವೆಯೇ? ಶ್ರೀ ರಾಹುಲ್ ಗಾಂಧಿಯವರನ್ನು lead ಮಾಡಿ ದಯವಿಟ್ಟು mislead ಮಾಡಬೇಡಿ. ಒಂದು ದೊಡ್ಡ ಪಕ್ಷವು 50-60 ವರ್ಷ ಈ ದೇಶ ಕಟ್ಟುವ ಅವಕಾಶ ಕೊಟ್ಟಿತ್ತು. ದೀನ ದಲಿತರ ಈ ಸ್ಥಿತಿಗೆ ಯಾರು ಕಾರಣ?

(ಮುಂದು)

(೮೬೮) ೧೫-೦೯-೨೦೨೨ KH-GR ೬-೩೦ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವರು ನಮ್ಮ ನಾಯಕರಿಗೆ ದಾರಿ ತಪ್ಪಿಸುತ್ತಿದ್ದಾರೆ.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಸಭಾಪತಿಯವರು:-** ಮಾನ್ಯ ತೇಜಸ್ವಿನಿಗೌಡರವರೇ, ದಯವಿಟ್ಟು ಬಿಲ್‌ಗೆ ವಾಪಸ್ಸು ಬನ್ನಿ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಸಭಾಪತಿಯವರು:-** ಮಾನ್ಯ ತೇಜಸ್ವಿನಿಗೌಡರವರೇ, ಬಿಲ್ ನ ಬಗ್ಗೆ ಮಾತನಾಡಿ.

**ಶ್ರೀ ಶರಣಗೌಡ ಬಯ್ಯಾಪುರ:-** ಮಾನ್ಯ ಸಭಾಪತಿಯವರೇ, . . .

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಈ conversion ಗೆ ಅಲ್ಪಸಂಖ್ಯಾತರಾದ ಪಾರ್ಸಿಗಳು ಮೊದಲು ಬಲಿಯಾಗಿದ್ದಾರೆ. ಬ್ರಿಟಿಷ್ ರಾಜ್ ಆಳ್ವಿಕೆಗೆ ಬಂದಾಗ ಸತಿ ಸಹಗಮನ ಪದ್ಧತಿಯನ್ನು ನಿಲ್ಲಿಸಲಾಯಿತು. ೧೯೩೦-೧೯೪೦ ರಲ್ಲಿ ಈ Anti Conversion Law ತರುವ ಪ್ರಯತ್ನ ನಡೆಯಿತು.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈ ಪದವನ್ನು ಕಡತದಿಂದ ತೆಗೆಯಬೇಕು.

**ಸಭಾಪತಿಯವರು:-** ಮಾನ್ಯ ತೇಜಸ್ವಿನಿಗೌಡರವರು unparliamentary word ಮಾತನಾಡಿದ್ದರೆ ಕಡತದಿಂದ ತೆಗೆಯಿರಿ.

**(ಗೊಂದಲ)**

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅವರು ಈ ರೀತಿ ಸದನವನ್ನು mislead ಮಾಡಬಾರದು.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ರಾಹುಲ್ ಗಾಂಧಿಯವರು ಈ ಸದನದ ಸದಸ್ಯರು ಅಲ್ಲ. ಅವರನ್ನು ಇಲ್ಲಿ defend ಮಾಡಿಕೊಳ್ಳುವುದಕ್ಕಾಗುವುದಿಲ್ಲ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಾನೇನು ಹೇಳಲಿಲ್ಲ. ನಾನು ಲೀಡ್ ಮಾಡಿ ಎಂದು ಹೇಳಿದೆ. ಮಾನ್ಯ ಬಿ.ಕೆ.ಹರಿಪ್ರಸಾದ್‌ರವರ ಮೂಲಕ ನಾನು . . .

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಕೂಡ ಮಾನ್ಯ ನರೇಂದ್ರ ಮೋದಿ ಮತ್ತು ಮಾನ್ಯ ಅಮಿತ್ ಶಾ ರವರ ಬಗ್ಗೆ ತೆಗೆಯುತ್ತೇನೆ. **(ಗೊಂದಲ)** ಅವರು ಹೇಳಿರುವುದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮಾನ್ಯ ರಾಹುಲ್ ಗಾಂಧಿ ಎಂದು ಹೆಸರು ಹೇಳಿದ ಮೇಲೆ ಅವರು ಇಲ್ಲಿ ಇಲ್ಲ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಏನು ಹೇಳಿದೆ. ಲೀಡ್ ಮಾಡಿ ಎಂದು ಹೇಳಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ತೇಜಸ್ವಿನಿಗೌಡರವರು ಏನು ಸೆಂಟೆನ್ಸ್ ಹೇಳಿದ್ದಾರೆ ಕೇಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಸದಸ್ಯರುಗಳಿಗೆ ಮಾನ್ಯ ತೇಜಸ್ವಿನಿಗೌಡರವರು ಏನು ಹೇಳಿದ್ದಾರೆ ಎಂದು ಪೂರ್ತಿಯಾಗಿ ಕೇಳಿ. ಅವರೇನೂ ಕೆಟ್ಟದಾಗಿ ಹೇಳಲಿಲ್ಲ. ಮಾನ್ಯ ತೇಜಸ್ವಿನಿಗೌಡರವರೇ, ದಯವಿಟ್ಟು ಬೇಗ ಮುಗಿಸಿ. Please conclude.

**(ಗೊಂದಲ)**

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಬಿ.ಕೆ.ಹರಿಪ್ರಸಾದ್‌ರವರನ್ನು ನಾನು interrupt ಮಾಡಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ರಾಹುಲ್ ಗಾಂಧಿಯವರು ಲೀಡ್ ಮಾಡುವುದಿಲ್ಲ. ಏಕೆಂದರೆ, ಅವರನ್ನು ಇವರು ಮೊದಲು ಲೀಡ್ ಮಾಡುತ್ತಿದ್ದರು. Mislead ಮಾಡಿಯೇ ಅಲ್ಲಿಗೆ ಹೋಗಿರುವಂತಹವರು.

**(ಗೊಂದಲ)**

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ) (ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಗೌಡರವರು ಹೇಳುವುದನ್ನು ಪೂರ್ತಿಯಾಗಿ ಕೇಳುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾವು ಹೇಳುವುದನ್ನು ಅವರು ಕೇಳುವುದಿಲ್ಲ. ನಾವು ಮಾತ್ರ ಅವರು ಹೇಳುವುದನ್ನು ಪೂರ್ತಿಯಾಗಿ ಕೇಳಬೇಕೇ.

**ಸಭಾಪತಿಯವರು:–** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಇದನ್ನು ಮುಗಿಸಬೇಕೋ, ಬೇಡವೋ? ಮಾನ್ಯ ತೇಜಸ್ವಿನಿಗೌಡರವರೇ, ದಯವಿಟ್ಟು, conclude ಮಾಡಿ.

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈ ದೇಶದ ಬಹುತೇಕ ರಾಜ್ಯಗಳಲ್ಲಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಕೇಸರಿ ಪಾರ್ಟಿ ಅಧಿಕಾರದಲ್ಲಿ ಇದೆ. ಪ್ರಜಾಸತ್ತಾತ್ಮಕ ರೀತಿಯಲ್ಲಿ ದಬಾವಣೆ ಮಾಡಿ ಬಂದಿಲ್ಲ. ಉತ್ತರ ಪ್ರದೇಶ ಮಾಡೆಲ್, ಉತ್ತರ ಪ್ರದೇಶ ಮಾಡೆಲ್, ಯೋಗಿ ಮಾಡೆಲ್, ಯೋಗಿ ಮಾಡೆಲ್ ಎನ್ನುತ್ತಾರೆ. Yogi became the Chief Minister through the ballot box, not through the bullet. Through the ballot he came to the power. ಏನು ತಪ್ಪು ಇದೆ. ನೀವು ಸರಿಯಾಗಿ ನಡೆದುಕೊಂಡಿದ್ದರೆ ನಿಮ್ಮ ಪಾರ್ಟಿಗೆ 50 ವರ್ಷ ಅವಕಾಶ ಕೊಟ್ಟಿದೆ. ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಮಾತನಾಡಿದರು. ಆ ಅಸಮಾನತೆಗೆ ಯಾರು ಕಾರಣಕರ್ತರು? ಈ ಶೋಷಣೆಗೆ ಯಾರು ಕಾರಣ? ದಲಿತರ ಹಿಂದುಳಿಯುವಿಕೆಗೆ ಯಾರು ಕಾರಣ?

**(ಗೊಂದಲ)**

**ಡಾ|| ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ವೈ.ಎ.ನಾರಾಯಣಸ್ವಾಮಿಯವರೇ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ತೇಜಸ್ವಿನಿಗೌಡರವರೇ, ದಯವಿಟ್ಟು ಕನ್‌ಕ್ಲ್ಯೂಡ್ ಮಾಡಿ.

**ಶ್ರೀ ಶರಣಗೌಡ ಬಯ್ಯಾಪುರ:–** ಮಾನ್ಯ ಸಭಾಪತಿಯವರೇ, ಬಂದವರೆಲ್ಲಾ ನಮ್ಮನ್ನು ಹಳ್ಳಕ್ಕೆ ತಳ್ಳಿ ಹೋದರು.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ನಾವು ಸತಿ ಸಹಗಮನ ಪದ್ಧತಿ ಒಂದೇ ನೋಡಿರುವುದು. ಗೋವಾದಲ್ಲಿ ಯಾವ ಆಮಿಷಗಳನ್ನು ತೋರಿಸಿ ಇವರು ಮತಾಂತರ ಮಾಡಿಸಿಕೊಂಡಿದ್ದಾರೆ, ಪಕ್ಷಾಂತರ ಮಾಡಿಸಿಕೊಂಡಿದ್ದಾರೆ?

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈ ಒಂದು ಬಿಲ್ ನಲ್ಲಿ ಮತಾಂತರ ಎನ್ನುವ ಪ್ರಶ್ನೆ ಬರಲೇ ಇಲ್ಲ. ಮತಾಂತರ ಎನ್ನುವ ಪದಕ್ಕೆ ಯಾವುದೇ ನಿರ್ಭಂಧ ಇಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ತೇಜಸ್ವಿನಿಗೌಡರವರೇ, ಇದು ಮತಾಂತರ ಅಲ್ಲ. ಪಕ್ಷಾಂತರ. ಯಾವ ಆಮಿಷ ಕೊಟ್ಟು ಪಕ್ಷಾಂತರ ಮಾಡಿದ್ದೀರಾ ಎನ್ನುವುದನ್ನು ಹೇಳಿ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನೇ. ತಾವು ಒಳ್ಳೆಯ ಪ್ರಶ್ನೆ ಕೇಳಿದ್ದೀರಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:–** ಮಾನ್ಯ ತೇಜಸ್ವಿನಿಗೌಡರವರೇ, ತಾವು ಬಿಲ್ ಬಗ್ಗೆ ಮಾತನಾಡಿ. Please don't debate individually. ತಾವು ಪರಸ್ಪರ ಮಾತನಾಡಬೇಡಿ. ಬಿಲ್ ಬಗ್ಗೆ ಮಾತನಾಡಿ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ತಮ್ಮ ಮೇಲಗಡೆ ಈ ದೇಶದ ಅಂತಃಶಕ್ತಿ ಮಾನ್ಯ ವಿವೇಕಾನಂದರವರ ತಲೆಯ ಮೇಲೆ ಕೇಸರಿ ಇದೆ. ಮಾನ್ಯ ವಿವೇಕಾನಂದರವರು ಏನು ಹೇಳಿದರು?

**ಸಭಾಪತಿಯವರು:-** ಮಾನ್ಯ ತೇಜಸ್ವಿನಿಗೌಡರವರೇ, ಈ ಬಿಲ್‌ನಲ್ಲಿ ಕೇಸರಿ ಇಲ್ಲ. ಬಿಲ್ ಬಗ್ಗೆ ಮಾತನಾಡಿ.

**ಡಾ|| ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನಾನು ಬಿಲ್ ಬಗ್ಗೆಯೇ ಹೇಳುತ್ತಿರುವುದು. 1930-1940 ರಲ್ಲಿ Princely State ಗಳು ಬ್ರಿಟೀಷ್ ರಾಜ್ ಮತ್ತು ಮೊಗಲ್ ರಾಜ್ಯದಲ್ಲಿ ದಬಾವಣೆ ಮೂಲಕ ತುಂಬಾ ಮತಾಂತರಗಳಾಗಿ ಈ ದೇಶದ ಆಸ್ಮಿತೆಗೆ ಧಕ್ಕೆ ಬಂದಿದೆ. ಮಧ್ಯಪ್ರದೇಶ, ಒರಿಸ್ಸಾ, ಜರ್ಖಾಂಡ್‌ನಲ್ಲಿ 432 ಬುಡಕಟ್ಟು ಜನಾಂಗದವರು ಇದ್ದರು. ಇವತ್ತು ಆಯಕಟ್ಟಿನ ಈಶಾನ್ಯ ರಾಜ್ಯಗಳಲ್ಲಿ ಮತ್ತು ಈ ರಾಜ್ಯಗಳಲ್ಲಿ converstion ನಿಂದಾಗಿ ನಮ್ಮ ದೇಶದ ಸುರಕ್ಷತೆಗೆ ಧಕ್ಕೆ ಬಂದಿದೆ. ನಾನು ಹೇಳುವುದೇನೆಂದರೆ, ನೂರಾರು ಕ್ರೈಸ್ತ ದೇಶಗಳು ಇವೆ. ಹತ್ತಾರು ಮುಸಲ್ಮಾನ ದೇಶಗಳು ಇವೆ. ನಾವು ಹಿಂದೂ ರಾಷ್ಟ್ರ ಎಂದು ಘೋಷಣೆ ಮಾಡಿಲ್ಲ. ಇಲ್ಲಿ ಯಾರಿಗೂ ತೊಂದರೆಯಾಗಿಲ್ಲ. ನಾವು ಎಲ್ಲಿಗೆ ಹೋಗಬೇಕು ಹೇಳಿ. ಕೆಳಗಡೆ ಹಿಂದೂ ಮಹಾಸಾಗರ, ಈ ಕಡೆಗೆ ಹೋದರೆ ಅರಬ್ಬೀಸಮುದ್ರ, ಈ ಕಡೆಗೆ ಹೋದರೆ ಬಂಗಾಳಕೊಲ್ಲಿ. ಮೇಲಗಡೆ ಹೋದರೆ ಹಿಮಾಲಯ. ನಾವು ಎಲ್ಲಿಗೆ ಹೋಗಬೇಕು?

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ನಿಮಗೆ ಏನು affect ಆಗುತ್ತಿದೆ? ಅವರು ಮಾತನಾಡಬಾರದೇ? ಅವರು Bill ಬಿಟ್ಟು ಹೋಗುತ್ತಾರೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:–** ಮಾನ್ಯ ಸಭಾಪತಿಯವರೇ, ಅವರಿಗೆ ಬಿಲ್ ಬಗ್ಗೆ ಚರ್ಚೆ ಮಾಡುವುದಕ್ಕೆ ಹೇಳಿ. ಅದನ್ನು ಬಿಟ್ಟು ಹಿಂದೂ ಮಹಾಸಾಗರ, ಅರಬ್ಬೀಸಮುದ್ರ, ಬಂಗಾಳಕೊಲ್ಲಿ, ಹಿಮಾಲಯ ಇದರ ಬಗ್ಗೆ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ತೇಜಸ್ವಿನಿಗೌಡರವರೇ, ದಯವಿಟ್ಟು, ಸಮುದ್ರದಿಂದ ವಾಪಸ್ಸು ಬನ್ನಿ. ಅದು ತುಂಬಾ ದೂರ ಇದೆ. ದಯವಿಟ್ಟು, ಬಿಲ್‌ನ ಹತ್ತಿರ ಬನ್ನಿ.

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈ ಭಾರತ ದೇಶದಲ್ಲಿ ಯಾವುದೇ ಅಲ್ಪಸಂಖ್ಯಾತರಿಗೆ ಧಕ್ಕೆ ಇಲ್ಲ. ಅಪಾಯ ಇಲ್ಲ. ಇವತ್ತು ಭಾರತ ದೇಶದಲ್ಲಿ ನಿಜವಾಗಿಯೂ ಏನಾದರೂ ಅಪಾಯದಲ್ಲಿದ್ದರೆ ಅದು ಹಿಂದೂ ಧರ್ಮ. ನಮ್ಮ ಸಂಸ್ಕೃತಿ, ನಮ್ಮ ಜನಜೀವನ. ಆದಕಾರಣ, ಇಲ್ಲಿ ಮತಾಂತರಕ್ಕೆ ಯಾವುದೇ ತೊಂದರೆ ಇಲ್ಲ. ಕ್ರಮಬದ್ಧವಾಗಿ ಕಾನೂನಿನ ರೀತಿಯಲ್ಲಿ ಕೊಡಬೇಕಾದಂತಹ ಅನುಕೂಲಗಳನ್ನು ಕೊಟ್ಟು, ಅವರು ಇನ್ನೊಬ್ಬರ ಹಕ್ಕುಗಳನ್ನು ಕಸಿಯದಂತೆ ದೀನ ದಲಿತರ ಹೆಸರಿನಲ್ಲಿ ಮಾಡುವ ಮೋಸಕ್ಕೆ ತಡೆ ಒಡ್ಡುವಂತೆ ಒಳ್ಳೆಯ ರೀತಿಯಲ್ಲಿ ಮಸೂದೆಯನ್ನು ತಂದಿದ್ದಾರೆ. ಅದನ್ನು ತುಂಬು ಹೃದಯದಿಂದ ಸ್ವಾಗತ ಮಾಡುತ್ತೇನೆ.

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ, 2022 ರನ್ನು ವಿರೋಧಿಸುತ್ತಾ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಹಲವಾರು ಮಾನ್ಯ ಸದಸ್ಯರುಗಳು ಮಾತನಾಡಿದಂತಹ ಸಂದರ್ಭದಲ್ಲಿ ತಮ್ಮ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದರು. ಈ ದೇಶದಲ್ಲಿ ಕರ್ನಾಟಕ ರಾಜ್ಯ 9ನೇಯ ರಾಜ್ಯವಾಗಿದೆ. Anti Conversion Bill ಅನ್ನು ತಂದಿರುವಂತಹದ್ದು. ಈ 9 ರಾಜ್ಯಗಳಲ್ಲಿ 4 ರಾಜ್ಯಗಳು ಈಗಾಗಲೇ 4 ಕೋರ್ಟ್‌ಗಳಲ್ಲಿ ಕೇಸ್ ಪೆಂಡಿಂಗ್ ಇರುವುದನ್ನು ನಾವು ನೋಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿಯೂ ಸಹ ಜುಲೈ ತಿಂಗಳಿನಲ್ಲಿ ರಾಜ್ಯ ಸರ್ಕಾರಕ್ಕೆ ನೋಟಿಸ್ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. This matter is

completely sub judice to the Court. ನಾವು ಏನೇ ಮಾತನಾಡಿದರೂ ಅರಬ್ಬೀ ಸಮುದ್ರ ಮತ್ತು ಹಿಂದೂ ಮಹಾಸಾಗರದ ಬಗ್ಗೆ ಮಾತನಾಡುವುದು ಹಾಗೂ ಸಮುದಾಯದ ಬಗ್ಗೆ ಮಾತನಾಡುವುದು.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜುರವರೇ, ಅವರು ಹೋಗಿದ್ದಾರೆ, ನೀವೇಕೆ ಹೋಗುತ್ತೀರಾ?

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಅವರು ಹೋಗಿರುವುದನ್ನು ಸರಿ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ನಾವು ಇರತಕ್ಕಂಥವರು. ನಮ್ಮ ಮಾತನ್ನು ಕೇಳಬೇಕು. ನಾವು ಬಿಲ್ ಅನ್ನು oppose ಮಾಡುವುದಕ್ಕೆ ಬಂದಿರುವಂತಹವರು. ಬಿಲ್ ತಂದಿರುವಂತಹವರು ಕೇಳುವಂತಹ ಸೌಜನ್ಯ ಅವರಿಗೆ ಇರಬೇಕು.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಅವರು ಬೆರಳನ್ನು ನನ್ನ ಕಡೆ ತೋರಿಸಬಾರದು ಎಂದು ಹೇಳಿ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿಗೌಡರವರು ನಮ್ಮ ರಾಹುಲ್ ಗಾಂಧಿಯವರ ಕಡೆ ಬೆರಳು ತೋರಿಸಿದ ಮೇಲೆ ನಾವು ಏಕೆ ನಿಮ್ಮ ಕಡೆ ಬೆರಳು ತೋರಿಸಬಾರದು? ಮಾನ್ಯ ರಾಹುಲ್ ಗಾಂಧಿಯವರ ಬಗ್ಗೆ ಮಾತನಾಡುವುದಕ್ಕೆ ತಮಗೆ ಯಾವುದೇ ನೈತಿಕತೆ ಇಲ್ಲ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಎಂ.ನಾಗರಾಜುರವರೇ, ನಾನು ಏನು ಹೇಳಿದೆ ಎಂದು ತಾವು ಕೇಳಿಸಿಕೊಳ್ಳಲಿಲ್ಲ. ಅದು ನಿಮ್ಮ ಪ್ರಾಬ್ಲಂ.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ಅದರಲ್ಲಿ ವಿಷಯಾಂತರರಾಗುವುದು ಬೇಡ. ನಾನು ಬಿಲ್‌ಗೆ ಸೀಮಿತವಾಗಿ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಬೆಳಗ್ಗೆ

ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಕಾನೂನು ಸಚಿವರು ಮಾತನಾಡುವಂತಹ ಸಂದರ್ಭದಲ್ಲಿ ಹೇಳುತ್ತಿದ್ದರು. ಇದು ಯಾವುದೋ ಸಮುದಾಯಕ್ಕೆ, ಜಾತಿಗೆ, ಧರ್ಮಕ್ಕೆ ಸೇರಿದ್ದಲ್ಲ. ಇದು ಕರ್ನಾಟಕ ರಾಜ್ಯದ ಆರೂವರೆ ಕೋಟಿ ಜನರಿಗೆ ಸಂಬಂಧಪಟ್ಟಿರುವಂತಹ ವಿಚಾರ ಎಂದು ಹೇಳಿದರು. ಈಗ ಮಾತನಾಡಿದಂತಹ ಸಂದರ್ಭದಲ್ಲಿ Christ College ಬಗ್ಗೆ ಉಲ್ಲೇಖ ಮಾಡಿದಂತಹ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಮಾತನಾಡುತ್ತಿದ್ದರು. ಯಾವ ರೀತಿ ಆ ಸ್ಕೂಲ್‌ನಲ್ಲಿ Board ಹಾಕುತ್ತಾರೆ ಎಂದು ಹೇಳಿದರು. ಯಾವ ರೀತಿಯಲ್ಲಿ prejudice mind ಮಾತನಾಡುತ್ತಾರೆ. ಇವತ್ತಿನ ದಿವಸ ಯಾವ ರೀತಿ ಕೇಸರಿಕರಣದ ಬಗ್ಗೆ ಮಾತನಾಡಿದರು. ನಾವು ಭಾರತೀಯರಾಗಿ, ಕನ್ನಡಿಗರಾಗಿ ಆರೂವರೆ ಕೋಟಿ ಕನ್ನಡಿಗರ ಬಗ್ಗೆ ಮಾತನಾಡಬೇಕು, 140 ಕೋಟಿ ಭಾರತೀಯರ ಬಗ್ಗೆ ಮಾತನಾಡಬೇಕು, ನಾವೆಲ್ಲರೂ ಮನುಷ್ಯತ್ವದ ಬಗ್ಗೆ ಮಾತನಾಡಬೇಕು. ಮನುಷ್ಯತ್ವವನ್ನು ಕಾಪಾಡುವುದಕ್ಕೋಸ್ಕರ ಮತ್ತು ಹೃದಯಗಳನ್ನು ಕಟ್ಟುವುದಕ್ಕೋಸ್ಕರ ಕಾನೂನನ್ನು ತರುವಂತಹದ್ದು. ಹೃದಯಗಳನ್ನು ಒಡೆಯುವುದಕ್ಕೋಸ್ಕರ ಅಲ್ಲ. ಬಲವಂತದಿಂದ ಮತಾಂತರವನ್ನು ನಮ್ಮ ಸಂವಿಧಾನದಲ್ಲಿ inbuilt ಆಗಿ ವಿರೋಧ ಮಾಡಿರುವಂತಹದ್ದು ಇದೆ. ಅದಕ್ಕೆ ನಮ್ಮ ಸಂವಿಧಾನದಲ್ಲಿರುವಂತಹ ಆಶಯಗಳೇ ಸಾಕ್ಷಿ ಎಂದು ಹೇಳಬಹುದು. ಈ ಸಂವಿಧಾನದಲ್ಲಿ ನಂಬಿಕೆ ಇರುವವರು ಇದನ್ನು ಒಪ್ಪಿಕೊಳ್ಳಬೇಕಾಗಿತ್ತು. ಇದಕ್ಕೆ ಇನ್ನೊಂದು ಕಾನೂನನ್ನು ತರುವಂತಹ ಅವಶ್ಯಕತೆ ಇರಲಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಈಗ ತಂದಿರುವಂತಹ ಕಾನೂನು it completely violates all the norms of the Constitution. ನಾನು ಹೇಳುವುದೇನೆಂದರೆ, it violates Articles 14, 21 and 25 of the Constitution ಎನ್ನುವ ಮಾತನ್ನು ಹೇಳುತ್ತೇನೆ. ನಾನು ಕಾನೂನು ಮಂತ್ರಿಗಳಷ್ಟು ಬುದ್ಧಿವಂತ ಅಲ್ಲದೇ ಇರಬಹುದು, ಆದರೆ, ಈ ದೇಶದ ನಾಗರೀಕನಾಗಿ ಹೇಳುತ್ತಿದ್ದೇನೆ. ನಾವೆಲ್ಲರೂ ಇಷ್ಟು ವರ್ಷಗಳಿಂದ ಕೇವಲ ಸ್ವಾತಂತ್ರ ನಂತರ ಅಲ್ಲ, ಸ್ವಾತಂತ್ರ ಮುನ್ನ ಕೂಡ ಹಿಂದುಗಳಾಗಿ ಬದುಕಿದ್ದೇವೆ. ಇಲ್ಲಿ ಕುಳಿತಿರುವ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ಹಿಂದುಗಳು ಇದ್ದಾರೆ. ಮಾನ್ಯ ಪ್ರಕಾಶ್ ಕೆ. ರಾಥೋಡ್ ರವರು ಹಿಂದುಗಳು ಇದ್ದಾರೆ. ಮಾನ್ಯ ರವಿಕುಮಾರ್‌ರವರು ಹಿಂದುಗಳು ಇದ್ದಾರೆ. ನಾನು ಕೂಡ

ಹೆಮ್ಮೆಯಿಂದ ಹಿಂದೂ ಎನ್ನುವ ಮಾತನ್ನು ಹೇಳುತ್ತೇನೆ. ನಾವು ಎಲ್ಲರೂ ಒಪ್ಪಿಕೊಳ್ಳುವಂತಹ ಹಿಂದೂಗಳು ನಾವು. ಯಾರನ್ನೂ ದ್ವೇಷಿಸುವಂತಹ ಹಿಂದೂಗಳು ಅಲ್ಲ. ಇವರ ರೀತಿಯಲ್ಲಿ ಅಲ್ಲ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ನಾವು ಹಿಂದೂಗಳು ಎಂದರೆ, ಎಲ್ಲರನ್ನೂ ಪ್ರೀತಿಯಿಂದ ಕಾಣುವಂತಹ ಭಾರತೀಯ ಹಿಂದೂಗಳು ಎಂದು ಹೇಳುತ್ತೇನೆ. ವಿಶ್ವಕ್ಕೆ ಮಾದರಿಯಾಗಿರುವಂತಹ ಹಿಂದೂಗಳು ನಾವು. ವಿಶ್ವಕ್ಕೆ ಶಾಂತಿಯನ್ನು ಪ್ರತಿಪಾದನೆ ಮಾಡಿದಂತಹ ಮಹಾತ್ಮ ಗಾಂಧಿಯವರ ವಂಶಸ್ಥರು ಎಂದು ಹೇಳುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ. We are all children and he is the father of the nation.

**(ಗೊಂದಲ)**

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಎಂ. ನಾಗರಾಜುರವರೇ, ರಾಹುಲ್ ಗಾಂಧಿಯವರು ಅಲ್ಲ ತಾನೇ.

**ಶ್ರೀ ಎಂ. ನಾಗರಾಜು:-** ಮಾನ್ಯ ಎನ್.ರವಿಕುಮಾರ್‌ರವರೇ, ಒಂದು ನಿಮಿಷ. ನನ್ನ ಸಮಯದಲ್ಲಿ ಅವರ ಪಕ್ಷವನ್ನು ತೆಗೆದುಕೊಳ್ಳುವುದು ಬೇಕಾಗಿಲ್ಲ. ಅಲ್ಲಿ ಎರಡು ಅಕ್ಕಂದಿರು ಕುಳಿತು ಎಲ್ಲಾ ಸಮುದಾಯದ ವಿಚಾರ ಮತ್ತು ಎಲ್ಲಾ ಧರ್ಮಗಳ ವಿಚಾರವನ್ನು ಮಾತನಾಡುತ್ತಿದ್ದರು. ಮಾನ್ಯ ಮುಖ್ಯಮಂತ್ರಿಯವರು 'we are inclusive in nature' ಎಂದು ಮಾತನಾಡುತ್ತಿದ್ದರು. I am a first time Member and today I am disappointed ಎಂದು ಹೇಳುತ್ತಿದ್ದೇವೆ. ಯಾವ ರೀತಿ divisive politics ಮಾಡುವುದಕ್ಕೆ ಕೊಟ್ಟಿದ್ದೀರಿ. ಯಾವ ಕಾರಣಕ್ಕಾಗಿ ಜನರು ಮತಾಂತರವಾಗುತ್ತಿದ್ದಾರೆ ಎಂದು ಯೋಚನೆ ಮಾಡಬೇಕಾಗುತ್ತದೆ. ನಾವು ಹಿಂದೂ ಧರ್ಮದಲ್ಲಿ ಇರುವಂತಹವರು, ಹಿಂದೂ ಧರ್ಮವನ್ನು ಪ್ರತಿಪಾದನೆ ಮಾಡುವಂತಹವರು, ಶೋಷಿತ ವರ್ಗದಲ್ಲಿ ಇರುವಂತಹ ಎಸ್.ಸಿ., ಇರಬಹುದು, ಎಸ್.ಟಿ., ಇರಬಹುದು, ಓ.ಬಿ.ಸಿ., ಇರಬಹುದು, ಹಾಗೆಯೇ

ಅಲ್ಪಸಂಖ್ಯಾತರನ್ನು ನಾವು ನೋಡುವಂತಹ ರೀತಿ ಸರಿ ಇದ್ದರೆ ಅವರು ಏಕೆ convert ಆಗುತ್ತಾರೆ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ.

(ಮುಂದು)

(869)15-09-2022(06-40)bsd-gr

**ನಾಗರಾಜು ಎಂ (ಮುಂದು):**

ಉಚಿತವಾಗಿ ಶಿಕ್ಷಣ ಕೊಡುವ ಬಗ್ಗೆ ಆಮಿಷ ಒಡ್ಡಿದ್ದೇ ಆದರೆ ಕ್ರಮ ಕೈಗೊಳ್ಳುವ ಬಗ್ಗೆ ಹೇಳಿದ್ದಾರೆ. ಯಾವುದಾದರೂ ಶಿಕ್ಷಣ ಸಂಸ್ಥೆ 4 ಜನರಿಗೆ admission ಕೊಡುವುದಾದರೇ, ನಾಳೆ ಬೆಳಗ್ಗೆ ನನ್ನದೇ ಶಿಕ್ಷಣ ಸಂಸ್ಥೆ ನಾಳೆ ಬೆಳಗ್ಗೆ 4 ಜನರಿಗೆ admission ಕೊಟ್ಟಿದ್ದೇ ಆಗಿ, ಇನ್ನೊಬ್ಬರಿಗೆ admission ಸಿಕ್ಕಿಲ್ಲ ಎಂದು ನನ್ನ ವಿರುದ್ಧ complaint ಕೊಟ್ಟರೆ ನನ್ನನ್ನು ಒಳಗಡೆ ಹಾಕುವುದೇ? Is this the law says that way? ನಾನು convert ಆದಾಗ ನನ್ನ ಸಹಪಾಠಿಗಳು complaint ಕೊಡಬಹುದು ಎಂದಾಗ ವಿಚಾರ ಯಾವರೀತಿ ಇದೆ. ನನ್ನ ಜೊತೆ ಕೆಲಸ ಮಾಡುವವನಿಗೂ ನನಗೂ ದ್ವೇಷ ಇದ್ದರೆ ಆತ ನಾಳೆ ಬೆಳಗ್ಗೆ ನನ್ನ ವಿರುದ್ಧ complaint ಕೊಡುತ್ತಾನೆ. ನಾನು ಧರ್ಮವನ್ನು ಆಚರಣೆ ಮಾಡಬೇಕು, ಯಾವ ಧರ್ಮವನ್ನು ಪರಿಪಾಲನೆ ಮಾಡಬೇಕು, ಯಾರ ಜೊತೆ ಬದುಕಬೇಕು, ಏನು ತಿನ್ನಬೇಕು, ಯಾವ ಬಟ್ಟೆ ಹಾಕಿಕೊಳ್ಳಬೇಕೆಂಬುದೆಲ್ಲವೂ ನನ್ನ ಹಕ್ಕು. That is my right, why the State Government is interfering in this matter ಎಂದು ಕೇಳುತ್ತಿದ್ದೇನೆ. ಹಾಗಾಗಿ ಈ ಬಿಲ್ ಅನ್ನು ತಂದಿರುವುದೇನೆಂದರೆ, ಮೂಲತಃ ಕರ್ನಾಟಕದಲ್ಲಿ ಹಿಂದುತ್ವವನ್ನು ಪ್ರತಿಪಾದನೆ ಮಾಡಿಕೊಳ್ಳಲು ಮಂಗಳೂರಿನವರು ಯಾವ experiment ಮಾಡಿಕೊಂಡಿದ್ದಾರೆ, ಯಾವರೀತಿ moral policing ಎಂದು ಮಾಡುತ್ತಿದ್ದಾರೋ, ಅಂತಹವರಿಗೆ ನಾಳೆ ಬೆಳಗ್ಗೆ ಇದು ಬ್ರಹ್ಮಾಸ್ತ್ರ ಆಗುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಇದನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಇರಬಹುದು ಅಥವಾ ಇನ್ಯಾರಿಗೋ ದ್ವೇಷ ಸಾಧಿಸಲು, polarisation ಮಾಡಿಕೊಳ್ಳಲು ಅಥವಾ ಚುನಾವಣೆಗೋಸ್ಕರ, ಚುನಾವಣೆ ಗಿಮಿಕ್‌ಗೋಸ್ಕರ ತಂದಿರುವ ಬಿಲ್

ಎಂದು ಹೇಳುತ್ತಿದ್ದೇನೆ. ಇದು ಮನುಷ್ಯತ್ವವನ್ನು ಕಟ್ಟುವ ಬಿಲ್ ಅಲ್ಲವೇ ಅಲ್ಲ ಎಂದು ಹೇಳುತ್ತಿದ್ದೇನೆ. ಮನುಷ್ಯತ್ವವನ್ನು ಕಾನೂನುಗಳನ್ನು ಮೀರಿ ಕಟ್ಟಬೇಕಾಗುತ್ತದೆ. ನಿಜವಾದ ಹಿಂದೂಗಳು ಭಾರತೀಯರೆಲ್ಲರೂ ಒಂದೆಂದು ನೋಡಬೇಕಾಗುತ್ತದೆ. ಗಂಡು-ಹೆಣ್ಣು ಎಂಬ ಎರಡು ಬೇಧ ಬಿಟ್ಟರೂ ಎಲ್ಲರೂ ಒಂದೇ ಎಂಬ ಮಾತು ಇರಬೇಕು. ಅಂದಿನಿಂದ ಇಂದಿನವರೆಗೂ ಜಾತಿ ಪದ್ಧತಿ ವಿರುದ್ಧ ಹೋಗಬೇಕು, ಜಾತಿ ಪದ್ಧತಿಯನ್ನು ತೆಗೆದುಹಾಕಬೇಕೆಂದು ಹೋರಾಟ ಮಾಡುತ್ತಿದ್ದರೆ, ಇಲ್ಲಿ ಜಾತಿಗಿಂತ ಹೆಚ್ಚಾಗಿ ಧರ್ಮದ ವಿಭಜನೆಯನ್ನು ಮಾಡಲು ಹೊರಟಿದ್ದಾರೆ. ಯಾವುದೇ ದೇಶ ಧರ್ಮದ ರಾಜಕಾರಣ ಮಾಡಬಾರದು, ಈ ರೀತಿ ಮಾಡಿದ್ದೇ ಅದರೆ ಇವತ್ತು ಪಾಕಿಸ್ತಾನದಲ್ಲಿ ತಿನ್ನುವುದಕ್ಕೆ ಊಟ ಇಲ್ಲ, ಆ ಗತಿ ನಮಗೆ ಬರಬಾರದು ಎಂದಾದರೆ ಧರ್ಮ ರಾಜಕಾರಣವನ್ನು ಬಿಡಬೇಕು ಎಂದು ಮನವಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಸಮಯ ಆಯಿತು.

**ಶ್ರೀ ಎಂ. ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಮೊದಲನೆ ಬಾರಿ ಮಾತನಾಡುತ್ತಿರುವುದರಿಂದ ದಯವಿಟ್ಟು ನನಗೆ ಒಂದು ನಿಮಿಷ extra ಅವಕಾಶ ಕೊಡಬೇಕೆಂದು ಮನವಿ ಮಾಡುತ್ತೇನೆ. We are all students in front of you.

**Mr.CHAIRMAN:-** Please, please.

**ಶ್ರೀ ಎಂ. ನಾಗರಾಜು:-** ಹಾಗಾಗಿ ಪ್ರಪಂಚದಲ್ಲಿ ಯಾವುದೇ ದೇಶದಲ್ಲಿ ಧರ್ಮ ಆಧಾರಿತ ರಾಜಕಾರಣ ಮಾಡಿದ್ದರೆ ಆ ದೇಶದ ಆರ್ಥಿಕ ಕುಸಿತ ಕಂಡಿದೆ, ಆ ದೇಶದಲ್ಲಿ ತಿನ್ನುವುದಕ್ಕೆ ಅನ್ನ ಗತಿ ಇಲ್ಲದೇ ಇರುವುದನ್ನು ಅಕ್ಕಪಕ್ಕದವರಾಗಿ ನಾವು ನೋಡಿದ್ದೇವೆ. ಆದ್ದರಿಂದ ಡಾ: ಬಿ.ಆರ್. ಅಂಬೇಡ್ಕರ್ ರವರು ನೀಡಿರುವ ಶ್ರೇಷ್ಠವಾದ ಸಂವಿಧಾನದಡಿಯಲ್ಲಿ ಈ ಸರ್ಕಾರ ನಡೆಯಬೇಕು. ಮಾನ್ಯ ನಾರಾಯಣಸ್ವಾಮಿಯವರು ಶೋಷಿತ ವರ್ಗದವರ ಬಗ್ಗೆ ಬಹಳ ಕಳಕಳಿಯನ್ನು ವ್ಯಕ್ತ ಮಾಡಿದರು. ನಾನೂ ಕೂಡ ಶೋಷಿತ ವರ್ಗದಿಂದ ಬಂದವನಾಗಿದ್ದು, ಬಿ.ಆರ್. ಅಂಬೇಡ್ಕರ್ ರವರು ಮೀಸಲಾತಿ

ವಿಚಾರಗಳನ್ನು ಕೊಟ್ಟಿದ್ದರು. ಆ ಮೀಸಲಾತಿಯನ್ನು ವಿರೋಧ ಮಾಡಿದ ಶ್ರೀ ರಾಮಾ ಜೋಯಿಷ್ ರವರು ಸದನದಲ್ಲಿ ಇಲ್ಲದೇ ಇರಬಹುದು, ಆದರೆ ಅವರ ಪಕ್ಷದವರಾಗಿದ್ದುಕೊಂಡು Supreme Court ನಲ್ಲಿ Affidavit ಹಾಕಿರುವುದನ್ನು ನೋಡಿಲ್ಲವೇ? ಮೀಸಲಾತಿಯನ್ನು ವಿರೋಧ ಮಾಡುವವರಿಗೆ ಶೋಷಿತ ವರ್ಗದವರ ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ ಎಂದು ಕೇಳುತ್ತಿದ್ದೇನೆ. ಈ ಬಿಲ್‌ನಲ್ಲಿ ಇರುವ complaint ವಿಚಾರ ಸೇರಿದಂತೆ ಎಲ್ಲಾ ವಿಚಾರಗಳು they are all in complete violation of the Indian Constitution ಎಂದು ಹೇಳುತ್ತಿದ್ದೇನೆ. Supreme Court ನಲ್ಲಿಯೂ ತೀರ್ಮಾನಗಳು ಆಗುತ್ತಿದ್ದು, ಅದಲ್ಲದೇ ವಿಶೇಷವಾಗಿ ಕರ್ನಾಟಕ ಉಚ್ಚ ನ್ಯಾಯಾಲಯದಿಂದಲೂ notice ಕೊಟ್ಟಿರುವುದರಿಂದ ಈ ಬಿಲ್ ತರಲು urgent ಏನಿದೆ ಎಂಬ ಮಾತನ್ನು ಕೇಳುತ್ತಿದ್ದೇನೆ.

ಇನ್ನು 15 ದಿವಸಗಳಿಂದ ಬೆಂಗಳೂರು ನಗರ ಸೇರಿದಂತ ರಾಜ್ಯವೇ ಸಲುಗಿ ಹೋಗಿರುವ ಅತಿವೃಷ್ಠಿ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ಈ ಬಿಲ್‌ನ ಆತುರತೆ ಅವರಿಗೆ ಏಕೆ ಬೇಕು? ಅವರು ಮನುಷ್ಯತ್ವವನ್ನು ಕಟ್ಟುವುದಾದರೆ, ಬೆಂಗಳೂರನ್ನು ಕಟ್ಟುವುದಾದರೆ, ಬೆಂಗಳೂರು brand ಅನ್ನು ಕಟ್ಟುವುದಾಗಿದ್ದರೆ ಮೊದಲು ಆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿತ್ತು. What is the urgency of this Bill?

**Mr.CHAIRMAN:-** Thank you, Nagaraj.

**Sri M.NAGARAJU:-** Mr. Chairman Sir, let me complete. ನಾಲ್ಕು ದಿವಸ ಅಂತಹ ವಿಷಯಗಳನ್ನು ಚರ್ಚೆ ಮಾಡಿ, ಬೆಂಗಳೂರು ನಗರದ ಅಭಿವೃದ್ಧಿ ಇರಬಹುದು, ಬೆಂಗಳೂರಿನ ನಾಗರಿಕರ ಬಗ್ಗೆ ಇರಬಹುದು, ರೈತರ ವಿಚಾರ ಇರಬಹುದು, ಅಂತಹ ವಿಚಾರಗಳನ್ನು ಮೊದಲು ಚರ್ಚೆ ಮಾಡಬೇಕೆಂದು ಹೇಳಿ ನಾನು conclude ಮಾಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಮಂತ್ರಿಗಳು ಉತ್ತರ ಕೊಟ್ಟ ನಂತರ ಕೇಳಿ, ಮಾನ್ಯ ಗೃಹ ಮಂತ್ರಿಗಳು ಮಾತನಾಡಲಿ. ಆ ನಂತರ Clarification ಏನಾದರೂ ಇದ್ದರೆ ಕೇಳಿ.

**ಶ್ರೀ ಎಂ. ನಾಗರಾಜು:–** ಮಾನ್ಯ ಸಭಾಪತಿಯವರೇ, ನಾನು ಕೇಳುತ್ತಿರುವುದೇನೆಂದರೆ this Bill violates the provisions of Article 21 and 25 of the Constitution. ಆಮೇಲೆ rights of privacy has been violated. ಹಾಗಾಗಿ ಈ ಬಿಲ್ ಅನ್ನು ಕೂಡಲೇ ಹಿಂಪಡೆಯಬೇಕಾಗುತ್ತದೆ ಹಾಗೂ ರಾಜ್ಯದಲ್ಲಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು Session ಅನ್ನು extend ಮಾಡಿಕೊಂಡು ಈ ಬಿಲ್ ಅನ್ನು ಮಂಡಿಸಲಿ ಎನ್ನುವ ಮಾತನ್ನು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್ ರವರು ಮಾತನಾಡಿ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಸಾಕಷ್ಟು ಚರ್ಚೆಯಾಗಿದ್ದು, ಇದರ ವಿರುದ್ಧವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲಾ ಹಿರಿಯ ಮುಖಂಡರು ಮಾತನಾಡಿದ್ದಾರೆ. ಈಗ ನಾನು ಮಾತನಾಡಬೇಕೋ ಅಥವಾ ಬೇಡವೋ ಎಂಬುದರ ಬಗ್ಗೆ ಮಾನ್ಯ ಗೃಹ ಹಾಗೂ ಮಾನ್ಯ ಕಾನೂನು ಸಚಿವರಿಗೆ convince ಆದಂತಿದೆ. ಏಕೆಂದರೆ ಈ ಬಿಲ್ ಅನ್ನು ಅವರು withdraw ಮಾಡುತ್ತಾರೆಂಬ ಭಾವನೆ ನನಗೆ ಬರುತ್ತಿದೆ. ಅವರು convince ಆಗಿದ್ದಾರೆ ಎಂಬ ಭಾವನೆ ನನಗೆ ಆಗುತ್ತಿದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:–** ಒಬ್ಬರು expert ಮಾತನಾಡಿಬಿಟ್ಟಾಗ ನಾವು ಬಿಲ್ ಅನ್ನು vote ಗೆ ಹಾಕುತ್ತೇವೆ, ಇಲ್ಲದಿದ್ದರೆ ಹಾಕುವುದಿಲ್ಲ ಎಂದು ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆಯೇ?

**ಶ್ರೀ ಸಲೀಂ ಅಹಮದ್:–** ಇಷ್ಟೊತ್ತಿನವರೆಗೂ ಎಲ್ಲರೂ ಚರ್ಚೆ ಮಾಡಿದ ನಂತರ ಅವರು convince ಆಗಿ, ಬಿಲ್ ಅನ್ನು withdraw ಮಾಡುತ್ತಾರೆ ಎಂಬ ವಿಶ್ವಾಸ ಇದೆ.

**ಶ್ರೀ ಜೆ.ಸಿ. ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು withdraw ಮಾಡುತ್ತೇವೋ ಅಥವಾ ಏನು ಮಾಡುತ್ತೇವೆ ಎಂಬುದು ನಮ್ಮ ಹಣೆಬರಹ. ಮಾನ್ಯ ಸದಸ್ಯರು ಮಾತನಾಡುವ ವಿಚಾರಗಳನ್ನು ಮಾತನಾಡಲಿ.

**ಶ್ರೀ ಸಲೀಂ ಅಹಮದ್:-** ಆಯಿತು, ನಾವು ಇಷ್ಟೆಲ್ಲಾ ಹೇಳಿದ್ದೇವೆ, convince ಮಾಡಿ, ಅವರಿಗೆ ಅರ್ಥ ಆಗಿದೆ ಎಂಬ ವಿಶ್ವಾಸ ಇದೆ. ಆದರೆ ಇವತ್ತು ಈ ಬಿಲ್ ತಂದು Article 21, 25 …

**Sri J.C.MADHUSWAMY:-** When you have convinced, they have all convinced us, please sit down.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ yield ಆಗಿಲ್ಲ. ಈಗಾಗಲೇ Article 21, 25 ಗಳ ವಿರುದ್ಧವಾಗಿ ಬಿಲ್ ಅನ್ನು ತಂದಿದ್ದು, ಇದರಲ್ಲಿ political hidden agenda ಇದೆ. They are misleading. ಇಷ್ಟೊತ್ತು convince ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದರು. ಇದು hidden agenda. ಯಾವುದೋ ಒಂದು ವಿಚಾರ ಇಟ್ಟುಕೊಂಡು ಮಾಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ ಈ ಕಡೆ ನೋಡಿ ಮಾತನಾಡಿ.

**Dr.Y.A.NARAYANASWAMY:-** Mr.Chairman Sir, where is the hidden agenda?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, Law and Parliamentary Affairs Minister ಅವರು ಈ ಬಿಲ್ ಯಾವುದೇ ಸಮುದಾಯದ ವಿರುದ್ಧ ಇಲ್ಲ, ಎಲ್ಲಾ ಸಮುದಾಯವನ್ನು ರಕ್ಷಣೆ ಮಾಡಬೇಕೆಂದು ಹೇಳಿದರು. ನಮ್ಮ ಹೊಸ ಸದಸ್ಯರಾದ ಮಾನ್ಯ ನಾರಾಯಣಸ್ವಾಮಿ ರವರು ಮಾತನಾಡಿದಾಗ ಮಾನ್ಯ ಕಾನೂನು ಸಚಿವರು ಇರಲಿಲ್ಲ. ಅವರು

ಸುಮಾರು 10 ಬಾರಿ Christian community ಎಂದು ಹೇಳಿರಬಹುದು. ಅದಕ್ಕಾಗಿ ನಾನು ಗುಪ್ತ ಕಾರ್ಯಸೂಚಿ ಎಂದು ಹೇಳಿದ್ದು ಇದನ್ನೇ hidden agenda ಎನ್ನುವುದು. ಅದಕ್ಕೆ ತಂತ್ರ, ಕುತಂತ್ರ, ಷಡ್ಯಂತ್ರ ಎನ್ನುವುದು.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನಿಮ್ಮ ಸಮಯ ವ್ಯರ್ಥ ಮಾಡಿಕೊಳ್ಳುತ್ತಿದ್ದೀರಿ.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಇದು ಸಂವಿಧಾನ ವಿರೋಧಿ ಬಿಲ್ ಆಗಿದ್ದು, ನಾನು ಸಾಕಷ್ಟು ವಿಷಯಗಳನ್ನು repeat ಮಾಡುವುದಿಲ್ಲ. ದಯವಿಟ್ಟು ಈ ಬಿಲ್ ಅನ್ನು withdraw ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಇದರಲ್ಲಿ 2–3 clause ಗಳಲ್ಲಿ complaint ಅನ್ನು ಯಾರ್ಯಾರು ಕೊಡಬಹುದು, ಅವರುಗಳ relations ಕೊಡಬಹುದು, ಈ ವಿಚಾರಗಳ ಬಗ್ಗೆ ಹೇಳಿದ್ದು, ಇದರಿಂದ ಎಲ್ಲೋ ಒಂದು ಕಡೆ ಇದರ ಮೂಲಕ ತೊಂದರೆ ಕೊಡುವುದಕ್ಕೆ ಈ ಬಿಲ್ ಅನ್ನು ತಂದಿದ್ದಾರೆ ಎಂದು ನನ್ನ ಭಾವನೆ. ಇನ್ನು ಹಲವಾರು point ಗಳಿದ್ದರೂ ಈ ಬಿಲ್ ಮೂಲಕ ಉತ್ತಮ ಜಾತಿ–ಮತ ವಿಭಜಿಸುತ್ತಾರೆ, ಆದರೆ ಸಮಾಜ ನಿರ್ಮಾಣವಾಗಬೇಕು. ವಿಶ್ವಕವಿ ಶ್ರೀಯುತ ಕುವೆಂಪುರವರು ಹೇಳಿದಂತೆ " ಸರ್ವ ಜನಾಂಗದ ಶಾಂತಿಯ ತೋಟ" ಎಂದಾಗಬೇಕು. ಆದರೆ ಈ ಬಿಲ್ ಮೂಲಕ ಸಮಾಜವನ್ನು ಒಡೆಯುವ ಕೆಲಸ ಆಗುತ್ತದೆ. ಆ ಹಿನ್ನೆಲೆಯಲ್ಲಿ ಬಿಲ್ ಅನ್ನು withdraw ಮಾಡಬೇಕೆಂದು ಹೇಳುತ್ತಿದ್ದೇನೆ. ಮಾನ್ಯ ಮಾಧುಸ್ವಾಮಿ ರವರು ಬಹಳ urgent ನಲ್ಲಿದ್ದು, ಮಾನ್ಯ ಕಾನೂನು ಸಚಿವರಿಗೆ ಸ್ವಲ್ಪ ತಾಳ್ಮೆ ಇರಬೇಕು. ನಾವು ನಮ್ಮ ಪ್ರಯತ್ನಗಳನ್ನು ಮಾಡುತ್ತೇವೆ ಮತ್ತು ಅವರಿಗೆ convince ಮಾಡುವ ಪ್ರಯತ್ನಗಳನ್ನೂ ಮಾಡುತ್ತೇವೆ. ಆದರೆ ಅದನ್ನು ಕೇಳಲು ಅವರಿಗೆ patience ಇಲ್ಲ ಎಂದರೆ ಬಹುಶಃ I can understand. ಆದ್ದರಿಂದ ಮಾನ್ಯ ಮಾಧುಸ್ವಾಮಿ ರವರು ಈಗಾಗಲೇ ಸರ್ಕಾರದ ಬಗ್ಗೆ "ಏನೋ ಸರ್ಕಾರ ನಡೆದುಕೊಂಡು ಹೋಗುತ್ತಿದೆ" ಎನ್ನುವ ಮಾತುಗಳನ್ನು ಹೇಳಿದ್ದಾರೆ. ಅಲ್ಲೇ ಅರ್ಥವಾಗುತ್ತದೆ. ಅವರು manage ಮಾಡಿಕೊಂಡು ಹೋಗುತ್ತಿದೆ ಎಂದು ಹೇಳಿದ್ದು, ಸರ್ಕಾರ

ಜೀವಂತ ಇಲ್ಲ, ಈ ಸರ್ಕಾರ ಸತ್ತುಹೋಗಿದೆ ಎಂದು ಅವರ ಮಾತುಗಳಿಂದ ಅರ್ಥವಾಗುತ್ತದೆ. ಆದ್ದರಿಂದ ಈ ಬಿಲ್ ಅನ್ನು withdraw ಮಾಡಬೇಕೆಂದು ಬಯಸುತ್ತಿದ್ದೇನೆ.

**ಶ್ರೀ ಆರಗ ಜ್ಞಾನೇಂದ್ರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ಕೊನೆಯಲ್ಲಿ ಮಾತನಾಡಿರುವ ಶ್ರೀ ಸಲೀಂ ಅಹಮದ್ ರವರು ಸೇರಿ 10 ಜನರು ಬಿಲ್ ಮೇಲೆ ಮಾತನಾಡಿದ್ದು, ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ವಿಸ್ತಾರವಾಗಿ ಮಾತನಾಡಿದ್ದು, ಎಲ್ಲರೂ ಅವರವರ ಇಚ್ಛೆಗನುಗಣವಾಗಿ ಮತ್ತು ಭಾವನೆಗಳಿಗನುಗುಣವಾಗಿ ಬೆಳಕು ಚೆಲ್ಲುವ ಕೆಲಸ ಮಾಡಿದ್ದಾರೆ. ಈ ಬಿಲ್ ಮೇಲೆ ಅನವಶ್ಯಕದ ಅನುಮಾನವನ್ನು ಕೆಲವರು ವ್ಯಕ್ತ ಮಾಡಿದ್ದಾರೆ. ಬೆಳಗ್ಗೆ ನಾವು ಹೇಳಿದಂತೆ ಈ ಬಿಲ್‌ನಲ್ಲಿ ಯಾವ hidden agenda ವೂ ಇಲ್ಲ. ಯಾವ vote bank ರಾಜಕಾರಣವೂ ಇಲ್ಲ. ಅವರು ಕೆಲವು ಧರ್ಮಗಳನ್ನು ಸಮರ್ಥನೆ ಮಾಡಿಕೊಂಡಿರುವ ಬಗ್ಗೆ ಓಟಿನ ರಾಜಕಾರಣ ಎಂದು ಹೇಳುವುದಕ್ಕೆ ಹೋಗುವುದಿಲ್ಲ.

**ಶ್ರೀ ಬಿ.ಕೆ. ಹರಿಪ್ರಸಾದ್:-** ರಾಷ್ಟ್ರದ ಒಂದು ಸಿದ್ಧಾಂತ " ಸರ್ವ ಧರ್ಮ ಸಮ ಭಾವ" ವಾಗಿದೆ. ಆದ್ದರಿಂದ ಅದನ್ನು ನಾನು defend ಮಾಡುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ:-** ಈ ರಾಷ್ಟ್ರಕ್ಕೆ ಜಾತ್ಯಾತೀತ ರಾಷ್ಟ್ರ ಎಂದು ಬೇರೆ ಹೇಳುವ ಅವಶ್ಯಕತೆ ಇಲ್ಲ. ಇಲ್ಲಿ ಬಹಳ ಉದಾತ್ತವಾದ ಸಂಸ್ಕೃತಿ ಇದೆ.

(ಮುಂದು)

(870) 15.09.2022 6.50 ಹೆಚ್‌ವಿ:ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರಗ ಜ್ಞಾನೇಂದ್ರ (ಮುಂದುವರಿದದ್ದು)**

ಸನ್ಮಾನ್ಯ ಸಭಾಪತಿಯವರೇ, ನಮ್ಮ ರಾಷ್ಟ್ರದಲ್ಲಿ ಒಂದು ಉದಾತ್ತವಾಗಿರುವಂತಹ ಸಂಸ್ಕೃತಿ ಇದೆ. ಭಾರತಕ್ಕೆ ಮೊದಲು ಬಂದಂತಹ ಇಸ್ಲಾಂ ಧರ್ಮದವರಿಗೆ ಮಸೀದಿ ಕಟ್ಟಿಸಿಕೊಟ್ಟವರು ಹಿಂದುಗಳು.

ಎಲ್ಲರನ್ನು ಅಪ್ಪಿಕೊಂಡು-ಒಪ್ಪಿಕೊಂಡು ಹೋಗುವಂತಹ ಸಂಸ್ಕೃತಿ ಭಾರತ ದೇಶದ್ದಾಗಿದೆ. ಆದ್ದರಿಂದ ವಿದೇಶದಲ್ಲಿ ಹುಟ್ಟಿರುವಂತಹ ಧರ್ಮಗಳು ಇಲ್ಲಿ ಅತ್ಯಂತ ಯಶಸ್ವಿಯಾಗಿ ಮತ್ತು ಯಾವುದೇ ಚಿಂತೆಯಿಲ್ಲದೆ ಬದುಕುತ್ತಿವೆ. ಅದೇ ಧರ್ಮಕ್ಕೆ ಸಂಬಂಧಪಟ್ಟ ರಾಷ್ಟ್ರಗಳಲ್ಲಿ ರಕ್ತಪಾತವಾಗುವಾಗ, ನಾವೆಲ್ಲರೂ ನೆಮ್ಮದಿ-ಶಾಂತಿಯಿಂದ ಬದುಕುತ್ತಿದ್ದೇವೆಂದರೆ ಅದಕ್ಕೆ ರಾಜಕಾರಣ ಕಾರಣವಲ್ಲ; ಇಲ್ಲಿಯ ಸಂಸ್ಕೃತಿ, ಇಲ್ಲಿಯ ಜನರ ಭಾವನೆ ಮತ್ತು ಇಲ್ಲಿಯ ಮೂಲ ಸೆಲೆ ಅದಕ್ಕೆ ಕಾರಣವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಮಾತನಾಡುತ್ತಿದ್ದ ಸಂದರ್ಭದಲ್ಲಿ ನಮ್ಮ ರಾಷ್ಟ್ರ ಜಾತ್ಯಾತೀತವಾಗಿರುವ ರಾಷ್ಟ್ರವಾಗಿರಬೇಕೆನ್ನುವ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಇದು ಬಹಳ ಒಳ್ಳೆಯ ಭಾವನೆಯಾಗಿದೆ. ಆದರೆ, ಯಾವುದೋ ಕೆಲವು ಸಮುದಾಯದವರು ತಮ್ಮ ಧರ್ಮದ ಮತವನ್ನು ಹೆಚ್ಚು ಮಾಡಿಕೊಳ್ಳಬೇಕೆನ್ನುವ ದೃಷ್ಟಿಯಿಂದ ಏನೇನು ಮಾಡುತ್ತಿದ್ದಾರೆ ಎನ್ನುವುದು ನಮ್ಮೆಲ್ಲರಿಗೂ ಗೊತ್ತಿದೆ. ನಾನು ಆ ವಿವರಕ್ಕೆ ಹೋಗುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಆ ವಿವರವನ್ನು ದಯವಿಟ್ಟು ನೀಡಬೇಕಾಗಿದೆ. ನಮಗೆ ಅದರ ಅವಶ್ಯಕತೆ ಇದೆ. ಆ ಧರ್ಮದವರು ತಮ್ಮ ಮತಗಳನ್ನು ಎಷ್ಟು ಜಾಸ್ತಿ ಮಾಡಿಕೊಂಡಿದ್ದಾರೆ ಎನ್ನುವ ವಿವರವನ್ನು ಅವರು ನೀಡಬೇಕಾಗುತ್ತದೆ.

**ಶ್ರೀ ಆರಗ ಜ್ಞಾನೇಂದ್ರ:-** ಸನ್ಮಾನ್ಯ ಸಭಾಪತಿಯವರೇ, ನಾನು ಅದನ್ನೂ ಹೇಳುತ್ತೇನೆ. ಅವರು ಕುಳಿತುಕೊಳ್ಳಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಜವಾಬ್ದಾರಿಯುತ ಸ್ಥಾನದಲ್ಲಿರುವ ಮಾನ್ಯ ಗೃಹ ಸಚಿವರು ಈ ರೀತಿ ಸುಮ್ಮನೆ ಹಾರಿಕೆಯ ಉತ್ತರವನ್ನು ನೀಡುವುದು ಬೇಡ. ಅವರು ಸಾಕ್ಷಿಯನ್ನು ನೀಡಿದರೆ, ನಾವು ಹೇಳಿದ್ದನ್ನು ವಿತ್‌ಡ್ರಾ ಮಾಡಿಕೊಳ್ಳುತ್ತೇವೆ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಗೃಹ ಸಚಿವರೇ, ತಾವು ನನ್ನ ಕಡೆ ನೋಡಿಕೊಂಡು ಮಾತನಾಡಿ.

**ಶ್ರೀ ಆರಗ ಜ್ಞಾನೇಂದ್ರ:–** ಸನ್ಮಾನ್ಯ ಸಭಾಪತಿಯವರೇ, ಮತಾಂತರ ಕಾರ್ಯಗಳು ವ್ಯವಸ್ಥಿತವಾಗಿ ನಡೆಯುತ್ತಿವೆ. ನಾನು ಈಗಾಗಲೇ ಹೇಳಿದಂತೆ ಗಂಡ–ಹೆಂಡತಿ, ತಾಯಿ–ಮಕ್ಕಳು ಬೇರೆಬೇರೆಯಾಗಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಶ್ರೀಮತಿ ಭಾರತಿಶೆಟ್ಟಿಯವರು ಅನೇಕ ಉದಾಹರಣೆಗಳನ್ನು ಹೇಳಿದ್ದಾರೆ. ಇಂತಹ ಪ್ರಕರಣಗಳು ನಮ್ಮ ಅಕ್ಕಪಕ್ಕದ ಮನೆಗಳಲ್ಲಿ ನಡೆಯುತ್ತಿವೆ. ಅದನ್ನು ಅವರುಗಳು ಸಹ ನೋಡಿದ್ದಾರೆ. ಅನೇಕ ಬಾರಿ ಅವರ ಮನಸ್ಸಿಗೂ ಸರಿಯಲ್ಲ ಎನ್ನುವ ಅನಿಸಿಕೆಗಳು ಬಂದಿರಬಹುದು. ಆದರೆ, ಇಲ್ಲಿ ಬೇರೆಯದೇ ರೀತಿಯಲ್ಲಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಇದು ರಾಜಕೀಯ ವ್ಯವಸ್ಥೆಯಾಗಿದೆ. ನಾವು ತಂದಿರುವಂತಹ ವಿಧೇಯಕವನ್ನು ಪ್ರಾಮಾಣಿಕವಾಗಿ ಅವಲೋಕಿಸಿದರೆ ಇಲ್ಲಿ ಯಾವುದೇ ಧರ್ಮದವರು, ಯಾವುದೇ ಚಿಂತೆ ಇಲ್ಲದೇ ಇರಬಹುದಾಗಿದೆ. ಅವರವರ ಧರ್ಮದಲ್ಲಿ ಬದುಕುವಂತಹ ಎಲ್ಲ ಹಕ್ಕುಗಳನ್ನು ಸಂವಿಧಾನದ ಅನುಚ್ಛೇದ 25ರಲ್ಲಿ ನೀಡಲಾಗಿದೆ. ಅದಕ್ಕೆ ಯಾವುದೇ ರೀತಿಯಲ್ಲಿಯೂ ಧಕ್ಕೆ ಬರದಂತೆ ಈ ವಿಧೇಯಕವನ್ನು ತರಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಹಿಂದೆ ಸಂವಿಧಾನವನ್ನು ರಚನೆ ಮಾಡಿದಂತಹ ಸಂದರ್ಭದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮತಾಂತರವಾಗಬಹುದು ಎನ್ನುವ ಊಹೆ ಕೂಡ ಅಂದಿನ ಸಂವಿಧಾನ ಕರ್ತೃಗೆ ಇರಲಿಲ್ಲ. ಆದ್ದರಿಂದ ಬಲವಂತದ ಮತಾಂತರವಾದರೇ ಅದಕ್ಕೆ ಶಿಕ್ಷೆಯನ್ನು ಸಂವಿಧಾನದಲ್ಲಿ ನಮೂದು ಮಾಡಿಲ್ಲ. ಅದನ್ನು ನಾವು ಈಗ ಅಳವಡಿಸಿಕೊಂಡಿದ್ದೇವೆ. ಈ ವಿಧೇಯಕದಲ್ಲಿ ಮತಾಂತರ ಆಗುವುದಕ್ಕೆ ತೊಂದರೆಯೇನು ಇಲ್ಲ. ಆದರೆ, ಅದನ್ನು ಘೋಷಣೆ ಮಾಡಬೇಕಾಗುತ್ತದೆ. ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಹೋಗುವಾಗ ಹೇಳಿ ಹೋಗು ಎನ್ನುವುದು ಈ ವಿಧೇಯಕದಲ್ಲಿರುವ ಅಂಶವಾಗಿದೆ. ಮನೆಗಳಲ್ಲಿ ನಾವು ಎಲ್ಲಾದರು ಹೋಗುವಾಗ "ಹೇಳಿ ಹೋಗು" ಎಂದು ಹೇಳುತ್ತೇವೆ. ಆ ರೀತಿ ಹೇಳಿ ಹೋಗಬೇಕಾಗುತ್ತದೆ. ಅವರು ಬೇರೆ ಧರ್ಮಕ್ಕೆ

ಹೋಗಿರುವುದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ರೆಕಾರ್ಡ್ ಆಗುತ್ತದೆ. ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಸಮಾಜ ಕಲ್ಯಾಣ ಇಲಾಖೆಗೆ ಮತ್ತು ಹಿಂದುಳಿದ ವರ್ಗಗಳ ಇಲಾಖೆಗೆ ಕಳುಹಿಸಿಕೊಡುತ್ತಾರೆ. ಇದರಲ್ಲಿ ಯಾವುದೇ ತೊಂದರೆಗಳು ಇಲ್ಲ. ಯಾವುದೇ ಒಬ್ಬ ವ್ಯಕ್ತಿ ಕ್ರಿಶ್ಚಿಯನ್, ಮುಸ್ಲಿಂ ಧರ್ಮಕ್ಕೆ ಮತಾಂತರ ಹೊಂದುವ ಹಕ್ಕನ್ನು ಈ ವಿಧೇಯಕ ಕಸಿದುಕೊಂಡಿಲ್ಲ. ಬಲವಂತದ ಮತ್ತು ಆಮಿಷದ ಮತಾಂತರವಾಗಬಾರದು ಎನ್ನುವುದು ಈ ವಿಧೇಯಕದ ಉದ್ದೇಶವಾಗಿದೆ. ಅನೇಕ ಸದಸ್ಯರು ಒಂದು ಸಮುದಾಯದವರಿಗೆ ಶಿಕ್ಷೆಯ ಪ್ರಮಾಣವನ್ನು ಹೆಚ್ಚು ಮಾಡಿದ್ದೀರಿ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಯಾರು ಬುದ್ಧಿಮಾಂಧ್ಯರಿದ್ದಾರೆ ಅಥವಾ ಅನಾರೋಗ್ಯಪೀಡಿತರಾಗಿದ್ದಾರೆ ಅವರನ್ನು "ನಮ್ಮ ಆಸ್ಪತ್ರೆಗೆ ಬನ್ನಿ" ಎಂದು ಹೇಳುವುದು ನಂತರ "ನಮ್ಮ ದೇವರ ಅರ್ಚನೆ ಮಾಡು; ನಮ್ಮ ಧರ್ಮಕ್ಕೆ ಮತಾಂತರ ಆಗು" ಎಂದು ಒತ್ತಾಯಪಡಿಸುತ್ತಾರೆ. ಅವರ ವಿದ್ಯಾ ಸಂಸ್ಥೆಗಳಿಗೆ ಮಕ್ಕಳನ್ನು ದಾಖಲಿಸುವಂತೆ ಹೇಳುವುದು ಮುಂತಾದ ಆಮಿಷಗಳನ್ನು ಒಡ್ಡಲಾಗುತ್ತಿದೆ. ನಾನು ಯಾವ ಸಮುದಾಯದವರು ಈ ರೀತಿ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇಂತಹ ಆಮಿಷಗಳಿಂದ ಮತಾಂತರವಾಗಬಾರದೆನ್ನುವುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ವ್ಯಕ್ತಿ ತನ್ನ ಸ್ವ ಇಚ್ಛೆಯಿಂದ ಯಾವ ಧರ್ಮಕ್ಕೆ ಬೇಕಾದರೂ ಹೋಗಬಹುದು. ಅದಕ್ಕೆ ಯಾವುದೇ ರೀತಿಯ ನಿರ್ಬಂಧವನ್ನು ಈ ವಿಧೇಯಕದಲ್ಲಿ ವಿಧಿಸಿಲ್ಲ. ಆದರೆ, ಬಲವಂತ, ಅನುಚಿತ ಪ್ರಭಾವ, ಒತ್ತಾಯ, ಆಮಿಷ ಒಡ್ಡುವ ಮೂಲಕ ಮತಾಂತರ ಮಾಡಿದರೆ ಅದಕ್ಕೆ ಶಿಕ್ಷೆಯ ಪ್ರಮಾಣವನ್ನು ನಿಗದಿಗೊಳಿಸಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸ್ವ ಇಚ್ಛೆಯಿಂದ ಮತಾಂತರಗೊಳ್ಳುವ ವ್ಯಕ್ತಿಯು ಕನಿಷ್ಠ ಮೂವತ್ತು ದಿವಸಗಳಿಗೆ ಮುಂಚಿತವಾಗಿ ಆ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಘೋಷಣೆಯನ್ನು ನೀಡಬೇಕಾಗುತ್ತದೆ. ಅವರು ಆ ಅರ್ಜಿಯನ್ನು ತಹಸೀಲ್ದಾರ್ ಅಥವಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಟ್ಟು ಬಲವಂತ, ಆಮಿಷ ಅಥವಾ ಮತ್ತ್ಯಾವುದೋ ರೀತಿಯಲ್ಲಿ ಮತಾಂತರ ಹೊಂದದೇ ಆ ವ್ಯಕ್ತಿ ಸ್ವ ಇಚ್ಛೆಯಿಂದ ಮತಾಂತರವಾಗುತ್ತಿದ್ದಾನೆಯೇ ಎನ್ನುವುದರ ಬಗ್ಗೆ

ತನಿಖೆ ನಡೆಸಿ, ತನಿಖೆಯ ವರದಿ ಬಂದ ನಂತರ ಜಿಲ್ಲಾಧಿಕಾರಿಗಳು ಆ ವ್ಯಕ್ತಿ ಮತಾಂತರಗೊಳ್ಳುವುದಕ್ಕೆ ಅನುಮತಿಯನ್ನು ಕೊಡುತ್ತಾರೆ. ಆಗ ಆ ವ್ಯಕ್ತಿ ಮತಾಂತರಗೊಳ್ಳುವುದಕ್ಕೆ ಯಾವುದೇ ತೊಂದರೆಗಳು ಇರುವುದಿಲ್ಲ. ಮತಾಂತರ ಮಾಡುವ ಅರ್ಚಕ, ಮೌಲ್ವಿ ಅಥವಾ ಪಾದ್ರಿ ಯಾರಾದರು ಸರಿ ಅವರು ಸಹ "ಇಂತಹ ವ್ಯಕ್ತಿಯನ್ನು ಮತಾಂತರ ಮಾಡುತ್ತಿದ್ದೇನೆ" ಎಂದು ಘೋಷಣೆ ಮಾಡಬೇಕಾಗುತ್ತದೆ. ಈ ವಿಧೇಯಕವನ್ನು ಮಂಡಿಸುತ್ತಿರುವ ಹಿನ್ನೆಲೆಯನ್ನು ನಾನು ಈಗಾಗಲೇ ಹೇಳಿದ್ದೇನೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಯಾರು ತಕರಾರು ಅರ್ಜಿಯನ್ನು ಕೊಡಬಹುದು ಎನ್ನುವುದರ ಬಗ್ಗೆಯೂ ಮಾನ್ಯ ಸಚಿವರು ಬೆಳಕು ಚೆಲ್ಲಬೇಕಾಗಿದೆ.

**ಶ್ರೀ ಆರಗ ಜ್ಞಾನೇಂದ್ರ:-** ಸನ್ಮಾನ್ಯ ಸಭಾಪತಿಯವರೇ, ತಕರಾರು ಅರ್ಜಿಯನ್ನು ಮತಾಂತರಗೊಂಡ ವ್ಯಕ್ತಿಯ ಪಾಲಕರು, ಸೋದರ, ಸೋದರಿ ಅಥವಾ ಆತನಿಗೆ ರಕ್ತ ಸಂಬಂಧಿ, ಮದುವೆ ಅಥವಾ ದತ್ತು ಮೂಲಕ ಸಂಬಂಧಿಯಾದ ಅಥವಾ ಯಾವುದೇ ರೂಪದಲ್ಲಿ ಸಹವರ್ತಿ ಅಥವಾ ಸಹೋದ್ಯೋಗಿಯಾದವರು ದೂರನ್ನು ದಾಖಲು ಮಾಡಬಹುದು. ಉದಾಹರಣೆಗೆ ಹೇಳಬೇಕಾದರೆ, ಒಂದು ಕಛೇರಿಯಲ್ಲಿ ಒಬ್ಬ ವ್ಯಕ್ತಿ ಕೆಲಸ ಮಾಡುತ್ತಿರುತ್ತಾನೆ. ಆತ ಮತಾಂತರಗೊಂಡಿರುತ್ತಾನೆ. ಆಗ ಆತನ ಸಹದ್ಯೋಗಿ ದೂರನ್ನು ನೀಡಬಹುದಾಗಿದೆ. ಆ ವ್ಯಕ್ತಿ ಪರಿಶಿಷ್ಟ ಜಾತಿ ಸಮುದಾಯಕ್ಕೆ ಸೇರಿದ್ದು, ಬೇರೆ ಧರ್ಮಕ್ಕೆ ಮತಾಂತರಗೊಂಡರೇ ಪರಿಶಿಷ್ಟ ಜಾತಿ ಸಮುದಾಯಕ್ಕೆ ಲಭ್ಯವಾಗುವ ಎಲ್ಲ ಸೌಲಭ್ಯಗಳನ್ನು ಅಂದರೆ, increment, ಬಡ್ತಿ ಮುಂತಾದವುಗಳನ್ನು ಕಳೆದುಕೊಳ್ಳುತ್ತಾನೆ. ಆದ್ದರಿಂದ ಆ ವ್ಯಕ್ತಿಯ ಜೊತೆಗೆ ಕೆಲಸ ಮಾಡುತ್ತಿರುವವರು ಅಥವಾ ಆತನ ಬಗ್ಗೆ ಪರಿಚಯ ಇರುವವರು ಯಾರಾದರು ದೂರನ್ನು ಕೊಡಬಹುದಾಗಿದೆ ಎನ್ನುವುದನ್ನು ಈ ವಿಧೇಯಕದಲ್ಲಿ ಉಲ್ಲೇಖಿಸಲಾಗಿದೆ. ಗಂಡ ಮತಾಂತರಗೊಂಡರೇ ಹೆಂಡತಿ ದೂರು ಕೊಡಬಹುದು. ಅದರಲ್ಲಿ ತಪ್ಪೇನೂ ಇಲ್ಲ.

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಈ ರೀತಿಯಾದ ಹಿಂಸೆಗೆ ಸಂವಿಧಾನದಲ್ಲಿ ಅವಕಾಶವಿದೆಯೇ ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

**ಶ್ರೀ ಆರಗ ಜ್ಞಾನೇಂದ್ರ:-** ಯಾವುದು ಹಿಂಸೆ?

**ಶ್ರೀ ಪಿ.ಆರ್.ರಮೇಶ್:-** ಸನ್ಮಾನ್ಯ ಸಭಾಪತಿಯವರೇ, 1977 ಜಡ್ಜ್‌ಮೆಂಟ್ ಇದೆಯಲ್ಲ.......

**ಶ್ರೀ ಮರಿತಿಬ್ಬೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಈ ಕಾಯಿದೆಯಲ್ಲಿ ಮತಾಂತರಗೊಳ್ಳುವುದಕ್ಕೆ ಸ್ವಾತಂತ್ರ್ಯ ಇದೆಯೇ?

**ಶ್ರೀ ಪಿ.ಆರ್.ರಮೇಶ್:-** ಸನ್ಮಾನ್ಯ ಸಭಾಪತಿಯವರೇ, Why you have referred that?

**ಶ್ರೀ ಬಿ.ಕೆ.ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತಿದ್ದ ಸಂದರ್ಭದಲ್ಲಿ ಮಾನ್ಯ ಗೃಹ ಸಚಿವರು ಸಾಕಷ್ಟು ಅಡ್ಡಿಪಡಿಸಿದ್ದರು. ಈಗಲಾದರೂ ನನಗೆ ಮಾತನಾಡಲು ಅವರು ಅವಕಾಶ ಕೊಡಬೇಕಾಗುತ್ತದೆ. ಕಛೇರಿಯಲ್ಲಿರುವ ಆತನ ಸಹೋದ್ಯೋಗಿ ಸಹ ತಕರಾರು ಅರ್ಜಿಯನ್ನು ನೀಡಬಹುದೆಂದು ಮಾನ್ಯ ಗೃಹ ಸಚಿವರು ಹೇಳಿದ್ದಾರೆ. ಕಛೇರಿಯಲ್ಲಿ ಒಬ್ಬ ದಲಿತ ಇದ್ದಾನೆಂದರೆ ಆತನನ್ನು ಸುಮ್ಮನೆ ಬಿಡುವುದಿಲ್ಲ. ಅದಕ್ಕಾಗಿಯೇ ನಾನು ಬೆಳಗ್ಗೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ನೀಡಿದ್ದೆ. ಶ್ರೀ ದಿನೇಶ್ ವೈದ್ಯ ಎನ್ನುವ ಒಬ್ಬ ವ್ಯಕ್ತಿ ಹೊನ್ನಾವರದಲ್ಲಿ ದಿನಾಂಕ: 29.07.2022ರಲ್ಲಿ ಕಛೇರಿಯಲ್ಲಿ ಆತನನ್ನು ನಿಂದನೆ ಮಾಡಿ ಅಪಮಾನ ಮಾಡಿದ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಒಬ್ಬ ದಲಿತ ಬಡ್ತಿ ತೆಗೆದುಕೊಳ್ಳುತ್ತಾನೆಂದರೆ ಆತನಿಗೆ ಬಡ್ತಿ ಸಿಗಬಾರದೆಂದು ಏನು ಬೇಕಾದರೂ ಮಾಡುತ್ತಾರೆ. ಪರಿಸ್ಥಿತಿ ಹೀಗಿರುವಾಗ, ಆತನಿಗೆ ಸಿಗಬೇಕಾಗಿರುವ

ಸೌಲಭ್ಯಗಳನ್ನು ತಪ್ಪಿಸುವ ಸಲುವಾಗಿಯೇ ಆತ ಕ್ರಿಶ್ಚಿಯನ್ ಆಗಿ ಮತಾಂತರಗೊಂಡಿದ್ದಾನೆ ಅಥವಾ ಮುಸ್ಲಿಂ ಆಗಿ ಮತಾಂತರಗೊಂಡಿದ್ದಾನೆಂದು ಏನು ಬೇಕಾದರು ದೂರು ಬರೆಯುತ್ತಾರೆ. ಸರ್ಕಾರ ಇದಕ್ಕೆ ಆಸ್ಪದ ಮಾಡಿಕೊಡುತ್ತಿದೆ. ಈ ವಿಧೇಯಕದ ಮೂಲಕ ಹಿಂಸೆಗೆ ಅವಕಾಶ ಮಾಡಿಕೊಡುತ್ತಿದೆ.

**ಶ್ರೀ ಆರಗ ಜ್ಞಾನೇಂದ್ರ:-** ಸನ್ಮಾನ್ಯ ಸಭಾಪತಿಯವರೇ, ಯಾರಾದರು ದೂರು ನೀಡಿದ ಕೂಡಲೇ ಶಿಕ್ಷೆ ಆಗುವುದಿಲ್ಲ. ತನಿಖೆ ನಡೆಯುತ್ತದೆ.

**ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಉದಾಹರಣೆಗೆ ಹೇಳಬೇಕಾದರೆ, ನಾನು aggrieved party, ನಾನು ಮತಾಂತರಗೊಂಡಿರುತ್ತೇನೆ. ನನಗೆ ಯಾರಾದರು ಮಾನಸಿಕವಾಗಿ ಕಿರುಕುಳ ಕೊಟ್ಟು ಮತಾಂತರಗೊಳಿಸಿದ್ದರೆ, ನಾನು ಜಿಲ್ಲಾಧಿಕಾರಿಗಳಿಗೆ, "ಮೋಸದಿಂದ ನನ್ನನ್ನು ಮತಾಂತರಗೊಳಿಸಿದ್ದಾರೆ" ಎಂದು ಅರ್ಜಿಯನ್ನು ಕೊಟ್ಟಾಗ ಅದರ ಬಗ್ಗೆ ತನಿಖೆ ನಡೆಸುವುದು ಸೂಕ್ತ. ಆದರೆ, ನಾನು ಸ್ವ ಇಚ್ಛೆಯಿಂದ ಮತಾಂತರಗೊಂಡಿರುವುದರ ಬಗ್ಗೆ ನನ್ನ ಸ್ನೇಹಿತರು, ನನ್ನ ಸಹೋದರ, ಸಹೋದರಿ ಅಥವಾ ಮತ್ತೊಬ್ಬ ಸಾರ್ವಜನಿಕರು "ಮರಿತಿಬ್ಬೇಗೌಡ ಮತಾಂತರಗೊಂಡಿದ್ದಾನೆ" ಎಂದು ಅರ್ಜಿಯನ್ನು ಕೊಟ್ಟರೆ, ವಿಚಾರಣೆ ಮಾಡಿ ಆತನನ್ನು ಶಿಕ್ಷೆ ಒಳಪಡಿಸುವುದು ಚಿತ್ರಹಿಂಸೆಯಾಗಿದೆ. ಸಂವಿಧಾನ ಹಿಂಸೆಯನ್ನು ಬೆಂಬಲಿಸುತ್ತದೆಯೇ? ಹಿಂಸೆಗೆ ಸಂವಿಧಾನದಲ್ಲಿ ಅವಕಾಶವಿದೆಯೇ? ಇದು ಎಂತಹ ಕ್ರೂರತ್ವ?

ಸನ್ಮಾನ್ಯ ಸಭಾಪತಿಯವರೇ, ಈ ಸರ್ಕಾರದ ಕೆಲವು ಮಂತ್ರಿಗಳು ಮತ್ತು ಶಾಸಕರು ತಮಗೆ ಸೀಟ್ ಬೇಕು ಎಂದು ಒಂದು ಸಮುದಾಯದ ಶಿಕ್ಷಣ ಸಂಸ್ಥೆಯ ಪಾದ್ರಿಗಳಿಗೆ, ಕ್ರಿಶ್ಚಿಯನ್ ಮಿಷನರಿಗಳಿಗೆ ಮತ್ತು ಪ್ರಿನ್ಸಿಪಾಲರಿಗೆ ಪತ್ರಗಳನ್ನು ಬರೆದಿರುವುದನ್ನು ನಾನು ತೋರಿಸುತ್ತೇನೆ. ಶಿಕ್ಷಣಕ್ಕೆ ಅವರು ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಸೀಟು ಕೊಡಿ ಎಂದು ಪತ್ರ ಬರೆಯುವುದರಲ್ಲಿ ತಪ್ಪೇನಿದೆ? ಅವರು ಏನು ಮತಾಂತರ ಮಾಡಿದ್ದಾರೆಯೇ?

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಯಾವ ಧರ್ಮದಿಂದ ಮತಾಂತರವಾಗುತ್ತಿದೆ ಎನ್ನುವುದನ್ನು ಹೇಳಿದ್ದಾರೆ. ಮಾನ್ಯ ಮಾಧುಸ್ವಾಮಿಯವರು Constituent Assembly debate ನ್ನು ಕೇಳಿರುತ್ತಾರೆ. ಅದರಲ್ಲಿ ಮಂಗಳೂರಿನವರಾದ ಮಾನ್ಯ ಎಂ.ವ್ಹಿ.ಕಾಮತ್‌ರವರು Constituent Assembly ಯಲ್ಲಿ ಚರ್ಚೆ ನಡೆಯುತ್ತಿದ್ದಾಗ, preamble ನಲ್ಲಿ "We the people" ಎನ್ನುವುದಕ್ಕೆ ವಿರೋಧವನ್ನು ವ್ಯಕ್ತಪಡಿಸುತ್ತಾರೆ. "ನಾವು ಹಿಂದು ಧರ್ಮವನ್ನು ಪಾಲನೆ ಮಾಡುವವರು ಬಹು ಸಂಖ್ಯಾತರಾಗಿದ್ದೇವೆ, instead of "We the people" why not in the name of God" ಎಂದು ಹೇಳಿದಂತಹ ಸಂದರ್ಭದಲ್ಲಿ ಅದಕ್ಕೆ ಆಚಾರ್ಯ ಕೃಪಲಾನಿಯವರು ತಮ್ಮ ವಿರೋಧವನ್ನು ವ್ಯಕ್ತಪಡಿಸುತ್ತಾರೆ. "ಈ ದೇಶದಲ್ಲಿ ನಂಬಿಕಸ್ಥರಿದ್ದಾರೆ, ನಾಸ್ತಿಕರಿದ್ದಾರೆ ಮತ್ತು ವಿಚಾರವಂತರಿದ್ದಾರೆ ಆದ್ದರಿಂದ ದೇವರ ಹೆಸರಿನಲ್ಲಿ ಸಂವಿಧಾನದ ಪೀಠಿಕೆಯನ್ನು ರಚನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ" ಎಂದು ಹೇಳಿದ್ದರು. ಅದಕ್ಕಾಗಿಯೇ ಸಂವಿಧಾನದ ಪೀಠಿಕೆಯಲ್ಲಿ "We the people" ಎಂದು ಇದೆ. ಅದನ್ನು ಗಮನದಲ್ಲಿಟ್ಟುಕೊಂಡು ಈ ಸರ್ಕಾರದವರು ನಿರ್ಣಯ ತೆಗೆದುಕೊಳ್ಳಬೇಕಾಗಿದೆ.

**ಶ್ರೀ ಆರಗ ಜ್ಞಾನೇಂದ್ರ:-** ಸನ್ಮಾನ್ಯ ಸಭಾಪತಿಯವರೇ, ಆಮಿಷದಿಂದ ಮತಾಂತರಗೊಂಡಿದ್ದಾನೆಂದು ತಕರಾರು ದೂರು ಕೊಟ್ಟರೆ ಮಾತ್ರ ತನಿಖೆ ನಡೆಸಲಾಗುತ್ತದೆ. ಇಲ್ಲದಿದ್ದರೆ, ಆ ವ್ಯಕ್ತಿಯ ಸ್ವಯಂ ಘೋಷಣೆ ಸಾಕಾಗುತ್ತದೆ.

(ಮುಂದು)

(871) 15.9.2022 7.00 ಪಿಕೆ:ಎಂಡಿ

**ಶ್ರೀ ಆರಗ ಜ್ಞಾನೇಂದ್ರ** (ಮುಂದು)

ಇಲ್ಲಿ ಯಾವುದೇ ಧರ್ಮವನ್ನು ಆಚರಿಸುವುದಕ್ಕೆ ಬಾಧಕವಾಗುವಂತಹ ಅಂಶ ಇಲ್ಲ. ವ್ಯಕ್ತಿಯೊಬ್ಬ ಮತಾಂತರ ಆದ ತಕ್ಷಣ ತನ್ನ ಮೂಲ ಮತದ ಸೌಲಭ್ಯವನ್ನು ಕಳೆದುಕೊಳ್ಳುತ್ತಾನೆ ಎನ್ನುವಂಥದ್ದಿದೆ. ಶಿಕ್ಷೆಗಳು ಬೇರೆ ಬೇರೆ ರೀತಿಯಲ್ಲಿದೆ. ಜಾಮೀನು ರಹಿತ ಶಿಕ್ಷೆ ಕೂಡ ಇದೆ. ಈ ರೀತಿ ವಿಶೇಷವಾಗಿ ಈ ವಿಧೇಯಕವನ್ನು ತಂದಿದ್ದೇವೆ, ನೀವು ಕೂಡ ಓದಿದ್ದೀರಿ, debate ಮಾಡಿದ್ದೀರಿ. ಎಲ್ಲರೂ ಚಿಂತನೆ ಮಾಡಿಯೇ ಈ ಮಸೂದೆ ತಂದಿದ್ದೇವೆ.

**ಶ್ರೀ ಸಲೀಂ ಅಹ್ಮದ್:-** ನನ್ನದೊಂದು clarification ಇದೆ. ಆದರೆ ನೀವು debate ನ್ನು close ಮಾಡುತ್ತಿದ್ದೀರಿ. ನಿಮ್ಮಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಎಷ್ಟು ದೂರುಗಳು ಬಂದಿವೆಯೋ ಆ ಮಾಹಿತಿಯನ್ನು ಸದನಕ್ಕೆ ಕೊಡಬೇಕು.

**ಶ್ರೀ ಆರಗ ಜ್ಞಾನೇಂದ್ರ:-** ಇದನ್ನು ನಾವು ಮಾತ್ರ ತಂದಿರುವುದಿಲ್ಲ. ನಮ್ಮ ಇಚ್ಛೆಯಿಂದ ತಂದಿದ್ದೇವೆ ಎಂದಲ್ಲ ಅಥವಾ ಇದರಲ್ಲಿ hidden agenda ಇದೆ ಎನ್ನುವುದೂ ಅಲ್ಲ. ಹಿಂದಿನ ಮಾನ್ಯ ಸಿದ್ಧರಾಮಯ್ಯನವರ ಸರ್ಕಾರ ಇದ್ದಾಗ ಇದನ್ನು ಕ್ಯಾಬಿನೆಟ್‌ನಲ್ಲಿ ಮಂಡನೆ ಮಾಡುವಂತಹ ಸಂದರ್ಭದಲ್ಲಿ ಅದು ನಿಂತುಹೋಯಿತು.

**ಶ್ರೀ ಪಿ.ಆರ್.ರಮೇಶ್:-** ಅದು ಈ ತರಹ ಅಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಯವರೇ, ಅದು ಬೇರೆ ತರಹ ಇತ್ತು. ಆ ವಿಧೇಯಕ ಈ ರೀತಿ ಇರಲಿಲ್ಲ.

(ಗೊಂದಲ)

**ಡಾ|| ಕೆ.ಗೋವಿಂದರಾಜ್:-** ಹಳೆಯ ಮಿಷಿನ್‌ಗೆ ಆಯುಧ ಪೂಜೆ ಎಂದು ನಾನು ಬೆಳಗ್ಗೆ ಹೇಳಿದೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, 2022ರ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕಕ್ಕೆ ವಿಧಾನಸಭೆ ಅಂಗೀಕಾರ ನೀಡಿದೆ. ತಾವುಗಳೂ ಅಂಗೀಕಾರ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಕುರಿತು ಉಳಿದ ವಿಷಯವನ್ನು ಮಾನ್ಯ ಕಾನೂನು ಸಚಿವರು ಹೇಳುತ್ತಾರೆ.

(ಗೊಂದಲ)

**ಶ್ರೀ ಸಲೀಂ ಅಹ್ಮದ್:-** ಇಂತಹ ಎಷ್ಟು ಪ್ರಕರಣಗಳ ಸಂಬಂಧ ದೂರುಗಳು ಬಂದಿವೆ ಎನ್ನುವುದರ ಅಂಕಿ ಅಂಶಗಳನ್ನು ನಮಗೆ ಒದಗಿಸಿ ಕೊಡಿ.

(ಗೊಂದಲ)

**ಶ್ರೀ ಜಿ.ಸಿ.ಮಾಧುಸ್ವಾಮಿ (ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ಇದು ಮತಾಂತರ ವಿರೋಧ ವಿಧೇಯಕ ಅಲ್ಲ ಎನ್ನುವುದನ್ನು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ನಮ್ಮ ಧರ್ಮವನ್ನು ಅಥವಾ ಇನ್ನೊಂದು ಧರ್ಮವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಸಹಾಯಕವಾಗಿದೆ. ಒಂದು ಧರ್ಮದವರು ಇನ್ನೊಂದು ಧರ್ಮದ ಜನರಿಗೆ ಪ್ರಲೋಭನೆಯನ್ನು ಕೊಟ್ಟು, ಬೇರೆ ಬೇರೆ ರೀತಿಯ ಪ್ರಯೋಗಗಳನ್ನು ಮಾಡಿ ಧರ್ಮಾಂತರ ಮಾಡುವುದನ್ನು ತಡೆಯುವ ನಿಟ್ಟಿನಲ್ಲಿ ಈ ವಿಧೇಯಕವನ್ನು ತರಲಾಗಿದೆ.

**ಶ್ರೀ ಮರಿತಿಬ್ಬೇಗೌಡ:-** ನಿಮ್ಮದು ಧರ್ಮದ ಸರ್ಕಾರ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಹೌದು, ನಮ್ಮದು ಧರ್ಮದ, ಮಾನ-ಮರ್ಯಾದೆಯ ಸರ್ಕಾರ. ಮಾನ್ಯ ಸಭಾಪತಿಯವರೇ, ನಮ್ಮ ಸದಸ್ಯರು ಯಾವುದಕ್ಕೆ ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೋ

ಅದಕ್ಕೆಲ್ಲಾ ಮಾನ್ಯ ಗೃಹ ಸಚಿವರು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಮಾನ್ಯ ರಾಥೋಡ್‌ರವರು ಪ್ರಸ್ತಾಪಿಸಿದಕ್ಕೆ ನಾನು ಎರಡು ಮಾತುಗಳನ್ನು ಹೇಳುತ್ತೇನೆ. Scheduled caste ನ ಅಮಾಯಕರನ್ನು ಯಾರಾದರೂ ಕಾನೂನುಬಾಹಿರವಾಗಿ ಮತಾಂತರ ಮಾಡಿದರೆ double penalty ಹಾಕುತ್ತೇವೆ ಎನ್ನುವುದು ವಿಧೇಯಕದಲ್ಲಿ ಹೇಳಲಾಗಿದೆ. You have mistaken us. ಈ ಅಂಶವನ್ನು ನಾನು clarify ಮಾಡುವುದಕ್ಕೆ ಇಷ್ಟಪಡುತ್ತೇನೆ. ಯಾರೋ ಅಮಾಯಕರು, ಅಪ್ರಬುದ್ಧರು, ಬುದ್ಧಿಹೀನರು ಅಥವಾ ಮಾನಸಿಕ ರೋಗಿಗಳನ್ನು ಮತಾಂತರ ಮಾಡಿದರೆ ಅಂಥವರಿಗೆ double penalty ಯನ್ನು ಹಾಕಬೇಕು; ಹೆಣ್ಣು ಮಕ್ಕಳಿಗೆ ಬೇರೆ ಬೇರೆ ರೀತಿಯ ಪ್ರಲೋಭನೆ ಕೊಟ್ಟು ಮತಾಂತರ ಮಾಡಿದರೆ double penalty ಹಾಕಬೇಕು ಎಂದು ವಿಧೇಯಕದಲ್ಲಿದೆ. ಮಾನ್ಯ ರಮೇಶ್‌ರವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. This is well within the ambit and scope of the Constitution of India. Article 25 of the Constitutionನ್ನು ಓದಿಯೇ ನಾವು ಈ ವಿಧೇಯಕವನ್ನು ಸಿದ್ಧಗೊಳಿಸಿದ್ದೇವೆ. Article 25 ರಲ್ಲೇ, ಒತ್ತಾಯದ ಮೇಲೆ, ಪ್ರಲೋಭನೆ ಮೇಲೆ ಧರ್ಮಾಂತರ ಆಗಬಾರದು ಎಂದು ಹೇಳಲಾಗಿದೆ. ನಾನು ಮತ್ತು ಮಾನ್ಯ ಗೃಹ ಸಚಿವರು ಇದನ್ನು ಹೇಗೆ ಜಾರಿ ಮಾಡಬೇಕು ಎನ್ನುವುದಷ್ಟೆ ನಮ್ಮ ಮುಂದಿದೆ. ಇದು ಇಷ್ಟಿರಲಿಲ್ಲ, ಇದರಲ್ಲಿ vacuum ಇತ್ತು, ಅಷ್ಟಕ್ಕೆಯೇ ನಮ್ಮ ಸಂವಿಧಾನ ನಿಂತುಹೋಗಿತ್ತು. ಜಾರಿ ಮಾಡಬೇಕಾದರೆ ಏನು ಮಾಡಬೇಕು ಎನ್ನುವುದು ಬಂದಾಗ ಪ್ರಶ್ನೆಗಳು ಉದ್ಭವವಾಯಿತು. The nearest can file complaint.

**Sri P.R.RAMESH:-** Don't mislead the House. You have quoted 1977 Supreme Court order in it. That's all.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಒಂದು ನಿಮಿಷ ಇರಿ, ಒಂದೇ ಒಂದು ಮಾತು ನಿಮಗೆ ಹೇಳುತ್ತೇನೆ.

**Sri P.R.RAMESH:-** Constitution ಗಿಂತ I want Supreme Court order.

**Sri J.C.MADHUSWAMY (LAW AND PARLIAMENTARY AFFAIRS AND MINOR IRRIGATION MINISTER):-** Supreme Court is not above the Constitution of India.

**Sri B.K.HARIPRASAD (LEADER OF OPPOSITION):-** Mr Chairman Sir, even the State Government is not above the Constitution of India.

(Interruption)

**Sri J.C.MADHUSWAMY:-** Cases pending before the Supreme Court are not directory provisions for the Karnataka Assembly to pass the bill.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಮಾಧುಸ್ವಾಮಿಯವರೇ, ದಯವಿಟ್ಟು ಕೇಶವಾನಂದ ಭಾರತಿ ಕೇಸ್ ನೋಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ವಿಷಯದಲ್ಲಿ ಇದುವರೆಗೂ ಸುಪ್ರೀಂ ಕೋರ್ಟ್ ಯಾವುದೇ ರೀತಿಯ ವ್ಯಾಖ್ಯಾನವನ್ನು ಕೊಟ್ಟಿಲ್ಲ. (ಗೊಂದಲ) ಸುಪ್ರೀಂ ಕೋರ್ಟ್‌ನಲ್ಲಿ ಕೇಸ್ ಪೆಂಡಿಂಗ್ ಇದೆ ಎಂದ ಮಾತ್ರಕ್ಕೆ ನಾವು ವಿಧೇಯಕವನ್ನು ತರಬಾರದು ಎನ್ನುವ ಯಾವ ನಿಬಂಧನೆ ಕೂಡ ಸರ್ಕಾರದ ಮೇಲೆ ಇರುವುದಿಲ್ಲ.

**ಸಭಾಪತಿಯವರು:–** ಮಾನ್ಯ ರಮೇಶ್‌ರವರೇ, ಮೊದಲು ಮಾನ್ಯ ಸಚಿವರು ಏನನ್ನು ಹೇಳುತ್ತಿದ್ದಾರೆ ಎನ್ನುವುದನ್ನು ಕೇಳಿ. ದಯವಿಟ್ಟು ಕುಳಿತುಕೊಳ್ಳಿ. ನಾನು ನಿಮಗೆ ಮಾತನಾಡಲು ಅವಕಾಶ ಕೊಡುತ್ತಿಲ್ಲ. ಮೊದಲು ಮಾನ್ಯ ಸಚಿವರು ಅವರ ಮಾತುಗಳನ್ನು ಮುಗಿಸಲಿ. ಅವರು yield ಆಗಿಲ್ಲ. Let him complete.

**Sri P.R.RAMESH:–** You are not bothered about the Supreme Court order.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಹಿಮಾಚಲ ಪ್ರದೇಶ ಮತ್ತು ಗುಜರಾತ್‌ಗೆ ಸಂಬಂಧಪಟ್ಟಂತೆ ಕೋಟ್ ಮಾಡಿದಿರಿ. There is no such order of the Supreme Court for this sort of bill. We are not bringing in anti-conversion bill. ನಾನು ತಮಗೆ convince ಮಾಡುತ್ತಿದ್ದೇನೆ. ಸುಪ್ರೀಂ ಕೋರ್ಟ್ ಈ ಕುರಿತು ಯಾವುದೇ ಆದೇಶವನ್ನು ನೀಡಿಲ್ಲ.

**Sri P.R.RAMESH:–** No, no.

(ಗೊಂದಲ)

**ಶ್ರೀ ಮರಿತಿಬ್ಬೇಗೌಡ:–** ಆದರೆ ನೀವೇ ಬಿಲ್‌ನಲ್ಲಿ ಹೇಳಿದ್ದೀರಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಎರಡನೆಯದಾಗಿ, complaint ಕೊಟ್ಟಿರುವುದರ ಬಗ್ಗೆ ಹೇಳಿದರು.

**Sri P.R.RAMESH:–** I am very sorry Sir. He is misleading the House. (ಗೊಂದಲ)

**ಸಭಾಪತಿಯವರು:–** ನಾನು ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**Sri PRAKASH K.RATHOD:–** He is misleading the House.

**Mr.CHAIRMAN:–** Please sit down.

**ಶ್ರೀ ಪ್ರಕಾಶ್ ಕೆ.ರಾಥೋಡ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಅವರೇ 1977ರ ಜಡ್ಜ್‌ಮೆಂಟನ್ನು ಕೋಟ್ ಮಾಡಿದ್ದಾರೆ. ಬಿಲ್‌ನಲ್ಲಿ ಅದನ್ನು ತಂದಿದ್ದಾರೆ. **(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೆ, ದಯವಿಟ್ಟು ನನಗೆ permit ಮಾಡಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು Law Commission recommendation ನ್ನು ಕೂಡ ತೆಗೆದುಕೊಂಡಿದ್ದೇವೆ. ಪುಟ ೨ ರಲ್ಲಿ Law Commission of Karnataka in its thirtieth report has stated that,

*V. Therefore, there cannot any doubt that the Legislature of the State of Karnataka is competent to enact an appropriate law for prohibiting conversion from one religion to another by the use of force or allurement or by fraudulent means.*

ಎಂದು ಹೇಳಿದ್ದಾರೆ. We have the support of Law Commission of Karnataka. ನಮ್ಮ ಹತ್ತಿರ ಮಾಹಿತಿ ಇದೆ. (ಗೊಂದಲ)

**ಶ್ರೀ ಪಿ.ಆರ್.ರಮೇಶ್:-** ನಾನು ಜಡ್ಜ್‌ಮೆಂಟ್ ಓದುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಯಾವ ಜಡ್ಜ್‌ಮೆಂಟನ್ನು ಓದುತ್ತಿದ್ದೀರಿ? We have gone through with all this.

**Sri P.R.RAMESH:-** I quoting from the Supreme Court document.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಅಂತಹ ದಾಖಲೆ ಏನಾದರೂ ಇದ್ದರೆ ಸದನದಲ್ಲಿ ಮಂಡಿಸಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ನಿಮ್ಮ ವಿಧೇಯಕದಲ್ಲೇ ಇದೆ. "….(1977) the Hon'ble Supreme Court has held…" ಎಂದಿದೆ.

(ಗೊಂದಲ)

**ಶ್ರೀ ಪಿ.ಆರ್.ರಮೇಶ:-** ವಿಧೇಯಕದಲ್ಲಿರುವುದನ್ನು ಓದುತ್ತೇನೆ.

*"Further, in Rev. Stanislaus V/s State of Madhya Pradesh and Orissa (1977) 1 SCC 677, the Hon'ble Supreme Court has held that "right to propagate" under Article 25 does not include the right to convert another person."*

That's good. What is the judgement?

*"If forcibly conversion has not been prohibited that could have created public disorder in the state."*

Further it reads thus:

"...Does not make effect individual. It could amount to disturbance of public order."

ನಾನು ಕೇಳುವುದೇನೆಂದರೆ, it's very simple. ನಿಮ್ಮ ವಿಧೇಯಕದಲ್ಲಿ ಏನು ಪ್ರಾವಿಷನ್ ಕೊಟ್ಟಿದ್ದೀರೋ, you have made all this provisions for an individual.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ನೀವು ಈಗ ನಮ್ಮ support ನಲ್ಲೇ ಹೇಳಿದ್ದೀರಿ. You are speaking on behalf of the bill, not against the bill.

**ಶ್ರೀ ಪಿ.ಆರ್.ರಮೇಶ್:-** ನೀವು ನನ್ನನ್ನು convince ಮಾಡಿ. Don't divert it.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಬಲವಂತದ ಮತಾಂತರವನ್ನು ತಪ್ಪಿಸದೇ ಹೋದರೆ havoc ಆಗುತ್ತದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು . . .

(ಗೊಂದಲ)

**ಶ್ರೀ ಜೆ.ಸಿ.ಮಾಧುಸ್ವಾಮಿ:-** ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ರಮೇಶರವರು ಒಂದು ವಿಷಯವನ್ನು ರೈಸ್ ಮಾಡಿದ್ದಾರೆ, ಅದಕ್ಕೆ ಸಂಬಂಧಪಟ್ಟಂತೆ ನಾನು ಮಾತನಾಡುತ್ತಿದ್ದೇನೆ.

(ಗೊಂದಲ)

**ಸಭಾಪತಿಯವರು:-** ಅವರು ಮಾತನಾಡುತ್ತಿದ್ದಾರೆ; why are you interfering? ಅವರು yield ಆಗಿಲ್ಲ. ನೀವೇಕೆ ಮಧ್ಯೆ ಮಾತನಾಡುತ್ತಿದ್ದೀರಿ? ನೀವಿಬ್ಬರೇ ಮಾತನಾಡುತ್ತಿದ್ದರೆ ಹೇಗಾಗುತ್ತದೆ? ನೀವು ಮುಖ್ಯ ಸಚೇತಕರು ನೀವೇ ಹೀಗೆ ಮಾಡಿದರೆ ಹೇಗೆ? You are an Opposition Chief Whip I say.

(ಗೊಂದಲ)

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಏಕೆ ಈ ರೀತಿ ಮಧ್ಯದಲ್ಲಿ ಮಾತನಾಡುತ್ತೀರಿ? I am the least man to take your name here.

**Sri PRAKASH K.RATHOD:-** I am not telling you to take my name.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ರಮೇಶ್‌ರವರು ಸುಪ್ರೀಂ ಕೋರ್ಟ್‌ನ ತೀರ್ಪನ್ನು ಕೋಟ್ ಮಾಡಿದ್ದರಿಂದ ನಾನು ಮಾತನಾಡುತ್ತಿದ್ದೆ. If forcible conversion is not controlled…

**ಶ್ರೀ ಪಿ.ಆರ್.ರಮೇಶ್:-** ಅದರ ಬಗ್ಗೆಯೇ ಹೇಳುತ್ತಿದ್ದೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಅದೇ ನಮ್ಮ ವಾದ. We are trying to control that forcible conversion.

**ಶ್ರೀ ಪಿ.ಆರ್.ರಮೇಶ್:–** ಅದರ ಬಗ್ಗೆ how will you control ಎಂದು ಕೇಳುತ್ತಿದ್ದೇನೆ.

**Sri J.C.MADHUSWAMY:–** We have made so many provisions.

**Sri P.R.RAMESH:–** If it is in the public order, ಪಬ್ಲಿಕ್ ಆರ್ಡರ್ ಎಂದರೇನು?

(ಗೊಂದಲ)

**ಶ್ರೀ ಜೆ.ಸಿ.ಮಾಧುಸ್ವಾಮಿ:–** ನೀವು ಓದಿದ್ದನ್ನು ನಾನು ಮುಂದುವರೆಸುತ್ತೇನೆ.

*"...and does not merely affect an individual. It would amount to disturbance of the public order."*

**Sri P.R.RAMESH:–** Yes, this is the point.

**ಶ್ರೀ ಜೆ.ಸಿ.ಮಾಧುಸ್ವಾಮಿ:–** ಯಾವುದು?

**Sri P.R.RAMESH:–** Public order, community, ಊರು.

**Sri J.C.MADHUSWAMY:–** Forcible conversion will amount to public order, not the prevention of forcible conversion. Forcible conversion ನ್ನು ನೀವು prevent ಮಾಡದೇ ಹೋದರೆ public order ಗೆ amount

ಆಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. We are here to control the forcible conversion.

**Sri P.R.RAMESH:-** You have not made any provision for that.

(ಮುಂದು)

(872) 15-09-2022 7.10 ಡಿಎಸ್-ಎಕೆ

**ಸಭಾಪತಿಯವರು:-** ಮಾನ್ಯ ರಮೇಶ್‌ರವರೇ, ಕುಳಿತುಕೊಳ್ಳಿ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಸರ್ಕಾರ ಸ್ಪಷ್ಟವಾಗಿದೆ. ಇವೆಲ್ಲಾ ನಾವು ನೋಡಿದ್ದೇವೆ. Forcible conversion ಮಾಡಿದರೆ 'public order' disturb ಆಗುತ್ತದೆಂದು ಸುಪ್ರೀಂ ಕೋರ್ಟ್ ಹೇಳಿರುವುದರಿಂದ forcible conversion ಆಗಬಾರದು ಎನ್ನುವ ಉದ್ದೇಶಕ್ಕಾಗಿಯೇ ಈ ವಿಧೇಯಕವನ್ನು ತಂದಿದ್ದೇವೆ. ದಯಮಾಡಿ ಸದನದ ಎಲ್ಲಾ ಸದಸ್ಯರುಗಳು ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

(ಗೊಂದಲ)

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದ ವಿಚಾರವಾಗಿದೆ.

**ಸಭಾಪತಿಯವರು:-** ಇಡೀ ದಿವಸ ಚರ್ಚೆ ಮಾಡಿದ್ದೇವೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಸದಸ್ಯರುಗಳು ಕ್ಲಾರಿಫಿಕೇಶನ್ ಕೇಳುತ್ತಿದ್ದಾರೆ. ಕ್ಲಾರಿಫಿಕೇಶನ್ ಕೇಳುವುದಕ್ಕೆ ತಾವು ಅವಕಾಶ ಕೊಡಲೇಬೇಕು.

**Sri PRAKASH K. RATHOD:** We are asking clarification.

(ಗೊಂದಲ)

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕವನ್ನು (2021ರ ವಿಧಾನಸಭೆಯ ವಿಧೇಯಕ ಸಂಖ್ಯೆ-50) ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಈ ಹಂತದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದವರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 16 ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 16 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 16 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಮಾನ್ಯ ಬಿ.ಕೆ.ಹರಿಪ್ರಸಾದ್‌ರವರು ವಿಧೇಯಕದ ಪ್ರತಿಯನ್ನು ಹರಿದು ನೆಲದ ಮೇಲೆ ಬಿಸಾಡಿದರು. ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)**

**<u>ಪ್ರಸ್ತಾವದ ಅಂಗೀಕಾರ</u>**

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕವನ್ನು (2021ರ ವಿಧಾನಸಭೆಯ ವಿಧೇಯಕ ಸಂಖ್ಯೆ-50) ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2022ರ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕವನ್ನು (2021ರ ವಿಧಾನಸಭೆಯ ವಿಧೇಯಕ ಸಂಖ್ಯೆ-50) ಅಂಗೀಕರಿಸುವುದು**

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>**

**ಸಭಾಪತಿಯವರು:–** ಈಗ ಸದನವನ್ನು ನಾಳೆ ಬೆಳಗ್ಗೆ 10.30 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 7 ಗಂಟೆ 14 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ:16ನೇ ಸೆಪ್ಟೆಂಬರ್ ಮಾಹೆ 2022ರ ಶುಕ್ರವಾರದಂದು ಬೆಳಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು)**

**<><><>**